"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

23ನೇ ಮಾರ್ಚ್ 2020
ಸೋಮವಾರ

## ವಿಷಯಾನುಕ್ರಮಣಿಕೆ

**1. ನಿಯಮ 68ರ ಮೇರೆಗೆ ಚರ್ಚೆ**

**ಮಂಡ್ಯ ಜಿಲ್ಲೆಯಲ್ಲಿ ಪರವಾನಗಿ ಪಡೆಯದೇ ಅಕ್ರಮ ಕಲ್ಲು ಗಣಿಗಾರಿಕೆ ಮತ್ತು ಅಕ್ರಮ ಸಾಗಾಣಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡುತ್ತಿರುವುದಲ್ಲದೇ ನ್ಯಾಯಸಮ್ಮತವಾಗಿ ಗಣಿಗಾರಿಕೆ ನಡೆಸುತ್ತಿರುವವರಿಗೆ ನೋಟಿಸ್ ಜಾರಿ ಮಾಡಿ ಘಟಕಗಳನ್ನು ಸ್ಥಗಿತಗೊಳಿಸಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವ ಕುರಿತು**

– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)
– ಶ್ರೀ ಮರಿತಿಬ್ಬೇಗೌಡ
– ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು)
– ಶ್ರೀ ಹೆಚ್.ಎಂ.ರೇವಣ್ಣ
– ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್ (ಗಣಿ ಮತ್ತು ಭೂ ವಿಜ್ಞಾನ ಸಚಿವರು)

**2. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**3. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**1760 – ಬೆಂಗಳೂರು ನಗರದಲ್ಲಿ ಪರಿಸರ ಹಾನಿ ಉಂಟುಮಾಡುತ್ತಿರುವ ಕಾರ್ಖಾನೆಗಳ ಬಗ್ಗೆ**

– ಶ್ರೀ ಪಿ.ಆರ್.ರಮೇಶ್
– ಶ್ರೀ ಆನಂದ್ ಸಿಂಗ್ (ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು)

**1748 – ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿರುವ ಜಿಲ್ಲಾ ಆಸ್ಪತ್ರೆಯ ಡಯಾಲಿಸಿಸ್ ಕೇಂದ್ರದಲ್ಲಿ ತಜ್ಞ ವೈದ್ಯರು ಹಾಗೂ ಸಿಬ್ಬಂದಿಗಳ ಕೊರತೆ ಕುರಿತು.**

– ಶ್ರೀಮತಿ ಎಸ್.ವೀಣಾ ಅಚ್ಚಯ್ಯ
– ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**1695 – ಸರ್ಕಾರಿ ಶಾಲಾ ಕೊಠಡಿಗಳ ಶಿಥಿಲಾವಸ್ಥೆಯನ್ನು ಸರಿಪಡಿಸುವ ಕುರಿತು**

– ಶ್ರೀ ಕೆ.ಟಿ.ಶ್ರೀಕಂಠೇಗೌಡ

– ಶ್ರೀ ಎಸ್.ಸುರೇಶ್ ಕುಮಾರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

**549 – ರಾಜ್ಯದಲ್ಲಿ ವಿವಿಧ ಸ್ಥಳೀಯ ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವ ಪ್ರಾಥಮಿಕ ಪೂರ್ವ ಹಾಗೂ ಪ್ರಾಥಮಿಕ ಶಿಕ್ಷಣ ಹಾಗೂ ಶಿಕ್ಷಕರ ಬಗ್ಗೆ.**

– ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು)

– ಶ್ರೀ ಎಸ್.ಸುರೇಶ್ ಕುಮಾರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

**ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) "ಕೊರೊನ ವೈರಸ್‌ನಿಂದಾಗಿ ಲಾಕ್-ಡೌನ್ ಆದಂತಹ ಜಿಲ್ಲೆಗಳ ಸಾಮಾನ್ಯ ವರ್ಗದ ಜನರ ಹೊಣೆಗಾರಿಕೆಗಳಾದ ಬ್ಯಾಂಕ್ ಸಾಲದ ಕಂತು, ಆಸ್ತಿ ತೆರಿಗೆ, ಮಕ್ಕಳ ಶಾಲಾ ಶುಲ್ಕ, ನೀರಿನ ಶುಲ್ಕವನ್ನು ಪಾವತಿಸಲು ಕನಿಷ್ಟ 6 ತಿಂಗಳ ಕಾಲ ವಿನಾಯ್ತಿ ನೀಡುವ ಬಗ್ಗೆ"**

– ಶ್ರೀ ಪಿ.ಆರ್.ರಮೇಶ್

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಆ) "ದಿನಾಂಕ 21.3.2020ರ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿಯಾಗಿರುವಂತೆ ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕು ಸುರಗಜಕ್ಕನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಬರುವ ಗೌರೇನ ಹಳ್ಳಿಯಲ್ಲಿ ನಲ್ಲಿ ನೀರಿನಲ್ಲಿ ಇಲಿ ಚರ್ಮ, ಜಿರಳೆಗಳಿಂದ ಕೂಡಿದ ನೀರು ಸರಬರಾಜು ಬಗ್ಗೆ.**

– ಶ್ರೀ ಹೆಚ್.ಎಂ.ರೇವಣ್ಣ

– ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

**5. ಶಾಸನ ರಚನೆ**

**<u>ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ</u>**

**ಅ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2020**

–ಶ್ರೀ ಶರಣಪ್ಪ ಮಟ್ಟೂರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

–ಶ್ರೀ ಕೆ.ಎ.ತಿಪ್ಪೇಸ್ವಾಮಿ
–ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)
(ಮುಖ್ಯಮಂತ್ರಿಯವರ ಪರವಾಗಿ)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಆ) ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 2020**

–ಶ್ರೀ ಎನ್.ಅಪ್ಪಾಜಿಗೌಡ
–ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
–ಶ್ರೀ ಶರಣಪ್ಪ ಮಟ್ಟೂರ
–ಡಾ॥ ವೈ.ಎ.ನಾರಾಯಣಸ್ವಾಮಿ
–ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)
–ಶ್ರೀ ಮರಿತಿಬ್ಬೇಗೌಡ
–ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು)
–ಶ್ರೀ ಆರ್.ಬಿ.ತಿಮ್ಮಾಪೂರ
–ಡಾ॥ತೇಜಸ್ವಿನಿ ಗೌಡ
–ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಇ) ಕರ್ನಾಟಕ ರಾಜಭಾಷಾ (ತಿದ್ದುಪಡಿ) ವಿಧೇಯಕ, 2020**

– ಶ್ರೀ ಕೆ.ಎ.ತಿಪ್ಪೇಸ್ವಾಮಿ
– ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಈ) ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2020**

– ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉ) ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2020**

- ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಪಿ.ಆರ್.ರಮೇಶ್
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)
- ಶ್ರೀ ಎಸ್.ರವಿ
- ಶ್ರೀ ಹೆಚ್.ಎಂ.ರಮೇಶ್‌ಗೌಡ
- ಶ್ರೀ ಕೆ.ಸಿ.ಕೊಂಡಯ್ಯ
- ಡಾ॥ವೈ.ಎ.ನಾರಾಯಣಸ್ವಾಮಿ
- ಶ್ರೀ ಟಿ.ಎ.ಶರವಣ
- ಶ್ರೀ ನಸೀರ್ ಅಹ್ಮದ್
- ಶ್ರೀ ಮರಿತಿಬ್ಬೇಗೌಡ
- ಶ್ರೀ ಸಿ.ಎಂ.ಇಬ್ರಾಹಿಂ
- ಶ್ರೀ ಎನ್.ಅಪ್ಪಾಜಿಗೌಡ
- ಶ್ರೀ ಐವನ್ ಡಿ'ಸೋಜ
- ಶ್ರೀ ಪ್ರಕಾಶ್ ಕೆ.ರಾಥೋಡ್
- ಶ್ರೀ ಆರ್.ಅಶೋಕ್ (ಕಂದಾಯ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಊ) ಕರ್ನಾಟಕ ನಗರಪಾಲಿಕೆಗಳ (ತಿದ್ದುಪಡಿ) ವಿಧೇಯಕ, 2020**

- ಡಾ॥ ಅಶ್ವತ್ಥನಾರಾಯಣ ಸಿ.ಎನ್ (ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು)
- ಶ್ರೀ ಶರಣಪ್ಪ ಮಟ್ಟೂರ
- ಶ್ರೀ ಟಿ.ಎ.ಶರವಣ
- ಶ್ರೀ ಐವನ್ ಡಿ'ಸೋಜ
- ಶ್ರೀ ಹೆಚ್.ಎಂ.ರಮೇಶ್‌ಗೌಡ
- ಶ್ರೀ ಪಿ.ಆರ್.ರಮೇಶ್
- ಶ್ರೀ ಹೆಚ್.ಎಂ.ರೇವಣ್ಣ
- **ಶ್ರೀ ಜೆ.ಸಿ.ಮಾಧುಸ್ವಾಮಿ** (ಕಾನೂನು, ಸಂಸದೀಯ ವ್ಯವಹಾರಗಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)
(ಮುಖ್ಯಮಂತ್ರಿಗಳ ಪರವಾಗಿ)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**6. ನಿಯಮ 68ರ ಮೇರೆಗೆ ಚರ್ಚೆ**

**"ರಾಜ್ಯದಲ್ಲಿ ಹರಡುತ್ತಿರುವ ಕೋವಿಡ್–19 ಕಾಯಿಲೆ ನಿಯಂತ್ರಣದ ಬಗ್ಗೆ"**

– ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)
– ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಸಭಾ ನಾಯಕರು)
– ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು
ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)

**7. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2020**

– ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು
ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)
(ಮುಖ್ಯಮಂತ್ರಿಗಳ ಪರವಾಗಿ)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಆ) ಕರ್ನಾಟಕ ಬಹಿರಂಗ ಸ್ಥಳಗಳ (ವಿರೂಪಗೊಳಿಸುವುದನ್ನು ಪ್ರತಿಬಂಧಿಸುವ) (ತಿದ್ದುಪಡಿ) ವಿಧೇಯಕ, 2020**

– ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು
ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)
(ಮುಖ್ಯಮಂತ್ರಿಗಳ ಪರವಾಗಿ)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಇ) ಕರ್ನಾಟಕ ನಾವಿನ್ಯತಾ ಪ್ರಾಧಿಕಾರ ವಿಧೇಯಕ, 2020**

– ಶ್ರೀ ಕೆ.ಎ.ತಿಪ್ಪೇಸ್ವಾಮಿ
– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಐವನ್ ಡಿ'ಸೋಜ
– ಡಾ॥ ಅಶ್ವತ್ಥನಾರಾಯಣ ಸಿ.ಎನ್ (ಉಪ ಮುಖ್ಯಮಂತ್ರಿಗಳು ಹಾಗೂ
ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಈ) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ, 2020**

- ಶ್ರೀ ಎನ್.ಎಸ್.ಬೋಸರಾಜು
- ಶ್ರೀ ಶರಣಪ್ಪ ಮಟ್ಟೂರ
- ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)
- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ
- ಶ್ರೀ ಮರಿತಿಬ್ಬೇಗೌಡ
- ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು)
- ಡಾ॥ ಸಿ.ಎನ್.ಅಶ್ವಥ್ ನಾರಾಯಣ್ (ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**8. ನಿಯಮ 143ರ ಅಡಿಯಲ್ಲಿ ಸಿ.ಎ.ಎ. ಬಗ್ಗೆ ಚರ್ಚಿಸಲು ಅನುಮತಿ ಕೋರಿಕೆ**

- **ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)**
- **ಶ್ರೀ ಐವನ್ ಡಿ'ಸೋಜ**
- **ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು)**
- **ಶ್ರೀ ಕೆ.ಟಿ.ಶ್ರೀಕಂಠೇಗೌಡ**
- **ಶ್ರೀ ಕೆ.ಅಬ್ದುಲ್ ಜಬ್ಬಾರ್**
- **ಡಾ:ತೇಜಸ್ವಿನಿ ಗೌಡ**
- **ಶ್ರೀ ನಸೀರ್ ಅಹ್ಮದ್**
- **ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು)**

**9. ವಿತ್ತೀಯ ಕಾರ್ಯಕಲಾಪಗಳು**

**2020–2021ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ.**

- ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**10. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ**

**"ದಿನಾಂಕ 21.3.2020ರ ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ವರದಿಯಾಗಿರುವಂತೆ ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕು ಸುರಗಜಕ್ಕನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಬರುವ ಗೌರೇನ ಹಳ್ಳಿಯಲ್ಲಿ 'ನಲ್ಲಿ(ಕೊಳಾಯಿ) ನೀರಿನಲ್ಲಿ ಇಲಿ ಚರ್ಮ, ಜಿರಳೆಗಳಿಂದ ಕೂಡಿದ ನೀರು' ಸರಬರಾಜು ಬಗ್ಗೆ.**

- ಶ್ರೀ ಹೆಚ್.ಎಂ.ರೇವಣ್ಣ
- ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

**11. ವಿತ್ತೀಯ ಕಾರ್ಯಕಲಾಪಗಳು**

**2020–2021ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ.**

- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಎಸ್.ರುದ್ರೇಗೌಡ

**12. ಗಮನ ಸೆಳೆಯುವ ಸೂಚನೆ**

**ವಿದ್ಯಾರ್ಥಿಗಳಿಗೆ ವಿತರಿಸಿರುವ ಲ್ಯಾಪ್‌ಟಾಪ್‌ಗಳ ಖರೀದಿಯಲ್ಲಿ ಆಗಿರುವ ಅವ್ಯವಹಾರದ ಬಗ್ಗೆ**

- ಶ್ರೀ ಕೆ.ಸಿ. ಕೊಂಡಯ್ಯ
- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಹೆಚ್.ಎಂ. ರೇವಣ್ಣ
- ಶ್ರೀ ಶರಣಪ್ಪ ಮಟ್ಟೂರ
- ಶ್ರೀ ಎಂ. ನಾರಾಯಣಸ್ವಾಮಿ (ಸರ್ಕಾರದ ಮುಖ್ಯ ಸಚೇತಕರು)
- ಡಾ॥ ವೈ.ಎ. ನಾರಾಯಣಸ್ವಾಮಿ
- ಶ್ರೀ ಸಿ.ಟಿ. ರವಿ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು)
- ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
- ಡಾ॥ ಸಿ.ಎನ್.ಅಶ್ವತ್ಥ್ ನಾರಾಯಣ್ (ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಜೀವನೋಪಾಯ ಮಂತ್ರಿ)

– – –

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(651) 23–03–2020/ 11–10/ ಕೆಹೆಚ್–ವಿಕೆ

**ಕರ್ನಾಟಕ ವಿಧಾನ ಪರಿಷತ್ತು**

***ಸೋಮವಾರ, 23ನೇ ಮಾರ್ಚ್ 2020***

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 13 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ) ಯವರು ಪೀಠದಲ್ಲಿ ಉಪಸ್ಥಿತರಿದ್ದರು.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರನ್ನು ಮತ್ತು ಜನತಾದಳ ಪಕ್ಷದ ನಾಯಕರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರನ್ನು ಹೊರತುಪಡಿಸಿ, ಕಾಂಗ್ರೆಸ್ ಪಕ್ಷದ ಎಲ್ಲಾ ಸದಸ್ಯರುಗಳು ಮತ್ತು ಜನತಾದಳ ಪಕ್ಷದ ಎಲ್ಲಾ ಸದಸ್ಯರು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**1. ನಿಯಮ 68ರ ಮೇರೆಗೆ ಚರ್ಚೆ**

**ವಿಷಯ:- ಮಂಡ್ಯ ಜಿಲ್ಲೆಯಲ್ಲಿ ಪರವಾನಗಿ ಪಡೆಯದೇ ಅಕ್ರಮ ಕಲ್ಲು ಗಣಿಗಾರಿಕೆ ಮತ್ತು ಅಕ್ರಮ ಸಾಗಾಣಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡುತ್ತಿರುವುದಲ್ಲದೇ ನ್ಯಾಯಸಮ್ಮತವಾಗಿ ಗಣಿಗಾರಿಕೆ ನಡೆಸುತ್ತಿರುವವರಿಗೆ ನೋಟಿಸ್ ಜಾರಿ ಮಾಡಿ ಘಟಕಗಳನ್ನು ಸ್ಥಗಿತಗೊಳಿಸಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವ ಕುರಿತು**

**- - -**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲೆಯಲ್ಲಿ ಕಾನೂನುಬದ್ಧವಾಗಿ ನಡೆಯುತ್ತಿರುವಂತಹ ಕಲ್ಲು ಗಣಿಗಾರಿಕೆಯ ವಿಚಾರದಲ್ಲಿ ರಾಜಕಾರಣದ ಮೇಲಾಟದಿಂದ *Baby Betta Kaval stone crusher and T.J. Stone Crushers* ವಿಚಾರದಲ್ಲಿ ಇವತ್ತು ಅನವಶ್ಯಕವಾಗಿ ಪ್ರವೇಶವಾಗಿರುವುದರಿಂದ, ಈಗಾಗಲೇ ಉಚ್ಚ ನ್ಯಾಯಾಲಯವು ಏನು ಸೂಚನೆಯನ್ನು ಕೊಟ್ಟಿದೆಯೋ ಮತ್ತು ಕಾನೂನುಬದ್ಧವಾಗಿ ಏನು ಇದೆಯೋ, ಆ ಪ್ರಕಾರ ಅವರು ಉದ್ದಿಮೆಯನ್ನು ನಡೆಸುವುದಕ್ಕೆ ಅನುವು ಮಾಡಿಕೊಡಬೇಕು. ಈ ಕೂಡಲೇ ಘೋಷಣೆ ಮಾಡಬೇಕೆಂದು ಅಗ್ರಹವನ್ನು ಮಾಡಿದ್ದೆವು. ದಯಮಾಡಿ, ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಮನವಿಯನ್ನು ಮಾಡುತ್ತೇನೆ. ತಾವು ಅತ್ಯಂತ ಕರಾರುವಕ್ಕಾಗಿಉಚ್ಚ ನ್ಯಾಯಾಲಯವು ಕಾನೂನುಬದ್ಧವಾಗಿರುವಂತಹ 3 ಬಾರಿ ಮಾರ್ಗದರ್ಶನ ಮತ್ತು ಸೂಚನೆಯನ್ನು ಕೊಟ್ಟಿದ್ದಿಯೋ, ಅದನ್ನು ಪಾಲಿಸುವಂತಹದ್ದು, ಹಾಗೆಯೇ ನೂರಾರು ವರ್ಷಗಳಿಂದ ಸ್ವಾತಂತ್ರ ಪೂರ್ವದಿಂದಲೂ ನಡೆದುಕೊಂಡು ಬಂದಿರುವಂತಹ ಬೇಬಿ ಬೆಟ್ಟ ಕಾವಲ್ value ಯಲ್ಲಿ ಇರುವಂತಹ ಗಣಿಗಾರಿಕೆಯನ್ನು ನಿಲ್ಲಿಸಿದ್ದೀರೋ, ಸರ್ಕಾರಕ್ಕೆ ಬರುವಂತಹ ಬೊಕ್ಕಸಕ್ಕೆ ದೊಡ್ಡ ನಷ್ಟವಾಗುತ್ತಿದೆ ಮತ್ತು ಇವತ್ತಿನ ದಿವಸ ಸರ್ಕಾರಕ್ಕೆ ಬರುವಂತಹ ಲಕ್ಷಾಂತರ ಹಣ ನಷ್ಟವಾಗುತ್ತಿದೆ. ಕಣ್ಣು ಮುಚ್ಚಿಕೊಂಡು ಸರ್ಕಾರಕ್ಕೆ ಬರುವಂತಹ ಹಣವನ್ನು ತಪ್ಪಿಸುತ್ತಿದ್ದಾರೆ. ಆ ಉದ್ದಿಮೆಗಳು ಇವತ್ತಿನ ಗಣಿಗಾರಿಕೆಗಳು ಅಲ್ಲ. ಸ್ವಾತಂತ್ರ ಪೂರ್ವದಿಂದಲೂ ನಡೆದುಕೊಂಡು ಬರುತ್ತಿವೆ. ರಸ್ತೆ ಕೆಲಸ ಮಾಡುವವರು, ಸರ್ಕಾರದ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಟ್ಟಡಗಳನ್ನು ಕಟ್ಟುವಂತಹವರು, ಇದನ್ನು ನಡೆಸುತ್ತಿರುವಂತಹದ್ದು, ಇದಕ್ಕೆ ಸರ್ಕಾರವೇ ಅನುಮತಿಯನ್ನು ನೀಡಿದೆ. ಹಾಗಾಗಿ *Baby Betta Kaval stone crusher and T.J. Stone Crushers* ವಿಚಾರದಲ್ಲಿ ಕಾನೂನುಬದ್ಧವಾಗಿ ಇರುವುದಕ್ಕೆ ಮರು ಚಾಲನೆಯನ್ನು ಕೊಟ್ಟು, ನಡೆಸುವುದಕ್ಕೆ ಅನುಮತಿಯನ್ನು ಕೊಟ್ಟು, ಈ ಕೂಡಲೇ ಘೋಷಣೆ ಮಾಡಬೇಕೆಂದು ತಮ್ಮ ಮೂಲಕ ಅಗ್ರಹಿಸುತ್ತೇನೆ.

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್ (ಗಣಿ ಮತ್ತು ಭೂ ವಿಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಮೊನ್ನೆಯ ದಿವಸ ಮಾನ್ಯ ಗೌರವಾನ್ವಿತ ಶಾಸಕರು *T.J. Stone Crushers* ಬಗ್ಗೆ ಹಲವಾರು ಸ್ಪಷ್ಟೀಕರಣವನ್ನು ಕೇಳಿ, ಸರ್ಕಾರದಿಂದ ನಿಯಮಬದ್ಧವಾಗಿರುವಂತಹ ಗಣಿಗಾರಿಕೆಗಳಿಗೆ ತೊಂದರೆಯಾಗುತ್ತಿದೆ ಎನ್ನುವಂತಹ ಮಾತನ್ನು ಹೇಳಿದರು. ನಾನು ಆವತ್ತು ಕೂಡ ಉತ್ತರವನ್ನು ಕೊಟ್ಟಿದ್ದೇನೆ. ನಮ್ಮ ಇಲಾಖೆ ಆದಾಯ ಬರುವಂತಹ ಇಲಾಖೆ. ಗಣಿಗಾರಿಕೆಯಿಂದ ಸರ್ಕಾರಕ್ಕೆ ಸುಮಾರು 3500 ಕೋಟಿ ರೂಪಾಯಿಗಳಷ್ಟು ಈ ವರ್ಷ ನಮ್ಮ ಇಲಾಖೆಯಿಂದ ಹೋಗಿದೆ. ಗಣಿಗಾರಿಕೆಯನ್ನು ಮಾಡುವಂತಹ ಉದ್ದಿಮೆದಾರರಿಂದ ಮತ್ತು ಕೈಗಾರಿಕೆಗಳ ಕಡೆಯಿಂದ ನಮಗೆ ತೆರಿಗೆ ಬರುತ್ತದೆ. ಅವರಿಗೆ ತೊಂದರೆ ಕೊಡುವುದರ ಮುಖಾಂತರ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತಿದೆ ಎನ್ನುವಂತಹ ಮಾಹಿತಿ ಸರ್ಕಾರದಲ್ಲಿ ಇದೆ. ಆದರೆ, ಈ ಸರ್ಕಾರವು ಇಂತಹ ಅಕ್ರಮ ಗಣಿಗಾರಿಕೆಯನ್ನು ತಡೆಯಬೇಕೆಂಬ ದೃಢ ನಿರ್ಧಾರವನ್ನು ಮಾಡಿಕೊಂಡಿದೆ. ಮಾನ್ಯ ಶಾಸಕರು ಈ ನಿರ್ದಿಷ್ಟವಾದ ವಿಚಾರವನ್ನು ಏನು ಎತ್ತಿದ್ದಾರೆ, ಇದಕ್ಕೆ ಸಂಬಂಧಪಟ್ಟ 4 ರಿಂದ 5 ಜನ ಮಾನ್ಯ ಶಾಸಕರನ್ನು ಮತ್ತು ವಿಧಾನ ಪರಿಷತ್ತಿನ ಸದ್ಯಸ್ಯರನ್ನು ಕರೆಸಿಕೊಂಡು, ನಮ್ಮ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚೆ ಮಾಡಿ, ಆ ಉದ್ದಿಮೆದಾರರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಹಾಗೆಯೇ ನಿಯಮಬಾಹಿರವಾಗಿ ಕೆಲಸ ಮಾಡಿದರೆ ಸಮಸ್ಯೆ ಇರುತ್ತದೆ. ಅವರು ನಿಯಮಬಾಹಿರವಲ್ಲದ ಕೆಲಸವನ್ನು ಮಾಡಿದ್ದರೆ ನಾವು ಯಾವುದೇ ತೊಂದರೆಯನ್ನು ಕೊಡುವುದಿಲ್ಲ. ನಮಗೆ ಉದ್ದಿಮೆದಾರರು ಬಹಳ ಮುಖ್ಯ. ಈ ವಿಷಯವಾಗಿ ಕೆಳಮನೆಯಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್.ಡಿ.ರೇವಣ್ಣನವರು ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೂ ಸಹ ನಾಳೆ ನಾನು ಉತ್ತರವನ್ನು ಕೊಡುತ್ತೇನೆ. ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ತೆರಳಿ ಸಹಕರಿಸಬೇಕು. ಉದ್ದೇಶಪೂರ್ವಕವಾಗಿ ಯಾವುದೇ ಗಣಿಗಾರಿಕೆಗಳಿಗೆ, ಯಾವುದೇ ಉದ್ದಿಮೆದಾರರಿಗೆ, crusher owners ಇರಬಹುದು, ಗಣಿಗಾರಿಕೆಯ ಮಾಲೀಕರು ಇರಬಹುದು,

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾರಿಗೂ ಸಹ ತೊಂದರೆ ಕೊಡುವುದಿಲ್ಲ. ಈ ವಿಷಯದಲ್ಲಿಯೂ ಸಹ ಅವರನ್ನು ಕರೆದು, ಮಾನ್ಯ ಕೆ.ಟಿ.ಶ್ರೀಕಂಠೇಗೌಡರನ್ನು ಮತ್ತು 4–5 ಜನ ಮಾನ್ಯ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿ ಮುಂತಾದ ಕಾಂಗ್ರೆಸ್ ಮತ್ತು ಜೆಡಿ (ಎಸ್) ಪಕ್ಷದ ಸದಸ್ಯರನ್ನು ಕರೆದುಕೊಂಡು, ಈ ಅಧಿವೇಶನ ಮುಗಿದ ತತ್‌ಕ್ಷಣ ಕರೆದು, ಸುದೀರ್ಘವಾದ ಚರ್ಚೆಯನ್ನು ಮಾಡಿ, ಸಮಸ್ಯೆಯನ್ನು ಪರಿಹಾರ ಮಾಡಿಕೊಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಯಾವಾಗ ಸಭೆಯನ್ನು ಕರೆಯುತ್ತಾರೆ?

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:–** ಮಾನ್ಯ ಸಭಾಪತಿಯವರೇ, ಅಧಿವೇಶನ ಮುಗಿದ ತಕ್ಷಣ ಸಭೆಯನ್ನು ಕರೆಯುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಧ್ಯಾಹ್ನ 3 ಗಂಟೆಗೆ ತಮ್ಮ ಉಪಸ್ಥಿತಿಯಲ್ಲಿ ಸರ್ಕಾರದ ಪರವಾಗಿ ಮಾನ್ಯ ಮಂತ್ರಿಗಳು ಎರಡೂ ಪಕ್ಷದ ಶಾಸಕರನ್ನು ಕರೆದು, ತಮ್ಮ ಕಛೇರಿಯಲ್ಲಿ ಚರ್ಚೆ ಮಾಡೋಣ ಎಂದು ಹೇಳಿದ್ದಾರೆ. ಈ ವಿಚಾರವು ಕಲಾಪದಲ್ಲಿ ಬಹಳ ಮಹತ್ವವುಳ್ಳದಾಗಿರುವುದರಿಂದ, ನಾವು ಕೂಡ ಪ್ರತಿಷ್ಠೆಗೆ ಬೀಳದೇ ಇವತ್ತು ಸಭೆಯನ್ನು ನಡೆಸಬೇಕು. ಮಾನ್ಯ ಸಚಿವರು ಅಧಿವೇಶನ ಮುಗಿದ ಮೇಲೆ ಅಲ್ಲ. ಇವತ್ತೇ ಎಲ್ಲರನ್ನೂ ಕರೆದು ಮಾನ್ಯ ಸಚಿವರು ಮಾತನಾಡಲಿ. ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಇದರ ಬಗ್ಗೆ ಇವತ್ತು ಮಧ್ಯಾಹ್ನ ಅರ್ಧ ಗಂಟೆ ಚರ್ಚೆ ಮಾಡೋಣ. ಇದರ ಮೇಲೆ ಚರ್ಚೆ ಮಾಡಿ ನಿರ್ಣಯವನ್ನು ಕೈಗೊಳ್ಳೋಣ.

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಬಹಳ ಸ್ಪಷ್ಟವಾದಂತಹ ಉತ್ತರವನ್ನು ಕೊಟ್ಟಿದ್ದೇನೆ. ಖಂಡಿತವಾಗಿಯೂ ಸಮಸ್ಯೆಗಳಿದ್ದಲ್ಲಿ, ಬಗೆಹರಿಸುವಂತಹ ಒಂದು ಇಚ್ಛಾಶಕ್ತಿ ಈ ಸರ್ಕಾರದ್ದಾಗಿರುವುದರಿಂದ, ದಯವಿಟ್ಟು ಎಲ್ಲಾ ಮಾನ್ಯ ಸದಸ್ಯರು ಸಹಕರಿಸಬೇಕು. ಅಧಿವೇಶನ ಮುಗಿದ ತಕ್ಷಣವೇ ಅಧಿಕಾರಿಗಳ ಮಟ್ಟದಲ್ಲಿ ಒಂದು ಸಭೆಯನ್ನು ಕರೆಯುತ್ತೇನೆ. ಅವರಿಗೆ ಸಮಾಧಾನವಾಗದೇ ಹೋದರೆ ಇದರ ಬಗ್ಗೆ ನಾನು ಸರಿಯಾಗಿ ಸ್ಪಷ್ಟನೆಯನ್ನು ಕೊಟ್ಟಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಮ್ಮ ವಿಚಾರವೇನೆಂದರೆ, ಸರ್ಕಾರ ತೆರೆದ ಹೃದಯದಿಂದ ಮತ್ತು ತೆರೆದ ಮನಸ್ಸಿನಿಂದ ನಮ್ಮ ಜೊತೆ ಚರ್ಚೆ ಮಾಡುವುದಕ್ಕೆ ತಯಾರು ಇದೆ ಎಂದು ಹೇಳಿದ್ದಾರೆ. ಆದರೆ ಅಧಿವೇಶನ ಮುಗಿದ ನಂತರ ಎಂದರೆ ಹೇಗೆ? ಇವತ್ತು ದೇಶದಲ್ಲಿ ಮತ್ತು ರಾಜ್ಯದಲ್ಲಿ ನಾವು ಮನೆಯನ್ನು ಬಿಟ್ಟು ಹೊರಗೆ ಬರಲಾದಂತಹ ಸ್ಥಿತಿಗತಿಗಳಿವೆ. ಅಧಿವೇಶನ ಮುಗಿದ ನಂತರ ನಾವು ಇಲ್ಲಿಗೆ ಬರುವುದಕ್ಕೂ ಸಹ ಅಸಾಧ್ಯವಾದ ಮಾತು. ಈಗಾಗಲೇ ಅಧಿವೇಶನ ನಡೆಯುತ್ತಿದೆ. ತಮ್ಮ ನೇತೃತ್ವದಲ್ಲಿ ಇವತ್ತು ಮಧ್ಯಾಹ್ನ ಅರ್ಧ ಗಂಟೆ ಇದರ ಬಗ್ಗೆ ಚರ್ಚೆ ಮಾಡಿ, ಈ ಸಮಸ್ಯೆಯನ್ನು ಇತ್ಯರ್ಥಪಡಿಸೋಣ. ಮಾನ್ಯ ಸಚಿವರು ಒಪ್ಪಿದರೆ ನಾನು ಎಲ್ಲಾ ಮಾನ್ಯ ಸದಸ್ಯರಿಗೂ ಮನವಿಯನ್ನು ಮಾಡಿಕೊಳ್ಳುತ್ತೇನೆ. ಆಗ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಬರುತ್ತಾರೆ.

(ಮುಂದು)

**(652) 23/03/2020/11:20/ಎಸ್‌ಪಿಆರ್/ಬಿಎನ್‌ಎಸ್**

**ಶ್ರೀ ಎಸ್.ಆರ್.ಪಾಟೀಲ್(ಮುಂದು):–**

ಮುಂದಿನ ಸ್ಥಿತಿಯು ಭಯಾನಕವಾಗಿದ್ದು, ನಾವು ನಮ್ಮ ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಅಧಿವೇಶನವನ್ನು ನಡೆಸುತ್ತಿದ್ದೇವೆ. ಈ ವಿಚಾರದಲ್ಲಿ ಸಮಯದ ಪ್ರಶ್ನೆಯಾಗಿದೆ. ಸರ್ಕಾರವು ಅಧಿವೇಶನ ಮುಗಿದ ಮೇಲೆ ಎಂದು ಹೇಳುತ್ತಿದ್ದು, ನಾವು ಇವತ್ತಿನ ದಿನವೇ ಸಭೆಯನ್ನು ಕರೆಯಬೇಕೆಂದು ಕೇಳುತ್ತಿದ್ದೇವೆ.

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್(ಗಣಿ ಮತ್ತು ಭೂ ವಿಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, ಈಗ ಕೊರೋನಾ ಕಾಯಿಲೆ ಎಲ್ಲೆಡೆ ಹರಡುತ್ತಿರುವುದರಿಂದ, ಅಧಿವೇಶನ ಸಮಯದಲ್ಲಿ ಹೋಗುವುದು, ಬರುವುದರಿಂದ ತೊಂದರೆಯಾಗುತ್ತದೆ. ಅಧಿವೇಶನ ಮುಗಿದ ದಿನವೇ ಅಂದರೆ ಅಧಿವೇಶನವು ಮಧ್ಯಾಹ್ನ ಮುಗಿದರೆ ಸಾಯಂಕಾಲ ಅಥವಾ ಅಧಿವೇಶನ ಸಂಜೆ ಮುಗಿದರೆ ಮರುದಿನ ಬೆಳಗ್ಗೆ ಸಭೆಯನ್ನು ಕರೆಯಲಾಗುವುದೆನ್ನುವ ಆಶ್ವಾಸನೆಯನ್ನು ಸರ್ಕಾರದ ಪರವಾಗಿ ನಾನು ಕೊಡಲಿಚ್ಛಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಚಿವರು ಹೇಳಿರುವ ಮಾತುಗಳಿಗೆ ನಮಗೆ ಸಹಾನುಭೂತಿ ಇದೆ. ಆದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಈಗಾಗಲೇ ಹೇಳಿರುವಂತೆ, ದಯಮಾಡಿ ಈ ದಿನವೇ ಅಂದರೆ ಮಧ್ಯಾಹ್ನ, ಒಂದು ವೇಳೆ ಮಧ್ಯಾಹ್ನ ಸಾಧ್ಯವಾಗಲಿಲ್ಲವೆಂದರೆ, ಸಾಯಂಕಾಲವಾದರೂ ಸರಿ ತಮ್ಮ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಕರೆದು ವಿಷಯವನ್ನು ಇತ್ಯರ್ಥಗೊಳಿಸಲಿಕ್ಕೆ ನಮ್ಮ ಸಹಮತವಿದೆ. ಇದಕ್ಕೆ ಸಚಿವರು ಒಪ್ಪಿಗೆಯನ್ನು ಸೂಚಿಸಬೇಕು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ಮಂತ್ರಿಗಳು ಸಂಪೂರ್ಣವಾದ ಉತ್ತರವನ್ನು ನೀಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಯಾವಾಗ ಸರ್ಕಾರ ಈ ವಿಚಾರದಲ್ಲಿ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿ, ವಿರೋಧ ಪಕ್ಷದವರೊಂದಿಗೆ ಚರ್ಚೆ ಮಾಡಿದೆ, ಸರ್ಕಾರಕ್ಕೆ ಬರಬೇಕಾದ ಆದಾಯದ ಬಗ್ಗೆ ಸರ್ಕಾರಕ್ಕೆ ಚಿಂತೆ ಇದೆ. ಸರ್ಕಾರ ಯಾವುದೇ vindictive mind ನಿಂದ ಯಾವುದೇ ವಿಚಾರಗಳನ್ನು ಮಾಡಿಲ್ಲ. ಸರ್ಕಾರವು ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎನ್ನುವ ಉತ್ತರವನ್ನು ಮಂತ್ರಿಗಳು ನೀಡಿದ ನಂತರ ಇವತ್ತಿನ ದಿನವೇ ಸಭೆಯನ್ನು ಮಾಡಿ ಎನ್ನುವ ಒತ್ತಾಯವನ್ನು ದಯಮಾಡಿ ಮಾಡುವುದು ಬೇಡ ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. Immediately after the Session, ಅಧಿವೇಶನವು ಯಾವ ದಿನ ಮುಗಿಯುತ್ತದೆಯೋ ಅದೇ ದಿನವೇ ಸಭೆಯನ್ನು ಮಾಡುತ್ತೇವೆಂದು ವಿನಂತಿ ಮಾಡುತ್ತೇನೆ. ಈ ದಿನ ಬಹಳ ವಿಧೇಯಕಗಳು ಇವೆ. ಹೀಗಾಗಿ ಇದೇ ದಿನವೇ ಸಭೆಯನ್ನು ಮಾಡುವುದು ಬೇಡವೆಂದು ನಾನು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಹೆಚ್.ಎಂ.ರೇವಣ್ಣನವರಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಎಲ್ಲಾ ಸದಸ್ಯರುಗಳ ಜೊತೆಯಲ್ಲಿ ಸುದೀರ್ಘವಾಗಿ ಚರ್ಚೆಯನ್ನು ಮಾಡಿದ್ದೇನೆ. ಮಾನ್ಯ ಮರಿತಿಬ್ಬೇಗೌಡರವರನ್ನೂ ಒಳಗೊಂಡಂತೆ ಎಲ್ಲಾ ಸದಸ್ಯರು ಅಪರಾಹ್ನ 3:00 ಗಂಟೆಗೆ ಸಭೆಯನ್ನು ಮಾಡೋಣವೆಂದು ತಿಳಿಸಿದ್ದಾರೆ. ಆದರೆ ಅಪರಾಹ್ನ 3:00 ಗಂಟೆಗೆ ಸಭೆ ಮಾಡುವುದಕ್ಕೆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಾಧ್ಯವಾಗುವುದಿಲ್ಲ. ಹೀಗಾಗಿ ಈ ದಿನ ಅಧಿವೇಶನ ಪೂರ್ಣಗೊಂಡ ನಂತರ ಸಭೆಯನ್ನು ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಮಾನ್ಯ ಸರ್ಕಾರಿ ಮುಖ್ಯ ಸಚೇತಕರು vindictive mind ನಿಂದ ತೀರ್ಮಾನ ಮಾಡಿಲ್ಲವೆಂದು ತಿಳಿಸಿದ್ದಾರೆ. ಹೀಗೆ ಚರ್ಚೆ ಮಾಡುತ್ತಾ ಹೋದರೆ, ಬೇರೆ ಬೇರೆ ರೂಪಗಳು ತಾಳುತ್ತವೆ. ಹೀಗಾಗಿ ನಾನು merit of the case ನ್ನು touch ಮಾಡುವುದಕ್ಕೆ ಹೋಗುವುದಿಲ್ಲ. ದಯಮಾಡಿ ಸರ್ಕಾರಿ ಮುಖ್ಯ ಸಚೇತಕರು ನಾವು ಹೇಳುವುದನ್ನು ಕೇಳಬೇಕು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಬಹಳ ವಿಧೇಯಕಗಳಿವೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮೊದಲು ನಾನು ಮಾತನಾಡುತ್ತೇನೆ. ನಂತರದಲ್ಲಿ ಅವರು ಮಾತನಾಡಲಿ. I am on my legs. ಇವತ್ತಿನ ಮಧ್ಯಾಹ್ನ 3:00 ಗಂಟೆಗೆ ಸಭೆ ಮಾಡುವುದು ಬೇಡ. ಅಧಿವೇಶನವು ಬಹಳ ಮಹತ್ವದ ಸಮಯವಾಗಿದೆ. It is valuable time. ಅಧಿವೇಶನದ ಪ್ರತಿ ನಿಮಿಷಕ್ಕೂ ರಾಜ್ಯದ ತೆರಿಗೆದಾರರ ಹಣ ಖರ್ಚಾಗುತ್ತದೆ. ಅಧಿವೇಶನದಲ್ಲಿ ಅನೇಕ ಸಮಸ್ಯೆಗಳು ಇತ್ಯರ್ಥವಾಗುತ್ತವೆ. ಈ ರೀತಿಯಾಗಿ ಬಾವಿಯಲ್ಲಿ ಬರಬೇಕೆನ್ನುವ ಇರಾದೆ ನಮ್ಮದಲ್ಲ. ಈ ವಿಷಯದಲ್ಲಿ ಸರ್ಕಾರವು ಇತ್ಯರ್ಥಕ್ಕೆ ಬರಲಿ. ಸರ್ಕಾರವು ತೆರೆದ ಮನಸ್ಸಿನಿಂದ ಮತ್ತು ತೆರೆದ ಹೃದಯದಿಂದ ಈ ವಿಚಾರದಲ್ಲಿ ನಿರ್ಣಯ ಕೈಗೊಳ್ಳೋಣ ಎಂದು ಹೇಳಿದೆ. ಹೀಗಾಗಿ ತಮ್ಮ ನೇತೃತ್ವದಲ್ಲಿ ಸಭೆಯನ್ನು ನಡೆಸುವುದಕ್ಕೆ ಸರ್ಕಾರವು ಒಪ್ಪಿದೆ ಹಾಗೂ ನಾವೂ ಸಹ ಒಪ್ಪಿದ್ದೇವೆ. ಸರ್ಕಾರವು ಅಧಿವೇಶನದ ನಂತರ ಎಂದು ಹೇಳುತ್ತಿದೆ ಆದರೆ ನಾವು ಇವತ್ತಿನ ದಿವಸ ಅಧಿವೇಶನ ಪೂರ್ಣಗೊಂಡ ನಂತರ ಎಂದು ಹೇಳುತ್ತಿದ್ದೇವೆ. ಅಪರಾಹ್ನ ಸಮಯದಲ್ಲಿ ಸಭೆ ಮಾಡುವುದು ಬೇಡ. ಅಧಿವೇಶನ ಪೂರ್ಣಗೊಂಡ ನಂತರ ತಮ್ಮ ನೇತೃತ್ವದಲ್ಲಿ ತಮ್ಮ ಕೊಠಡಿಯಲ್ಲಿಯೇ ಚರ್ಚೆಯನ್ನು ಮಾಡೋಣ. ಇದಕ್ಕೆ ಸರ್ಕಾರವು ಒಪ್ಪಿಕೊಂಡರೆ, ನಮ್ಮ ಪಕ್ಷದ ಎಲ್ಲಾ ಸದಸ್ಯರುಗಳು ಬಾವಿಯಿಂದ ಹೊರಗೆ ಬರುತ್ತಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ಕಾರಿ ಮುಖ್ಯ ಸಚೇತಕರು, ಸರ್ಕಾರ ಉತ್ತರ ನೀಡಿದೆ ಇದರಲ್ಲಿ ಯಾವುದೇ ರೀತಿಯ vindictive mind ಇಲ್ಲವೆಂದು ಇವತ್ತಿನ ದಿವಸ ಹೇಳುತ್ತಿದ್ದಾರೆ. ಆದರೆ ನಾವು ಬಾವಿಗೆ ಹೋಗಿರುವ ಉದ್ದೇಶವೇ ಇದರಲ್ಲಿ vindictive mind ಇದೆ ಎನ್ನುವ ಕಾರಣಕ್ಕಾಗಿ. ಇದನ್ನು ಸರ್ಕಾರಕ್ಕೆ ಮನವರಿಗೆ ಮಾಡಿಕೊಡುತ್ತಾ, deadlock ಮುಗಿಯಬೇಕಾದರೆ, ನಾವು ವಿರೋಧ ಪಕ್ಷದವರು ನಮ್ಮ ಕರ್ತವ್ಯವನ್ನು ಮಾಡಿದ್ದೇವೆ. ಆದರೆ ಸರ್ಕಾರವು ಮಧ್ಯಪ್ರವೇಶಿಸಿದೆ. ನಾವು ಇವತ್ತಿನ ದಿವಸದ ಎಲ್ಲಾ ವಿಧೇಯಕಗಳನ್ನು ಅನುಮೋದಿಸಿ ಕೊಡೋಣ. ಯಾವುದೇ ವಿಧೇಯಕಗಳನ್ನು ನಾವು ಅನುಮೋದಿಸದೇ ಇಲ್ಲ. ಈ ಹಿಂದೆ ಸರ್ಕಾರವು ಮಂಡಿಸಿರುವ ಎಲ್ಲಾ ವಿಧೇಯಕಗಳನ್ನು ಅನುಮೋದಿಸಿ ಕೊಟ್ಟಿದ್ದೇವೆ. ಅದೇ ರೀತಿಯಾಗಿ ಇವತ್ತಿನ ಎಲ್ಲಾ ವಿಧೇಯಕಗಳನ್ನೂ ಸಹ ಅನುಮೋದಿಸಿ ಕೊಡೋಣ. ನಾವು ನೀಡಿರುವ ಮನವಿಗೆ ಹಾಗೂ ಆಗಿರುವ ಅನ್ಯಾಯಕ್ಕೆ ಕನಿಷ್ಠವಾಗಿ ಇವತ್ತಿನ ಅಪರಾಹ್ನ ಅಥವಾ ಸಂಜೆ ಸರ್ಕಾರ ಸಭೆ ನಡೆಸುವುದನ್ನು ಬಿಟ್ಟು ಅಧಿವೇಶನ ಪೂರ್ಣಗೊಂಡ ನಂತರ ಮಾಡುತ್ತೇವೆ ಎಂಬುದಾಗಿ ಹೇಳುತ್ತಿದ್ದಾರೆ. **'ಊರೆಲ್ಲಾ ಕೊಳ್ಳೆ ಹೊಡೆದ ಮೇಲೆ ದಿಡ್ಡಿ ಬಾಗಿಲು ಹಾಕಿದಂತೆ'** ಎನ್ನುವ ರೀತಿಯಲ್ಲಿ ಸರ್ಕಾರವು ಹೇಳುತ್ತಿದೆ. ಈ ಸಭೆಯಿಂದ ತೆಗೆದುಕೊಳ್ಳುವ ತೀರ್ಮಾನಕ್ಕೆ ಸಂಬಂಧಪಟ್ಟಂತೆ ನಾವುಗಳು ಮತ್ತೆ ಮಾತನಾಡುವುದಕ್ಕಾಗುವುದಿಲ್ಲ. ಒಂದು ಬಾರಿ ಅಧಿವೇಶನ ಪೂರ್ಣಗೊಂಡರೆ ನಮಗೆ ಮಾತನಾಡುವುದಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ಆದಷ್ಟು ಬೇಗ ಸಭೆಯನ್ನು ಸರ್ಕಾರ ಮಾಡಲಿ ಎಂದು ನಾನು ಹೇಳುತ್ತೇನೆ. ಸರ್ಕಾರವು ಅಧಿವೇಶನ ಪೂರ್ಣಗೊಂಡ ನಂತರ ಸಭೆಯನ್ನು ಮಾಡುವುದಾಗಿ ತಿಳಿಸುತ್ತಿದೆ. ಇದು ಒಂದು ರೀತಿಯ escapism ಎಂದು ನಾನು ಹೇಳುತ್ತೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಈಗಾಗಲೇ ಸರ್ಕಾರವು ಸ್ಪಷ್ಟವಾದ ಉತ್ತರವನ್ನು ನೀಡಿದೆ. ಮಾನ್ಯ ರೇವಣ್ಣನವರು escapism ಎಂದು ಹೇಳುತ್ತಿದ್ದಾರೆ. ಇದರಲ್ಲಿ ತಪ್ಪಿಸಿಕೊಳ್ಳುವಂತಹ ಯಾವುದೇ ವಿಚಾರವಿಲ್ಲ.

**ಶ್ರೀ ಟಿ.ಎ.ಶರವಣ(ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ಈಗಾಗಲೇ ಚರ್ಚೆಯನ್ನು ಮಾಡಲಾಗಿದೆ. ಈಗಾಗಲೇ ಆಗಿರುವ ಅನ್ಯಾಯವನ್ನು ಖಂಡಿಸಿ, ಅಲ್ಲಿನ ವಾಸ್ತವಾಂಶಗಳನ್ನು ಗಮನಿಸಿ, ಸರ್ಕಾರ ಯಾವ ರೀತಿಯ ತೀರ್ಮಾನಗಳನ್ನು ತೆಗೆದುಕೊಂಡಿದೆ,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನ್ಯಾಯಾಲಯಗಳಲ್ಲಿ ಯಾವ ರೀತಿಯ ಆದೇಶಗಳು ಬಂದಿವೆ, ಎಲ್ಲವನ್ನೂ ಮಂಡಿಸಲಾಗಿದೆ. ಆದಾಗ್ಯೂ ಸಹ ಸರ್ಕಾರವು ಈ ವಿಚಾರದಲ್ಲಿ ಕಾಲಾವಕಾಶವನ್ನು ಕೇಳುತ್ತಿದೆ? ಸರ್ಕಾರ ಇವತ್ತಿನ ದಿನವೇ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಹೀಗಾಗಿ ಈ ವಿಚಾರದಲ್ಲಿ ನಮ್ಮನ್ನೆಲ್ಲಾ ಕರೆದು ಸಭೆ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ನಾವು ಈ ವಿಷಯವನ್ನು ಬಿಡುವ ಪ್ರಶ್ನೆಯೇ ಇಲ್ಲ. ಏಕೆಂದರೆ ಈ ವಿಚಾರದಲ್ಲಿ ನಮಗೆ ಬಹಳ ಅನ್ಯಾಯವಾಗಿದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವನೇ ಸಭೆ ಮಾಡಿ ಎಂದು ಹೇಳಿದರೆ ಹೇಗೆ?

**ಡಾ॥ ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಇಡೀ ದೇಶ ಹಾಗೂ ರಾಜ್ಯ ಸಂಕಷ್ಟದಲ್ಲಿವೆ. ಕೊರೋನಾ ವೈರಸ್ ಕಾಯಿಲೆಯಿಂದಾಗಿ ನಾವುಗಳೆಲ್ಲರೂ ಬಹಳ ಗಂಡಾಂತರದಲ್ಲಿದ್ದೇವೆ. ಅಧಿವೇಶನವು ಯಾವಾಗ ಮುಕ್ತಾಯಗೊಳ್ಳುತ್ತದೆ ಎನ್ನುವುದು ಯಾರಿಗೂ ಸಹ ಗೊತ್ತಿಲ್ಲ. ಅಷ್ಟರಲ್ಲಿ ಬಹಳ ಮುಖ್ಯವಾದ ವಿಚಾರಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ಹೀಗಾಗಿ ನಾನು ವಿರೋಧ ಪಕ್ಷದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ಹಿಂದೆ ಜೆ.ಡಿ.(ಎಸ್). ಪಕ್ಷದವರೂ ಸಹ ಆಡಳಿತವನ್ನು ನಡೆಸಿದ್ದಾರೆ. ಇಲಾಖೆಯ ಮಂತ್ರಿಗಳು ಬಹಳ ಸಾವಧಾನವಾಗಿ ಹಾಗೂ ಸಮರ್ಥವಾಗಿ ಉತ್ತರಿಸಿದ್ದಾರೆ. ಇದರಿಂದ ವಿರೋಧ ಪಕ್ಷದವರಿಗೆ ಸಮಾಧಾನವಾಗಿಲ್ಲ. ಹೀಗಾಗಿ ಅವರು ಸಭೆಯನ್ನು ನಡೆಸಬೇಕೆಂದು ಹೇಳುತ್ತಿದ್ದಾರೆ. ಮಂತ್ರಿಗಳು ಸಭೆಯನ್ನು ನಡೆಸುವುದಕ್ಕೆ ತಯಾರಿದ್ದಾರೆ. **(ಗೊಂದಲ)**ದಯಮಾಡಿ ವಿರೋಧ ಪಕ್ಷದವರು ಕೇಳಬೇಕು. ಇವತ್ತಿನ ದಿನವೇ ಸಭೆಯನ್ನು ಮಾಡಬೇಕೆಂದರೆ, ಅದು ಆಗುವುದಿಲ್ಲ. **(ಗೊಂದಲ)** ದಯಮಾಡಿ ಕೇಳಬೇಕು. ಇಲಾಖೆಯ ಮಂತ್ರಿಗಳು...

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ(ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಲಾಖೆಯ ಮಂತ್ರಿಗಳು ಈಗಾಗಲೇ ಮಾತನಾಡಿದ್ದಾರೆ. ಸ್ಪಷ್ಟವಾಗಿ . . .

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅಧಿವೇಶನ ಮುಗಿದ ಮೇಲೆ ಸಭೆಯನ್ನು ಮಾಡುವುದಾಗಿ ಮಂತ್ರಿಗಳು ಹೇಳಿದ್ದಾರೆ. ನಮ್ಮ ಸರ್ಕಾರ ರಕ್ಷಣೆ ಕೊಡುವುದಕ್ಕೆ ತಯಾರಿದೆ. ಆದ್ದರಿಂದ ವಿರೋಧ ಪಕ್ಷದವರು ಹಠಮಾರಿತನ ಧೋರಣೆ ತೋರುವುದು ಬೇಡ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಸಮಯಾವಕಾಶ ಕೊಡಲ್ಲ ...

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಹಠಮಾರಿತನ ಧೋರಣೆ ತೋರುವುದು ಬೇಡ. ಸರ್ಕಾರ ಈಗಾಗಲೇ ಉತ್ತರ ನೀಡಿದೆ. ಸಭೆಯನ್ನೂ ಸಹ ಮಾಡುತ್ತದೆ. ಹೀಗಾಗಿ ವಿರೋಧ ಪಕ್ಷದವರು ಸಹಕರಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ. ವಿರೋಧ ಪಕ್ಷದವರು ಈ ಹಿಂದೆ ಆಡಳಿತವನ್ನು ನಡೆಸಿದೆ. ಅದನ್ನು ಅವರು ಜ್ಞಾಪಕವಿಟ್ಟುಕೊಳ್ಳಬೇಕು. **(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇಲಾಖೆಯ ಮಂತ್ರಿಗಳಾದ ಶ್ರೀ ಸಿ.ಸಿ.ಪಾಟೀಲ್‌ರವರು ಸಮರ್ಥರಿದ್ದು, ಅವರಿಗೆ ನಿಭಾಯಿಸುವ ಶಕ್ತಿಯಿದೆ. ಆದರೂ ಸಹ ಆಡಳಿತ ಪಕ್ಷದವರು ಅವರಿಗೆ ಏಕೆ ಬೆಂಬಲವನ್ನು ವ್ಯಕ್ತ ಪಡಿಸುತ್ತಿದ್ದಾರೆ? ನಾನು ನಿಖರವಾಗಿ, ಕರಾರುವಕ್ಕಾಗಿ ಹಾಗೂ ಅತ್ಯಂತ ಸ್ಪಷ್ಟವಾದ ಶಬ್ದಗಳಲ್ಲಿ ಹೇಳಿದ್ದೇನೆ. ಅಧಿವೇಶನ ಮುಗಿದ ನಂತರ ನಾವು ಸರ್ಕಾರದ ಜೊತೆಗೆ ಚರ್ಚೆ ಮಾಡುತ್ತೇವೆ ಎಂದು ಹೇಳಿದ್ದರೆ, ಮಾನ್ಯ ರೇವಣ್ಣನವರು ಪ್ರಸ್ತಾಪಿಸಿದಂತೆ, ಇದು, it is nothing but escapism ಆಗುತ್ತದೆ. ಇದರರ್ಥ ಮತ್ತೇನೂ ಇಲ್ಲ. ಅಧಿವೇಶನ ಪೂರ್ಣಗೊಂಡ ಮೇಲೆ, ಅವರು ಯಾರೋ? ನಾವು ಯಾರೋ? ಎನ್ನುವಂತಹ ಸ್ಥಿತಿ ನಿರ್ಮಾಣವಾಗುತ್ತದೆ. 'ಹೋಗಲಿ ಬಿಡು' ಎನ್ನುವ ವಿಚಾರವನ್ನಿಟ್ಟುಕೊಂಡು ಆಡಳಿತ ಪಕ್ಷದವರು ಆ ರೀತಿಯಾಗಿ ಹೇಳಿದ್ದಾರೆ. ಆದ್ದರಿಂದ ಇವತ್ತಿನ ದಿವಸ ಅಂದರೆ ಮಧ್ಯಾಹ್ನ ಸಭೆ ಮಾಡಿದರೆ ಇನ್ನೂ ಒಳ್ಳೆಯದು. ಇಲ್ಲವೆಂದಾದರೆ, ಸಂಜೆ ಅಧಿವೇಶನ ಮುಗಿದ ನಂತರ ತಮ್ಮ ನೇತೃತ್ವದಲ್ಲಿ ನಮ್ಮ ಪಕ್ಷದವರು, ಜೆ.ಡಿ.(ಎಸ್). ಪಕ್ಷದವರು ಜೊತೆಗೂಡಿ ಚರ್ಚೆಯನ್ನು ಮಾಡಿ, ವಿಷಯವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇತ್ಯರ್ಥಗೊಳಿಸೋಣ. ಇದಕ್ಕೆ ಸರ್ಕಾರವು ಒಪ್ಪಿದರೆ, ನಮ್ಮೆಲ್ಲಾ ಸದಸ್ಯರಿಗೆ ಅವರವರ ಸ್ಥಾನಗಳಿಗೆ ಹಿಂದಿರುಗುವಂತೆ ನಾನು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಚಂದ್ರಕಾಂತಗೌಡ ಚನ್ನಪ್ಪಗೌಡ ಪಾಟೀಲ್:-** ಮಾನ್ಯ ಸಭಾಪತಿಯವರೇ, ಇವತ್ತು ದೇಶ ಹಾಗೂ ರಾಜ್ಯದಲ್ಲಿ ಕೊರೋನಾ ವೈರಸ್ ಕಾಯಿಲೆಯು ಹರಡುತ್ತಿದೆ. ವಿರೋಧ ಹಾಗೂ ಆಡಳಿತ ಪಕ್ಷದ ಸದಸ್ಯರುಗಳು ಕೆಮ್ಮುತ್ತಾರೆ. ಇಬ್ಬರೂ ಬಡಿದಾಡಿಕೊಂಡು ಒಬ್ಬರ ಹತ್ತಿರ ಇನ್ನೊಬ್ಬರು ಬರುವಂತಾಗುತ್ತದೆ. ಆದ್ದರಿಂದ ವಿರೋಧ ಪಕ್ಷದ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಲಿ. ಪ್ರಸಕ್ತ ಅಧಿವೇಶನವು ಶುಕ್ರವಾರ ಅಥವಾ ಶನಿವಾರದಂದು ಮುಕ್ತಾಯಗೊಳ್ಳುತ್ತದೆ ಎನ್ನುವ ಮಾಹಿತಿಯು ಇದೆ. ಅಧಿವೇಶನ ಪೂರ್ಣಗೊಂಡ ನಂತರವೇ ಅಂದರೆ ಅಧಿವೇಶನ ಮಧ್ಯಾಹ್ನ ಪೂರ್ಣಗೊಂಡರೆ ಸಾಯಂಕಾಲ ಸಭೆಯನ್ನು ಕರೆಯಲಾಗುವುದು. ಒಂದು ವೇಳೆ ಸಾಯಂಕಾಲ ಅಧಿವೇಶನವು ಪೂರ್ಣಗೊಂಡರೆ, ಮರುದಿನ ಬೆಳಗ್ಗೆ ಸಭೆಯನ್ನು ಕರೆದು ಕಾನೂನಿನ ಚೌಕಟ್ಟಿನೊಳಗೆ ಸಮಸ್ಯೆಯನ್ನು ಬಗೆಹರಿಸಿಕೊಡುತ್ತೇವೆ. ಹೀಗಾಗಿ ವಿರೋಧ ಪಕ್ಷದವರು ನಮ್ಮ ಮೇಲೆ ವಿಶ್ವಾಸವನ್ನಿಡಬೇಕು.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ವಿರೋಧ ಪಕ್ಷದ ಸದಸ್ಯರುಗಳು ಧರಣಿ ಹಿಂದಕ್ಕೆ ಪಡೆದು ತಮ್ಮ ತಮ್ಮ ಸ್ಥಾನಗಳಿಗೆ ಹಿಂದಿರುಗಿದರು)**

**ಸಭಾಪತಿಯವರು:-** ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

**2.ಸಭೆಯ ಮುಂದಿಡಲಾದ ಕಾಗದ ಪತ್ರಗಳು.**

**ಕಾರ್ಯದರ್ಶಿ, ಕ.ವಿ.ಪ.:-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

1. ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 2020
2. ಕರ್ನಾಟಕ ರಾಜಭಾಷಾ (ತಿದ್ದುಪಡಿ) ವಿಧೇಯಕ, 2020
3. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2020
4. ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2020

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

5. ಕರ್ನಾಟಕ ನಗರಪಾಲಿಕೆ (ತಿದ್ದುಪಡಿ) ವಿಧೇಯಕ, 2020

6. ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2020

7. ಕರ್ನಾಟಕ ಬಹಿರಂಗ ಸ್ಥಳಗಳ (ವಿರೂಪಗೊಳಿಸುವುದನ್ನು ಪ್ರತಿಬಂಧಿಸುವ) (ತಿದ್ದುಪಡಿ) ವಿಧೇಯಕ, 2020

8. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ, 2020

**(ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(653)/23-3-2020/11-30/ಎಲ್ಎಂ/ಬಿಎನ್ಎಸ್

**3.ಪ್ರಶ್ನೋತ್ತರ ವೇಳೆ**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ಮೂಲಕ ನೀಡಲಾದ ಉತ್ತರಗಳು**

ಪ್ರಶ್ನೆ ಸಂಖ್ಯೆ: 1760
(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಗಳೆ, ಬೆಂಗಳೂರಿನಲ್ಲಿ ಊಹಿಸಲು ಸಾಧ್ಯವಾಗದಷ್ಟು ಪರಿಸರ ಹಾಳಾಗಿದೆ. ಹಿಂದೆ ಬೆಂಗಳೂರು ನಗರವನ್ನು 'paradise city' ಎಂದು, 'retired people paradise' ಎಂದು ಹಲವಾರು ಹೆಸರುಗಳಿಂದ ವರ್ಣಿಸಲಾಗುತ್ತಿತ್ತು. ಸರ್ಕಾರದ ಉತ್ತರದಲ್ಲಿ ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ 114 ಕಾರ್ಖಾನೆಗಳು ಪರಿಸರ ಮಾಲಿನ್ಯಕ್ಕೆ ಕಾರಣವಾಗಿವೆ ಎಂದು ಹೇಳಲಾಗಿದೆ. TheWater (Prevention and Control of Pollution) Act ಮತ್ತು the Air (Prevention and Control of Pollution) Act ಅಡಿಯಲ್ಲಿ establish ಮಾಡುವುದಕ್ಕೆ ಹಾಗೂ operate ಮಾಡುವುದಕ್ಕೆ ಒಳಪಡುವ 12,719 ಕಟ್ಟಡಗಳ/ಕಾರ್ಖಾನೆಗಳ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ ಹಾಗೂ ಅವುಗಳಿಗೆ consent ಕೊಟ್ಟಿದ್ದೇವೆಂದು ಹೇಳಿದ್ದಾರೆ. ಸರ್ಕಾರ ಕೊಟ್ಟಿರುವ ಎಲ್ಲ consent ಗಳನ್ನು cancel ಮಾಡಬೇಕು ಎಂದು High Court ಈಗಾಗಲೇ ಹೇಳಿದೆ. ಇದಕ್ಕೆ ಕಾರಣ ಏನು ಎಂದರೆ, provision ಇಲ್ಲದೆ ಇರುವುದನ್ನು ಕೂಡ Board ನಲ್ಲಿ resolution ಮಾಡಿಕೊಂಡು ಹಲವಾರು ರೀತಿಯ consent ಗಳನ್ನು ಕೊಟ್ಟಿದ್ದೀರಿ. ಅದನ್ನು ತೆಗೆದುಹಾಕಬೇಕು ಎಂದು ನ್ಯಾಯಾಲಯದ ಆದೇಶವಾಗಿದೆ ಹಾಗೂ Pollution Control Board ಕೂಡಾ ಆ ದಿಶೆಯಲ್ಲಿ ಕೆಲಸ ಮಾಡಿದೆ. ಈ ದಿಶೆಯಲ್ಲಿ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎನ್ನುವುದನ್ನು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ. ಇದು ಬಹಳ ಗಂಭೀರವಾದ ವಿಚಾರ, ಬೆಳ್ಳಂದೂರು ಇರಬಹುದು, ವರ್ತೂರು ಇರಬಹುದು, ಹೀಗೆ ಬೆಂಗಳೂರು ಸುತ್ತ-ಮುತ್ತ ಇರುವಂತಹ ಹಲವಾರು ಕೆರೆಗಳಲ್ಲಿ ಯಾವ ರೀತಿ ಬೆಂಕಿ ಬಂದಿದೆ, ಯಾವ ರೀತಿ ನೊರೆ ಬಂದಿದೆ ಎನ್ನುವುದನ್ನು ಗಮನಿಸಬೇಕು. ಇದೆಲ್ಲವು ಈ ಕಾರ್ಖಾನೆಗಳು ಬಿಟ್ಟಿರುವಂತಹ UGD (Underground Drainage) ಇರಬಹುದು, industrial

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

effluents ಮತ್ತು toxins ಇರಬಹುದು. ಈ ಎಲ್ಲ ಬಿಟ್ಟಿರುವ ಕಾರಣದಿಂದ ಪರಿಸರ ಈ ರೀತಿಯಾಗಿದೆ. ಮಾನ್ಯ ಸಚಿವರಲ್ಲಿ ನನ್ನ ಇನ್ನೊಂದು ಮನವಿ ಎಂದರೆ, Pollution Control Board ನಲ್ಲಿ Waste Management Cell ಎಂದು ಇದೆ. ಈ Waste Management Cell ನ ಅಡಿಯಲ್ಲಿ ಸಾವಿರ ಏಜೆನ್ಸಿಗಳು ರಿಜಿಸ್ಟರ್ ಮಾಡಿಕೊಂಡಿವೆ. Bio-Medical waste ನ್ನು ಶಮನಗೊಳಿಸುತ್ತಾರೆ. Solid Waste Management ಗೂ ಮಾಡಿದ್ದಾರೆ ಮತ್ತು industrial effluents ತೆಗೆದುಕೊಂಡು ಹೋಗಲು ವ್ಯವಸ್ಥೆ ಮಾಡಿದ್ದಾರೆ. ಇಂತಹ ಸಾವಿರ ಏಜೆನ್ಸಿಗಳ ಮೇಲೆ ಸರ್ಕಾರ ಯಾವ ರೀತಿ ನಿಗಾವಹಿಸಿದೆ? Waste Management Cell ಯಾವ ರೀತಿ ಕೆಲಸ ಮಾಡುತ್ತಿದೆ ಎನ್ನುವ ವಿಸ್ತಾರವಾದ ಉತ್ತರವನ್ನು ಮಂತ್ರಿಗಳು ಕೊಡಬೇಕು. ಏಕೆಂದರೆ, ಬೆಂಗಳೂರು ಈಗ ಕೈ ತಪ್ಪಿ ಹೋಗುವಂತಹ ಪರಿಸ್ಥಿತಿ ಬಂದಿದೆ. National Green Tribunal (NGT) ನಿಂದ ಹಲವಾರು ಪ್ರಕರಣಗಳಲ್ಲಿ ಆದೇಶಗಳು ಬಂದಿವೆ. ಆದರೆ ಆಗಿರುವ ಆದೇಶಗಳು ಯಾವುವು ಸರಿಯಾದ ರೀತಿಯಲ್ಲಿ ಗ್ರೌಂಡ್ ಆಗಿರುವುದಿಲ್ಲ. ಇವುಗಳನ್ನು execute ಮಾಡದೆ ಇರುವುದು ಗಂಭೀರವಾದ ವಿಚಾರ. ಕೆಲವು ಏಜೆನ್ಸಿಗಳು valley ಗಳಲ್ಲಿindustrial effluents ಅನ್ನು ಯಾವುದೇ treatment ಮಾಡದೆ ತೆಗೆದುಕೊಂಡು ಹೋಗಿಬಿಡುತ್ತಿದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎನ್ನುವುದರ ಬಗ್ಗೆ ವಿಸ್ತಾರವಾದ ಉತ್ತರವನ್ನು ನಾನು ತಮ್ಮಿಂದ ಬಯಸುತ್ತೇನೆ.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಪಿ.ಆರ್.ರಮೇಶ್‌ರವರು ಕೇಳಿರುವ ಪ್ರಶ್ನೆಗೆ ನಮ್ಮಗ್ಯಾರಿಗೂ ಉತ್ತರ ಬಂದಿರುವುದಿಲ್ಲ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಗಳೆ, ನನಗೆ ಉತ್ತರ ಬಂದಿರುವುದು CD (Compact Disc) ಯಲ್ಲಿ ಈಗ ನಾನು CD ತೆಗೆದುಕೊಂಡು ಹೇಗೆ ನೋಡಲು ಆಗುತ್ತದೆ. ಉತ್ತರ ಕೊಟ್ಟಿರುವ ಪೇಪರ್ ಜೊತೆಯಲ್ಲಿ CD ಕೊಟ್ಟಿದ್ದಾರೆ. ಈಗ ಇದನ್ನು ಹೇಗೆ ನೋಡಲು ಸಾಧ್ಯ?

**ಶ್ರೀ ಆನಂದ ಸಿಂಗ್:-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಬೆಂಗಳೂರು ನಗರದಲ್ಲಿ ಯಾವ ರೀತಿ pollution ಹರಡಿದೆ ಎನ್ನುವುದನ್ನು ಸವಿಸ್ತಾರವಾಗಿ ಹೇಳಿದ್ದಾರೆ. ಬೆಂಗಳೂರು ನಗರದಲ್ಲಿ 12,719 ಕಾರ್ಖಾನೆಗಳಿಗೆ CFE (Consent for Establishment), CFO (Consent for

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Operation) ಪ್ರಕಾರ Establishment ಆದೇಶವನ್ನು ಕೊಟ್ಟಿದ್ದಾರೆ. ಅದೇ ರೀತಿ CFE and CFO ತೆಗೆದುಕೊಂಡಿರುವ 114 ಕಾರ್ಖಾನೆಗಳು ಬೆಂಗಳೂರಿನಲ್ಲಿವೆ. ಅದರಲ್ಲಿ 90 ಘಟಕಗಳನ್ನು ಮುಚ್ಚಲಾಗಿದೆ. ಅದರ ಜೊತೆಗೆ ಇನ್ನು ಉಳಿದಿರುವ 24 ಘಟಕಗಳ ಮೇಲೆ ಕಾನೂನು ಕ್ರಮವನ್ನು ಜರುಗಿಸಲಾಗುತ್ತಿದೆ. ಅದೇ ರೀತಿ CFE and CFO ಯಾವುದು ಇಲ್ಲದೆ 557 ಕಾರ್ಖಾನೆಗಳು ನಡೆಯುತ್ತಿರುವುದು ಬೋರ್ಡ್ ಗಮನಕ್ಕೆ ಬಂದಿದೆ. ಈ ಎಲ್ಲ ಘಟಕಗಳ ಮೇಲೆ Notice of Proposed Direction ಅಂದರೆ, NPD ಶೋಕಾಸ್ ನೋಟಿಸ್ ನೀಡಲಾಗಿದೆ. ಇದು ಅಲ್ಲದೆ ಕಾನೂನು ಕ್ರಮಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆಯು ಜಾರಿಯಲ್ಲಿದೆ. ಈ ರೀತಿ ಬೇರೆ-ಬೇರೆ ಸಣ್ಣ-ಸಣ್ಣ ಕಾರ್ಖಾನೆಗಳು ಅಂದರೆ, ಕಡಿಮೆ ತಿಳುವಳಿಕೆವುಳ್ಳ ಕಾರ್ಖಾನೆಗಳು ಎಂದರೆ, ಸರ್ವೀಸ್ ಸ್ಟೇಶನ್‌ಗಳು, ಬೇಕರಿಗಳು, saw mill, lathe, ಸಣ್ಣ-ಸಣ್ಣ ಅಪಾರ್ಟ್‌ಮೆಂಟ್‌ಗಳು, garments ಇತ್ಯಾದಿಗಳು consent ತೆಗೆದುಕೊಂಡಿರುವುದಿಲ್ಲ. ಈಗಾಗಲೆ ನಮ್ಮ ಇಲಾಖೆಯ ವತಿಯಿಂದ ಹಾಗೂ ಬೋರ್ಡ್ ವತಿಯಿಂದ ಅವರನ್ನು ಕರೆದು ವಿಚಾರಿಸಿದಾಗ ಆ ಸಣ್ಣ-ಸಣ್ಣ ಕಾರ್ಖಾನೆಗಳಿಗೆ ಇದರ ಬಗ್ಗೆ ತಿಳುವಳಿಕೆಯ ಕೊರತೆ ಇರುವುದು ಕಂಡುಬಂತು. ಅವರು consent ಪಡೆಯಲು ಸಿದ್ಧರಿದ್ದಾರೆ. ಅವರಿಗೆ consent ಪಡೆಯಲು ಮಾರ್ಗದರ್ಶನ ನೀಡಲಾಗಿದೆ. ಇದರ ಜೊತೆಗೆ ಕೋರ್ಟ್ ಆದೇಶದ ಪ್ರಕಾರ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಕೋರ್ಟ್ ಆದೇಶವನ್ನು ತರಿಸಿಕೊಂಡು ಅದರ ಪ್ರಕಾರ ಏನೇನು ಕ್ರಮ ತೆಗೆದುಕೊಳ್ಳಬೇಕು ಆ ಕೆಲಸವನ್ನು ಮಾಡುತ್ತೇವೆ. ಈ ವಿಚಾರದಲ್ಲಿ ಕಾನೂನು ಪ್ರಕ್ರಿಯೆ ಜಾರಿಯಲ್ಲಿದೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಗಳೆ, ಮಾನ್ಯ ಮಂತ್ರಿಗಳು ಕೋರ್ಟ್ ಆದೇಶವನ್ನು ಇನ್ನು ನೋಡಿಲ್ಲ ಎನ್ನುವುದನ್ನು ಒಪ್ಪಿಕೊಂಡಿದ್ದಾರೆ. ಇಲಾಖೆ ಕೋರ್ಟ್ ಆದೇಶಗಳನ್ನು, NGT ಆದೇಶಗಳನ್ನು ನೋಡುತ್ತಿಲ್ಲ. ಇಲಾಖೆ ಯಾವ ರೀತಿ ಕೆಲಸ ಮಾಡುತ್ತಿದೆ ಎನ್ನುವುದು ಜನರಿಗೆ ಗೊತ್ತಾಗುತ್ತಿಲ್ಲ ಎನ್ನುವುದು ಸರ್ಕಾರದ ಉತ್ತರದಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ.

**ಶ್ರೀ ಆನಂದ ಸಿಂಗ್:-** ಮಾನ್ಯ ಸಭಾಪತಿಗಳೆ, ಇರುವುದನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ ಎಂದರೆ, ಇಲಾಖೆ ವತಿಯಿಂದ ಕೋರ್ಟ್ ಆದೇಶವನ್ನು ನೋಡಿಬಿಟ್ಟು, ಕೋರ್ಟ್ ಆದೇಶದ ರೀತಿಯಲ್ಲಿಯೇ ಇಲ್ಲಿ ಕ್ರಮ ತೆಗೆದುಕೊಂಡಿರುವುದು ಎನ್ನುವುದನ್ನು ಅಧ್ಯಯನ ಮಾಡಿರುವುದು. ಖಂಡಿತವಾಗಿ ಕ್ರಮ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಂಡು pollution control ಮಾಡುವ ಕೆಲಸವನ್ನು ಬೋರ್ಡ್ ವತಿಯಿಂದ ಮಾಡಲಾಗುತ್ತದೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಗಳೆ, ಇದು ಬಹಳ ಗಂಭೀರವಾದ ವಿಚಾರ. ಕೆಲವಾರು ತಿಂಗಳ ಹಿಂದೆ ಬೆಂಗಳೂರಿನಲ್ಲಿ ಯಾವ ರೀತಿ ಪರಿಸರ ಕೆಟ್ಟಿದೆ, ಕೆರೆಗಳ ಪರಿಸ್ಥಿರಿ ಏನು ಮತ್ತು ground water ಯಾವ ರೀತಿ ಕೆಟ್ಟಿದೆ ಎನ್ನುವುದರ ಬಗ್ಗೆ ತಮಗೆ ಗೊತ್ತಿದೆ ಎಂದು ನಾನು ಭಾವಿಸುತ್ತೇನೆ. ಕಾರ್ಖಾನೆಗಳು ಇರಬಹುದು, Pollution Control Board ಗೆ ಬರುವ environmental issues ಗಳಲ್ಲಿ ಹಲವಾರು ರೀತಿಯಲ್ಲಿ ಪೊಲೀಸ್ complaints ಆಗಿದೆ. ಆ ಪೊಲೀಸ್ complaints ನಲ್ಲಿ ಯಾವುದು ಇಲ್ಲ ಎಂದು 'B' Report ಬಂದಿದೆ. ಇಂತಹ ಸಾವಿರ ಏಜೆನ್ಸಿಗಳು ಬೆಂಗಳೂರಿನಲ್ಲಿ ಮಾತ್ರವಲ್ಲ ಇಡೀ ಕರ್ನಾಟಕದಲ್ಲಿ ನೋಡುವುದಕ್ಕೆ Waste Management Cell ಕೆಳಗೆ ಇರುವ ಒಂದು ಸಂಸ್ಥೆ ಯಾವ ರೀತಿ ಕೆಲಸ ಮಾಡುತ್ತಿದೆ ಎನ್ನುವುದಕ್ಕೆ ಇದೊಂದು ನಿದರ್ಶನವಾಗಿದೆ. ಸುಮಾರು 1000 ಏಜೆನ್ಸಿಗಳು ಉದಾಹರಣೆಗೆ, ಬಯೋಕಾನ್ ಎಂದುಕೊಳ್ಳೋಣ, ಅವರಿಂದ effluents ತೆಗೆದುಕೊಂಡು, ಅದನ್ನು treatment ಮಾಡಿ, ಶುದ್ಧೀಕರಣಗೊಳಿಸಿ ಆ ನೀರನ್ನು ಕೆರೆಗೆ ಅಥವಾ ಬೇರೆ ಕಡೆಗೆ ಬಿಡುವ ವ್ಯವಸ್ಥೆ ಇದೆ. ಆದರೆ ಇವರು ಅನೇಕ effluents ತರುವಂತಹ ಈ ಏಜೆನ್ಸಿಗಳು ಅದನ್ನು ತೆಗೆದುಕೊಂಡು ಬಂದು ನಮ್ಮ ಮೋರಿಗಳಿಗೆ effluents ಬಿಡುತ್ತಿದ್ದಾರೆ. ಇದರಿಂದ ಇಡೀ ಕರ್ನಾಟಕದಲ್ಲಿ ಪರಿಸರ ಸಮಸ್ಯೆ ಬರುತ್ತಿದೆ.

**(ಮುಂದು)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(654)23-03-2020(11-40)ಬಿಎಸ್‌ಡಿ-ಜಿಆರ್**

**ಶ್ರೀ ಪಿ.ಆರ್. ರಮೇಶ್ (ಮುಂದು)**

ಇದರ ಬಗ್ಗೆ ಸುಮಾರು 60-70 complaints ಗಳು ದಾಖಲಾಗಿವೆ. ಇವತ್ತಿನವರೆಗೂ ಅದರ ವಿರುದ್ಧ ನಿರ್ದಿಷ್ಟವಾದ ಒಂದು permanent solution ಮಾಡುವುದಕ್ಕೆ ಯಾವುದೇ ಒಂದು ಕ್ರಮ ತೆಗದುಕೊಳ್ಳದೇ ಇರುವುದರಿಂದ ಬಹಳ ಗಂಭೀವಾದ ವಿಷಯವಾಗಿದೆ. ಬೆಂಗಳೂರಿನಲ್ಲಿ ಆಗಿಂದ್ದಾಗ್ಗೆ

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುತ್ತದೆ. N.G.T., order ಕೊಡುತ್ತಲೇ ಇರುತ್ತಾರೆ. ಆದರೂ ಯಾವುದೇ ಒಂದು ನಿರ್ದಿಷ್ಟವಾದ monitoring ಇಲ್ಲ. ಮಾನ್ಯ ಸಭಾಪತಿಯವರೇ, ಈ monitoring ಆಗಬೇಕೆಂದರೆ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದಕ್ಕೆ ಒಂದು House Committee ಯನ್ನು ಮಾಡಬೇಕು. ತಾವು ಮಾಡುವ House Committee ಯಿಂದ complete ಬೆಂಗಳೂರು ಮಾತ್ರವಲ್ಲದೇ ಈ ರೀತಿ ಬೇರೆ ಬೇರೆ ಕಡೆ ಇರುವ ಸಮಸ್ಯೆಗಳನ್ನು ನೋಡಿದರೆ ಅದರ ಬಗ್ಗೆ ಸಾರ್ವಜನಿಕರ ಪರವಾಗಿ ಸರಿಯಾದ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಆಗುತ್ತದೆ. ಆದ್ದರಿಂದ ದಯವಿಟ್ಟು ಇದನ್ನು ನೋಡುವುದಕ್ಕೆ ಒಂದು House Committee ಮಾಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಆನಂದ್ ಸಿಂಗ್:-** ಮಾನ್ಯ ಸಭಾಪತಿಯವರೇ,

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಇಲ್ಲಿ Consent for Establishment and Consent for Operation ನಿಂದ ಅನುಮತಿ ತೆಗೆದುಕೊಳ್ಳದೇ ಇರುವ ಕಟ್ಟಡಗಳು, ಕಾರ್ಖಾನೆಗಳು ಮತ್ತು ಸಂಸ್ಥೆಗಳು ಇದ್ದಲ್ಲಿ ಪಟ್ಟಿ ನೀಡುವುದು ಎಂಬುದಕ್ಕೆ ಅನುಬಂಧ 2 ರಲ್ಲಿ ಲಗತ್ತಿಸಿದೆ ಎಂದು ಹೇಳಲಾಗಿದೆ. ಆದರೆ ಅನುಬಂಧ 2 ಇಲ್ಲ.

**ಶ್ರೀ ಹೆಚ್.ಎಂ. ರಮೇಶ್‌ಗೌಡ:-** ಅನುಬಂಧ 1 ಮತ್ತು 2 ಇಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:-** ಅನುಬಂಧದ ಮಾಹಿತಿಯನ್ನು ಸದನಕ್ಕೆ ಏಕೆ ತಿಳಿಸಬಾರದು? ಇದರ ಅರ್ಥ ಏನು? ಈ ರೀತಿ ಉತ್ತರಗಳನ್ನು ಕೊಡುತ್ತಿರುವ ಬಗ್ಗೆ 2ನೇ ತಾರೀಖಿನಿಂದ ಇಲ್ಲಿಯವರೆಗೂ ಪ್ರತಿದಿನ ಹೇಳುತ್ತಿರುತ್ತೇವೆ. ತಾವು ಸರಿಪಡಿಸುತ್ತೇನೆ ಎಂದು ಹೇಳುತ್ತಲೇ ಇದ್ದೀರಿ. ಈ ಉತ್ತರದಲ್ಲಿ ಅನುಬಂಧವೇ ಇಲ್ಲ. ಎರಡನೆಯದಾಗಿ ಭೂಪಾಲ್‌ನಲ್ಲಿ ಅನಿಲ ತೊಂದರೆಯಿಂದ ಎಷ್ಟು ಪರಿಣಾಮ ಬೀರುತ್ತಿದೆ, ಇವತ್ತಿಗೂ ಜನ ತೊಂದರೆ ಅನುಭವಿಸುತ್ತಿದ್ದಾರೆ. ಬೆಂಗಳೂರಿನ ಜಯನಗರದಲ್ಲಿ ಒಂದು ಕಡೆ Gas Filling Unit open ಮಾಡಲು ಅನುಮತಿ ಸಿಕ್ಕಿಲ್ಲದಿದ್ದರೂ open ಮಾಡುವುದಕ್ಕೆ ಹೋಗಿ ಜನರು ಪ್ರತಿರೋಧ ಮಾಡುತ್ತಿದ್ದಾರೆ. ಅನುಬಂಧದ ಪಟ್ಟಿಯಲ್ಲಿ 550 ರಲ್ಲಿ ಇದೆಯೇ ಎಂದು ನೋಡುವುದಕ್ಕೋಸ್ಕರ ನೋಡಿದೆ. ಅದು ಕನಕನಪಾಳ್ಯದ ಮೂಲೆಯಲ್ಲಿ ದೇವಸ್ಥಾನದ ಪಕ್ಕದಲ್ಲಿಯೇ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಲ್ಲಿ ಯಜ್ಞ-ಯಾಗಗಳೆಲ್ಲವೂ ನಡೆಯುತ್ತಿರುತ್ತದೆ. ಅಂತಹ ಕಡೆ Gas Filling Unit ಗೆ ಕೊಟ್ಟಿದ್ದಾರೆ. ಅದನ್ನು ತಡೆಮಾಡಿ ನಿಲ್ಲಿಸಿದ್ದೇವೆ. ಆದರೂ ಅವರ ಕೈ ಬಹಳ ದೊಡ್ಡದು. ಅದು ಅನುಮತಿಯಲ್ಲಿದೆಯೋ, ಇಲ್ಲವೋ ಎಂಬ ಬಗ್ಗೆ ಬೇಕಾಗಿರುವುದರಿಂದ ಪಟ್ಟಿ ಕೇಳಿದ್ದು, ದಯವಿಟ್ಟು ಈಗಲಾದರೂ ಪಟ್ಟಿಯನ್ನು ಕೊಡುತ್ತಾರೆಯೇ?

**(ಗೊಂದಲ)**

**ಶ್ರೀ ಎನ್. ಅಪ್ಪಾಜಿಗೌಡಃ-** ಮಾನ್ಯ ಸಭಾಪತಿಯವರೇ, ಪಟ್ಟಿ ಎಲ್ಲಾ ಮಾನ್ಯ ಸದಸ್ಯರಿಗೂ ಬೇಕು.

**(ಗೊಂದಲ)**

**ಶ್ರೀ ಎಸ್. ಸುರೇಶ್‌ಕುಮಾರ್‌ಃ-** ಮಾನ್ಯ ಸಭಾಪತಿಯವರೇ, ಮಾನ್ಯ ರೇವಣ್ಣನವರು ಕೇಳಿದ್ದಕ್ಕೆ ಒಂದು ಉತ್ತರವನ್ನು ಹೇಳಬಯಸುತ್ತೇನೆ. ಇದರ details ಗಳೆಲ್ಲವೂ massive document. ಅದಕ್ಕಾಗಿ ಒಂದು C.D.,ಮೂಲಕ ಕೊಟ್ಟಿದ್ದು, ಅವರಿಗೂ C.D.,ತಲುಪಿಸುವ ವ್ಯವಸ್ಥೆ ಮಾಡುತ್ತಾರೆ.

**(ಗೊಂದಲ)**

**ಶ್ರೀ ಎನ್. ಅಪ್ಪಾಜಿಗೌಡಃ-** ಬೇರೆಯವರಿಗೆ ಕೊಡಬಾರದು ಎಂದು ಇದೆಯೇ?

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣಃ-** ಹಿರಿಯ ಸಚಿವರಿಂದ ಇಂತಹ ಉತ್ತರವನ್ನು ನಿರೀಕ್ಷೆ ಮಾಡಿರಲಿಲ್ಲ.

**ಶ್ರೀ ಎಸ್.ಆರ್. ಪಾಟೀಲ್‌ಃ-** ಮಾನ್ಯ ಸಭಾಪತಿಯವರೇ, ಯಾವುದೇ ಉತ್ತರವನ್ನು ಕೊಟ್ಟ ಕೂಡಲೇ ಸದನದ ಆಸ್ತಿಯಾಗುತ್ತದೆ. ಮಾನ್ಯ ಸದಸ್ಯರಿಗೆ ಬೇಕಾದ supplementary questions ಗಳನ್ನು ಕೇಳುವಂತಹ inherent right ಇದೆ. ಅಂದ ಮೇಲೆ ಕೇವಲ ಪ್ರಶ್ನೆ ಕೇಳಿದವರಿಗೆ ಮಾತ್ರ ಕೊಟ್ಟು ಸದನದ ಇತರ ಸದಸ್ಯರಿಗೆ ಕೊಡುವುದಿಲ್ಲ ಎನ್ನುವುದು ತಪ್ಪು.

**(ಗೊಂದಲ)**

**ಶ್ರೀ ವೈ.ಎ. ನಾರಾಯಣಸ್ವಾಮಿಃ-** ಏನು ಬೇಕಾದರೂ ಎಲ್ಲರೂ ಕೇಳಬಹುದೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಯಾರು ಪ್ರಶ್ನೆ ಕೇಳುತ್ತಾರೋ ಅವರಿಗೆ ಮಾತ್ರ ಉತ್ತರ ಕೊಡಲಿ, ಉಳಿದವರಿಗೆ ಏನೂ ಬೇಡ. ಉಳಿದ ಸದಸ್ಯರಿಗೆ ಅನುಬಂಧ ಬೇಡ, ಏನೂ ಬೇಡ. --- voluminous ಇದ್ದರೆ ಕೊಡಬೇಕಾಗುತ್ತದೆ. ಮಾನ್ಯ ಸಭಾಪತಿಯವರೇ, ನಾನು ತಮಗೆ ಮನವಿ ಮಾಡುತ್ತೇನೆ, ಈ ಅಪೂರ್ಣವಾದ ಉತ್ತರವನ್ನು withdraw ಮಾಡಿಕೊಳ್ಳಬೇಕು. ಇನ್ನು ಪ್ರಶ್ನೆ ಕೇಳುವ ಸದಸ್ಯರಿಗೆ ಮಾತ್ರ ಎಲ್ಲವನ್ನು ಒದಗಿಸುವ ವ್ಯವಸ್ಥೆ ಮಾಡಿ, ನೂರು ವರ್ಷಗಳ ಇತಿಹಾಸವಿರುವ ಈ ಸದನದಲ್ಲಿ ಒಮ್ಮೆಯಾದರೂ ಇಂತಹ ಘಟನೆಗಳು ಜರುಗಿಲ್ಲ. ಪ್ರಶ್ನೆ ಕೇಳಿದ ಸದಸ್ಯರಿಗೆ ಮಾತ್ರ ಅನುಬಂಧ ಒದಗಿಸುತ್ತೇನೆ ಎಂದು ಪ್ರಥಮ ಬಾರಿಗೆ ಕೇಳಿದೆ. Is it a right thing? ಎಲ್ಲಾ ಮಾನ್ಯ ಸದಸ್ಯರಿಗೂ ಉತ್ತರ ಒದಗಿಸಬೇಕು. It has become a property of the House. ಉತ್ತರವು ಈ ಸದನದ ಆಸ್ತಿ. ಪ್ರತಿಯೊಬ್ಬ ಸದಸ್ಯರಿಗೂ ಕೇಳುವ ಹಕ್ಕಿದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಮ್ಮಲ್ಲಿ ಯಾವುದೇ ಗೊಂದಲ ಇಲ್ಲ. ಕೇಳಿರುವ ಪ್ರಶ್ನೆಗೆ ಸಮರ್ಪಕವಾದ ಉತ್ತರ ಕೊಡಬೇಕೆಂದು ಹೇಳಿದ್ದಾರೆ. C.D., ಯನ್ನು ಸಂಬಂಧಪಟ್ಟ ಸದಸ್ಯರಿಗೆ ಮಾತ್ರ ಕೊಟ್ಟರೆ ಇಲ್ಲಿ ನೋಡುವುದಕ್ಕೆ ಅನುಕೂಲವಾಗುವುದಿಲ್ಲ ಎನ್ನುವ ಪ್ರಸ್ತಾಪ ಸರಿಯಿದೆ. ಅದಕ್ಕೋಸ್ಕರ ಅನುಬಂಧ 1ಕ್ಕೆ ಸಂಬಂಧಪಟ್ಟ ಉತ್ತರವನ್ನು ನಾವು ಕೊಡಿಸುತ್ತೇವೆ.

**(ಗೊಂದಲ)**

**ಶ್ರೀ ಎನ್. ಅಪ್ಪಾಜಿಗೌಡ:-** ಇದು ಒಳ್ಳೆಯ ಸಂಪ್ರದಾಯವಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಎಲ್ಲಾ ಸದಸ್ಯರಿಗೂ ಉತ್ತರವನ್ನು ಒದಗಿಸಲಾಗುವುದು.

**ಶ್ರೀ ಹೆಚ್.ಎಂ. ರಮೇಶ್‌ಗೌಡ:-** ಯಾವಾಗ ಉತ್ತರವನ್ನು ಒದಗಿಸಲಾಗುವುದು?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎ. ತಿಪ್ಪೇಸ್ವಾಮಿಃ–** ಮಾನ್ಯ ಸಭಾಪತಿಯವರೇ, Parliament ನ ರಾಜ್ಯಸಭಾ ಮತ್ತು ಲೋಕಸಭೆಗಳಲ್ಲಿ ಇಂತಹ ಪ್ರಶ್ನೆಗಳಿಗೆ ಉತ್ತರವನ್ನು website ನಲ್ಲಿ ನೋಡಬಹುದು, ಅಥವಾ C.D., ಯಲ್ಲಿ ಕೊಡುತ್ತಾರೆ. ಅದನ್ನಾದರೂ ತನ್ನಿ. Hon'ble Minister should have said in the reply that we have to either access the website or the information is provided in C.D.,

**ಶ್ರೀ ಟಿ.ಎ. ಶರವಣಃ–** ಉತ್ತರದಲ್ಲಿ ಅನುಬಂಧ 1 ಮತ್ತು 2 ನ್ನು ಒದಗಿಸಲಾಗಿದೆ ಎಂದು ಕೊಟ್ಟಿದ್ದಾರೆ, ಅದನ್ನು ಮಾಡಬಾರದಿತ್ತು.

**ಸಭಾಪತಿಯವರುಃ–** ಮಾನ್ಯ ಸಚಿವರೇ, ಅನುಬಂಧ 1 ಮತ್ತು 2 ಅನ್ನು ಒದಗಿಸಿದ್ದೀರಾ?

**ಶ್ರೀ ಆನಂದ್‌ಸಿಂಗ್ಃ–** ಮಾನ್ಯ ಸಭಾಪತಿಯವರೇ, C.D., ಮುಖಾಂತರ ಕೊಟ್ಟಿದೆ. ಉತ್ತರ ದೊಡ್ಡದಾಗಿದೆ. ಈ ಉತ್ತರವನ್ನು paper document ಮೂಲಕ ತಲುಪಿಸಲಾಗುವುದು.

**ಶ್ರೀ ಎಸ್.ಆರ್. ಪಾಟೀಲ್ಃ–** ಮಾನ್ಯ ಸಚಿವರು ಹೊಸಬರಿದ್ದು, ಸದನದ ನಿಯಮಾವಳಿಗಳು, Rules of Procedure ಇವೆಲ್ಲವೂ ಗೊತ್ತಿಲ್ಲವೇ?

**ಶ್ರೀ ಎನ್. ಅಪ್ಪಾಜಿಗೌಡಃ–** ಹಾಗಾದರೆ ಮಾನ್ಯ ಸಚಿವರು ಸದನಕ್ಕೆ misguide ಏಕೆ ಮಾಡಿದರು?

**ಸಭಾಪತಿಯವರುಃ–**ಎಲ್ಲರಿಗೂ ಪ್ರಿಂಟ್ ಮಾಡಿ ಕೊಡಬೇಕಾಗಿಲ್ಲ, ಆದರೆ C.D., ಯನ್ನು ಮಾತ್ರ ಎಲ್ಲರಿಗೂ ಕೊಡಿ.

**ಶ್ರೀ ಆನಂದ್‌ಸಿಂಗ್ಃ–** ಖಂಡಿತ ಒದಗಿಸುತ್ತೇನೆ.

**ಶ್ರೀ ಸಿ.ಎಂ. ಇಬ್ರಾಹಿಂಃ–** ಮಾನ್ಯ ಸಭಾಪತಿಯವರೇ, C.D.,ಯನ್ನು ಒಂದು ದಿವಸ ಮುಂಚೆ ಕೊಡಬೇಕು. ಈಗ ಅದನ್ನು ನಾವು ಎಲ್ಲಿ ಹಾಕಿಕೊಂಡು ನೋಡುವುದು? ಅವರು ಉತ್ತರ ಕೊಟ್ಟರೆ ನಾವು ಎಲ್ಲಿ ಹಾಕಿಕೊಂಡು ನೋಡೋಣ. ಒಂದು ದಿವಸ ಮುಂಚೆ ಕೊಟ್ಟರೆ ನೋಡಿಕೊಂಡು ಬರಬಹುದು.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Mr.CHAIRMAN**:- If Hon'ble Members insist ಮಾಡಿದರೆ ಕೊಡಬಹುದು. ಆದರೆ waste ಆಗಬಾರದು ಎಂಬ ಉದ್ದೇಶದಿಂದ ಯಾರಿಗೆ ಬೇಕೋ, ಅವರಿಗೆ printed copy ಕೊಡಿ. ಯಾರಿಗೆ C.D.,ಕೊಟ್ಟರೆ ಸಾಕೋ, ಅವರಿಗೆ C.D., ಕೊಡಿ.

**ಶ್ರೀ ಸಿ.ಎ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ತಾವು ಹೇಳುವುದನ್ನು ನಾವು ಒಪ್ಪಿಕೊಂಡೆವು. ಆದರೆ ಆ C.D., ಹಾಕಿಕೊಂಡು ಎಲ್ಲಿ ನೋಡುವುದು ಮತ್ತು ಉಪ ಪ್ರಶ್ನೆ ಹೇಗೆ ಕೇಳುವುದು?

**ಸಭಾಪತಿಯವರು:-** ನೀವು ಅದನ್ನು ನೋಡಿದರೆ ಆಯಿತು.

**ಶ್ರೀ ಎಸ್. ಸುರೇಶಕುಮಾರ್:-** ಮಾನ್ಯ ಸಭಾಪತಿಯವರೇ, ಹಿರಿಯ ಶಾಸಕರಾದ ಇಬ್ರಾಹಿಂ ರವರು ಹೇಳುತ್ತಿರುವುದು ಸರಿಯಿದೆ. ನಾವು ಮುಂಚೆ ಕೊಟ್ಟರೆ ಅದನ್ನು ನೋಡಿ ಉಪ ಪ್ರಶ್ನೆ ಕೇಳುವುದಕ್ಕೆ ಅನುಕೂಲವಾಗುತ್ತದೆ.

**ಸಭಾಪತಿಯವರು:-** ಅವರು ಹೇಳೋದು ಸತ್ಯ.

**ಶ್ರೀ ಎಸ್. ಸುರೇಶಕುಮಾರ್:-** ನನಗೆ ಬಂದಿರುವ ಮಾಹಿತಿ ಪ್ರಕಾರ Legislative Council ಕಡೆಯಿಂದ ಏನು ಅಗತ್ಯ ಇತ್ತು, ಸುಮಾರು 20 ಪ್ರತಿಗಳನ್ನು ಹಾಗೂ 25 C.D.,ಗಳನ್ನು ಕೊಟ್ಟಿದ್ದೇವೆ. ಇದೆಲ್ಲದ್ದಕ್ಕೂ ಒಂದು ಪರಿಹಾರ ಎಂದರೆ ನಮ್ಮ Legislative Council ಮತ್ತು Legislative Assembly ಗಳು ಬೇರೆ ಬೇರೆಯಾಗಿದ್ದು, Legislative Council ಮತ್ತು Legislative Assembly ಗಳು 'paperless Legislative Council, Legislative Assembly' ಆಗಬೇಕು. ಆಗ ಎಲ್ಲಾ ಉತ್ತರಗಳು ಸಿಗುತ್ತಾ ಹೋಗುತ್ತದೆ.

**(ಗೊಂದಲ)**

**ಶ್ರೀ ಹೆಚ್.ಎಂ. ರಮೇಶ್‌ಗೌಡ:-** ಈಗ ಹೇಳಲಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್. ಸುರೇಶ್ ಕುಮಾರ್:–** ಒಟ್ಟಾರೆ ಇಂತಹ ಪ್ರಶ್ನೆಗಳಿಗೆ ಅನೇಕರು ಉತ್ತರಗಳನ್ನು ಬಯಸುತ್ತಾರೆ. What an amount of paper we are wasting? ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು. ಆರೆಂಟು ವರ್ಷಗಳ ಹಿಂದೆ 'paperless Legislative Council, Legislative Assembly'...... ಈಗಾಗಲೇ ಹಿಮಾಚಲ್ ಪ್ರದೇಶದಲ್ಲಿ ಹಾಗೂ ರಾಜಸ್ತಾನದಲ್ಲಿ ಆಗಿದೆ. ಅದನ್ನು ಮಾಡಿದಾಗಲೇ ಇದಕ್ಕೆ ಪರಿಹಾರ ಸಿಗುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ಎಲ್ಲರಿಗೂ ಪ್ರತಿಯನ್ನು ಒದಗಿಸುತ್ತಾರೆ.

**(ಗೊಂದಲ)**

**ಶ್ರೀ ಆನಂದ್‌ಸಿಂಗ್:–** ಮಾನ್ಯ ಸಭಾಪತಿಯವರೇ, ಹಿರಿಯ ಸಚಿವರು ಹೇಳಿದಂತೆ ಅದನ್ನು ಎಲ್ಲರಿಗೂ ಒದಗಿಸುತ್ತೇನೆ. ಜೊತೆಗೆ ಮಾನ್ಯ ರಮೇಶ್‌ರವರು ನ್ಯಾಯಾಲಯದ ಒಂದು separate ಆದ Cell ಅನ್ನು ಎನ್ನುವ ಬಗ್ಗೆ ಹೇಳಿದರು. ಖಂಡಿತವಾಗಿಯೂ N.G.T., ಆದೇಶದ ಮೇರೆಗೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

(ಮುಂದು)

(655)/23.03.2020/11.50/ಹೆಚ್‌ವಿ–ಜಿಆರ್

**ಶ್ರೀ ಆನಂದ್‌ಸಿಂಗ್(ಮುಂದುವರೆದದ್ದು):–**

ಸನ್ಮಾನ್ಯ ಸಭಾಪತಿಯವರೇ, ಇದರ ಜೊತೆಗೆ ಮಾನ್ಯ ರಮೇಶ್‌ರವರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ನೀಡುವುದಾದರೆ ಮಾನ್ಯ ಮುಖ್ಯ ಕಾರ್ಯದರ್ಶಿಯವರು ಅವರ ಕಛೇರಿಯಲ್ಲಿಯೇ 'ಪರಿಸರ ಸೆಲ್' ಅನ್ನು ತೆರೆದಿದ್ದಾರೆ ಎನ್ನುವ ಅಂಶವನ್ನು ತಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ.

**ಶ್ರೀ ಪಿ.ಆರ್.ರಮೇಶ್:–** ಸನ್ಮಾನ್ಯ ಸಭಾಪತಿಯವರೇ, 1986ರಲ್ಲಿ ತಂದಂತಹ ಪರಿಸರ ಸಂರಕ್ಷಣಾ ಕಾಯಿದೆಯಡಿಯಲ್ಲಿ ಈಗಾಗಲೇ ತ್ಯಾಜ್ಯ ನಿರ್ವಹಣೆಗೆ ಸಂಬಂಧಪಟ್ಟಂತೆ ಒಂದು Waste Management Cell ಸ್ಥಾಪನೆಯಾಗಿದೆ. ಇಡೀ ಕರ್ನಾಟಕ ರಾಜ್ಯದಲ್ಲಿ ಸುಮಾರು ಒಂದು ಸಾವಿರ ನೋಂದಾಯಿತ ಖಾಸಗೀಕರಣಗೊಂಡ ಏಜೆನ್ಸಿಗಳು ಈ ಕೆಲಸವನ್ನು ಮಾಡುತ್ತಿವೆ. ಈ ಏಜೆನ್ಸಿಗಳು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರದೇ ಆಗಿರುವಂತಹ ಒಂದು ವಾತಾವರಣವನ್ನು ಸೃಷ್ಟಿ ಮಾಡುವುದಕ್ಕೆ ಅವರದೇ ಆಗಿರುವಂತಹ plant and machineriesಗಳನ್ನು ಇಟ್ಟುಕೊಂಡು ಯಾವ ಯಾವ ತ್ಯಾಜ್ಯಗಳನ್ನು ಯಾವ ಯಾವ ರೀತಿಯಲ್ಲಿ ನಿರ್ವಹಣೆ ಮಾಡಬೇಕೆನ್ನುವುದರ ಬಗ್ಗೆ ಅವರಿಗೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಮಾರ್ಗಸೂಚಿಗಳನ್ನು ನೀಡಲಾಗಿದೆ. ಮಾಲಿನ್ಯ ನಿಯಂತ್ರಣ ಮಂಡಳಿಯವರು ಕೊಟ್ಟಿರುವಂತಹ ಮಾರ್ಗಸೂಚಿಗಳನ್ನು ಮಾನಿಟರ್ ಮಾಡುವಂತಹ ಜವಾಬ್ದಾರಿ ಸೆಲ್‌ನ ಮೇಲಿದೆ. ಜಿಲ್ಲಾ ಮಟ್ಟದಲ್ಲಿರುವ ಪರಿಸರ ಅಧಿಕಾರಿಗಳಿಗೆ ಆಯಾಯ ಜಿಲ್ಲೆಗಳ ಇನ್‌ಚಾರ್ಜ್ ಕೊಟ್ಟಿದ್ದಾರೆ. ಆದರೆ, ಇವತ್ತು ಆ ಸಾವಿರ ಏಜೆನ್ಸಿಗಳು ಏನು ಕೆಲಸ ಮಾಡುತ್ತಿವೆ ಎನ್ನುವುದು ಯಾರಿಗೂ ಗೊತ್ತಿಲ್ಲ. ತ್ಯಾಜ್ಯ ನಿರ್ವಹಣೆಯನ್ನು ಆಯಾಯ ಕಂಪನಿ ಮತ್ತು ಇಂಡಸ್ಟ್ರಿಗಳಿಗೆ ಬಿಟ್ಟಿದ್ದರೆ, ಎಷ್ಟೋ ಚೆನ್ನಾಗಿರುತ್ತಿತ್ತು. ಆದರೆ, ಈಗ ಏನಾಗುತ್ತಿದೆಯೆಂದರೆ, ಇರುವಂತಹ ನೂರು ಏಜೆನ್ಸಿಗಳು ಇಡೀ ಬೆಂಗಳೂರನ್ನು ಕೆಡಿಸುತ್ತಿವೆ. ಇಲ್ಲಿನ ಕಸವನ್ನು ತೆಗೆದುಕೊಂಡು ಹೋಗಿ ಅಲ್ಲಿಗೆ ಹಾಕುತ್ತಾರೆ, ಅಲ್ಲಿನ ಕಸವನ್ನು ತೆಗೆದುಕೊಂಡು ಬಂದು ಇಲ್ಲಿಗೆ ಹಾಕುತ್ತಿದ್ದಾರೆ. 'Operation Consent' and 'Establishment Consent' ಸರ್ಕಾರ ಉಲ್ಲಂಘನೆ ಮಾಡಿ ಕೊಟ್ಟಿರುವುದರ ಬಗ್ಗೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿತ್ತು. ಆ ಪ್ರಕರಣದಲ್ಲಿ ಸರ್ಕಾರವು administrative charges ಎಂದು ತೆಗೆದುಕೊಂಡು, ಆಕ್ಟ್‌ನಲ್ಲಿ ಇಲ್ಲದೇ ಇರುವಂತಹ ಪ್ರಾವಿಷನ್ ಅಡಿಯಲ್ಲಿ ಅಸಂವಿಧಾನಿಕವಾಗಿ ಅನುಮತಿಯನ್ನು ನೀಡಲಾಗಿದೆ. ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ವಾಪಸ್ಸು ನೀಡಲಾಗಿದೆ, ಇವತ್ತು ಆ ಕಂಪನಿಗಳು ಅನಧಿಕೃತವಾಗಿ ಇವೆ. They are running unauthorizedly. ಇವತ್ತೂ ನಡೆಯುತ್ತಿದೆ. ಆದರೆ, ಸೆಲ್ ಆಗಲೀ ಅಥವಾ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಾಗಲೀ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ. ಮಾನ್ಯ ಆನಂದ್‌ಸಿಂಗ್‌ನವರು ಹೊಸದಾಗಿ ಈ ಖಾತೆಯನ್ನು ವಹಿಸಿಕೊಂಡಿದ್ದಾರೆ. ಅವರಿಗೆ ಇದೆಲ್ಲ ಗೊತ್ತಿಲ್ಲ. ಮಾನ್ಯ ಸುರೇಶ್‌ಕುಮಾರ್‌ರವರು ಸುಮಾರು 40 ವರ್ಷಗಳಿಂದ ರಾಜಕೀಯದಲ್ಲಿದ್ದಾರೆ ಅವರಿಗೆಲ್ಲ ಗೊತ್ತಿದೆ. ಮಾನ್ಯ ಸಚಿವರು ಮುಗ್ಧತೆಯಿಂದ ಈ ಉತ್ತರವನ್ನು ಕೊಟ್ಟಿದ್ದಾರೆನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಮುಗ್ಧತೆಯಿಂದ ನಾವು ನಮ್ಮ ನಗರವನ್ನು ಕಾಪಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಬೆಂಗಳೂರಿನ ಪರಿಸರ ಬಹಳ ಕೆಟ್ಟಿದೆ ಎನ್ನುವ ವಿಚಾರವನ್ನು ನಾನು ಬಹಳ ಗಂಭೀರವಾಗಿ ಹೇಳುತ್ತಿದ್ದೇನೆ. ಹಿಂದೆ ಬೆಂಗಳೂರಿನಲ್ಲಿ ಸುಮಾರು 400-500 ಕೆರೆಗಳು ಇದ್ದವು. ಇವತ್ತು ಕೇವಲ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೆರಳೆಣಿಕೆಯಷ್ಟು ಮಾತ್ರ ಕೆರೆಗಳು ಉಳಿದಿವೆ. ಉಳಿದ ಎಲ್ಲ ಕೆರೆಗಳಿಗೆ ಕಸವನ್ನು ತೆಗೆದುಕೊಂಡು ಹೋಗಿ ಹಾಕುವುದಕ್ಕೆ ಬಳಸಿಕೊಳ್ಳಲಾಗುತ್ತಿದೆ. ಆ ಕೆರೆಗಳನ್ನು ಪುನಃಶ್ಚೇತನಗೊಳಿಸುವುದಕ್ಕೆ ಸಾಧ್ಯವಾಗುತ್ತಿಲ್ಲವೆನ್ನುವ ಮಾತನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಬೆಂಗಳೂರಿನ ಕಸವನ್ನು ಮತ್ತು ಇಲ್ಲಿರುವ ಕೈಗಾರಿಕೆಗಳನ್ನು ಸರ್ಕಾರ ಹತೋಟಿಗೆ ತೆಗೆದುಕೊಳ್ಳದೇ ಇದ್ದರೆ ಬೆಂಗಳೂರು ನಗರವನ್ನು ಕಾಪಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇವರುಗಳು ಹೊರ ರಾಜ್ಯಗಳಿಂದ ಬಂದಿರುವವರು ಅವರು ವ್ಯಾಪಾರ ಮಾಡಿ ದುಡ್ಡು ಮಾಡುತ್ತಾರೆ. ಈ ಸೆಲ್ ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸದೇ ಹೋದರೆ, ಬೆಂಗಳೂರು ಮಾತ್ರವಲ್ಲ ಇಡೀ ಕರ್ನಾಟಕ ನಾಶವಾಗುತ್ತದೆ. ಕೊರೊನಾಗಿಂತ ಹೆಚ್ಚು ಅಪಾಯಕಾರಿ ಇದು. ಕೈಗಾರಿಕೆಗಳ effluents ನಮ್ಮ ನಗರವನ್ನು ಕೆಡಿಸಿದೆ. ಅಂತರ್ಜಲ ಬತ್ತಿ ಹೋಗಿದೆ. ಇದರ ಬಗ್ಗೆ ತನಿಖೆ ಮಾಡುವುದಕ್ಕೆ ಒಂದು ಸದನ ಸಮಿತಿಯನ್ನು ರಚನೆ ಮಾಡಿದರೆ, ಅದು ವಾಸ್ತವಾಂಶಗಳನ್ನು ಸರ್ಕಾರಕ್ಕೆ ಕೊಡುತ್ತದೆ. ಸರ್ಕಾರ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಲಿ. We will not interfere in your administration. ಬೆಂಗಳೂರಿನ ಪರಿಸರ ಕೆಡುತ್ತಿರುವ ಬಗ್ಗೆ ಎನ್.ಜಿ.ಟಿ., ಮತ್ತು ಸುಪ್ರೀಂ ಕೋರ್ಟ್ ಹೇಳಿದೆ. ಆದರೂ ಸಹ ಸರ್ಕಾರ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ. ಆದ್ದರಿಂದ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಸರ್ಕಾರ ಒಂದು ಸದನ ಸಮಿತಿಯನ್ನು ರಚನೆ ಮಾಡಿದರೆ, ಖಂಡಿತವಾಗಿಯೂ ಮಾನ್ಯ ಸಚಿವರಿಗೆ ಒಳ್ಳೆಯ ಹೆಸರು ಬರುತ್ತದೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:-** ಸನ್ಮಾನ್ಯ ಸಭಾಪತಿಯವರೇ, ಹಿಂದೆ ಬೆಂಗಳೂರು ನಗರದಲ್ಲಿ ಪರಿಸರ ಮಾಲಿನ್ಯವನ್ನುಂಟು ಮಾಡುತ್ತಿರುವ ಕಾರ್ಖಾನೆಗಳ ಸಂಖ್ಯೆಯೆಷ್ಟು ಎನ್ನುವ ಪ್ರಶ್ನೆಯನ್ನು ಕೇಳಿದ್ದೆ, ಅದಕ್ಕೆ ಬೆಂಗಳೂರು ನಗರ ಜಿಲ್ಲೆಯಲ್ಲಿ ಸುಮಾರು 290 ಕಾರ್ಖಾನೆಗಳೆಂದು ಉತ್ತರವನ್ನು ಕೊಟ್ಟಿದ್ದರು. ನನ್ನ ಕ್ಷೇತ್ರವಾದ ಸರ್ವಜ್ಞನಗರ ಮತ್ತು ಬ್ಯಾಟರಾಯನಪುರಕ್ಕೆ ಸಂಬಂಧಪಟ್ಟಂತೆ ಸುಮಾರು 114 ಕಾರ್ಖಾನೆಗಳಿವೆ ಎನ್ನುವ ಉತ್ತರವನ್ನು ನೀಡಿದ್ದಾರೆ. ಅಲ್ಲಿ ಒಂದೇ ಕಡೆ ಸುಮಾರು 25 ಕಾರ್ಖಾನೆಗಳಿರುವ ಬಗ್ಗೆ ನಾನು ಮಾಹಿತಿ ನೀಡುತ್ತೇನೆ. ಯಾವುದಾದರೊಂದು ಅತೀ ಭ್ರಷ್ಟ ಇಲಾಖೆ ಇರುವುದಾದರೆ ಅದು ಮಾಲಿನ್ಯ ನಿಯಂತ್ರಣ ಮಂಡಳಿ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅಧಿಕಾರಿಗಳು ಒಂದೊಂದು ಬಾರಿ ಒಂದೊಂದು ರೀತಿ ಉತ್ತರವನ್ನು ಕೊಡುತ್ತಿದ್ದಾರೆ. ಅಧಿಕಾರಿಗಳೆಲ್ಲ ವಸೂಲಿ ನೀತಿಯನ್ನು ಅನುಸರಿಸುತ್ತಿದ್ದಾರೆ. ಯಾರು ವಸೂಲಿ ಕೊಟ್ಟಿಲ್ಲ ಅವರ ಹೆಸರನ್ನು ಪಟ್ಟಿಯಲ್ಲಿ ಸೇರಿಸುತ್ತಾರೆ. ಇದೊಂದು ಬಹಳ ಗಂಭೀರವಾದ ಪ್ರಶ್ನೆಯಾಗಿದೆ. ನಮಗೆ ಶೇಕಡಾ 21ರಷ್ಟು ಆಮ್ಲಜನಕದ ಅವಶ್ಯಕತೆ ಇದೆ. ಪ್ರಸ್ತುತ ನಮಗೆ ಕೇವಲ ಶೇಕಡಾ 12 ರಿಂದ 13ರಷ್ಟು ಮಾತ್ರ ಆಮ್ಲಜನಕ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೊರೆಯುತ್ತಿದೆ. ಈ ಪ್ರಮಾಣದಲ್ಲಿ ನಮಗೆ ಆಮ್ಲಜನಕ ದೊರೆಯುತ್ತಿಲ್ಲ. ಮಾಲಿನ್ಯ ನಿಯಂತ್ರಣ ಮಂಡಳಿ ಅತ್ಯಂತ ಭ್ರಷ್ಟ ಇಲಾಖೆಯಾಗಿದೆ. ಈ ಇಲಾಖೆಯಲ್ಲಿ ಯಾರು ಭ್ರಷ್ಟ ಅಧಿಕಾರಿಗಳಿದ್ದಾರೆ ಅವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆನ್ನುವುದು ನನ್ನ ಒತ್ತಾಯವಾಗಿದೆ.

**ಶ್ರೀ ಆನಂದ ಸಿಂಗ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪಿ.ಆರ್.ರಮೇಶ್ ಮತ್ತು ಶ್ರೀ ರಮೇಶ್‌ಗೌಡರು  ಬಹಳ ಗಂಭೀರವಾಗಿರುವ ವಿಚಾರಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. ನಾನು ಖುದ್ದಾಗಿ ಈ ವಿಚಾರವನ್ನು ಪರಿಶೀಲನೆ ಮಾಡಿ, ಯಾವ ರೀತಿಯಲ್ಲಿ ಕಾನೂನು ಕ್ರಮವನ್ನು ಜರುಗಿಸುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ನೋಡಿ ಆ ನಿಟ್ಟಿನಲ್ಲಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎನ್ನುವ ವಿಚಾರವನ್ನು ತಮ್ಮ ಮೂಲಕ ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಸಿ.ಎಂ.ಇಬ್ರಾಹಿಂ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪಿ.ಆರ್.ರಮೇಶ್‌ರವರು ಸದನ ಸಮಿತಿಯನ್ನು ರಚನೆ ಮಾಡಬೇಕೆಂದು ಒತ್ತಾಯಿಸಿದ್ದಾರೆ. ಮಾನ್ಯ ಸಚಿವರು ಬಹಳ ಒಳ್ಳೆಯವರು ಅವರಿಗೆ ದೇವರು ಸಾಕಷ್ಟು ಅನುಕೂಲತೆಗಳನ್ನು ಕೊಟ್ಟಿದ್ದಾನೆ. ಇದು ಸ್ವಾಗತ. ಪರಿಸರ ಇಲಾಖೆ ಎಷ್ಟು ಭ್ರಷ್ಟ ಇಲಾಖೆಯೆಂದರೆ, ಮಾನ್ಯ ಸದಸ್ಯರು ಹೇಳಿರುವುದು ಸತ್ಯವಾದ ಸಂಗತಿಯಾಗಿದೆ. ನಾನು ಯೋಜನಾ ಆಯೋಗದ ಉಪಾಧ್ಯಕ್ಷನಾಗಿದ್ದಾಗ ಇದರ ಒಳಹೊರಗನ್ನು ನೋಡಿದ್ದೇನೆ. ಇದರಲ್ಲಿ ಪೋಸ್ಟಿಂಗ್ ಪಡೆದುಕೊಳ್ಳುವುದಕ್ಕೇ ಕೋಟ್ಯಾಂತರ ರೂಪಾಯಿಗಳನ್ನು ಕೊಡಬೇಕಾಗಿದೆ. ಅಧಿಕಾರಿಗಳು ಏನನ್ನು ಹೇಳುವುದಿಲ್ಲ. ಗ್ಯಾಲರಿಯಲ್ಲಿ ಕುಳಿತುಕೊಂಡು ಸನ್ನೆ ಮಾಡುತ್ತಿರುತ್ತಾರೆ. ನಾನು ಅದನ್ನು ನೋಡುತ್ತಿದ್ದೇನೆ. ಅದಕ್ಕಾಗಿಯೇ ನಾನು ಹೇಳುತ್ತಿದ್ದೇನೆ, you be independent.  ತಾವು ಠಾಕೂರ್ ಆಗಿದ್ದೀರಿ. ಏನಾದರೂ ಒಂದು ಸಣ್ಣ ಸಮಸ್ಯೆ ಬಂದರೂ ಅದಕ್ಕೆ ತಾವು ಕೂಡಲೇ ಸ್ಪಂದಿಸಿದರೆ ಒಳ್ಳೆಯದಾಗುತ್ತದೆ. ಕಾರ್ಖಾನೆಗಳನ್ನು ಸ್ಥಾಪನೆ ಮಾಡುವುದು ದೊಡ್ಡ ವಿಚಾರವಲ್ಲ. ಪರಿಸರ ಇಲಾಖೆಯವರಿಂದ ಅನುಮತಿಯನ್ನು ಪಡೆದುಕೊಳ್ಳುವುದು ಭಾರಿ ದೊಡ್ಡ ಸಂಕಟದ ವಿಚಾರವಾಗಿದೆ. 'ತಿರುಮಿನ ಬೊಮ್ಮಿ ಮಾಡುತ್ತಾರೆ, ಬೊಮ್ಮಿಯನ್ನ ತಿರುಮಿ' ಮಾಡುತ್ತಾರೆ. ಈ ರೀತಿಯ ಅನೇಕ ನಿದರ್ಶನಗಳು ಕಂಡುಬಂದಿವೆ. ಜಿಲ್ಲಾ ಮಟ್ಟದಲ್ಲಿರುವಂತಹ ಪರಿಸರ ಅಧಿಕಾರಿಗಳನ್ನು ಸರ್ಕಾರ ತನ್ನ ಹತೋಟಿಗೆ ತೆಗೆದುಕೊಳ್ಳಬೇಕಾಗಿದೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪಿ.ಆರ್.ರಮೇಶ್:–** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರಕ್ಕೆ ಸಂಬಂಧಪಟ್ಟಂತೆ ಸದನ ಸಮಿತಿಯನ್ನು ರಚನೆ ಮಾಡುವ ಬಗ್ಗೆ ಪ್ರಸ್ತಾಪ ಮಾಡಿದ್ದೆ, ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ನೀಡಲಿಲ್ಲ.

**ಶ್ರೀ ಆನಂದ ಸಿಂಗ್:–** ಸನ್ಮಾನ್ಯ ಸಭಾಪತಿಯವರೇ, ನಾನು ಈ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಅವಶ್ಯಕತೆ ಇದೆ ಎನ್ನುವುದಾದರೆ, ಆ ಬಗ್ಗೆ ಆಲೋಚನೆ ಮಾಡೋಣ.

**ಸಭಾಪತಿಯವರು:–** ಮಾನ್ಯ ಹೆಚ್.ಎಂ.ರಮೇಶ್‌ಗೌಡರು ಹೇಳಿರುವಂತಹ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ – 213(1706) ಬೇರೆ ಇಲಾಖೆಗೆ ವರ್ಗಾವಣೆಗೊಂಡಿದೆ.

ಮಾನ್ಯ ಸಭಾ ನಾಯಕರೇ ಪ್ರಶ್ನೋತ್ತರ ವೇಳೆಯನ್ನು ಮುಂದುವರೆಸುವುದಕ್ಕೆ ಬೇರೆ ಯಾವ ಪ್ರಶ್ನೆಗಳು ಇಲ್ಲ. ಮಾನ್ಯ ಶಿಕ್ಷಣ ಸಚಿವರಿಗೆ ಸಂಬಂಧಪಟ್ಟ ಪ್ರಶ್ನೆಗಳು ಮಾತ್ರ ಉಳಿದಿವೆ. ಮಾನ್ಯ ಆಯನೂರು ಮಂಜುನಾಥ್‌ರವರ ಪ್ರಶ್ನೆಗೆ ಉತ್ತರಿಸಲು ಸಂಬಂಧಪಟ್ಟ ಸಚಿವರು ಸದನದಲ್ಲಿ ಹಾಜರಿಲ್ಲ. ಶ್ರೀಮತಿ ಎಸ್.ವೀಣಾ ಅಚ್ಚಯ್ಯ ಅವರ ಪ್ರಶ್ನೆಗೆ ಉತ್ತರಿಸಲು ಸಚಿವರು ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):–** ಶ್ರೀಮತಿ ವೀಣಾ ಅಚ್ಚಯ್ಯನವರ ಪ್ರಶ್ನೆಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ ನಾನು ಉತ್ತರವನ್ನು ನೀಡುತ್ತೇನೆ.

**ಸಭಾಪತಿಯವರು:–** ಈಗ ಶ್ರೀಮತಿ ವೀಣಾ ಅಚ್ಚಯ್ಯನವರ ಪ್ರಶ್ನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1748**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಸನ್ಮಾನ್ಯ ಸಭಾಪತಿಯವರೇ, 'ಕೊಡಗು ಜಿಲ್ಲೆ ಮಡಿಕೇರಿಯಲ್ಲಿರುವ ಜಿಲ್ಲಾ ಆಸ್ಪತ್ರೆಯ ಡಯಾಲಿಸಿಸ್ ಕೇಂದ್ರದಲ್ಲಿ ತಜ್ಞ ವೈದ್ಯರು ಮತ್ತು ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ' ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಸರ್ಕಾರ, 'ಗಮನಕ್ಕೆ ಬಂದಿದೆ' ಎನ್ನುವ ಉತ್ತರವನ್ನು ನೀಡಿದೆ. ಅಲ್ಲಿ ಕರ್ತವ್ಯ ನಿರ್ವಹಿಸಬೇಕಾಗಿರುವ ಕೆಲವು ತಜ್ಞ ವೈದ್ಯರುಗಳ ಹೆಸರನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರಲ್ಲಿ ನನ್ನ ಮನವಿ ಏನೆಂದರೆ, ಕೊಡಗು ಜಿಲ್ಲೆಯಲ್ಲಿ ಡಯಾಲಿಸಿಸ್ ಕೇಂದ್ರ ಸ್ಥಾಪನೆಯಾಗಿ ಹಲವಾರು ರೋಗಿಗಳು ಅಲ್ಲಿ ಅಡ್ಮಿಟ್ ಆಗಿದ್ದಾರೆ, ಸದರಿ ಆಸ್ಪತ್ರೆಯಲ್ಲಿ Nephrologist ಹಾಗೂ Cardiologist ತಜ್ಞ ವೈದ್ಯರು ಇಲ್ಲದೇ ಇರುವುದರಿಂದ ಸಾರ್ವಜನಿಕರು ತಮಗೆ ದೊರಕಬೇಕಾದ ಸೇವೆಯಿಂದ ವಂಚಿತರಾಗಿದ್ದಾರೆ. ಕೊಡಗು ಜಿಲ್ಲೆಯಲ್ಲಿ ಯಾರು ಡಯಾಲಿಸಿಸ್ ಪಡೆದುಕೊಳ್ಳಬೇಕಾಗಿದೆ, ಅವರು ಮೈಸೂರು ಮತ್ತು ಬೆಂಗಳೂರಿಗೆ ಹೋಗಿ ಬಾಡಿಗೆ ಮನೆಗಳನ್ನು ಮಾಡಿಕೊಂಡಿದ್ದಾರೆ. ಆದ್ದರಿಂದ ಆದಷ್ಟು ಶೀಘ್ರ ಮಡಿಕೇರಿಗೆ ತಜ್ಞ ವೈದ್ಯರನ್ನು ನೇಮಕ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

(ಮುಂದುವರಿದಿದೆ)

(656) 23.3.2020 12.00 ಪಿಕೆ:ಎಂಡಿ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ವೀಣಾ ಅಚ್ಚಯ್ಯನವರು ಹೇಳಿರುವಂತಹ ವಿಚಾರಗಳು ಸರಿಯಿವೆ. ಅವರು, ಅಗತ್ಯವಿರುವಷ್ಟು ಅಥವಾ ಬೇಡಿಕೆ ಇರುವಷ್ಟು ತಜ್ಞ ವೈದ್ಯರು ಹಾಗೂ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದು ಕೇಳಿದ್ದಾರೆ. ಈ ಡಯಾಲಿಸಿಸ್ ವ್ಯವಸ್ಥೆಯನ್ನು ಖಾಸಗಿ ಸಹಭಾಗಿತ್ವದಲ್ಲಿ ಮಾಡಲಾಗುತ್ತದೆ. ಒಂದು ಡಯಾಲಿಸಿಸ್ ಮಾಡುವುದಕ್ಕೆ ನಮ್ಮ ಇಲಾಖೆಯಿಂದ ಅವರಿಗೆ ರೂ. 1150/- ಕೊಡುತ್ತೇವೆ. ಆದರೆ ಈ ಮಧ್ಯೆ, ಅವರ ಸೇವೆಗಳು ಸಮರ್ಪಕವಾಗಿಲ್ಲ ಎನ್ನುವ ದೂರುಗಳು ಬಂದಿವೆ. ಮಾನ್ಯ ಸದಸ್ಯರ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಅದನ್ನು ಸರಿಪಡಿಸುವುದಕ್ಕೆ ಬೇಕಾದ ಯೋಜನೆ ರೂಪಿಸುತ್ತೇವೆ. ತಕ್ಷಣ ಅದನ್ನು ಸರಿಪಡಿಸಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪ ಅವರ ಪ್ರಶ್ನೆ ಸಂಖ್ಯೆ 1675 ಅನ್ನು, ಮಾನ್ಯ ಉಪಮುಖ್ಯಮಂತ್ರಿಗಳು ಇಲ್ಲದಿರುವುದರಿಂದ ನಂತರ ತೆಗೆದುಕೊಳ್ಳಲಾಗುವುದು.

ಮಾನ್ಯ ರೇವಣ್ಣನವರ ಪ್ರಶ್ನೆ ಸಂಖ್ಯೆ 1720 ಇದಕ್ಕೆ ಕಾಲಾವಕಾಶ ಕೇಳಿದ್ದಾರೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆ ರಾಜ್ಯವ್ಯಾಪಿ ಆಗಿರುವಂಥದ್ದಲ್ಲ. "ಹಿಂದುಳಿದ ವರ್ಗಗಳಿಗೆ ಉದ್ಯೋಗದ ಮೀಸಲಾತಿಯಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಇರುವಂತಹ ಆದೇಶ ಯಾವ ದಿನಾಂಕದಿಂದ ಅನುಷ್ಠಾನದಲ್ಲಿದೆ" ಎಂದು, ಇನ್ನೊಂದು, "ಸರ್ಕಾರ ಆದೇಶ ಹೊರಡಿಸಿದ ದಿನಾಂಕದಿಂದ ಇಲ್ಲಿಯವರೆಗೆ ಎಷ್ಟು ಬ್ಯಾಕ್‌ಲಾಗ್ ಹುದ್ದೆಗಳನ್ನು ಎಲ್ಲಾ ಇಲಾಖೆಗಳಿಂದ ತುಂಬಲಾಗಿದೆ" ಎಂದು ಕೇಳಿದ್ದೇನೆ. ಮಾಹಿತಿ ತಂತ್ರಜ್ಞಾನ ಇದಿದೆ, ಇದಿದೆ ಎಂದು ಮಾನ್ಯ ಸುರೇಶ್‌ಕುಮಾರ್‌ರವರು ಹೇಳುತ್ತಾರಷ್ಟೆ, ಆದರೆ ಇಂತಹ ಸುಲಭವಾದ ಪ್ರಶ್ನೆಗೆ ಸಮಯ ತೆಗೆದುಕೊಂಡರೆ ಹೇಗೇ? ಮತ್ತೆ ನಾನು ಮಾತನಾಡಿದರೆ ಮಾನ್ಯ ನಾರಾಯಣಸ್ವಾಮಿಯವರು ಇವರ ಯಾವಾಗಲೂ ಕೂಗಾಡುತ್ತಾರೆ ಎಂದು ನನಗೆ ಹೇಳುತ್ತಾರೆ. ಈ ರೀತಿಯಾದರೆ ಕೂಗಾಡದೇ ಇನ್ನೇನು ಮಾಡಬೇಕು? ಮೂರು ದಿನ ಆದಮೇಲೆ ಅಧಿವೇಶನ ಮುಗಿಯುತ್ತದೆ. ಯಾವ ಅವಧಿಯ ಒಳಗೆ ಉತ್ತರ ಕೊಡಿಸುತ್ತಾರೆ ಅದನ್ನಾದರೂ ಹೇಳಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ಅಧಿವೇಶನ ಮುಗಿಯುವುದರೊಳಗಾಗಿ ಉತ್ತರ ಕೊಡಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಅ.ದೇವೇಗೌಡ ಅವರ ಪ್ರಶ್ನೆ ಸಂಖ್ಯೆ 1675 ಮತ್ತು ಶ್ರೀ ಆರ್.ಪ್ರಸನ್ನಕುಮಾರ್ ಅವರ ಪ್ರಶ್ನೆ ಸಂಖ್ಯೆ : 1684 ಇವುಗಳನ್ನು ಮಾನ್ಯ ಉಪಮುಖ್ಯಮಂತ್ರಿಗಳು ಬಂದ ನಂತರ ತೆಗೆದುಕೊಳ್ಳೋಣ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ : 1695**
**(ಉತ್ತರ ಪ್ರತಿ ಲಗತ್ತಿಸಲಾಗಿದೆ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯನ್ನು ನನ್ನ ಕ್ಷೇತ್ರಗಳಾದ, ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಸಂಬಂಧಪಟ್ಟಂತೆ ಕೇಳಿದ್ದೇನೆ. ಈ ಜಿಲ್ಲೆಗಳಲ್ಲಿರುವ ಶಾಲೆಗಳ ಎಷ್ಟು ಕೊಠಡಿಗಳು ಶಿಥಿಲವಾಗಿವೆ ಮತ್ತು ಎಷ್ಟು ಕೊಠಡಿಗಳ ಕೊರತೆ ಇದೆ ಎಂದು ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು, ಒಟ್ಟು 1097 ಕೊಠಡಿಗಳ ಅಗತ್ಯವಿದೆ, ಇದಕ್ಕಾಗಿ ಆರ್.ಐ.ಡಿ.ಎಫ್–25ರ ಯೋಜನೆಯಡಿ ಅನುದಾನ ಒದಗಿಸಲಾಗಿದೆ, ಸುಮಾರು 772 ಕೊಠಡಿಗಳ ನಿರ್ಮಾಣಕ್ಕೆ ಮುಂದಾಗಿದ್ದೇವೆ ಎಂದು ಹೇಳುತ್ತಾರೆ. ಶಿಥಿಲವಾಗಿರುವ ಕೊಠಡಿಗಳು ಸೇರಿ 1097 ಕೊಠಡಿಗಳ ಅಗತ್ಯವಿರುತ್ತದೆ. ನೀವು ಹಣಕಾಸು ಯೋಜನೆಗಳನ್ನು ಏನು ಮಾಡಿದ್ದೀರೋ ಅದನ್ನು ಬಿಟ್ಟು ಇನ್ನೂ 325 ಕೊಠಡಿಗಳು ಉಳಿಯುತ್ತವೆ. ಇಲ್ಲಿನ ಶಾಲೆಗಳು ನಿರ್ಮಾಣವಾಗಿ ಸುಮಾರು 40–50 ವರ್ಷಗಳಾಗಿವೆ. ವಾಸ್ತವವಾಗಿ ಬಹಳಷ್ಟು ಶಾಲೆಗಳ ಪುನರ್ನಿರ್ಮಾಣವೇ ಆಗಬೇಕಿದೆ. ಎಷ್ಟೋ ಶಾಲೆಗಳಲ್ಲಿ ಮಕ್ಕಳು ಕೊಠಡಿಯೊಳಗೆ ಕುಳಿತು ಪಾಠ ಕೇಳುವ ಸ್ಥಿತಿಯಲ್ಲಿಲ್ಲ, ಯಾವಾಗ ಕೊಠಡಿ ಬಿದ್ದು ಹೋಗುತ್ತದೆಯೋ ಎನ್ನುವ ಆತಂಕದಲ್ಲಿದ್ದಾರೆ. ಈ ಕುರಿತು ಪತ್ರಿಕೆಗಳಲ್ಲಿ ವರದಿಗಳು ಬಂದಿವೆ. ಬಹಳಷ್ಟು ಕಡೆ ಶಾಲಾ ಕೊಠಡಿಗಳು ಶಿಥಿಲವಾಗಿರುವುದರಿಂದ ಜಗಲಿಗಳ ಮೇಲೆ ಪಾಠ ಮಾಡುತ್ತಿದ್ದಾರೆ, ದೇವಸ್ಥಾನಗಳಲ್ಲಿ ಪಾಠ ಮಾಡುತ್ತಿದ್ದಾರೆ. ಮಾನ್ಯ ಸಚಿವರಿಗೆ ಶಿಕ್ಷಣ ಕ್ಷೇತ್ರದ ಬಗ್ಗೆ ಅಪಾರ ಕಾಳಜಿ ಇದೆ. ತಾವು ಶಾಲೆಗಳಲ್ಲೇ ತಂಗುವಂತಹ, ವಾಸ್ತವ್ಯ ಹೂಡುವಂತಹ ಕೆಲಸ ಮಾಡುತ್ತಿದ್ದೀರಿ. ದಯಮಾಡಿ ಆದ್ಯತೆಯ ಮೇಲೆ ಎಲ್ಲಾ ಶಾಲಾ ಕೊಠಡಿಗಳನ್ನು ಕಟ್ಟುವ ಕೆಲಸ ಮಾಡಬೇಕು. ಈ ಕಾಮಗಾರಿ ಒಂದೆರಡು ವರ್ಷ ವಿಳಂಬವಾದರೂ ಮಕ್ಕಳು ತೊಂದರೆ ಅನುಭವಿಸಬೇಕಾಗುತ್ತದೆ. ಆ ಮಕ್ಕಳು ಆತಂಕದ ವಾತಾವರಣದಲ್ಲಿ ಇರದಂತೆ, ಭದ್ರವಾದ ಶಾಲಾ ಕೊಠಡಿಗಳನ್ನು ಕಟ್ಟಿಸಿ ಕೊಡುವುದರ ಮೂಲಕ ಒಳ್ಳೆಯ ಶಿಕ್ಷಣ ಸಿಗುವ ಹಾಗೆ ಮಾಡಬೇಕು ಎಂದು ಕೋರುತ್ತೇನೆ.

**ಶ್ರೀ ಎಸ್.ಸುರೇಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅವರ ಕ್ಷೇತ್ರ ವ್ಯಾಪ್ತಿಯೊಳಗೆ ಬರುವ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದೇನೆ. ರಾಜ್ಯದಲ್ಲಿ ಒಟ್ಟು 43282 ಸರ್ಕಾರಿ ಪ್ರಾಥಮಿಕ ಮತ್ತು 4724 ಸರ್ಕಾರಿ ಪ್ರೌಢ ಶಾಲೆಗಳು ಸೇರಿದಂತೆ ಒಟ್ಟು ಸುಮಾರು 50 ಸಾವಿರ ಸರ್ಕಾರಿ ಶಾಲಾ ಕೊಠಡಿಗಳಿವೆ. 2019ರ ಆಗಸ್ಟ್‌ನಲ್ಲಿ ಉಂಟಾದ ಅಧಿಕ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಳೆ ಮತ್ತು ನೆರೆ ಹಾವಳಿಯಾದ ಸಂದರ್ಭದಲ್ಲಿ ಒಟ್ಟು 6196 ಶಾಲೆಗಳಲ್ಲಿನ ಸುಮಾರು 13260 ಕೊಠಡಿಗಳಿಗೆ ಅಲ್ಪ ಪ್ರಮಾಣದ ಹಾನಿಯಾಗಿದೆ. ನಾನೇ ಅನೇಕ ಶಾಲೆಗಳಿಗೆ ಹೋಗಿ ಇನ್ಸ್‌ಪೆಕ್ಷನ್ ಮಾಡಿಕೊಂಡು ಬಂದಿದ್ದೇನೆ. ಇದರ ದುರಸ್ತಿಗೆ ನಾವು ಸುಮಾರು ರೂ. 200 ಕೋಟಿಗಳನ್ನು ಬಿಡುಗಡೆ ಮಾಡಿದ್ದೇವೆ. ದುರಸ್ತಿಯನ್ನು ಮಾಡುವುದಕ್ಕಾಗದೇ, ಒಡೆದೇ ಹೊಸದಾಗಿ ಕಟ್ಟಬೇಕು ಎನ್ನುವ ಸ್ಥಿತಿಯಲ್ಲಿರಬಹುದಾದ ಕೊಠಡಿಗಳ ಮರುನಿರ್ಮಾಣಕ್ಕೆ ವಿಪರೀತ ಹಣ ಬೇಕಾಗಿದೆ. ಆದ್ದರಿಂದಲೇ, ಆರ್.ಡಿ.ಐ.ಎಫ್–25ರ ಯೋಜನೆ ಅಡಿಯಲ್ಲಿ ಸುಮಾರು ರೂ. 713 ಕೋಟಿಗಳನ್ನು ಪ್ರಾಥಮಿಕ ಶಾಲೆಗಳಿಗೆ ಮತ್ತು ರೂ. 69 ಕೋಟಿ ಪ್ರೌಢ ಶಾಲೆಗಳಿಗೆ, ಅಂದರೆ ಒಟ್ಟು ರೂ. 782 ಕೋಟಿಗಳಿಗೆ ಅನುಮೋದನೆ ನೀಡಲಾಗಿದ್ದು ಕಾಮಗಾರಿಗಳನ್ನು ಶುರು ಮಾಡುತ್ತೇವೆ. ಆದರೆ ಇಷ್ಟರಿಂದಲೇ ಎಲ್ಲವೂ ಆಗುವುದಿಲ್ಲ. ಮಾನ್ಯ ಶ್ರೀಕಂಠೇಗೌಡರು ಹೇಳಿರುವುದು ನೂರಕ್ಕೆ ನೂರು ಸತ್ಯ. ನಮ್ಮಲ್ಲಿ ಅನೇಕ ಶಾಲೆಗಳು ನಿರ್ಮಾಣಗೊಂಡು 100–125 ವರ್ಷ ದಾಟಿವೆ. ಆ ಕಟ್ಟಡಗಳೆಲ್ಲ ದುರ್ಬಲಗೊಂಡಿವೆ. ಆ ಕಟ್ಟಡಗಳನ್ನು ಒಡೆದು ಮರುನಿರ್ಮಾಣ ಮಾಡಬೇಕಿದೆ. ಹೊಸದಾಗಿ ನಿರ್ಮಾಣ ಮಾಡುವುದಕ್ಕೆ ಬೇರೆ ಬೇರೆ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಅನೇಕ ದಾನಿಗಳು ಇವತ್ತು ಮುಂದೆ ಬಂದಿದ್ದಾರೆ. ಅವರು, 'One School at a Time' ಎಂದು, ಅವರೇ ಶಿಥಿಲಗೊಂಡಿರುವ ಶಾಲೆಗಳನ್ನು ಹುಡುಕಿ ಹೊಸದಾಗಿ ಕಟ್ಟಿಕೊಡುವ ಕೆಲಸ ಮಾಡುತಿದ್ದಾರೆ. ಇನ್ನೊಂದು "ವನಯಾತ್ರಿ" ಎನ್ನುವ ಸಂಸ್ಥೆ ಇದೆ. ಅವರೂ ಶಾಲೆಗಳನ್ನು ಕಟ್ಟಿಕೊಡುತ್ತಿದ್ದಾರೆ. ನಾನು ರಾಜ್ಯದ ಉದ್ಯಮಿಗಳ ಒಂದು ಸಭೆ ಕರೆದು, ನಮ್ಮ ಅಗತ್ಯತೆ ಇಷ್ಟಿದೆ, ದಯವಿಟ್ಟು ನೀವು ನಮ್ಮ ಜೊತೆ ಬನ್ನಿ, partners ಆಗಿ, ಕಟ್ಟಡ ಕಟ್ಟಲು ಸಹಾಯ ಮಾಡಿ ಎಂದು ಹೇಳಿದಾಗ ಅವರು ಈ ನಿಟ್ಟಿನಲ್ಲಿ ಆಸಕ್ತಿ ತೋರಿಸುತ್ತಿದ್ದಾರೆ. ಖಂಡಿತಾ ಬರುವ ವರ್ಷದಲ್ಲಿ ಆದ್ಯತೆಯ ಮೇಲೆ ಅತಿ ಹೆಚ್ಚು ಕಟ್ಟಡಗಳನ್ನು ನಿರ್ಮಾಣ ಮಾಡುವುದಕ್ಕೆ ನಾನು ಕ್ರಮ ಕೈಗೊಳ್ಳುತ್ತೇನೆ. ಅದರ ಕಡೆ ನಮ್ಮ ಗಮನ ಇದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸಂಪೂರ್ಣ ಶಾಲೆಯನ್ನೇ ಅವರು ಕಟ್ಟಿಕೊಡುತ್ತಾರೆಯೇ?

**ಶ್ರೀ ಎಸ್.ಸುರೇಶ್‌ಕುಮಾರ್:–** ಹೌದು. 'One School at a Time' ನಮ್ಮ consultation ತೆಗೆದುಕೊಂಡು ಅವರೇ ಕಟ್ಟಿಕೊಡುತ್ತಾರೆ.

**(ಈ ಹಂತದಲ್ಲಿ ವೈಸ್–ಛೇರ್ಮನ್‌ರಾದ ಡಾ॥ತೇಜಸ್ವಿನಿಗೌಡರವರು ಸಭಾಪೀಠದಲ್ಲಿ ಉಪಸ್ಥಿತರಾದರು)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವುದರಿಂದ ನಾನೊಂದು ಸಲಹೆ ಕೊಡಬಯಸುತ್ತೇನೆ. ಯಾರು ದಾನಿಗಳು ಮುಂದೆ ಬರುತ್ತಾರೋ ಆಗ ಸರ್ಕಾರ ಇಂತಿಷ್ಟು ಪರ್ಸೆಂಟ್ ಹಣ ಕೊಟ್ಟು, ಅವರಿಗೆ, ನೀವೂ ಇಂತಿಷ್ಟು ಪರ್ಸೆಂಟ್ ಹಣ ಕೊಡಿ ಎಂದು ಹೇಳಿ, ಸರ್ಕಾರ ಮತ್ತು ಖಾಸಗಿಯವರು ಸೇರಿ PPP (Public-private partnership) model ನಲ್ಲಿ ಇಡೀ ರಾಜ್ಯದಲ್ಲೇ ಒಂದು ಅಭಿಯಾನವನ್ನು ನಡೆಸಬೇಕು ಎನ್ನುವುದು ನನ್ನ ಸಲಹೆಯಾಗಿದೆ. *CSR (Corporate Social Responsibility*) fund ಇರಬಹುದು ಅಥವಾ *private participation* ಇರಬಹುದು ಅಥವಾ ದಾನಿಗಳಿರಬಹುದು ಇವರೆಲ್ಲರನ್ನೂ ಜೊತೆಗೆ ಕೂಡಿಸಿ ದೊಡ್ಡ ಅಭಿಯಾನ ಮಾಡಿ ಕಾಯಕಲ್ಪ ಕೊಡುವ ಕೆಲಸ ಮಾಡಬೇಕು. ಮಾನ್ಯ ಸುರೇಶ್‌ಕುಮಾರ್‌ರವರ ನೇತೃತ್ವದಲ್ಲಿ ಈ ಕೆಲಸ ಮಾಡಿದರೆ ಖಂಡಿತವಾಗಿ ದಾನಿಗಳು ಮುಂದೆ ಬರುತ್ತಾರೆ ಎಂದು ನನಗನಿಸುತ್ತದೆ.

**ಶ್ರೀ ಎಸ್.ಸುರೇಶ್‌ಕುಮಾರ್:-** ಮಾನ್ಯ ಶಾಸಕರಾದ ರವಿಕುಮಾರ್‌ರವರು ಹೇಳಿರುವುದನ್ನು ನಾನು ನೂರಕ್ಕೆ ನೂರು ಒಪ್ಪಿಕೊಳ್ಳುತ್ತೇವೆ ಮತ್ತು ಆ ಕೆಲಸವನ್ನು ಮಾಡುತ್ತೇವೆ. ಇದರ ಜೊತೆಗೆ, ದಾನಿಗಳಿಗೆ ಸಹಾಯ ಆಗಲಿ ಎಂದು ಒಂದು App ಮಾಡುತ್ತಿದ್ದೇವೆ. ಕೆಲವರು ಬೇರೆ ಬೇರೆ ರೀತಿಯಲ್ಲಿ ದಾನ ಮಾಡಬೇಕು ಎಂದು ಬಯಸುತ್ತಾರೆ. ನಾನು ಒಂದು ಕೊಠಡಿ ಮಾತ್ರ ಕಟ್ಟಿಕೊಡುತ್ತೇನೆ ಅಥವಾ ನಾನು ಒಂದು ಶಾಲೆಯ ಕಟ್ಟಡವನ್ನೇ ಕಟ್ಟಿಕೊಡುತ್ತೇನೆ ಅಥವಾ ನಾನು ಕೇವಲ ಶೌಚಾಲಯವನ್ನು ಮಾತ್ರ ಕಟ್ಟಿಕೊಡುತ್ತೇನೆ ಅಥವಾ ನಾನು ಈ ಶಾಲೆಗೆ ಒಂದು ಪ್ರಯೋಗಾಲಯವನ್ನು ಕಟ್ಟಿಕೊಡುತ್ತೇನೆ ಅಥವಾ ಈ ಶಾಲೆಯಲ್ಲಿ ನಾನು ಒಂದು ಲೈಬ್ರರಿ ಕಟ್ಟಿಕೊಡುತ್ತೇನೆ ಎಂದು ಹೀಗೆ ಬೇರೆ ಬೇರೆ ರೀತಿಯಲ್ಲಿ ಸಹಾಯ ಮಾಡುವ ದಾನಿಗಳಿದ್ದಾರೆ. ಇನ್ನೂ ಕೆಲವರು ಸಾಫ್ಟ್‌ವೇರ್ ಇಂಜಿನಿಯರ್‌ಗಳು, ಶುಕ್ರವಾರ ಮತ್ತು ಶನಿವಾರ ನಾವು ಫ್ರೀ ಇರುತ್ತೇವೆ, ನಾವು ಶಾಲೆಗೆ ಹೋಗಿ *Computer Science*ಹೇಳಿಕೊಡುತ್ತೇವೆ, Spoken English ಹೇಳಿಕೊಡುತ್ತೇವೆ ಎಂದು ಮುಂದೆ ಬರುತ್ತಿದ್ದಾರೆ. ಅಂಥವರಿಗೆ ಇಲಾಖೆ ಕಡೆಯಿಂದ ಯಾವುದೇ ಅಡೆತಡೆ ಆಗಬಾರದು, ಅವರು ಅಲ್ಲಿ ನೇರವಾಗಿ ಹೋಗಿ ಈ ರೀತಿ ಕಾರ್ಯ ಮಾಡಲು ಅನುಕೂಲವಾಗಲು ಒಂದು App ತಯಾರು ಮಾಡುತ್ತಿದ್ದೇವೆ. ಬಹುಶಃ ಏಪ್ರಿಲ್ 2ನೇ ಅಥವಾ 3ನೇ ವಾರದ ಒಳಗೆ ಅನಾವರಣ ಮಾಡಿ ಇಂಥವರಿಗೂ ನಾವು ಮುಕ್ತ ಅವಕಾಶ ಮಾಡಿಕೊಡುತ್ತೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಚಿವರೇ, ಎಲ್ಲಾ ಕಡೆ ಜಿಲ್ಲಾ ಉಸ್ತುವಾರಿ ಮಂತ್ರಿಗಳಿರುತ್ತಾರೆ. ಅವರು ಎಲ್ಲಾ ಸ್ಥಳೀಯ ಶಾಸಕರನ್ನು ಕರೆದು, ದಾನಿಗಳನ್ನು ಕರೆದು ಅಲ್ಲಾಗಬೇಕಾಗಿರುವ ಕಾರ್ಯಗಳನ್ನು ನಿರ್ವಹಿಸಲು ಅವರಿಗೆಯೇ ಒಪ್ಪಿಸಿಬಿಡಬೇಕು. ಹೀಗೆ ಮಾಡುವುದರಿಂದ decentralize ಆದ ಹಾಗೆಯೂ ಆಗುತ್ತದೆ, ಕೆಲಸವೂ ಸುಸೂತ್ರವಾಗಿ ನಡೆಯುತ್ತದೆ. ಬೆಂಗಳೂರಿಗೆ ಸಂಬಂಧಪಟ್ಟಂತೆ ನೀವು ಮಾಡಿ. ಬೇರೆ ಬೇರೆ ಜಿಲ್ಲೆಗಳಲ್ಲಿ ಬಹಳಷ್ಟು ಜನ ದಾನ ಮಾಡುವವರು ಇದ್ದಾರೆ.

(ಮುಂದು . . .)

(657)23-03-2020 12.10 ಡಿಎಸ್-ಎಂಡಿ

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಮುಂದು):-**

ಇದರಲ್ಲಿ ಸಾರ್ವಜನಿಕರು ಒಳಗೊಂಡರೆ ಖಂಡಿತವಾಗಿಯೂ ಮಾನ್ಯ ಸಚಿವರು ಹೇಳಿದಂತೆ ಆಗುತ್ತದೆ. ಅದಕ್ಕಾಗಿ ಈ ಕೆಲಸವನ್ನು ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿ ಮತ್ತು ಸಿ.ಇ.ಓ.ಗಳಿಗೆ ಅಧಿಕಾರವನ್ನು ಕೊಟ್ಟುಬಿಟ್ಟರೆ ಇವೆಲ್ಲಾ ಸರಿಯಾಗಿ ಆಗುತ್ತದೆ. ಹಾಗಾಗಿ ತಾವು ಈ ಕೆಲಸವನ್ನು ಮಾಡಬೇಕಾಗುತ್ತದೆ.

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಅಭಿನಂದನೆಗಳು. ದಾನಿಗಳ ಜೊತೆಯಲ್ಲಿ ಒಂದು ಸಭೆಯನ್ನು ಮಾಡಿ. ಅವರೇ ದಾನ ಮಾಡಿ ಒಂದು ಶಾಲೆಯನ್ನು ಕಟ್ಟಿಸಿಕೊಡತಕ್ಕಂಥದ್ದು ಬಹಳ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶಾಲೆಗಳು ಈ ತರಹ ಇರಲಿ ಎಂದು ಸರ್ಕಾರದಿಂದ ತಮ್ಮದೇ ಆದ design ಮಾಡಿದರೆ,this will be the message to the whole country. ಅದು ಯಾವುದೇ ಭಾಗವಾಗಿರಲಿ, ಒಬ್ಬರು ಶೌಚಾಲಯ ಕಟ್ಟಿಸಿ ಕೊಡುತ್ತಾರೆ, ಒಬ್ಬರು ಕೊಠಡಿ ಕಟ್ಟಿಸಿ ಕೊಡುತ್ತಾರೆ, that is different

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

issue. ಇದಕ್ಕೆ ಒಂದು systematic plan ಮಾಡಿದರೆ ಚೆನ್ನಾಗಿರುತ್ತದೆ ಏನೋ ಎಂದು ಅನಿಸುತ್ತಿದೆ.

**ಶ್ರೀ ಎಸ್.ಸುರೇಶ್‌ಕುಮಾರ್:–** ಮಾನ್ಯ ಸಭಾಪತಿಯವರೇ, ಸರ್ಕಾರದಿಂದ requirements ಇದೆ. ಒಂದು ಕೊಠಡಿ ಎಂದರೆ ಏನು ಅಳತೆ ಇರಬೇಕು, ಯಾವ ರೀತಿ ಇರಬೇಕೆಂದು ಒಂದು standard design ಮಾಡುವುದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

**ಚುಕ್ಕೆ ಪ್ರಶ್ನೆ ಸಂಖ್ಯೆ:1700**

(ಮಾನ್ಯ ಐವನ್ ಡಿ'ಸೋಜಾರವರು ಸದನದಲ್ಲಿ ಗೈರು ಹಾಜರಿಯಾಗಿದ್ದರು)

**ವೈಸ್‌ಛೇರ್ಮನ್:–** ಶ್ರೀ ಎಸ್.ವಿ.ಸಂಕನೂರ, ಶ್ರೀ ಅರವಿಂದ ಕುಮಾರ್ ಅರಳಿ, ಶ್ರೀ ಎಸ್.ಎನ್.ಬೋಸ್‌ರಾಜು, ಶ್ರೀ ಅಲ್ಲಂ ವೀರಭದ್ರಪ್ಪ, ಶರಣಪ್ಪ ಮಟ್ಟೂರು, ಡಾ||ಚಂದ್ರಶೇಖರ್ ಬಿ.ಪಾಟೀಲ್, ಇವರ ಪ್ರಶ್ನೆಗಳನ್ನು ಉಪ ಮುಖ್ಯಮಂತ್ರಿಯವರು ಸದನಕ್ಕೆ ಬಂದ ನಂತರ ತೆಗೆದುಕೊಳ್ಳಲಾಗುವುದು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಕೆಳಮನೆಯಲ್ಲಿರುವುದರಿಂದ ಮಾನ್ಯ ಬೋಸ್‌ರಾಜು ರವರ ಪ್ರಶ್ನೆಯನ್ನು ಮಾನ್ಯ ಸಚಿವರು ಸದನಕ್ಕೆ ಬಂದ ನಂತರ ತೆಗೆದುಕೊಳ್ಳಲಾಗುವುದು.

ಚುಕ್ಕೆ ಪ್ರಶ್ನೆ ಸಂಖ್ಯೆ:1694

(ಮಾನ್ಯ ಸದಸ್ಯರಾದ ಎಸ್.ಎಲ್.ಭೋಜೇಗೌಡರು ಸದನದಲ್ಲಿ ಗೈರುಹಾಜರಾಗಿದ್ದರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಪ್ರಶ್ನೆ ಸಂಖ್ಯೆ:549**
**ಉತ್ತರ ಲಗತ್ತಿಸಲಾಗಿದೆ**

**ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಶಿಕ್ಷಣ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ಜೊತೆಗೆ ಯಾವ ಯಾವ ಸ್ಥಳೀಯ ಸಂಸ್ಥೆಗಳು ಮಕ್ಕಳಿಗೆ ಪ್ರಾಥಮಿಕ ಪೂರ್ವ ಹಾಗೂ ಪ್ರಾಥಮಿಕ ಶಿಕ್ಷಣ ನೀಡುತ್ತಿದೆ ಎಂದು ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಸಚಿವರು ಸಂಪೂರ್ಣ ಉತ್ತರ ನೀಡಿದ್ದಾರೆ. ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳುವುದೇನೆಂದರೆ, ಸ್ಥಳೀಯ ಸಂಸ್ಥೆಗಳು ವಿಶೇಷವಾಗಿ ಮಹಾನಗರ ಪಾಲಿಕೆಗಳು, ಪುರಸಭೆಗಳು ಮತ್ತು ನಗರ ಸಭೆಗಳು ನಡೆಸುವಂತಹ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಅಭ್ಯಾಸ ಮಾಡತಕ್ಕಂಥ ಅತ್ಯಂತ ಬಡ ವಿದ್ಯಾರ್ಥಿಗಳಿಗೆ ಖಾಲಿಯಿರತಕ್ಕಂಥ ಶಿಕ್ಷಕರ ಹುದ್ದೆಗಳ ಕೊರತೆಯಿಂದ ಇವತ್ತು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಮಾನ್ಯ ಸಚಿವರು ಕೊಟ್ಟಿರುವಂತಹ ಮಾಹಿತಿ ಪ್ರಕಾರ, ಅಲ್ಲಿರುವಂತಹ ವಿದ್ಯಾರ್ಥಿಗಳ ಸಂಖ್ಯೆಗಳನ್ನು ಗಮನಿಸಿದಾಗ ಸಾವಿರಾರು ವಿದ್ಯಾರ್ಥಿಗಳು ನಗರಸಭೆ ಮತ್ತು ಪುರಸಭೆ ಶಾಲೆಗಳಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಆದರೆ ಶಿಕ್ಷಕರ ಕೊರತೆಯಿಂದ ಅವರಿಗೆ ಸಿಗಬೇಕಾಗಿರುವಂತಹ ಮೂಲಭೂತ ಶಿಕ್ಷಣ ಅವರಿಗೆ ಸಿಗುತ್ತಿಲ್ಲವೆನ್ನುವ ವಿಚಾರವನ್ನು ತಮ್ಮ ಮುಖಾಂತರ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತಿದ್ದೇನೆ. ಈ ಶಾಲೆಗಳಲ್ಲಿರುವ ಶಿಕ್ಷಕರ ಸಂಖ್ಯೆ ಎಷ್ಟು ಎಂದು ಪ್ರಶ್ನೆ ಕೇಳಿದ್ದೇನೆ. ಖಾಯಂ ಮತ್ತು ಹೊರ ಗುತ್ತಿಗೆ ಆಧಾರದ ಮೇಲೆ ಇರತಕ್ಕಂಥ ಶಿಕ್ಷರ ಮಾಹಿತಿಯನ್ನು ಕೊಟ್ಟಿದ್ದಾರೆ. ಸುಮಾರು ಶೇಕಡ 80 ರಷ್ಟು ಹೊರ ಗುತ್ತಿಗೆ ಆಧಾರ ಮೇಲೆ ಇರತಕ್ಕಂಥ ಶಿಕ್ಷಕರು ತಾತ್ಕಾಲಿಕವಾಗಿರುವ ಶಿಕ್ಷಕರಾಗಿರುವುದರಿಂದ ಇದರಿಂದ ಸಾಮಾನ್ಯ ಬಡ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಅವರನ್ನು ಖಾಯಂ ಮಾಡುವ ವಿಚಾರದಲ್ಲಿ ಅಥವಾ ಅವರಿಗೆ ಖಾಯಂ ಶಿಕ್ಷಕರನ್ನು ಕೊಡುವಂತಹ ವಿಚಾರದಲ್ಲಿ ಸರ್ಕಾರದ ನಿಲುವೇನು? ಇದರ ಜೊತೆಗೆ ಮತ್ತೊಂದು ಉಪ ಪ್ರಶ್ನೆ ಏನೆಂದರೆ, ಅಲ್ಲಿರತಕ್ಕಂಥ ಕೊಠಡಿಗಳ ನಿರ್ಮಾಣದಲ್ಲಿ ಪುರಸಭೆಗಳು ನಡೆಸುವಂತಹ ಶಾಲೆಯ ಕೊಠಡಿಗಳಿಗೆ ಪ್ರತ್ಯೇಕವಾಗಿರುವಂತಹ ಅನುದಾನ ಪುರಸಭೆಯಲ್ಲಾಗಲಿ, ನಗರಸಭೆಯಲ್ಲಾಗಲಿ ಮೀಸಲಿಡುತ್ತಿಲ್ಲ. ಅದಕ್ಕೆ ಸರ್ಕಾರ ವಿಶೇಷವಾಗಿರುವಂತಹ ಅನುದಾನವೇನಾದರೂ ಕೊಡುತ್ತದೆಯೇ ಅಥವಾ ಅವರಿಗಿರುವಂತಹ ಅನುದಾನದಲ್ಲಿ ಶಿಕ್ಷಣಕ್ಕೆ ಪ್ರತ್ಯೇಕವಾಗಿ ಅನುದಾನವನ್ನು ತೆಗೆದಿಡುವುದಕ್ಕೆ mandatory ಎಂದು ಆದೇಶ ನೀಡುತ್ತಾರೆಯೇ ಎನ್ನುವ ಪ್ರಶ್ನೆಯನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುತ್ತಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಸುರೇಶ್‌ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಕೇಳಿರುವ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದೇನೆ. ಅದರ ಜೊತೆಗೆ ಎರಡು ಪ್ರಮುಖವಾದ ಉಪ ಪ್ರಶ್ನೆಗಳನ್ನು ಕೇಳಿದ್ದಾರೆ. ಅಲ್ಲಿ ಖಾಲಿಯಿರುವ ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ ಅವರಿಗೆ ಅನುಮತಿ ಕೊಡಬೇಕು, ಅವಕಾಶ ಕೊಡಬೇಕು. ಕೇವಲ ತಾತ್ಕಾಲಿಕ ಶಿಕ್ಷಕರುಗಳಿಂದ ಪಾಠ ಮಾಡಿಸಿದರೆ ಅದು ಪರಿಣಾಮಕಾರಿಯಾಗುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಜೊತೆಗೆ ಕಟ್ಟಡ ನಿರ್ಮಾಣಕ್ಕೆ ಆಯಾಯ ಪುರಸಭೆಗಳಲ್ಲೇ ಒಂದಷ್ಟು ಹಣವನ್ನು ನಿಗದಿ ಮಾಡುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತಾರೆಯೋ ಅಥವಾ ಸರ್ಕಾರದಿಂದ ಕೊಡುತ್ತಾರೆಯೋ ಎಂದು ಕೇಳಿದ್ದಾರೆ. ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುವುದೇನೆಂದರೆ, ಈ ಅಧಿವೇಶನದ ಮುಗಿದ ಕೂಡಲೇ ಈ ಎಲ್ಲಾ ಸ್ಥಳೀಯ ಸಂಸ್ಥೆಗಳ ಆಯುಕ್ತರನ್ನು ಅಥವಾ ಮುಖ್ಯಾಧಿಕಾರಿಗಳನ್ನು, ಜೊತೆಗೆ ಅಲ್ಲಿ ಯಾರು ಶಿಕ್ಷಣವನ್ನು ನೋಡಿಕೊಳ್ಳುತ್ತಿದ್ದಾರೆ ಆ ಶಿಕ್ಷಣಾಧಿಕಾರಿಗಳನ್ನು ಕರೆದು ಸಭೆ ಮಾಡಿ, ಆ ಎಲ್ಲಾ ಸ್ಥಳೀಯ ಸಂಸ್ಥೆಗಳು ನಡೆಸುತ್ತಿರುವ ಶಾಲೆಗಳಲ್ಲಿ ಏನೇನು ಕೊರತೆ ಇದೆ ಅದನ್ನು ನೀಗಿಸುವುದಕ್ಕೆ ಸರ್ಕಾರ ಏನೇನು ಕ್ರಮ ತೆಗೆದುಕೊಳ್ಳಬೇಕೆಂದು ಪೂರ್ತಿ ಮಾಹಿತಿಯನ್ನು ತೆಗೆದುಕೊಂಡು ಆ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

**ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಗಡಿ ಭಾಗವಾಗಿರುವಂತಹ ಬೆಳಗಾವಿ ಜಿಲ್ಲೆಯ ನಿಪ್ಪಾಣಿಯಲ್ಲಿ ನಗರಸಭೆಯಿಂದ ನಡೆಸತಕ್ಕಂಥ ಒಂದು ಶಾಲೆ ಇದೆ. ಆ ಶಾಲೆ ಅತ್ಯಂತ ಹಳೆಯದಾಗಿರುವಂತಹ ಶಾಲೆ. ನನಗೆ ತಿಳಿದ ಮಟ್ಟಿಗೆ 50 ವರ್ಷಗಳಿಗಿಂತ ಹೆಚ್ಚಿಗೆ ಆಗಿರುವಂತಹ ಶಾಲೆ. ಆ ಶಾಲೆ ಅತೀ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿರುವಂತಹ ಶಾಲೆ. ಆದರೆ ಕಟ್ಟಡಗಳ ಕೊರತೆಯಿಂದ ಇವತ್ತು ವಿದ್ಯಾರ್ಥಿಗಳು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಹಳೆಯ ಕಟ್ಟಡ ಶಿಥಿಲಗೊಂಡಿರುವಂತಹ ಕಟ್ಟಡ. ಗಡಿ ಜಿಲ್ಲೆಯಾಗಿರುವಂತಹ ಬೆಳಗಾವಿ ಜಿಲ್ಲೆಗೆ flood affect ಆದಾಗ ಅತೀ ಹೆಚ್ಚು ಅನುದಾನವನ್ನು ಗ್ರಾಮೀಣ ಪ್ರದೇಶಗಳಲ್ಲಿರುವಂತಹ ಶಾಲೆಗಳಿಗೆ ಕೊಟ್ಟಿದ್ದಾರೆ. ಬೈಲಹೊಂಗಲ ಮತ್ತು ಬೆಳಗಾವಿ ಜಿಲ್ಲೆ ನಿಪ್ಪಾಣಿಯಲ್ಲಿ ನಗರಸಭೆಗಳು ಮತ್ತು ಪುರಸಭೆಗಳು ನಡೆಸುತ್ತಿರುವಂತಹ ಎರಡು ಶಾಲೆಗಳಿಗೆ ಮಾನ್ಯ ಸಚಿವರೇನಾದರೂ ವಿಶೇಷ ಅನುದಾನವನ್ನು ಕೊಡುತ್ತಾರೆಯೇ? ಏಕೆಂದರೆ ನಿಪ್ಪಾಣಿಯಲ್ಲಿರುವ ಶಾಲಾ ಕಟ್ಟಡ ಸಂಪೂರ್ಣವಾಗಿ ಶಿಥಿಲಗೊಂಡಿದೆ. ಮಾನ್ಯ ಸಚಿವರು ಅಲ್ಲಿಗೆ ಬಂದಾಗ ಆ ಶಾಲೆಗೆ ಭೇಟಿಯನ್ನು ಕೊಡಿ. ಅಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಬಹಳಷ್ಟು ಇದೆ. ವಿಶೇಷವಾದ ಅನುದಾನವನ್ನು ಆ ಶಾಲೆಗಳಿಗೆ

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಡಬೇಕೆನ್ನುವುದು ನಮ್ಮ ಬೇಡಿಕೆಯಾಗಿದೆ. ಮಾನ್ಯ ಸಚಿವರು ಸಭೆ ಕರೆಯುತ್ತೇನೆ ಎಂದು ಹೇಳಿದ್ದಾರೆ, ಅದಕ್ಕಾಗಿ ಮಾನ್ಯ ಸಚಿವರಿಗೆ ಧನ್ಯವಾದಗಳು. ಇವೆರಡು ಶಾಲೆಗಳ ಬಗ್ಗೆ ಮಾನ್ಯ ಸಚಿವರು ಗಮನಹರಿಸಬೇಕು.

**ಶ್ರೀ ಎಸ್.ಸುರೇಶ್‌ಕುಮಾರ್:-** ಮಾನ್ಯ ಸಭಾಪತಿಯವರೇ, ಆ ಎರಡು ಶಾಲೆಗಳಿಗೆ ನಾನೇ ಖುದ್ದಾಗಿ ಬೇಟಿ ಕೊಡುತ್ತೇನೆ. ಭೇಟಿ ಕೊಟ್ಟು ಆ ಕಟ್ಟಡ ನಿರ್ಮಾಣಕ್ಕೆ ನಮ್ಮ ಆರ್ಥಿಕ ಇತಿಮಿತಿಯಲ್ಲಿ ಕೂಡಲೇ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-**ಆ ಕಟ್ಟಡವನ್ನು ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ ರವರೇ ಕಟ್ಟಿಸಿಕೊಡುತ್ತಾರೆ.

**ಶ್ರೀ ಎಸ್.ಸುರೇಶ್‌ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನರವರ ಸಲಹೆಯನ್ನು ನಾನು ಒಪ್ಪಿಕೊಂಡಿದ್ದೇನೆ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ಸಲಹೆಯನ್ನು ಮಾನ್ಯ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನರವರು ಒಪ್ಪಿಕೊಳ್ಳಲಿ.

**ವೈಸ್‌ಛೇರ್ಮನ್:-** ಮಾನ್ಯ ಸಚಿವರು ತುಂಬಾ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿ ಎರಡು ವಿಷಯಗಳಿವೆ. ಹಳೆಯ ಶಾಲೆಗಳು ತುಂಬಾ ಶಿಥಿಲಗೊಂಡಿರುವಂಥದ್ದು. ಮಾನ್ಯ ಶ್ರೀಕಂಠೇಗೌಡರು ಸೇರಿದಂತೆ ಅನೇಕ ಸಂದರ್ಭಗಳಲ್ಲಿ ಬಹಳಷ್ಟು ಸದಸ್ಯರು ತುಂಬಾ ಕಾಳಜಿಯನ್ನು ಇದರ ಬಗ್ಗೆ ವ್ಯಕ್ತಪಡಿಸಿದ್ದಾರೆ. ಸರ್ಕಾರಿ ಶಾಲೆಗಳಿಗೆ ಉತ್ತಮ ಕಟ್ಟಡ ನಿರ್ಮಾಣದ ಅಗತ್ಯತೆ ಕುರಿತು. ಮತ್ತೊಂದು ಪ್ರಸ್ತುತ ಕಟ್ಟುವಂತಹ ಹೊಸ ಶಾಲೆಗಳ ಕಾಮಗಾರಿ ಗುಣಮಟ್ಟವನ್ನು ನಾವು ಗಮನಿಸಬೇಕಾಗಿರುವಂತಹ ಸಂದರ್ಭ ಇದಾಗಿದೆ ಎಂದು ಭಾವಿಸಿಕೊಂಡು ಮಾನ್ಯ ಸುರೇಶ್‌ಕುಮಾರ್‌ರವರು ಇದರ ಬಗ್ಗೆ ಗಮನ ಕೊಟ್ಟರೆ ಖಂಡಿತ ಸಮಾಜ ಕೂಡ ಇದಕ್ಕೆ ಕೈಜೋಡಿಸುತ್ತದೆ. ಇದರಲ್ಲಿ ನಿಮ್ಮ ಕಾಳಜಿಯನ್ನು ಮೆಚ್ಚುತ್ತೇನೆ. ತ್ವರಿತವಾಗಿ ಆಗಬೇಕು, ಎಲ್ಲರೂ ಕೈಜೋಡಿಸಬೇಕೆಂದು ನಾನು ವಿನಂತಿಸುತ್ತೇನೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(658) 23.03.2020 12.20 ಎಸ್‌ವಿ-ಎಕೆ**

**(ವೈಸ್‌ಛೇರ್ಮನ್‌ರವರ ಉಪಸ್ಥಿತಿ)**

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 23ನೇ ಮಾರ್ಚ್ 2020, ಸಮೂಹ 1ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 94 ಪ್ರಶ್ನೆಗಳ ಪೈಕಿ 29 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ವಿಷಯ:- ಕೊರೊನಾ ವೈರಸ್‌ನಿಂದಾಗಿ ಲಾಕ್‌ಡೌನ್ ಆದಂತಹ ಜಿಲ್ಲೆಗಳ ಸಾಮಾನ್ಯ ವರ್ಗದ ಜನರ ಹೊಣೆಗಾರಿಕೆಗಳಾದ ಬ್ಯಾಂಕ್ ಸಾಲದ ಕಂತು, ಆಸ್ತಿ ತೆರಿಗೆ, ಮಕ್ಕಳ ಶಾಲಾ ಶುಲ್ಕ, ನೀರಿನ ಶುಲ್ಕವನ್ನು ಪಾವತಿಸಲು ಕನಿಷ್ಠ 6 ತಿಂಗಳ ಕಾಲ ವಿನಾಯ್ತಿ ನೀಡುವ ಬಗ್ಗೆ**

***

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ದಿನಾಂಕ 22.03.2020ರಿಂದ ಕರ್ನಾಟಕ ಸರ್ಕಾರದಿಂದ ಕೊರೊನಾ ವೈರಸ್ (ಕೋವಿಡ್-19) ಹರಡದಂತೆ ಸಾಂಕ್ರಾಮಿಕ ರೋಗ ಕಾಯಿದೆಯಡಿಯಲ್ಲಿ ರಾಜ್ಯದ 9 ಜಿಲ್ಲೆಗಳ (ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಮಂಗಳೂರು, ಮೈಸೂರು, ಕಲಬುರಗಿ, ಧಾರವಾಡ, ಚಿಕ್ಕಬಳ್ಳಾಪುರ, ಕೊಡಗು ಮತ್ತು ಬೆಳಗಾವಿ ಜಿಲ್ಲೆಗಳು) ಲಾಕ್‌ಡೌನ್ ಮಾಡಿರುತ್ತದೆ. ಈ ಜಿಲ್ಲೆಗಳಲ್ಲಿ ಕೆಲವು ಅಗತ್ಯ ಸೇವೆಗಳನ್ನು ಹೊರತು ಪಡಿಸಿ, ಎಲ್ಲಾ ರೀತಿಯ ವಾಣಿಜ್ಯ ವ್ಯವಹಾರಗಳು, ರೈಲು, ಮೆಟ್ರೊ ನಿಲ್ಲಿಸಲು ಆದೇಶಿಸಿರುತ್ತದೆ. ಈಗಾಗಲೇ ಕಳೆದ ಒಂದು ತಿಂಗಳಿನಿಂದ ರಾಜ್ಯದ ಜನರ ಪ್ರಸ್ತುತ ಪರಿಸ್ಥಿತಿಯು ತುಂಬಾ ಕ್ಲಿಷ್ಟಕರವಾಗಿದ್ದು, ಆರ್ಥಿಕ ಸಂಕಷ್ಟವನ್ನು ಅನುಭವಿಸುತ್ತಿರುತ್ತಾರೆ. ಸಣ್ಣಪುಟ್ಟ ವ್ಯಾಪಾರಸ್ಥರು, ದಿನಗೂಲಿ, ಕೆಳವರ್ಗದ ನೌಕರರು ಹಾಗೂ ಮಧ್ಯಮ ವರ್ಗದ ಜನರು ಬಹಳ ಕಷ್ಟ ಪಡುತ್ತಿದ್ದಾರೆ.

ಮುಂದುವರೆದು, ರಾಜ್ಯದ ಕಾರ್ಮಿಕ ವಲಯದಲ್ಲಿ ಸುಮಾರು ಶೇ.95 ಭಾಗ ಅಸಂಘಟಿತ ಹಾಗೂ ಅನೌಪಚಾರಿಕ ಕಾಮಿಕರು/ಶ್ರಮಜೀವಿಗಳು ದುಡಿಯುತ್ತಿದ್ದು, ಇವರ ಜೀವನ ಅಸ್ತವ್ಯಸ್ತವಾಗಿದೆ. ಈ ಲಾಕ್‌ಡೌನ್ ಪ್ರಕ್ರಿಯೆಯಿಂದ ಈ ವರ್ಗದ ಜನರ ದೈನಂದಿನ ಬದುಕಿನ ಮೇಲೆ ಅಡ್ಡ ಪರಿಣಾಮ ಬೀರಲಿದ್ದು, ಇದರ ಜೊತೆಯಲ್ಲಿ ಆಶ್ರಯ ನಿರಾಶ್ರಿತರು, ಭಿಕ್ಷುಕರ ಜೀವನವು ಕಷ್ಟಸಾಧ್ಯವಾಗಿರುತ್ತದೆ.

ಈ ಸಂದರ್ಭದಲ್ಲಿ ರಾಜ್ಯ ಸರ್ಕಾರದಿಂದ ಈ ಎಲ್ಲಾ ಬಡವರ್ಗದ ಜನರ ಸಹಾಯಕ್ಕೆ ಯಾವ ರೀತಿಯಲ್ಲಿ ನೆರವಾಗಲಿದೆ ಎಂಬುದನ್ನು ಸ್ಪಷ್ಟ ಪಡಿಸಬೇಕು. ಅಂತೆಯೇ ಸದರಿ ಲಾಕ್‌ಡೌನ್ ಆದಂತಹ ಜಿಲ್ಲೆಗಳಲ್ಲಿ ಸಾಮಾನ್ಯ ವರ್ಗದ ಜನರ ಹೊಣೆಗಾರಿಕೆಗಳಾದ ಬ್ಯಾಂಕ್ ಸಾಲದ ಕಂತು, ಆಸ್ತಿ ತೆರಿಗೆ, ಮಕ್ಕಳ ಶಾಲಾ ಶುಲ್ಕ, ನೀರಿನ ಶುಲ್ಕ ಹಾಗೂ ವಿದ್ಯುಚ್ಛಕ್ತಿ ಶುಲ್ಕವನ್ನು ಪಾವತಿಸಲು ಕನಿಷ್ಠ ಆರು ತಿಂಗಳ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಲ ವಿನಾಯಿತಿ ನೀಡುವ ಬಗ್ಗೆ ಸರ್ಕಾರ ಸೂಕ್ತ ಕ್ರಮ ಜರುಗಿಸುವ ಕುರಿತು ಸರ್ಕಾರದ ಹಾಗೂ ಸದನದ ಗಮನಕ್ಕೆ ತರಲು ಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪಿ.ಆರ್.ರಮೇಶ್ ಅವರು ಕೊರೊನಾ ವೈರಸ್‌ನಿಂದಾಗಿ ಜನಜೀವನದ ಮೇಲೆ ಉಂಟಾಗಿರುವ ದುಷ್ಪರಿಣಾಮದ ಬಗ್ಗೆ ಶೂನ್ಯವೇಳೆಯಲ್ಲಿ ಉಲ್ಲೇಖ ಮಾಡಿದ್ದಾರೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರ ಮೂಲಕ ಸದನದಲ್ಲಿ ಉತ್ತರವನ್ನು ಮಂಡಿಸಲಾಗುವುದು.

**ಆ) ವಿಷಯ:– ದಿನಾಂಕ 21.03.2020ರ ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ವರದಿಯಾಗಿರುವಂತೆ ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕು ಸುರಗಜಕ್ಕನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಬರುವ ಗೌರೇನಹಳ್ಳಿಯಲ್ಲಿ ನಲ್ಲಿ ನೀರಿನಲ್ಲಿ ಇಲಿ ಚರ್ಮ, ಜಿರಳೆಗಳಿಂದ ಕೂಡಿದ ನೀರು ಸರಬರಾಜು ಬಗ್ಗೆ**

***

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕು ಸುರಗಜಕ್ಕನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಗೌರೇನಹಳ್ಳಿಯಲ್ಲಿ ಕುಡಿಯಲು ನೀರು ಸರಬರಾಜು ಮಾಡುತ್ತಿದ್ದ ನಲ್ಲಿ ನೀರಿನಲ್ಲಿ ಇಲಿ ಚರ್ಮ, ಜಿರಳೆ ಹಾಗೂ ಕಂಬಳಿ ಹುಳುಗಳು ಬಂದಿದ್ದು, ಗಬ್ಬು ವಾಸನೆ ಬೀರುತ್ತಿದೆ. ಓವರ್‌ಹೆಡ್ ಟ್ಯಾಂಕ್ ಮೂಲಕ ಗ್ರಾಮದ ಮನೆಗಳಿಗೆ ನೀರು ಸರಬರಾಜು ಮಾಡಲಾಗುತ್ತಿದೆ. ಕಳೆದ ಒಂದು ವಾರದಿಂದ ಕುಡಿಯುವ ನೀರಿನಲ್ಲಿ ಜಿರಳೆಗಳು ಕಾಣಿಸಿಕೊಂಡಿದ್ದು, ಗ್ರಾಮಸ್ಥರು ಪಂಚಾಯಿತಿಗೆ ಹಾಗೂ ನೀರು ಸರಬರಾಜು ಮಾಡುವ ಸಿಬ್ಬಂದಿಗೆ ದೂರು ನೀಡಿದ್ದರೂ ಇದುವರೆಗೂ ಯಾರೂ ಸ್ಪಂದಿಸಿಲ್ಲ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನವನ್ನು ಶೂನ್ಯವೇಳೆಯಲ್ಲಿ ಸೆಳೆಯಬಯಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು.)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, ವಿಜಯಕರ್ನಾಟಕ ದಿನಪತ್ರಿಕೆಯಲ್ಲಿ ಬಂದಂತಹ ಅಂಶವನ್ನು ಹಿರಿಯ ಸದಸ್ಯರಾದ ಮಾನ್ಯ ರೇವಣ್ಣನವರು ಪ್ರಸ್ತಾಪ ಮಾಡುತ್ತಿದ್ದಾರೆ. ನಿಜಕ್ಕೂ ಇದು ಬಹಳ ನೋವು ತರುವ ಹಾಗೂ ಆಶ್ಚರ್ಯಕರವಾದ ಸಂಗತಿಯಾಗಿದೆ. ಕುಡಿಯುವ ನೀರಿನ ನಲ್ಲಿಯಲ್ಲಿ ಈ ರೀತಿ ಇಲಿ ಚರ್ಮ, ಜಿರಳೆ, ಕಂಬಳಿ ಹುಳ ಎಲ್ಲವೂ ಬರುತ್ತಿದೆಯೆಂದರೆ ಇದು ಅತ್ಯಂತ ಖೇದಕರ ಸಂಗತಿ. ಈ ರೀತಿಯಾಗದ ಹಾಗೆ ನೋಡಿಕೊಳ್ಳಬೇಕಾಗಿರುವುದು ನಮ್ಮ ಕರ್ತವ್ಯ ಎಂದು ನಾನು ಸಂಬಂಧಪಟ್ಟ ಮಂತ್ರಿಯಾಗಿ ಹೇಳುತ್ತೇನೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳನ್ನು ಅಲ್ಲಿಗೇ ಕಳುಹಿಸಿ, ಅಲ್ಲಿರುವ ಸಮಸ್ಯೆಗಳ ವರದಿಯನ್ನು ತೆಗೆದುಕೊಂಡು ಮತ್ತೆಲ್ಲೂ  ಈ ರೀತಿಯಾಗದಂತೆ  ಆ ಗ್ರಾಮಕ್ಕೆ ಹೋಗಿ ಅಲ್ಲಿರುವ ಸಮಸ್ಯೆಗಳೇನು, ಏಕೆ ಈ ರೀತಿಯಾಯಿತು ಎಂಬುದನ್ನು ತಿಳಿದುಕೊಳ್ಳಲಾಗುವುದು. ವಿಜಯಕರ್ನಾಟಕ ದಿನಪತ್ರಿಕೆಯಲ್ಲಿ ಇಂತಹ ಅಂಶದ ಬಗ್ಗೆ ಬೆಳಕು ಚೆಲ್ಲಿರುವುದಕ್ಕಾಗಿ ವಿಜಯ ಕರ್ನಾಟಕ ಪತ್ರಿಕೆಗೆ ಹಾಗೂ ಅದನ್ನು ಇಲ್ಲಿ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ.

ಸರ್ಕಾರ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಅಲ್ಲಿಗೆ ಹೋಗಿ ಪರಿಶೀಲನೆ ಮಾಡುವಂತೆ ಹೇಳುತ್ತೇನೆ. ಇಂತಹ ಪ್ರಕರಣಗಳನ್ನು ಯಾವುದೇ ಕಾರಣಕ್ಕೂ ನಮ್ಮ ಸರ್ಕಾರ ಸಹಿಸುವುದಿಲ್ಲ. ಗ್ರಾಮಸ್ಥರು ಪಂಚಾಯಿತಿಗೆ ಹಾಗೂ ನೀರು ಸರಬರಾಜು ಮಾಡುವ ಸಿಬ್ಬಂದಿಗೆ ದೂರು ನೀಡಿದ್ದರೂ ಇದುವರೆಗೂ ಯಾರೂ ಸ್ಪಂದಿಸಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ಬಹಳ ಗಂಭೀರವಾದ ಆರೋಪವನ್ನು ಮಾನ್ಯ ಸದಸ್ಯರು ಮಾಡುತ್ತಿದ್ದಾರೆ.  ನಾನು ಯಾವುದೇ ಕಾರಣಕ್ಕೂ ಇದನ್ನು defend ಮಾಡಿಕೊಳ್ಳುವುದಿಲ್ಲ. ಸಂಬಂಧಪಟ್ಟವರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳಲಾಗುವುದು. ಹಾಗೂ ಮುಂದೆ ಈ ರೀತಿಯಾಗದಂತೆ ಗಮನಹರಿಸಲಾಗುವುದು.

**ಶ್ರೀ ಹೆಚ್.ಎಂ.ರೇವಣ್ಣ:–** ಧನ್ಯವಾದಗಳು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

5. **ಶಾಸನ ರಚನೆ**

## ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

## ಅ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2020

### ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಜೆ.ಸಿ.ಮಾಧುಸ್ವಾಮಿ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು) (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2020 ಅನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**(ಪ್ರಸ್ತಾವವನ್ನು ಮಂಡಿಸಲಾಯಿತು.)**

**ಶ್ರೀ ಜೆ.ಸಿ.ಮಾಧುಸ್ವಾಮಿ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು) (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಪಾರದರ್ಶಕತೆ ಅಧಿನಿಯಮದಲ್ಲಿ ನಾವು ಆರಂಭ ಮಾಡಿದ್ದಾಗ ಕೆಲವು provision ಗಳನ್ನು ಮಾಡಿಕೊಳ್ಳಲಾಗಿದೆ. ಅದರಲ್ಲಿ ನಿರ್ಮಾಣ ಕಾಮಗಾರಿಗಳು, ಸಮಾಲೋಚನಾ ಸೇವೆಗಳು ಎಂಬ ಪದಗಳನ್ನೊಳಗೊಂಡಂತೆ ಸರಕು ಮತ್ತು ಸೇವೆಗಳು ಎಂದು ಹೇಳಿ ಪ್ರತಿಯೋಜಿಸುವಂತೆ ಕೇಳಲಾಗಿದೆ. ಇದರ ಉದ್ದೇಶ ರೂ.1 ಲಕ್ಷದಿಂದ ರೂ.5 ಲಕ್ಷದವರೆಗೆ exemption ಕೊಡಬೇಕು. Construction ಆಗುವ ಕಡೆ ಕಾಮಗಾರಿಗಳು ವಿಳಂಬವಾಗದಂತೆ ಆಗಬೇಕು ಎಂದು ಹೇಳಿ ತೀರ್ಮಾನವಾಗಿತ್ತು. ಅದರ ಅವಧಿಯೂ ಮುಗಿದಿತ್ತು. ಈಗ ಅದನ್ನು extend ಮಾಡಲಾಗುತ್ತಿದೆ. ಅದರ ಜೊತೆಗೆ ಈ sector ಅನ್ನು ಸೇರಿಸಿಕೊಳ್ಳಬೇಕೆಂದು ಈ ವಿಧೇಯಕವನ್ನು ತಂದಿದ್ದು, ಈ ಸದನವು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2020 ಅನ್ನು ನಾನು ಸ್ವಾಗತಿಸುತ್ತೇನೆ. ನಾಲ್ಕನೆಯ ಪ್ರಕರಣದ ತಿದ್ದುಪಡಿಯಲ್ಲಿ ಮಾನ್ಯ ಸಚಿವರು ವಿವರಿಸಿದಂತೆ ರೂ.1 ಲಕ್ಷ ಇದ್ದುದನ್ನು ರೂ.5

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲಕ್ಷಗಳ ಮಿತಿಯನ್ನು ತಂದಿರುವುದೂ ಕೂಡ ನಿಜವಾಗಿಯೂ ಸ್ವಾಗತಾರ್ಹ. ನಮ್ಮ MLC and MLA Local Area Development Fund, MPLAD ಗಳಲ್ಲಿ ರೂ.1 ಲಕ್ಷ, ರೂ.2 ಲಕ್ಷಗಳನ್ನು ಕೊಟ್ಟಿರತಕ್ಕ ಕೆಲಸಗಳಿಗೂ ಸಹ ಬಹಳ ನಿರ್ಲಕ್ಷ್ಯವಾಗುತ್ತಿತ್ತು. ಈಗ ರೂ.5 ಲಕ್ಷ ಮಿತಿಯವರೆಗೆ ಏರಿಸಲಾಗಿದೆ. ಇದು ಬಹಳ ಸಂತೋಷಕರವಾಗಿದ್ದು, ಇದನ್ನು ನಾನು ಸ್ವಾಗತಿಸುತ್ತೇನೆ. ಧನ್ಯವಾದಗಳು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, 4(ಜಿ) exemption ನಲ್ಲಿ goods and services ಅನ್ನು ಸೇರಿಸಿ ಒಂದು ಮಾಡಲಾಗಿದೆ. Act ಗಿಂತ rules ಗಳೇ ಸಾಕಷ್ಟು ಇರುವುದರಿಂದ Compendium ಅನ್ನು ದಯಮಾಡಿ ಹೊರತರಬೇಕು. Empanelment ಏನಾಗುತ್ತದೆ? KEONICS ಮತ್ತು KREDL ನಲ್ಲಿ ಕೆಲಸವಾಗುತ್ತಿಲ್ಲವಾದ್ದರಿಂದ ಗುಣಮಟ್ಟದ ಕಡೆಗೆ ಗಮನ ಹರಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

**(...ಮುಂದು)**

(659) 23.03.2020 12.30 ಕೆಜಿ–ಎಕೆ

**(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, "ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ನೇ ಸಾಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ(ತಿದ್ದುಪಡಿ)ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು**

<u>**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**</u>

<u>**ಖಂಡ 2**</u>

**ಸಭಾಪತಿಯವರು:–** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ".

<u>**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**</u>

(ಖಂಡ 2ನ್ನು ವಿಧೇಯಕಕ್ಕೆ ಸೇರಿಸಲಾಯಿತು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು) (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ):–** ಮಾನ್ಯ ಸಭಾಪತಿಗಳೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಸಾಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಸಾರ್ವಜನಿಕಸಂಗ್ರಹಣೆಗಳಲ್ಲಿ ಪಾರದರ್ಶಕತೆ(ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಆ) ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 2020**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೇ, "ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭಾರತರಾಷ್ಟ್ರೀಯ ಕಾನೂನು ವಿದ್ಯಾಲಯ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಗಳೇ, ಕರ್ನಾಟಕದಲ್ಲಿ ಬೆಂಗಳೂರಿನಲ್ಲಿ National Law School ಇದೆ. ನಾವು National Law School ಗೆ infrastructure ಕೊಟ್ಟಿದ್ದೇವೆ ಮತ್ತು ಪ್ರತಿ ವರ್ಷ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಸರ್ಕಾರದಿಂದ ಕೊಡುತ್ತಾ ಬಂದಿದ್ದೇವೆ. ಇದು 1986-87 ರಲ್ಲಿ ಪ್ರಾರಂಭವಾಗಿದ್ದರಿಂದ ಅವತ್ತಿನ schedule ಗಳಲ್ಲಿ ತಿದ್ದುಪಡಿ ಮಾಡುವಂತಹ ಅವಕಾಶ schedule ಗಳನ್ನು ಅವರೇ ಮಾಡಿಕೊಳ್ಳುವಂತಹ ಅವಕಾಶವನ್ನು ಅವರಿಗೆ ಬಿಟ್ಟಿದ್ದರಿಂದ ಅದೊಂದು independent body ಎಂದಿನಂತೆ ಕೆಲಸ ಮಾಡುತ್ತಿದೆ. ಹಿಂದಿನ ಸರ್ಕಾರ ಅಲ್ಲಿ ಶೇಕಡಾ 50 ರಷ್ಟು ಸೀಟುಗಳನ್ನು ನಮ್ಮ ರಾಜ್ಯದ ಮಕ್ಕಳಿಗೆ ಮೀಸಲಾತಿ ಇಡಬೇಕೆಂದು ಒಂದು ಶಾಸನವನ್ನು ಎರಡೂ ಸಭೆಗಳಲ್ಲಿ ಪಾಸ್ ಮಾಡಿ ಅದನ್ನು ಮಾನ್ಯ ರಾಜ್ಯಪಾಲರ ಅಂಗೀಕಾರಕ್ಕೆ ಕಳುಹಿಸಿದ್ದರು. Regional Reservation ಗೆ scope ಇಲ್ಲವೆಂದು ಅವತ್ತಿನ A.G. (Advocate General) ಯವರು ಕೊಟ್ಟ ಅಭಿಪ್ರಾಯದ ಮೇರೆಗೆ ಈ reservation ಅನ್ನು ತರುವುದಕ್ಕೆ ಆಗುವುದಿಲ್ಲವೆಂದು ಅದನ್ನು ತಡೆಹಿಡಿಯಲಾಯಿತು ಮತು ತಿರಸ್ಕೃತಗೊಂಡಿತು. ಈಗ ನಾನು ಮತ್ತೊಮ್ಮೆ ಅದನ್ನು ತಿದ್ದುಪಡಿ ಮಾಡಿ 'Regional Reservation' ಎನ್ನುವ ಪದಕ್ಕೆ ಬದಲಾಗಿ 'Institutional Reservation' ಎಂದು substitute ಮಾಡಿ ಕರ್ನಾಟಕದಲ್ಲಿ ಯಾರು 10 ವರ್ಷಗಳ ಕಾಲ ವ್ಯಾಸಂಗ ಮಾಡಿರುತ್ತಾರೆ, ಅಂಥವರಿಗೆ ಕನಿಷ್ಠ 25% ರಷ್ಟು ಸೀಟುಗಳನ್ನು ಮೀಸಲಿಡಬೇಕೆಂದು ಈ ಶಾಸನವನ್ನು ತಂದಿದ್ದೇನೆ.

ಮಾನ್ಯ ಸಭಾಪತಿಯವರೇ, ಈ reservation, vertical reservation ನಿಂದ ಆಚೆ ಇರುತ್ತದೆ. ಇದನ್ನು ನಾನು clarify ಮಾಡುತ್ತೇನೆ. Vertical reservation means SC/ST ಗೆ ಕೊಡಬೇಕಾಗಿರುವಂತಹ reservation. ಅದನ್ನು ಸಹ ಅವರು ಈ ರಾಜ್ಯದಲ್ಲಿ ಕೊಟ್ಟಿಲ್ಲ. ನಾವು 24.210% ಅಥವಾ 24.3% Scheduled Caste population ಅನ್ವಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲ್ಲಾ ಕಡೆಗೂ reservation ಕೊಡುತ್ತಿದ್ದೇವೆ. ಈ Law School ನಲ್ಲಿ ಕೊಟ್ಟಿರುವುದಿಲ್ಲ. ಬೇರೆ ರಾಜ್ಯದ ಮಕ್ಕಳು ಆ reservation claim ಮಾಡಿದ್ದಾರೆ. ಇದಕ್ಕೆ ಪೂರಕವಾಗಿ ಒಂದು ಸಣ್ಣ ಮಾಹಿತಿಯನ್ನು ಕೊಡುತ್ತೇನೆ. ಇದರಂತೆ, ಇದಾದ ನಂತರ ಪ್ರಾರಂಭವಾದ Law School ಗಳಲ್ಲಿ ತೆಲಂಗಾಣದಲ್ಲಿ 20% reservation ಇದೆ, ಮಧ್ಯಪ್ರದೇಶದಲ್ಲಿ 25% reservation ಇದೆ, West Bengal ನಲ್ಲಿ 7.5% reservation ಇದೆ. ರಾಜಸ್ಥಾನದಲ್ಲಿ 40% reservation ಇದೆ, ಛತ್ತೀಸ್‌ಘಢದಲ್ಲಿ 40% reservation ಇದೆ, ಗುಜರಾತ್‌ನಲ್ಲಿ 25% reservation ಇದೆ, ಪಂಜಾಬ್‌ನಲ್ಲಿ 10% reservation ಇದೆ, ಉತ್ತರ ಪ್ರದೇಶದಲ್ಲಿ 30% reservation ಇದೆ, ಬಿಹಾರ್‌ನಲ್ಲಿ 42% reservation ಇದೆ, ಕೇರಳದಲ್ಲಿ 35% reservation ಇದೆ, ಜಾರ್ಖಾಂಡ್‌ನಲ್ಲಿ 50% reservation ಇದೆ, ತಮಿಳುನಾಡಿನಲ್ಲಿ 30% reservation ಇದೆ, ಆಂಧ್ರಪ್ರದೇಶದಲ್ಲಿ 25% reservation ಇದೆ. ಅಸ್ಸಾಂನಲ್ಲಿ 25% reservation ಇದೆ. ಇಡೀ ರಾಷ್ಟ್ರದಲ್ಲಿರುವಂತಹ ಎಲ್ಲಾ Law School ಗಳಲ್ಲಿ ಆಯಾಯಾ ರಾಜ್ಯದಲ್ಲಿರುವಂತಹ reservation ಅನ್ನು ಇಟ್ಟುಕೊಂಡಿವೆ. ಆದರೆ, ನಾವೇ ಇದರಲ್ಲಿ pioneers. ಮೊದಲೇ ಕಾಲೇಜು ಮಾಡಿದ್ದರಿಂದ, ಅವತ್ತು ನಾವು ಇದನ್ನು insist ಮಾಡಿರಲಿಲ್ಲ. ಹಾಗಾಗಿ, ಇವತ್ತು ಇದನ್ನು ನಮ್ಮ statute ಪ್ರಕಾರ, ಕರ್ನಾಟಕದ ಕಾನೂನಿನನ್ವಯ ಆರಂಭವಾಗಿರುವ National Law School ಆಗಿರುವುದರಿಂದ ಈ ಕಾನೂನಿಗೆ ತಿದ್ದುಪಡಿ ತಂದು ಕನಿಷ್ಠ ನಮ್ಮ ರಾಜ್ಯದಲ್ಲಿ 10 ವರ್ಷಗಳ ಕಾಲ ವ್ಯಾಸಂಗ ಮಾಡಿರುವಂತಹ ಮಕ್ಕಳಿಗೆ 25% reservation ಕೊಡಬೇಕೆಂದು ತಮ್ಮ ಮುಂದೆ ಪ್ರಸ್ತಾವ ಮಾಡುತ್ತಿದ್ದೇನೆ. ಆದ್ದರಿಂದ, ದಯವಿಟ್ಟು ಇದನ್ನು ಪರ್ಯಾಲೋಚಿಸಬೇಕೆಂದು ಕೇಳಿಕೊಳ್ಳುತ್ತೇನೆ.

**Sri K. GOVINDARAJ:** It's a very good bill. I agree with the hon. Minister.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಇದರಲ್ಲಿ 25% reservation ಮಾಡುತ್ತಿದ್ದಾರೆ. ಆದರೆ, ಅದರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದವರಿಗೆ ಎಷ್ಟು reservation ಎಂದು ಹೇಳಬೇಕಲ್ಲವೇ;

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಗಳೇ, vertical reservation ಎಂದರೆ, SC/ST. ಇನ್ನು 25% ರೊಳಗೆ ಹಿಂದುಳಿದವರು ಮತ್ತು ಸಾಮಾನ್ಯ ವರ್ಗದವರು ಎಲ್ಲರೂ ಬರುತ್ತಾರೆ. ನಾವು ಅದನ್ನು ಆಮೇಲೆ clarify ಮಾಡಿಕೊಳ್ಳುತ್ತೇವೆ. ಮೊದಲು ಆ ಬಿಲ್‌ನಲ್ಲಿ 25% reservation ಕೊಡಿ ಎಂದು ಕೇಳಿದ್ದೇವೆ.

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 2020 ಅನ್ನು ನಾನು ಸ್ವಾಗತ ಮಾಡುತ್ತೇನೆ. ಇಡೀ ಭಾರತ ದೇಶದಲ್ಲಿ ಮೊಟ್ಟ ಮೊದಲನೆ ಬಾರಿಗೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಅವಿಭಜಿತ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸೆಂಟ್ರಲ್ ಕಾಲೇಜು ಪ್ರಾರಂಭವಾಯಿತು. ಈ ವಿಶ್ವವಿದ್ಯಾನಿಲಯ ಸುಮಾರು ವರ್ಷಗಳ ಕಾಲ ಸೆಂಟ್ರಲ್ ಕಾಲೇಜ್‌ನಲ್ಲಿ ನಡೆಯಿತು. ನಂತರ ಈ ವಿಶ್ವವಿದ್ಯಾನಿಲಯಕ್ಕೆ 100 ಎಕರೆ ಜಾಗವನ್ನು ಜ್ಞಾನಭಾರತಿಯ ಆವರಣದಲ್ಲಿ ಆಗಿನ ಸರ್ಕಾರ ಕೊಟ್ಟಿದೆ. ಆದರೆ, ಒಂದು ಬಹಳ ನೋವಿನ ಸಂಗತಿ ಎಂದರೆ, ಇಡೀ ಭಾರತ ದೇಶದಲ್ಲಿಯೇ ನಮ್ಮ ರಾಜ್ಯದ ಬೆಂಗಳೂರಿನ ಜ್ಞಾನಭಾರತಿಯ ಆವರಣದಲ್ಲಿ ಪ್ರಾರಂಭವಾದರೂ ಅವತ್ತಿನಿಂದಲೂ ಬೇರೆ ಬೇರೆ ರಾಜ್ಯಗಳಲ್ಲಿ reservation ತೆಗೆದುಕೊಂಡಿದ್ದರು. ಆದರೆ, ನಾವು ಅದನ್ನು ತೆಗೆದುಕೊಂಡಿರಲಿಲ್ಲ. ಆಮೇಲೆ ಸರ್ಕಾರ ಎಚ್ಚೆತ್ತುಕೊಂಡು ಎರಡು ಸದನಗಳಲ್ಲಿಯೂ ಇದರಲ್ಲಿ ನಮಗೂ reservation ಬೇಕೆಂದು ಒಂದು ತಿದ್ದುಪಡಿಯನ್ನು ಮಾನ್ಯ ರಾಜ್ಯಪಾಲರಿಗೆ ಕಳುಹಿಸಿದ್ದರು. ಆದರೆ, ಅದು ಆಗ ಸಫಲವಾಗಿರಲಿಲ್ಲ. ಈಗಲಾದರೂ ಸಹ ಮಾನ್ಯ ಕಾನೂನು ಸಚಿವರು ಇದರ ಬಗ್ಗೆ ಅವರ ಒತ್ತಾಸೆಯನ್ನು ಮಾಡಿ 25% reservation ತಂದಿದ್ದಾರೆ. ನಮ್ಮ ಭಾರತ ದೇಶದಲ್ಲಿ ಇದು ಮೊದಲನೆ ವಿಶ್ವವಿದ್ಯಾನಿಲಯ. ಇದು ಒಂದು ರೀತಿಯಲ್ಲಿ ಕೂಸು. ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ನನ್ನ ಆಗ್ರಹ ಏನೆಂದರೆ, ಕನಿಷ್ಠ 50% ಸೀಟುಗಳನ್ನು ಭರಿಸಿಕೊಡಬೇಕೆಂದು ಮಾನ್ಯ ಕಾನೂನು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು ತಂದಿರುವಂತಹ ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 2020 ಅನ್ನು ನಾನು ಬಹಳ ಅಭಿಮಾನದಿಂದ ಸ್ವಾಗತ ಮಾಡುತ್ತೇನೆ. ನಾವು ಇದನ್ನು ಬಹಳ ಸಲ ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಆದರೆ, ಅದು ಆಗಿರಲಿಲ್ಲ. ಈಗ ಒಳ್ಳೆಯ ಉತ್ತಮವಾದಂತಹ ವಿಧೇಯಕವನ್ನು ತಂದಿದ್ದಾರೆ. ಅದಕ್ಕೆ ನಾನು ಕಾನೂನು ಸಚಿವರನ್ನು ಅಭಿನಂದಿಸುತ್ತೇನೆ. ಧಾರವಾಡದಲ್ಲಿರುವ IIT ಗೆ ಸರ್ಕಾರ ಬೇಕಾದಷ್ಟು ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡುತ್ತಿದೆ. ಅದಕ್ಕೆ ಬೇಕಾದಂತಹ ಭೂಮಿಯನ್ನು ಸಹ ಕೊಟ್ಟಿದೆ. ಅದರಲ್ಲಿ ನಮಗೆ ಅದರಲ್ಲಿ ಸೀಟು ತೆಗೆದುಕೊಳ್ಳುವುದಕ್ಕೆ ಅಧಿಕಾರ ಇಲ್ಲ. ಈ ಹಿಂದೆ ಇದೇ ತರಹ ಮಾಡಿದ್ದೆವು, ಆದರೆ, ಆಗಿರಲಿಲ್ಲ. ಈ Law School ಬಗ್ಗೆಯೂ ಮಾಡಿದ್ದೆವು ಆದರೆ ಆಗ ಆಗಿರಲಿಲ್ಲ. ಈಗ ಮಾನ್ಯ ಸಚಿವರು ತಂದಿರುವಂತಹ ಈ ವಿಧೇಯಕದಿಂದ ಇದಕ್ಕೆ ಒಂದು ಪ್ರಾರಂಭ. ಇದನ್ನು ಮುಂದಿನ ದಿವಸಗಳಲ್ಲಿ 50% ಮಾಡಿದರೆ ಒಳ್ಳೆಯದು. ಇದು ನಮ್ಮ ರಾಜ್ಯದಲ್ಲಿದೆ. ಆದರೆ, ನಮ್ಮ ರಾಜ್ಯದ ಮಕ್ಕಳಿಗೆ ಇದರಲ್ಲಿ ಸೀಟು ಸಿಗುವುದಿಲ್ಲ. ನಾವು ಇದನ್ನು ಬಹಳ ಪ್ರಾಮಾಣಿಕವಾಗಿ ಮಾಡಿದ್ದೆವು. ಆದರೆ. ಆಗಲಿಲ್ಲ. ಸದನದಲ್ಲಿ ಇದನ್ನು ಮಾಡುವುದಕ್ಕೆ ಬರುವುದಿಲ್ಲ, ಕಾನೂನಿನಲ್ಲಿ ಅವಕಾಶ ಇಲ್ಲವೆಂದು ಉತ್ತರ ಸಹ ಕೊಟ್ಟಿದ್ದರು. ಆದರೆ, ಮಾನ್ಯ ಸಚಿವರು ಇದೆಲ್ಲವನ್ನೂ ಮೀರಿ ಈ bill ನ್ನು ತಂದಿದ್ದಾರೆ. ನಾವು ಇದನ್ನು ಸ್ವಾಗತ ಮಾಡುತ್ತೇವೆ. ಈಗ ಒಂದು ಬಾರಿ commitment ಆಗಲಿ. ಇಲ್ಲಿಯವರೆಗೂ ಬರುವುದಿಲ್ಲವೆಂದು ಹೇಳುತ್ತಿದ್ದರು. ಆದರೆ, ಈಗ ಬಂದಿದೆ. ಅದಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ. ಇದಾದ ನಂತರ 50% ಗೆ ಒತ್ತಾಯ ಮಾಡಬೇಕು.

**(ಮುಂದು. . .)**

(660) 23-03-2020(12-40)ಎಂವಿ-ಆರ್‌ಎನ್

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಮುಂದು...):-**

ನಾನು ಹೇಳುವುದು ಮತ್ತು ನನ್ನ concern ಇದ್ದದ್ದು ಐ.ಐ.ಟಿ. ಸಂಸ್ಥೆಗಳಿಗೂ ಕೂಡ ಸರ್ಕಾರದಲ್ಲಿ ಇದೇ ರೀತಿಯ ಕಾಯಿದೆ ತರುವುದು ಸೂಕ್ತ ಎಂದು ನನಗೆ ಅನಿಸುತ್ತದೆ. ಏಕೆಂದರೆ, ಧಾರವಾಡದಲ್ಲಿ ಸುಮಾರು 600 ಎಕರೆ ಜಮೀನು ಇದೆ. ಅದು ಕೋಟ್ಯಂತರ ರೂಪಾಯಿ ಬೆಲೆ ಬಾಳುತ್ತದೆ. ಅಲ್ಲಿ ನಮ್ಮ ರಾಜ್ಯದ ಒಬ್ಬರಿಗೂ ಸಹ ಸೀಟ್ ಸಿಗುವುದಿಲ್ಲ. ಇಡೀ ರಾಜ್ಯದಲ್ಲಿ ರಾಣೇಬೆನ್ನೂರಿನ ಒಬ್ಬ ಹುಡುಗ ಮಾತ್ರ ಅಲ್ಲಿನ ಐ.ಐ.ಟಿ. ಸಂಸ್ಥೆಗೆ ಆಯ್ಕೆಯಾಗಿದ್ದ. ಅಲ್ಲಿಗೆ ಹೊರಗಿನವರೇ ಹೆಚ್ಚಾಗಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬರುತ್ತಾರೆ. ಅಲ್ಲಿ ನಮ್ಮ ಮಕ್ಕಳಿಗೆ ಸೀಟ್ ಇಲ್ಲವೆಂದರೆ, ನಾವು ಹೊರಗಿನವರ ಸಲುವಾಗಿ ಏಕೆ ಖರ್ಚು ಮಾಡಬೇಕು? ಈಗ ಮಾನ್ಯ ಸಚಿವರು ಒಂದು ಒಳ್ಳೆಯ ವಿಧೇಯಕವನ್ನು ತಂದಿದ್ದಾರೆ. ಇದೇ ರೀತಿ ಐ.ಐ.ಟಿ ಮತ್ತು ಬೇರೆ ಬೇರೆ ಸಂಸ್ಥೆಗಳಿಗೂ ವಿಧೇಯಕವನ್ನು ತರುವುದಕ್ಕೆ ಸಚಿವ ಸಂಪುಟದಲ್ಲಿ ಇದನ್ನು ಚರ್ಚೆಗೆ ತರಬೇಕೆಂದು ಹೇಳಿ. ಈ ವಿಧೇಯಕವನ್ನು ಬಹಳ ತುಂಬು ಹೃದಯದಿಂದ ಸ್ವಾಗತ ಮಾಡುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):-**ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು ತಂದಿರುವ 'ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 2020' ಕ್ಕೆ ಸ್ವಾಗತವನ್ನು ಬಯಸುತ್ತೇನೆ. "ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯವನ್ನು"1986ರಲ್ಲಿ ಪ್ರಾರಂಭಿಸಿದರು ಕೂಡ, ಇಲ್ಲಿಯವರೆಗೆ ಮಾಡದೇ ಇರತಕ್ಕಂಥ ಒಂದು ಒಳ್ಳೆಯ ಕೆಲಸವನ್ನು ವಿಶೇಷವಾಗಿ ಮಾನ್ಯ ಕಾನೂನು ಮಂತ್ರಿಗಳು, *Sourabh Choudhary v/s Union of India (2003)*ಇದರಲ್ಲಿ *Institutional Preference/Reservation in the post graduate medical courses to the extent of 50% of the total number of open seats"* ಅನ್ನು *observation* ಅನ್ನು ಗಮನದಲ್ಲಿಟ್ಟುಕೊಂಡು ಈ ವಿಧೇಯಕವನ್ನು ತಂದಿದ್ದಾರೆ. ಆದರೆ, ವಿಶೇಷವಾಗಿ, ಪುಟ್ಟ ಸಂಖ್ಯೆ.2ರಲ್ಲಿ ಮಧ್ಯಪ್ರದೇಶದಲ್ಲಿ ಶೇಕಡಾ 25ರಷ್ಟು ಇದೆ. ಪಂಜಾಬ್‌ನಲ್ಲಿ ಶೇಕಡಾ 10ರಷ್ಟು ಹೇಳಿರತಕ್ಕಂಥದ್ದನ್ನು, 30 seats are reserved for permanent residents of Assam in National Law University and Judicial Academy, Assam ಮತ್ತು 80 seats out of 258 seats are reserved for candidates of domicile of Uttar Pradesh in Dr.Ram Manohar Lohia National Law University, Lucknow. ಈ ರೀತಿ ಇರುವಾಗ ಇನ್ನೊಂದು ಕ್ರಮ ಸಂಖ್ಯೆ.7ರಲ್ಲಿ 16 ಸೀಟ್‌ಗಳು out of 81 seats are reserved for residents of Telangana in National Academy of Legal Studies and Research University Hyderabad. ಮಾನ್ಯ ಸಚಿವರೇ ನನ್ನ ಮನವಿ ಏನೆಂದರೆ, ತಾವು ತಂದಿರತಕ್ಕಂಥ ವಿಧೇಯಕ I am very heartfully appreciate your stand. After lapse of many years, you have taken bold steps to get this

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

amendment of the Bill. Long back could have been done it. Now you have done it. That is because I am salute you. I really appreciate your stand. ಆದರೆ, ಇಲ್ಲಿ ಏನಾಗುತ್ತದೆಂದರೆ, ಇದನ್ನೇ ಈಗ ಶ್ರೀ ಸೌರಭ್ ಚೌಧರಿ Post Graduates ಗಳಿಗೆ 50% ಇರತಕ್ಕಂಥದ್ದನ್ನು ಆಧರಿಸಿ ಸದಸ್ಯರಾದ ಮಾನ್ಯ ಎನ್.ಅಪ್ಪಾಜಿಗೌಡರವರು ಮತ್ತು ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಹೇಳಿದ್ದಾರೆ. I don't want to reiterate again. You are aware about this issue being a senior can understand about this Bill. My appeal to you is, ದಯಮಾಡಿ ಇದನ್ನು ಹೈದ್ರಾಬಾದ್-ಕರ್ನಾಟಕ ಭಾಗದಲ್ಲಿರತಕ್ಕಂಥ ವಿಚಾರವನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಅಲ್ಲಿ ಶೇಕಡಾ 20:75, ಶೇಕಡಾ 20:80 ಮತ್ತು ಶೇಕಡಾ 15:85 category wise, three categories ಅನ್ನು ಅಲ್ಲಿ fix ಮಾಡಿ ಕೊಟಿದ್ದಾರೆ. ಅಂದರೆ, ಅಲ್ಲಿ ಹುಟ್ಟಿ ಬೆಳೆದಿರತಕ್ಕಂಥವರಿಗೆ ಶೇಕಡಾ 25 ಎಂದು ಹೇಳಲಾಗಿದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, why I want to particularly bring it into your notice is, ಬೆಂಗಳೂರಿನಲ್ಲಿ ಬಂದಿರತಕ್ಕಂಥವರೇ ಹೊರಗಿನವರು ಇದ್ದಾಗ, ಅವರಿಗೆ ಶೇಕಡಾ 75ರಲ್ಲಿ ಕೊಡುವುದಕ್ಕೆ ಅವಕಾಶವಿದೆ. ಆದರೆ, ಶೇಕಡಾ 25ರಷ್ಟು ನಮ್ಮ ರಾಜ್ಯದಲ್ಲಿ ಹುಟ್ಟಿ ಬೆಳೆದಿರತಕ್ಕಂಥವರಿಗೆ ಕೊಡತಕ್ಕಂಥದ್ದು ಒಳ್ಳೆಯದು ಎನ್ನತಕ್ಕಂಥ ಸಲಹೆಯನ್ನು ತಮಗೆ ಕೊಡುವುದಕ್ಕೆ ಬಯಸುತ್ತೇನೆ. Again I appreciate and welcome this Bill. ಬಹಳ ಒಳ್ಳೆಯ ವಿಧೇಯಕವನ್ನು ತಂದಿದ್ದಾರೆ. You have really made an efforts to bring this Bill protect the interest of Karnataka, ಕನ್ನಡಿಗರಿಗೆ ತಂದಿರತಕ್ಕಂಥದ್ದಕ್ಕೆ ಮತ್ತೊಂದು ಬಾರಿ ತಮಗೆ salute ಮಾಡುತ್ತೇನೆ. ದಯಮಾಡಿ ಇದನ್ನು ಶೇಕಡಾ 50ರಷ್ಟು ತರುವುದಕ್ಕೆ ಪ್ರಯತ್ನಿಸಲಿ.

**ಡಾ॥ವೈ.ಎ.ನಾರಾಯಣ ಸ್ವಾಮಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 'ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ' ಪ್ರಾರಂಭವಾಗಿ ಸುಮಾರು 34 ವರ್ಷವಾಗಿದೆ. ಈ 34 ವರ್ಷಗಳ ನಂತರ, ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ನ್ಯಾಯ ಕೊಡಿಸಬೇಕೆಂದು ಶೇಕಡಾ 25ರಷ್ಟು ಸೀಟ್‌ಗಳನ್ನು ನಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ಕೊಡಬೇಕೆಂದು, ಇವತ್ತು ಬಹಳ ಮಹತ್ತರವಾದ ಮತ್ತು ಅತ್ಯಂತ ನ್ಯಾಯಯುತವಾದಂತಹ ಕಾನೂನನ್ನು ತಂದಿದ್ದಾರೆ. ಮೊಟ್ಟಮೊದಲನೆಯದಾಗಿ ಈ ರಾಜ್ಯದ ಕಾನೂನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ನಾವು ಎಲ್ಲಾ ವಿಶ್ವವಿದ್ಯಾಲಯಗಳನ್ನು ನೋಡುತ್ತಿದ್ದೇವೆ, ಆ ವಿಶ್ವವಿದ್ಯಾಲಯಗಳು Establishment ಆದ ದಿವಸವೆ, statutes ಮಾಡಿಕೊಂಡು, ಅಲ್ಲಿನಿಂದಲೇ ಮೀಸಲಾತಿಯನ್ನು ಕೊಟ್ಟುಕೊಂಡು ಬಂದಿದ್ದಾರೆ. Highest ಎಂದರೆ, ಛತ್ತೀಸ್‌ಗಡದಲ್ಲಿ ಅಲ್ಲಿನ ವಿದ್ಯಾರ್ಥಿಗಳಿಗೆ ಶೇಕಡಾ 40ರಷ್ಟು ಅವಕಾಶ ಮಾಡಿಕೊಟ್ಟಿದ್ದಾರೆ. ಏನಾದರೂ ಕರ್ನಾಟಕದಲ್ಲಿ ಇದೇ ಕೆಲಸವನ್ನು ಮಾಡಿದ್ದರೆ. ನಮ್ಮ ರಾಜ್ಯದ ಸುಮಾರು 680 ಜನ ವಿದ್ಯಾರ್ಥಿಗಳು ಅಲ್ಲಿ ಓದುವುದಕ್ಕೆ ಅವಕಾಶವಾಗುತ್ತಿತ್ತು. Better never, than late, ಇಷ್ಟು ವರ್ಷಗಳು ಆದ ನಂತರವೂ ಸಹ Sourabh Choudary case ಅನ್ನು ಉಲ್ಲೇಖ ಮಾಡಿ, Institutional Preference ಅನ್ನು ಮುಂದೆ ಇಟ್ಟುಕೊಂಡು, ಶೇಕಡಾ 50ರಷ್ಟು ಕೇಳುವುದಕ್ಕೆ ಅವಕಾಶವಿದ್ದರೂ, ಮೊದಲು ವಿಶ್ವವಿದ್ಯಾಲಯದೊಳಗೆ ಎಂಟ್ರಿ ಆಗೋಣ, ಎಂಟ್ರಿಯಾಗಿ ನಮ್ಮ establishment ಆದಮೇಲೆ ಮುಂದುವರೆಯೋಣ ಎಂಬ ಮಾತನ್ನು ಗಮನದಲ್ಲಿಟ್ಟುಕೊಂಡು ಈ ವಿಧೇಯಕವನ್ನು ತಂದಿದ್ದಾರೆ. ಇದು ಕಾನೂನು ವ್ಯವಸ್ಥೆಗೆ ಹೆಚ್ಚಿನ ಒತ್ತು ಕೊಡುವಂತಹ ಮತ್ತು ಕಾನೂನು ವಿದ್ಯಾರ್ಥಿಗಳಿಗೆ ಅವಕಾಶ ಕೊಡುವಂತಹ ವಿಧೇಯಕ. ಆದುದರಿಂದ ಇಡೀ ರಾಜ್ಯದ ಪರವಾಗಿ ಈ ವಿಧೇಯಕವನ್ನು ಹೃದಯಪೂರ್ವಕವಾಗಿ ಸ್ವಾಗತ ಮಾಡಿ, ಮಾನ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ.

**ಶ್ರೀ ಕೆ.ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, unanimously accepted ಎಂದು ಹೇಳಿದರೆ ಆಯಿತು.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, 'ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 2020' ಅನ್ನು ನಾನು ಕೂಡ ನಮ್ಮೆಲ್ಲಾ ಸದಸ್ಯರ ಅಭಿಪ್ರಾಯದ ಮೇರೆಗೆ ಬಹಳ ಸಂತೋಷದಿಂದ ಸ್ವಾಗತ ಮಾಡುತ್ತೇನೆ. ಈ ಪೂರ್ವದಲ್ಲಿ Regional Reservation ಎಂದು ತಂದಿದ್ದರು. ಅದು ಸಂವಿಧಾನದ ಆರ್ಟಿಕಲ್ 14 ಪ್ರಕಾರ ವಿರೋಧವಾಗುತ್ತದೆಂದು ಮಾನ್ಯ ಅಡ್ವೋಕೇಟ್ ಜನರಲ್‌ರವರು ಹೇಳಿದರು ಎಂದು ಕಾಣುತ್ತದೆ. 'No discrimination can be done on the basis place' ಆ base ಮೇಲೆ Regional Reservation ಗೆ ಅದು ಸಂವಿಧಾನದ ಪರಿಚ್ಛೇದಗಳಿಗೆ ವಿರೋಧವಾಗುತ್ತದೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎನ್ನುವಂತಹ ದೃಷ್ಟಿಯಿಂದ ಅದನ್ನು ಕೈಬಿಟ್ಟಿದ್ದಾರೆ. ಈಗ Institutional Reservation ಅನ್ನು ತಂದು, ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ಏಕೆಂದರೆ, ಈ ನೆಲದ ಮಕ್ಕಳಿಗೆ ನ್ಯಾಯ ಕೊಡುವಂತಹ ಮಹತ್ತರವಾದಂತಹ ಕೆಲಸ ಈ ಸರ್ಕಾರದಿಂದ ಆಗಿದೆ ಎಂದು ನನಗೆ ಬಹಳ ಸಂತೋಷವಾಗುತ್ತದೆ. ಈಗಾಗಲೇ, ಹಿರಿಯ ಸದಸ್ಯರಾದ ಮಾನ್ಯ ಹೊರಟ್ಟಿಯವರು ಹೇಳಿದ ಹಾಗೆ, ಐ.ಐ.ಟಿ., ಐ.ಐ.ಎಂ ಮತ್ತು ಐ.ಐ.ಐ.ಟಿ. ಈ ಎಲ್ಲಾ ಸಂಸ್ಥೆಗಳಿಗೆ ಅವರು ಕೇಳಿದಷ್ಟು ಜಮೀನುಗಳನ್ನು ಕೊಟ್ಟಿದ್ದೇವೆ ಮತ್ತು ಎಲ್ಲಾ ರೀತಿಯ ಸಹಾಯ ಮತ್ತು ಸಹಕಾರವನ್ನು ನೀಡಿದ್ದೇವೆ. ಇಷ್ಟೆಲ್ಲಾ infrastructure ಅನ್ನು establish ಮಾಡಬೇಕಾದರೆ, ಅವರಿಗೆ ಏನು ಬೇಕು, ಎಲ್ಲವನ್ನು ಕೊಟ್ಟರೂ ಸಹ ನಮ್ಮ ಕನ್ನಡ ನಾಡಿನ ನೆಲದ ಮಕ್ಕಳು ಅಲ್ಲಿ ಅವಕಾಶ ಪಡೆಯುವುದು ಬಹಳ ಕಷ್ಟ. ಈಗ ಐ.ಐ.ಟಿ. ಮತ್ತು ಐ.ಐ.ಎಂ.ಗಳಲ್ಲಿ ದಾಖಲಾತಿ ಸಿಕ್ಕಿದೆ ಎಂದರೆ, ಜನರು ಬಂದು ಅವರನ್ನು ಭೇಟಿಯಾಗಿ, ಏನಪ್ಪ ಅವರು ಅದ್ಭುತ ಸಾಧನೆ ಮಾಡಿದವರು ಎಂದು ಹೇಳುತ್ತಾರೆ. ಆ ದೃಷ್ಟಿಯಿಂದ 'ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 2020' ಅನ್ನು ಏನು ತಂದಿದ್ದಾರೆ. ಈಗಾಗಲೇ, ಕೇರಳ, ಬಿಹಾರ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ರಾಜಸ್ತಾನ, ಗುಜರಾತ್ ಮತ್ತು ಅಸ್ಸಾಂ ಈ ಎಲ್ಲಾ ರಾಜ್ಯಗಳಲ್ಲಿ ಮೀಸಲಾತಿ ಇದೆ. ಆದರೆ, ನಮ್ಮ ರಾಜ್ಯದಲ್ಲಿ ಮಾತ್ರ ಮೀಸಲಾತಿ ಇರಲಿಲ್ಲ. ಆದರೆ, Better late than never, ಎನ್ನುವ ಹಾಗೆ ಇದನ್ನು ತಂದಿದ್ದಾರೆ ಮತ್ತು ಈ ವಿಧೇಯಕದಲ್ಲಿ ಏನು ಶೇಕಡಾ 25ರಷ್ಟು ಮೀಸಲಾತಿಯನ್ನು ಮಾಡಿದ್ದಾರೆ ಮತ್ತು ಇದಕ್ಕೆ ವರ್ಷಕ್ಕೆ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಕೊಡುತ್ತೇನೆಂದು ಹೇಳಿದ್ದಾರೆ. ಇದರ ಜೊತೆಗೆ ಬಹಳಷ್ಟು ಸೌಲಭ್ಯಗಳನ್ನು ಕೊಡಬೇಕಾಗಿದೆ, ಅವರು ಅದನ್ನು ಕೊಡುತ್ತಾರೆ ಎಂದು ಭಾವಿಸುತ್ತೇನೆ. ಇಷ್ಟೆಲ್ಲಾ ಅನುಕೂಲತೆಗಳನ್ನು ಒದಗಿಸಿದಾಗ, ಈ ನೆಲದಲ್ಲಿ ಸ್ಥಾಪನೆಗೊಂಡಂತಹ ಈ ಒಂದು Law School ಗೆ ಅದು ನಮ್ಮ ರಾಜ್ಯದ ಮಕ್ಕಳಿಗೆ, ಹತ್ತು ವರ್ಷ ರಾಜ್ಯದಲ್ಲಿ ಅಧ್ಯಯನ ಮಾಡಿದಂತಹವರಿಗೆ ಅವಕಾಶ ಕಲ್ಪಿಸಿರುವಂತಹ ಮಹತ್ತರವಾದಂತಹ ಮತ್ತು ಈ ನೆಲದ ಮಕ್ಕಳಿಗೆ ನ್ಯಾಯ ಒದಗಿಸುವಂತಹ ಏನು ಒಂದು ವಿಧೇಯಕವನ್ನು ತಂದಿದ್ದಾರೆ, ಅದನ್ನು ನಾನು ತುಂಬು ಹೃದಯದಿಂದ ತಮ್ಮ ಮುಖಾಂತರ ಸ್ವಾಗತ ಮಾಡಿ, ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುವುದಕ್ಕೆ ಬಯಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, "ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 2020" ತಂದಿದ್ದಾರೆ, ನಾನು ಅದನ್ನು ಸ್ವಾಗತ ಮಾಡುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ರಾಜ್ಯದಲ್ಲಿ ಕಾನೂನು ಶಿಕ್ಷಣಕ್ಕೆ ಒತ್ತು ಕೊಡುವಂತಹ ಕೆಲಸ ಬಹಳ ದಿನಗಳಿಂದ ಯಾವುದೇ ಸರ್ಕಾರಗಳಿಂದ ಆಗಿರಲಿಲ್ಲ. ಸನ್ಮಾನ್ಯ ಸಚಿವರಾದ ಎಸ್.ಸುರೇಶ್ ಕುಮಾರ್ ಈ ಹಿಂದೆ ಕಾನೂನು ಸಚಿವರಾಗಿದಂತಹ ಸಂದರ್ಭದಲ್ಲಿ ಮೊಟ್ಟಮೊದಲ ಬಾರಿಗೆ 19 ಅನುದಾನಿತ ಕಾನೂನು ಕಾಲೇಜುಗಳಿಗೆ ಅನುದಾನ ಕೊಟ್ಟಂಥದ್ದು, ಮೊಟ್ಟ ಮೊದಲಿಗೆ ಕರ್ನಾಟಕ ರಾಜ್ಯದಲ್ಲಿ ಕಾನೂನು ವಿಶ್ವವಿದ್ಯಾಲಯ ಬಂದ ಮೇಲೆ, ಕಾನೂನು ಶಿಕ್ಷಣಕ್ಕೆ ಒತ್ತುಕೊಡುವಂತಹ ಕೆಲಸವನ್ನು ಅವತ್ತು ಸನ್ಮಾನ್ಯ ಎಸ್.ಸುರೇಶ್ ಕುಮಾರ್‌ರವರು ಕಾನೂನು ಸಚಿವರಾಗಿದ್ದಾಗ ಮಾಡಿದ್ದರು. ಎರಡನೆಯದಾಗಿ, ಇವತ್ತು ಈ ವಿಶ್ವವಿದ್ಯಾಲಯದಲ್ಲಿ ನಡೆಯುವಂತಹ ಕಾಲೇಜಿನಲ್ಲಿ ಕರ್ನಾಟಕ ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶವಿರಲಿಲ್ಲ. ಬಹಳ ದೀರ್ಘಕಾಲದ ನಂತರ ಇಲ್ಲಿ ಕನಿಷ್ಠ ಶೇಕಡಾ 25ರಷ್ಟು ಆದರೂ ಕೂಡ ಅವಕಾಶವನ್ನು ತೆಗೆದುಕೊಳ್ಳಬೇಕೆಂದು ನಮ್ಮ ಕಾನೂನು ಸಚಿವರಾದ ಮಾನ್ಯ ಜೆ.ಸಿ.ಮಾಧುಸ್ವಾಮಿಯವರು ಬಹಳ ಮಹತ್ವಪೂರ್ಣವಾದಂತಹ ಕಾನೂನು ಶಿಕ್ಷಣಕ್ಕೆ ಒತ್ತು ಕೊಡುವಂತಹ ಈ ಕನ್ನಡ ನಾಡಿನ ಮಕ್ಕಳು ಕಾನೂನು ಶಿಕ್ಷಣವನ್ನು ಇಂತಹ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡಬೇಕು ಎಂದು ಬಹಳ ಒತ್ತು ಕೊಟ್ಟು ಈ ವಿಧೇಯಕವನ್ನು ತಂದಿದ್ದಾರೆ. ನಾನು ಇದಕ್ಕೆ ಬಹಳ ಸಂತೋಷದಿಂದ ಮಾನ್ಯ ಕಾನೂನು ಸಚಿವರನ್ನು ಅಭಿನಂದಿಸುತ್ತೇನೆ ಮತ್ತು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಎಸ್.ಸುರೇಶ್ ಕುಮಾರ್‌ರವರನ್ನು ಸಹ ಅಭಿನಂದಿಸುತ್ತೇನೆ. ಈ ಕಾನೂನು ಶಿಕ್ಷಣಕ್ಕೆ ಒಂದು ಹೊಸ ರೂಪ ಕೊಡುವುದಕ್ಕೆ ಇವರಿಬ್ಬರು ಕೂಡ ಬಹಳ ಶ್ರಮ ವಹಿಸಿದ್ದಾರೆ. ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ,'ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 2020' ಅನ್ನು ವಿಶೇಷವಾಗಿ ಕಾನೂನು ವಿದ್ಯಾಲಯದಲ್ಲಿ ತಂದಿರತಕ್ಕಂಥ ಈ ವಿಧೇಯಕ, ನಮ್ಮಕರ್ನಾಟಕ ರಾಜ್ಯದಲ್ಲಿರತಕ್ಕಂಥ ಕಾನೂನು ವಿದ್ಯಾಲಯದಲ್ಲಿ ಅವಕಾಶದಿಂದ ವಂಚಿತರಾಗಿರತಕ್ಕಂಥ ನಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ಮಾನ್ಯ ಕಾನೂನು ಸಚಿವರು ತಂದಿರತಕ್ಕಂಥ ಈ ವಿಧೇಯಕವನ್ನು ಸ್ವಾಗತ ಮಾಡುತ್ತಾ,

**(ಮುಂದು...)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(661) 23.03.2020 12.50 LL-RN

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮುಂದುವರೆದಿದ್ದು...

ಈ ವಿಧೇಯಕ ನಮ್ಮ ರಾಜ್ಯದಲ್ಲಿರತಕ್ಕಂತಹ ಕಾನೂನು ವಿದ್ಯಾಲಯದಲ್ಲಿ ಅವಕಾಶದಿಂದ ವಂಚಿತರಾಗಿರತಕ್ಕಂತಹ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆಂದು ಭಾವಿಸಿ, ಮಾನ್ಯ ಕಾನೂನು ಸಚಿವರು ತಂದಿರತಕ್ಕಂತಹ ಈ ವಿಧೇಯಕವನ್ನು ಸ್ವಾಗತ ಮಾಡುತ್ತಾ, ಅನೇಕ ವರ್ಷಗಳಿಂದ ಈ ದೇಶದ ಕಾನೂನಿನ ಒಟ್ಟು ವ್ಯವಸ್ಥೆಗೆ ತನ್ನದೇ ಆಗಿರುವಂತಹ ಕೊಡುಗೆಗಳನ್ನು ಕರ್ನಾಟಕ ಕೊಡುತ್ತಾ ಬಂದಿದೆ. ಆ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಪ್ರತ್ಯೇಕ ಕಾನೂನು ವಿಶ್ವವಿದ್ಯಾಲಯ ಆಗಿರುವುದರ ಜೊತೆಗೆ, ಬೆಂಗಳೂರು ಕಾನೂನು ವಿಶ್ವವಿದ್ಯಾಲಯಕ್ಕೆ ತನ್ನದೇ ಆದಂತಹ ಘನತೆ ಮತ್ತು ಗೌರವ ಇರತಕ್ಕಂತಹ ಸ್ವಾಯತ್ತ ಸಂಸ್ಥೆಯಲ್ಲಿ ಕರ್ನಾಟಕದ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾದ ಸಾಂಸ್ಥಿಕ ಮೀಸಲಾತಿ ತಂದಿರುವಂಥದ್ದನ್ನು ಸ್ವಾಗತಿಸಿ, ಈ ವಿಧೇಯಕವನ್ನು ಸಮರ್ಥಿಸುತ್ತಿದ್ದೇನೆ. ಧನ್ಯವಾದಗಳು.

**ಶ್ರೀ ಆರ್.ಬಿ. ತಿಮ್ಮಾಪೂರ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಾನೂನು ವಿದ್ಯಾಲಯ ಅಧಿನಿಯಮವನ್ನು ನಾನು ಕೂಡ ಸ್ವಾಗತ ಮಾಡುತ್ತೇನೆ. ಇದು ಬಹುಶಃ ಕನ್ನಡ ನಾಡಿನ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹ ತಿದ್ದುಪಡಿ ಆಗುವಂತಹ ವಿಧೇಯಕವಾಗಿದೆ. ಇದರ ಜೊತೆ ಜೊತೆಗೆ, ಫ್ಯಾಶನ್ ಡಿಸೈನ್ ಕೋರ್ಸ್‌ನಲ್ಲಿ NIFT (National Institute for Fasion Technology) ಎಂದು ಒಂದು ಇನ್‌ಸ್ಟಿಟ್ಯೂಟ್ ಇದೆ. ಬೇರೆ ಎಲ್ಲಾ ರಾಜ್ಯಗಳಲ್ಲಿ ಈ ಕೋರ್ಸ್‌ನಲ್ಲಿ ಮೀಸಲಾತಿ ಇದೆ. ಕರ್ನಾಟಕದಲ್ಲಿ ಮಾತ್ರ ಮೀಸಲಾತಿ ಇರುವುದಿಲ್ಲ. ದಯಮಾಡಿ, ಈ ವಿಧೇಯಕದಲ್ಲಿ ಮೀಸಲಾತಿ ನೀಡಿರುವ ರೀತಿ ಆ NIFT ಗೂ ಮೀಸಲಾತಿ ನೀಡಿದರೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆಯೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬಹಳ ತಡವಾಗಿಯಾದರೂ ಕರ್ನಾಟಕ ಸರ್ಕಾರ, ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯಕ್ಕೆ ತಿದ್ದುಪಡಿ ತಂದಿರುವ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ. ಜೊತೆಗೆ, ಈ ದೇಶದ ಮಾನ್ಯ ಉಚ್ಚ ನ್ಯಾಯಾಲಯ ದಿನಾಂಕ:07.06.2017ರಂದು ಒಂದು ತೀರ್ಪನ್ನು ನೀಡಿರುತ್ತದೆ. ಅದರಲ್ಲಿ ಕರ್ನಾಟಕ ವಿದ್ಯಾರ್ಥಿಗಳಿಗೆ ಸಾಂಸ್ಥಿಕ ಮೀಸಲಾತಿಯನ್ನು ಪದವಿ ಕೋರ್ಸ್‌ಗಳಲ್ಲಿ ಶೇಕಡ 50 ರವರೆಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಮತಿಸಲಾಗಿದೆಯೆಂದು ತೀರ್ಪು ನೀಡಿರುತ್ತದೆ. ಏಕೆಂದರೆ, ನೆಲ ನಮ್ಮದು, ನೀರು ನಮ್ಮದು ಮತ್ತು ಸೌಕರ್ಯಗಳು ಕೂಡ ನಮ್ಮದು. ಈಗಾಗಲೇ ನಾವು ಸುಮಾರು ಹತ್ತಾರು ವರ್ಷಗಳಿಂದ ಅವಕಾಶಗಳನ್ನು ಕಳೆದುಕೊಂಡಿದ್ದೇವೆ. ನಾವು ಈ ಮೀಸಲಾತಿಯನ್ನು ಅನೇಕ ವರ್ಷಗಳ ಹಿಂದೆಯೇ ಮಾಡಬೇಕಾಗಿತ್ತು. ಆದರೆ, ಬೇರೆ ಬೇರೆ ರಾಜ್ಯಗಳು ಮೀಸಲಾತಿಯನ್ನು ನೀಡಿರುತ್ತವೆ. ನಾವು ಬಹಳ ತಡವಾಗಿ ಮೀಸಲಾತಿ ನೀಡುತ್ತಿದ್ದೇವೆ. ಮಾನ್ಯ ಉಚ್ಛ ನ್ಯಾಯಾಲಯವೇ ಶೇಕಡ 50 ರಷ್ಟು ಮೀಸಲಾತಿ ನೀಡಬಹುದೆಂದು ಹೇಳಿದ್ದರೂ ಸಹ, ಏತಕ್ಕೆ ಶೇಕಡ 25 ರಷ್ಟು ನೀಡಿರುತ್ತಾರೆ? ನನ್ನ ಮನವಿ ಏನೆಂದರೆ, ಇಷ್ಟು ವರ್ಷಗಳ ಅವಕಾಶ ವಂಚಿತವಾಗಿರುವುದು ನಮಗೆ compensate ಆಗಬೇಕಲ್ಲವೇ?

**ಶ್ರೀ ಜೆ.ಸಿ. ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಸೂಕ್ಷ್ಮವಾಗಿ ಹೇಳುವುದಾದರೆ ಇದರಲ್ಲಿ vertical reservation ಬರುವುದಿಲ್ಲ. ಎಸ್.ಸಿ/ಎಸ್.ಟಿ. ಮೀಸಲಾತಿ ಶೇಕಡ 24.2 ಅಥವಾ 3 ಏನಿದೆ, ಅದನ್ನು ಈ ವಿಧೇಯಕದಲ್ಲಿ ಸೇರಿಸಿಕೊಂಡು ತಿದ್ದುಪಡಿ ಮಾಡಿರುವುದಿಲ್ಲ. that is a separate issue ಎಂದರೆ, almost ನಾವು ಆ ಮೀಸಲಾತಿಗೆ ಹೋಗುತ್ತೇವೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, I will welcome this Bill.

**ಡಾ॥ ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಡವಾಗಿಯಾದರೂ ಅತ್ಯಂತ ಅನಿವಾರ್ಯವಾಗಿದ್ದಂತಹ ಒಂದು ವಿಧೇಯಕವನ್ನು "ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 2020" ನ್ನು ತಂದಿದ್ದಕ್ಕಾಗಿ ಕಾನೂನು ಸಚಿವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕರ್ನಾಟಕದಲ್ಲಿ ಅತ್ಯಂತ ಪ್ರತಿಷ್ಠಿತ ಕಾಲೇಜು ಎನಿಸಿಕೊಂಡಿರುವಂತಹ ಕಾಲೇಜು, ಖಾಸಗಿ ಕಾಲೇಜು ಎನ್ನುವ ರೀತಿಯಲ್ಲಿ ಭಾವನೆಗಳು ಇಡೀ ದೇಶದಲ್ಲಿ ಬಂದಿರುತ್ತವೆ. ನನಗೆ ಅನೇಕ ವಿಷಯಗಳ ಬಗ್ಗೆ ಗೊಂದಲವಿದ್ದು. ಮಾನ್ಯ ಸದಸ್ಯರುಗಳು ಈ ವಿಧೇಯಕದ ಮೇಲೆ ಮಾತನಾಡುತ್ತಾ, ಹಲವಾರು ವಿಷಯಗಳ ಬಗ್ಗೆ ನನಗೆ ಹೊಸ ಬೆಳಕನ್ನು ಚೆಲ್ಲಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಬಗ್ಗೆ ಮಾನ್ಯ ಅಪ್ಪಾಜಿಗೌಡರು ಮಾತನಾಡುತ್ತಾ, 1000 ಎಕರೆ ವಿಶ್ವವಿದ್ಯಾಲಯದ ಒಳಗಡೆ 100 ಎಕರೆ ಜಮೀನನ್ನು ನಾವು ರಾಷ್ಟ್ರೀಯ ಕಾನೂನು ವಿದ್ಯಾಲಯಕ್ಕೆ ನೀಡಿದ್ದು, ಪ್ರತಿ ವರ್ಷಕ್ಕೆ 2 ಕೋಟಿ ರೂಪಾಯಿಗಳ ಅನುದಾನ ನೀಡುತ್ತಿದ್ದೇವೆ. ಬೇರೆ ಪುಟ್ಟ ಪುಟ್ಟ ರಾಜ್ಯಗಳಲ್ಲಿಯೂ ಮೀಸಲಾತಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದೆ. ಆದರೆ, ಕರ್ನಾಟಕದ ಮಕ್ಕಳಿಗೆ ಬಹಳ ಅನ್ಯಾಯವಾಗುತ್ತಿತ್ತು. ಇವೊತ್ತಿನ ದಿವಸ ಸಮರ್ಥ ಮತ್ತು ಉತ್ತಮ ನ್ಯಾಯವಾದಿಗಳ ಅವಶ್ಯಕತೆ ತುಂಬಾ ಇದೆ. ನ್ಯಾಯಾಲಯಗಳಲ್ಲಿ ಪ್ರಕರಣ ಸಂಖ್ಯೆ ಬಹಳ ಜಾಸ್ತಿಯಾಗಿದೆ. ಆ ನಿಟ್ಟಿನಲ್ಲಿ ಮತ್ತು ಗ್ರಾಮೀಣ ಭಾಗದ ಮಕ್ಕಳು ನಗರ ಪ್ರದೇಶದ ಮಕ್ಕಳ ಜೊತೆ ಸ್ಪರ್ಧೆ ಮಾಡುವುದಕ್ಕೆ ಆಗಿರತಕ್ಕಂಥ ಪರಿಸ್ಥಿತಿಯಲ್ಲಿ, ಗ್ರಾಮೀಣ ಭಾಗದ ಮಕ್ಕಳಿಗೂ ಕೂಡ ನ್ಯಾಯ ಮತ್ತು ಅವಕಾಶ ಸಿಗಬೇಕಾಗಿದೆ. ನಮ್ಮ ಸಂವಿಧಾನದಲ್ಲಿ ಹೇಳಿರುವ, "Right to Education" ಪ್ರಕಾರ ಆ spirit ಅನ್ನು ಜಾರಿ ಮಾಡಬೇಕಾಗಿದೆ. ಮಾನ್ಯ ಕಾನೂನು ಸಚಿವರಲ್ಲಿ ಈ ವಿಷಯದ ಬಗ್ಗೆ ಮತ್ತೊಂದು ಹೆಜ್ಜೆ ಮುಂದೆ ಹೋಗಿ ಒತ್ತಾಯ ಮಾಡುವುದೇನೆಂದರೆ, ರೆಸಿಡೆನ್ಷಿಯಲ್ ಶಾಲೆಗಳಲ್ಲಿಯೂ ಕೂಡ ಸ್ಥಳೀಯ ಮಕ್ಕಳಿಗೆ ಮೀಸಲಾತಿ ಕೊಡಬೇಕು. ಮೊರಾರ್ಜಿ ಶಾಲೆಗಳಲ್ಲಿ ಮತ್ತು ವಸತಿ ಶಾಲೆಗಳಲ್ಲಿ ತಾಲ್ಲೂಕಿನ ಮಕ್ಕಳಿಗೆ ಅಥವಾ ಹೋಬಳಿ ಮಕ್ಕಳಿಗೆ ಅವಕಾಶ ಕೊಡದೇ ಇದ್ದರೆ, ನಗರ ಮತ್ತು ಗ್ರಾಮೀಣ ಭಾಗದ ಮಕ್ಕಳ ನಡುವೆ ತಾರತಮ್ಯ ಜಾಸ್ತಿಯಾಗುತ್ತದೆ. ಆದುದರಿಂದ, ಈ ವಿಷಯದಲ್ಲಿ ಮತ್ತೊಂದು ದೃಢವಾದ ಹೆಜ್ಜೆಯನ್ನು ಸರ್ಕಾರ ಇಡಬೇಕೆಂದು ತುಂಬು ಹೃದಯದಿಂದ ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಕಾನೂನು ಸಚಿವರೇ, ವಿಧೇಯಕದ ಮೇಲಿನ ಮಾನ್ಯ ಸದಸ್ಯರ ಚರ್ಚೆ ಮೇಲೆ ಏನಾದರೂ ಉತ್ತರ ನೀಡುವುದು ಇದ್ದರೆ ತಾವು ಹೇಳಬಹುದು.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಡಾ॥ ತೇಜಸ್ವಿನಿ ಗೌಡರವರು ಹೇಳಿದ ವಿಚಾರಕ್ಕೆ ಉತ್ತರ ನೀಡುತ್ತೇನೆ. ಸನ್ಮಾನ್ಯ ಗೋವಿಂದ ಎಂ. ಕಾರಜೋಳ ರವರು ಈಗಾಗಲೇ ವಿಧಾನಸಭೆಯಲ್ಲಿ ಘೋಷಣೆ ಮಾಡಿದ್ದಾರೆ, ಆ ಶಾಲೆಗಳಲ್ಲಿ ಸ್ಥಳೀಯವಾಗಿ... ಅಲ್ಲಿ ಏನಾಗಿತ್ತೆಂದರೆ, ಎಲ್ಲಾ ರೆಸಿಡೆನ್ಷಿಯಲ್ ಶಾಲೆಗಳಲ್ಲಿ ಜಿಲ್ಲಾ ಮಟ್ಟದಲ್ಲಿ ನೇಮಕಾತಿ ಆಗುತ್ತಿತ್ತು. ಈಗ ತಾಲ್ಲೂಕು ಮಕ್ಕಳಿಗೆ ಯಾವ್ಯಾವ ತಾಲ್ಲೂಕಿನಲ್ಲಿ ಬಹಳ ಆಸೆ ಇಟ್ಟುಕೊಂಡು ಈ ಶಾಲೆ ಮಾಡುವುದಕ್ಕೆ ಇನ್‌ಫ್ರಾಸ್ಟ್ರಕ್ಚರ್ ಕೊಟ್ಟಿದ್ದಾರೆ. ಅಲ್ಲಿ ಏನಾದರೂ ಅನುಕೂಲವಾಗಲಿ ಎಂದು ಸರ್ಕಾರ ಆ ಶಾಲೆಗಳಿಗೂ ಕೂಡ ಶೇಕಡ 25 ರಷ್ಟು ಮೀಸಲಾತಿ ಕೊಡುತ್ತೇವೆಂದು ಮಾನ್ಯ ಗೋವಿಂದ ಎಂ. ಕಾರಜೋಳರವರು ಈಗಾಗಲೇ ವಿಧಾನಸಭೆಯಲ್ಲಿ ಈಗಾಗಲೇ ಘೋಷಣೆ ಮಾಡಿರುತ್ತಾರೆ. ಇನ್ನೂ ಈ ವಿಧೇಯಕದ ಬಗ್ಗೆ ನಾನು ಹೇಳುವುದಾದರೆ, ಮೊಟ್ಟ ಮೊದಲು ಕರ್ನಾಟಕದಲ್ಲಿ, statutes and schedule ಆಗಬೇಕಾದರೆ, ನಮಗೆ ಬಹಳ ಪ್ರಮಾಣದ ಕಲ್ಪನೆ ಇರಲಿಲ್ಲವೆಂದು ನಾನು ಭಾವಿಸುತ್ತೇನೆ. ತರುವಾಯ, ಹೊಸ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೊಸದಾಗಿ ಬೇರೆ ಶಾಲೆಗಳು ಪ್ರಾರಂಭವಾಗಿದ್ದರಿಂದ, ಇದರ ಬಗ್ಗೆ ನಮಗೆ ಅರಿವಾಗಿದೆ. ಆದುದರಿಂದ, ಮೀಸಲಾತಿ ಕೇಳುತ್ತಿದ್ದೇವೆ. ಪ್ರಾದೇಶಿಕ ಮೀಸಲಾತಿ ಎಂದು ಕೇಳಿರುವಂಥದ್ದು, ಶಾಸನಬದ್ಧ ಅಥವಾ ಸಂವಿಧಾನ ಬದ್ಧವಾಗಿ ಇರಲಾರದೆಂದು ಸಾಂಸ್ಥಿಕ ಮೀಸಲಾತಿಯನ್ನು ಕೇಳಿ, 10 ವರ್ಷ ಕರ್ನಾಟಕದಲ್ಲಿ ಓದುವಂತಹ ವಿದ್ಯಾರ್ಥಿಗಳಿಗೆ ಸಾಂಸ್ಥಿಕ ಮೀಸಲಾತಿಯನ್ನು ಕೇಳುತ್ತಿದ್ದೇವೆ. ಈಗಾಗಲೇ ಮಾನ್ಯ ಕೆ.ಟಿ. ಶ್ರೀಕಂಠೇಗೌಡರವರಿಗೆ ಇದರಲ್ಲಿ vertical reservation ಅನ್ನು ನಾವು ನಮೂದು ಮಾಡಿರುವುದಿಲ್ಲ. ಅದನ್ನು ನಾವು ಮತ್ತೊಂದು ರೀತಿಯಲ್ಲಿ ತೆಗೆದುಕೊಂಡು ಹೋಗುತ್ತೇವೆ. ಏಕೆಂದರೆ, ಎಸ್.ಸಿ./ಎಸ್.ಟಿ. ಮೀಸಲಾತಿಯನ್ನು ನೀಡಬೇಕಾದರೆ ಆಯಾ ರಾಜ್ಯದವರಿಗೆ ಕೊಡಬೇಕೆಂದು ನಿಯಮವಿದೆ. ಅದನ್ನು ಅಲ್ಲಿ ತೆಗೆದುಕೊಂಡಾಗ, ಮಾನ್ಯ ಸದಸ್ಯರುಗಳು ನಿರೀಕ್ಷೆ ಮಾಡಿರುವಷ್ಟು ಮೀಸಲಾತಿ ಬರುತ್ತದೆಯೆಂದು ಹೇಳುತ್ತಾ, ದಯಮಾಡಿ ಈ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಶ್ರೀ ಕೆ. ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ನಾವೆಲ್ಲರೂ ಈ ವಿಧೇಯಕವನ್ನು ತುಂಬು ಹೃದಯದಿಂದ ಸ್ವಾಗತ ಮಾಡುತ್ತೇವೆ.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕದಲ್ಲಿ ಶೇಕಡ 50 ರಷ್ಟು ಮೀಸಲಾತಿ ನೀಡುವುದಕ್ಕಾಗುತ್ತದೆಯೇ ಎಂಬ ಬಗ್ಗೆ ದಯಮಾಡಿ ಆಲೋಚನೆ ಮಾಡಬೇಕು.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಪ್ರಸ್ತುತ ವಿಧೇಯಕಕ್ಕೆ ತಂದಿರುವ ತಿದ್ದುಪಡಿ ಮೊದಲು ಆರಂಭವಾದ ನಂತರ, ಯಾವ ರೀತಿ ಮೀಸಲಾತಿ ನೀಡಬೇಕೆಂಬ ಬಗ್ಗೆ ಆಲೋಚನೆ ಮಾಡುತ್ತೇವೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:–** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಜೆ.ಸಿ. ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಇ). ಕರ್ನಾಟಕ ರಾಜಭಾಷಾ (ತಿದ್ದುಪಡಿ) ವಿಧೇಯಕ, 2020**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಜೆ.ಸಿ. ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ ಕರ್ನಾಟಕ ರಾಜಭಾಷಾ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಭಾಷಾಂತರ ವಿಚಾರಕ್ಕೆ ಸಂಬಂಧಪಟ್ಟಂತೆ, ಒಂದು ವಿಧೇಯಕವನ್ನು ತರಲಾಗಿದೆ. ಸರ್ಕಾರಿ ರಾಜ್ಯಪತ್ರದಲ್ಲಿ ಅಥವಾ ಕೇಂದ್ರ ಸರ್ಕಾರದಿಂದ ಪ್ರಕಟವಾದಂತಹ ಯಾವುದಾದರೂ ಆಂಗ್ಲ ಭಾಷೆಯ ನೋಟಿಫಿಕೇಷನ್ ಅಥವಾ ಸರ್ಕಾರಿ ಆದೇಶಗಳು ಬಂದಿದ್ದರೆ, ಸರ್ಕಾರ, ಅವುಗಳನ್ನು ಕನ್ನಡ ಭಾಷೆಗೆ ತರ್ಜುಮೆ ಮಾಡಿದರೆ, ಅವುಗಳಿಗೆ ಘನತೆವೆತ್ತ ರಾಜ್ಯಪಾಲರ ಅನುಮೋದನೆ ಆಗುವುದು ಕಡ್ಡಾಯವಾಗಿರುತ್ತದೆ.

(ಮುಂದುವರೆದಿದೆ...)

(662)23.03.2020/1.00/ವೈಎಲ್-ವಿಕೆ

**ಶ್ರೀ ಜೆ.ಸಿ.ಮಾಧುಸ್ವಾಮಿ(ಮುಂದು):-**

ಇನ್ನು ಮುಂದೆ ಘನತೆವೆತ್ತ ರಾಜ್ಯಪಾಲರಿಗೆ ಹೋಗುವುದು ಅದರಿಂದ ವಿಳಂಬವಾಗುವಂಥ ಕೆಲಸವಾಗುವುದಿಲ್ಲ. ಅದರ ಬದಲು ವರ್ಗಾವಣೆ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ನೀಡಬೇಕೆನ್ನುವ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉದ್ದೇಶದಿಂದ ಈ ವಿಧೇಯಕವನ್ನು ತರಲಾಗಿದೆ. ಇದರಲ್ಲಿ ಬಹಳ ವಿಚಾರವೇನಿಲ್ಲ. ಅದಕ್ಕಾಗಿ ದಯಮಾಡಿ ವಿಧೇಯಕಕ್ಕೆ ಅನುಮತಿ ನೀಡಬೇಕೆಂದು ಕೋರುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ನನಗೆ ಒಂದು ಸ್ಪಷ್ಟೀಕರಣ ಬೇಕು. ಈ ವಿಧೇಯಕವು The Official Languages Act, 1963 ಗೆ ವಿರುದ್ಧವಾಗಿಲ್ಲವೇ? ಏಕೆಂದರೆ, Section 6ರ ಪ್ರಕಾರ authorised Hindi translation of State Acts in certain cases...

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೇ, ಆ ರೀತಿ ಇರುವುದರಿಂದಲೇ ಈ ವಿಧೇಯಕಕ್ಕೆ ತಿದ್ದುಪಡಿ ತಂದು, provisions ನೋಡಿಕೊಂಡು ಮಾಡಿದ್ದೇವೆ. We can translate with the approval of the Government. ಎಲ್ಲವನ್ನು ಘನತೆವೆತ್ತ ರಾಜ್ಯಪಾಲರಿಗೆ ಕಳುಹಿಸುವ ಅಗತ್ಯವಿಲ್ಲ. ಆದ್ದರಿಂದ ಸರ್ಕಾರದ ಮಟ್ಟದಲ್ಲಿಯೇ ಆಗಲಿ ಎಂದು ಈ ವಿಧೇಯಕವನ್ನು ಜಾರಿಗೆ ತರಲಾಗಿದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಹಾಗಾದರೆ ಮಾಡಬಹುದು.

**ಸಭಾಪತಿಯವರುಃ–** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ರಾಜಭಾಷಾ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."**

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

<u>ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು</u>

<u>ಖಂಡ 2</u>

**ಸಭಾಪತಿಯವರುಃ–** "ಖಂಡ 2 ವಿಧೇಯಕದ ಅಂಗವಾಗಿರುತ್ತದೆ."

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು.)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

**"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ ಕರ್ನಾಟಕ ರಾಜಭಾಷಾ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ರಾಜಭಾಷಾ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಈ) ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2020**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):-**ಮಾನ್ಯ ಸಭಾಪತಿಯವರೇ, ನಾವು ಕಾನೂನು ವಿಶ್ವವಿದ್ಯಾನಿಲಯ ಮಾಡಿದಂಥ ಸಂದರ್ಭದಲ್ಲಿ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪತ್ರ ನಿಯಂತ್ರಣಾಧಿಕಾರಿಯವರು ಎಂದು ಕೆಲವು designations ಮಾಡಲಾಗಿತ್ತು. ಇಡೀ ರಾಷ್ಟ್ರದಲ್ಲಿ ಈ ಪದವನ್ನು ಬದಲಾಯಿಸಬೇಕೆಂದು ಒತ್ತಾಯ ಇರುವುದರಿಂದ ನಿರ್ದೇಶಕರು ಎನ್ನುವ ಬದಲು 'ಕುಲಪತಿಗಳು' ಎಂಬ ಪದವನ್ನು ಕೇಳುತ್ತಿದ್ದೇವೆ. 'ರಾಜ್ಯ ಲೆಕ್ಕಪತ್ರ ಇಲಾಖೆ' ಎನ್ನುವ ಬದಲು 'ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ' ಎಂಬ ಪದಕ್ಕೆ ತಿದ್ದುಪಡಿ ಕೇಳುತ್ತಿದ್ದೇವೆ. 'ನಿಯಂತ್ರಕರು' ಎಂಬ ಪದನಾಮವನ್ನು 'ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಪ್ರಧಾನ ನಿರ್ದೇಶಕರು' ಎಂದು ತಿದ್ದುಪಡಿ ಮಾಡುವುದಕೋಸ್ಕರ ಈ ವಿಧೇಯಕವನ್ನು ತರಲಾಗಿದೆ. ದಯವಿಟ್ಟು ಇದನ್ನು ಪರ್ಯಾಲೋಚನೆ ಮಾಡಿ ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಸಭಾಪತಿಯವರು:-** "ಖಂಡ 2 ಮತ್ತು 3 ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ಮತ್ತು 3ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

**"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪಲ್ಲಿರುವ 2020ರ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಉ) ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2020**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):–**ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):-**ಮಾನ್ಯ ಸಭಾಪತಿಯವರೆ, ಕಲಂ 109ಕ್ಕೆ ಕಾನೂನು ತಿದ್ದುಪಡಿ ತಂದಿರುವುದಾಗಿದೆ. 109ರ ಕಾನೂನು ಏನಿದೆ, ಅದನ್ನು ಬದಲಾವಣೆ ಮಾಡುತ್ತಿಲ್ಲ, ಅದನ್ನು ಸರಳೀಕರಣ ಮಾಡುತ್ತಿದ್ದೇವೆ. ಮೊದಲು ಕರ್ನಾಟಕಕ್ಕೆ ಬರುವಂಥ ಯಾವುದೇ ಕೈಗಾರಿಕೆಗಳೇನಿವೆ, ಅದಕ್ಕೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸಮಿತಿ ನಡೆಸಬೇಕು. ಆದಾದ ನಂತರ ಮಾನ್ಯ ಕೈಗಾರಿಕಾ ಸಚಿವರ ನೇತೃತ್ವದಲ್ಲಿ ಒಂದು ಸಮಿತಿ ಮಾಡಬೇಕು. ಆ ಸಮಿತಿಯಲ್ಲಿ ಅನುಮೋದನೆಯಾದ ಮೇಲೆ ಮತ್ತೆ ಜಿಲ್ಲಾಧಿಕಾರಿ ಕಛೇರಿ ಮತ್ತು ತಹಸೀಲ್ದಾರ್ ಕಛೇರಿಯ ಅನುಮೋದನೆಗೆ ಹೋಗಬೇಕಾಗಿತ್ತು. ಈ ಮೊದಲು ಸಮಿತಿಯಲ್ಲಿ ಅನುಮೋದನೆಯಾದ ಮೇಲೆ ಜಿಲ್ಲಾಧಿಕಾರಿಯವರ ಕಛೇರಿಗೆ ಕಡತ ಹೋದ ಮೇಲೆ ಒಂದು ವರ್ಷ, ಎರಡು ವರ್ಷಗಳ ಕಾಲ ಸಮಯ ತೆಗೆದುಕೊಳ್ಳಲಾಗುತ್ತಿತ್ತು. ಇದರಿಂದಾಗಿ ಆ ಕೈಗಾರಿಕೆಗಳನ್ನು ಎರಡು ವರ್ಷಗಳಾದರೂ ಪಾರಂಭಿಸುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ.ಏನೇನು ಕಾಯ್ದೆಗಳಿವೆ ಎಂಬುದೆಲ್ಲಾವನ್ನು ನೋಡಿ ಕಡತವನ್ನು ಬಾಕಿಯಲ್ಲಿರಿಸುವುದು, ಈ ರೀತಿಯ ನೂರೆಂಟು ಸಮಸ್ಯೆಗಳಿರುವುದು ತಮಗೂ ಗೊತ್ತಿದೆ. ಈಗ ಅದನ್ನು ಸರಳೀಕರಣ ಮಾಡಿ, ಒಂದು ಸಲ ಉನ್ನತ ಮಟ್ಟದ ಸಮಿತಿಯಲ್ಲಿ ತೀರ್ಮಾನ ಮಾಡಿದ ಮೇಲೆ ಆ ಕಂಪನಿಗಳ ಸಾಮರ್ಥ್ಯವೇನಿದೆ, ಉದಾಹರಣೆಗೆ ಹೇಳುವುದಾದರೆ, ಟಾಟಾ ಕಂಪನಿಯವರು ಬಂದು ಎಷ್ಟು ಮೊತ್ತವನ್ನು ಭರಿಸುತ್ತಾರೆ ಎಂಬುದನ್ನು ತಿಳಿಸಿದ ಮೇಲೆ, ಅವರಿಗೆ ಜಾಗ ಹಂಚಿಕೆ ಮಾಡಿದ ಮೇಲೆ ಮತ್ತೆ ಈ ರೀತಿಯ query ಗಳನ್ನು ಹಾಕುವಂತಹ ಬಹಳಷ್ಟು ಘಟನೆಗಳು ನಡೆದಾಗ, ಇವತ್ತು ಆ ಕಂಪನಿಗಳು ಬೇರೆ ಬೇರೆ ರಾಜ್ಯಗಳಿಗೆ ಹೋಗಿವೆ. ಉತ್ತರ ಕರ್ನಾಟಕ ಭಾಗಕ್ಕೆ ಬಂದಂತಹ ಕೆಲವು ಕಂಪನಿಗಳು ವಿಳಂಬವಾಗುತ್ತಿವೆ ಎಂಬ ದೃಷ್ಟಿಯಿಂದ ಬೇರೆ ಬೇರೆ ರಾಜ್ಯಗಳಿಗೆ ಹೋಗಿವೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಯಾವ ರೀತಿ ತೊಂದರೆಯಾಗುತ್ತಿದೆ ಎಂಬುದನ್ನು ಸ್ವಲ್ಪ ವಿವರಿಸಿ ಹೇಳಬೇಕು.

**ಶ್ರೀ ಆರ್.ಅಶೋಕ್:-**ಮಾನ್ಯ ಸಭಾಪತಿಯವರೆ, ಆ ವಿಚಾರದ ಬಗ್ಗೆಯೇ ಮಾತನಾಡುವುದಕ್ಕೆ ಬರುತ್ತಿದ್ದೇನೆ. ಈಗ ಬಹಳಷ್ಟು ಕೈಗಾರಿಕೆಗಳು ಕರ್ನಾಟಕಕ್ಕೆ ಬರುವಂಥ ಸಂದರ್ಭದಲ್ಲಿ ಆ ಕೈಗಾರಿಕೆಯವರಿಗೆ ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ಗುಜರಾತ್, ರಾಜಸ್ಥಾನ ಈ ರೀತಿ ಬೇರೆ

ಬೇರೆ ರಾಜ್ಯಗಳನ್ನು ಆಯ್ಕೆ ಮಾಡಿಕೊಳ್ಳುವಂಥ ಅವಕಾಶ ಇದ್ದೇ ಇರುತ್ತದೆ. ಹಾಗಾಗಿ ಎಲ್ಲಿ ಅವಕಾಶ ಜಾಸ್ತಿ ಇರುತ್ತದೆಯೋ, ಅಂತಹ ಕಡೆಗಳಿಗೆ ಹೋಗುವಂಥ ಪ್ರಯತ್ನ ಮಾಡುತ್ತಾರೆ.

(ಮುಂದು) . . .

(663)/23.03.2020/1.10/ಎಸ್‌ಕೆ-ವಿಕೆ

**(ಸಭಾಪತಿಯವರ ಉಪಸ್ಥಿತಿ )**

**ಶ್ರೀ ಆರ್. ಅಶೋಕ್ (ಕಂದಾಯ ಸಚಿವರು) (ಮುಂದು):-**

ನಮ್ಮ ದೃಷ್ಟಿ ಏನಿದೆ ಎಂದರೆ,  ಈ ಒಂದು ಕಾಯಿದೆಯನ್ನು ಸರಳೀಕರಣ ಮಾಡುವ ದೃಷ್ಟಿಯಿಂದ, ರಾಜ್ಯದಲ್ಲಿ ಹೆಚ್ಚು ಉದ್ಯೋಗಗಳು ಸೃಷ್ಟಿಯಾಗಬೇಕು. ಬಂಡವಾಳ ಹೂಡಲು ಯಾರು ಬರುತ್ತಾರೋ, ಅಂಥವರು ನಮ್ಮ ರಾಜ್ಯಕ್ಕೆ ಹೆಚ್ಚಿನದಾಗಿ ಬರಬೇಕು. ಇನ್ನು ಹೆಚ್ಚು ಕೈಗಾರಿಕೆಗಳನ್ನು ಉತ್ತೇಜನ ಮಾಡುವಂತಹದ್ದರ ಬಗ್ಗೆ ಉಪಯೋಗವಿರುತ್ತದೆ. ಈ ಹಿಂದೆ ಅಂದರೆ, 2014 ರ ಸರ್ಕಾರದಲ್ಲಿ ಬಹಳ ಪ್ರಮುಖವಾಗಿರುವಂತಹ ಈ ಒಂದು ಭೂ ಸುಧಾರಣೆ ಕಾಯಿದೆ 109 ಗೆ ಸ್ವಲ್ಪ ತಿದ್ದುಪಡಿಯನ್ನು ತಂದಿದ್ದರು. ಅದರಲ್ಲಿ ಏನಿದೆ ಎಂದರೆ, ಯಾರು ಕೈಗಾರಿಕೆಯನ್ನು ಮಾಡಲು ಜಮೀನುಗಳನ್ನು ತೆಗೆದುಕೊಳ್ಳುತ್ತಾರೋ, ಆ ಕೈಗಾರಿಕೆ ಏನಾದರೂ ನಷ್ಟವಾದರೆ, ಅದನ್ನು ಬೇರೆ ಉದ್ದೇಶಕ್ಕೆ ಅಂದರೆ complex, ವ್ಯಾಪರೀಕರಣ ಅಂದರೆ ಬೇರೆ ಬೇರೆ commercial activities, real-estate ಮಾಡುವಂತಹದ್ದಕ್ಕೆ  ಅವಕಾಶವಿತ್ತು.  ಅದನ್ನು ನಾನು ಈ ಕಾಯಿದೆಯಲ್ಲಿ ತೆಗೆದು ಹಾಕಿದ್ದೇನೆ. ಯಾರು, ಯಾವ ಉದ್ದೇಶಕ್ಕಾಗಿ ಅದನ್ನು ಬಳಕೆ ಮಾಡಿಕೊಳ್ಳುತ್ತಾರೋ, ಅವರು ಕೈಗಾರಿಕೆ ಮಾಡಲು ಭೂಮಿಯನ್ನು ತೆಗೆದುಕೊಂಡರೆ, ಕೈಗಾರಿಕೆಯನ್ನೇ ಮಾಡಬೇಕು. ನಮ್ಮ ರಾಜ್ಯದಲ್ಲಿ ಬಹಳಷ್ಟು education centres ಇವೆ. ಯಾರು education purpose ಗೆ ಭೂಮಿಯನ್ನು ತೆಗೆದುಕೊಳ್ಳುತ್ತಾರೋ, ಅವರು ಅಲ್ಲಿ educationcentres ನ್ನೇ ಮಾಡಬೇಕು. ಮಠ-ಮಂದಿರಗಳಿಗೆ ನೂರಾರು ಎಕರೆ ಜಮೀನುಗಳನ್ನು ಕೊಟ್ಟಿದ್ದೇವೆ. ಆ ಮಠ ಏನಾದರೂ ಮುಚ್ಚಿ ಹೋಯಿತು ಎಂದರೆ, ಆ ಜಾಗ ಯಾರೋ ತೆಗೆದುಕೊಂಡು, ಅದನ್ನು real-estate ಮಾಡುವುದಕ್ಕೆ ಹೋಗುತ್ತಾರೆ. ಇನ್ನು ಮುಂದೆ ಆ ರೀತಿ ಮಾಡುವುದಕ್ಕಾಗುವುದಿಲ್ಲ. Floriculture ಮಾಡಲು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾರು ಭೂಮಿಯನ್ನು ತೆಗೆದುಕೊಳ್ಳುತ್ತಾರೋ, ಅದಕ್ಕೆ ಮಾತ್ರ ಉಪಯೋಗ ಮಾಡಬೇಕು. ಇನ್ನು ಮೇಲೆ ಈ ಒಂದು ಕಾಯಿದೆಗೆ ಸಂಬಂಧಿಸಿದಂತೆ ಯಾವುದೇ ಜಮೀನನ್ನು ಅಲಾಟ್ ಮಾಡುವುದಿಲ್ಲ. ವಿಧಾನಸಭೆಯಲ್ಲಿ ಈ ವಿಚಾರ ಚರ್ಚೆಗೆ ಬಂದಿತ್ತು. ಆದುದರಿಂದ ನಮಗೂ ಅದಕ್ಕೂ ಸಂಬಂಧವಿಲ್ಲ. ಯಾರಿಗೆ ಜಮೀನು ಬೇಕಾಗಿದೆಯೋ, ಅವರ ರೈತರ ಹತ್ತಿರ ಹೋಗಬೇಕು. ರೈತರು ಹೇಳಿದಂತಹ ಬೆಲೆಗೆ ಏನಾದರೂ ಅವರಿಗೆ ಒಪ್ಪಿಗೆಯಾದರೆ ಮಾತ್ರ. ಇದಕ್ಕೆ ನಾವು middleman ಆಗಿ ಕೆಲಸ ಮಾಡುವುದಿಲ್ಲ. ಕಾರ್ಖಾನೆ ಅಥವಾ ಶಿಕ್ಷಣ ಸಂಸ್ಥೆಗಳನ್ನು ಮಾಡಲು ಜಮೀನುಗಳನ್ನು ಕೊಂಡುಕೊಳ್ಳಲು ಯಾರು ರೈತರ ಬಳಿ ಹೋಗುತ್ತಾರೋ, ಅವರ ಮಧ್ಯೆ ಮಾತುಕತೆಯೇ ಹೊರತು, ನಾವು ಇದರಲ್ಲಿ ಮಧ್ಯ ಪ್ರವೇಶ ಮಾಡುವುದಿಲ್ಲ. ಇದರಿಂದ ಏನಾಗುತ್ತದೆ ಎಂದರೆ, ಹಿಂದೆ acquisition ಮಾಡುತ್ತಿದ್ದರು. ಜಮೀನುಗಳನ್ನು ಕಡಿಮೆ ಬೆಲೆಗೆ ಮಾರುತ್ತಿದ್ದರು. ರೈತರ ಜಮೀನುಗಳನ್ನು ಕಿತ್ತುಕೊಳ್ಳುತ್ತಿದ್ದರು. ಈಗ ಆ ರೀತಿ ಆಗುವುದಿಲ್ಲ. ರೈತರಿಗೆ ಇದರಿಂದ ಉಪಯೋಗವಾಗಬೇಕು. ಅವರಿಗೆ ಸರಿಯಾದಂತಹ ಬೆಲೆ ಸಿಗಬೇಕು.

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭಾ ಕ್ಷೇತ್ರ):–** ಇದರ ಜೊತೆಗೆ 17(A), (B) ಗೆ ಏನಾದರು ಇದೆಯಾ.

**ಶ್ರೀ ಆರ್. ಅಶೋಕ್ :–** ಇದರ ಬಗ್ಗೆ ಹೇಳುತ್ತೇನೆ. ಯಾರು ಕೈಗಾರಿಕೆ ಮಾಡುತ್ತಾರೋ, ಇದೆಲ್ಲಾ ಹೊರಟು ಹೋಗುತ್ತದೆ. 17(A), (B) ಇರಬಹುದು exemptions automatically ಸಿಗುತ್ತದೆ.

ಆ ದೃಷ್ಟಿಯಿಂದ ಕರ್ನಾಟಕದಲ್ಲಿರುವಂತಹ ನಮ್ಮ ಜನಗಳಿಗೆ ಉದ್ಯೋಗ ಸಿಗಬೇಕೆಂಬ ಸದುದ್ದೇಶದಿಂದ ಈ ಹಿಂದೆ ಇದ್ದಂತಹ ವ್ಯಾಪಾರೀಕರಣವನ್ನು ತೆಗೆದು ಹಾಕಿದ್ದೇವೆ. Real estate ತೆಗೆದು ಹಾಕಿ, ಅವರು ಯಾವ ಉದ್ದೇಶಕ್ಕಾಗಿ ಭೂಮಿಯನ್ನು ತೆಗೆದುಕೊಂಡಿರುತ್ತಾರೋ, ಅದೇ ಉದ್ದೇಶದ ಸಲುವಾಗಿ ಭೂಮಿಯನ್ನು ಮಾರಬೇಕು ಎನ್ನುವ ದೃಷ್ಟಿಯಿಂದ ಈ ಕಾಯಿದೆಯನ್ನು ತಂದಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** 2014 ಕಾಯಿದೆಯಲ್ಲಿ ಏನು ತಿದ್ದುಪಡಿಯಾಗಿತ್ತು ಎಂಬುದರ ಬಗ್ಗೆ ಸ್ವಲ್ಪ ಬೆಳಕು ಚೆಲ್ಲಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸಿ.ಎಂ ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):–** ಇದನ್ನು retrospective ಆಗಿ ಕೊಟ್ಟಿದ್ದಾರೋ ಅಥವಾ ಇವತ್ತಿನಿಂದ ಕೊಟ್ಟಿದ್ದಾರೆಯೇ?

**ಸಭಾಪತಿಯವರು:–** ಅವರು ಚರ್ಚೆಯ ನಂತರ ಉತ್ತರವನ್ನು ಕೊಡುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಅದರ ಮೇಲೆ ಚರ್ಚೆ ಮಾಡುವುದಕ್ಕೆ ನಮಗೆ ಅನುಕೂಲವಾಗುತ್ತದೆ. 2014ರ ಕಾಯಿದೆಯಲ್ಲಿ ಇದಕ್ಕೆ ಅವಕಾಶವಿತ್ತು ಎಂದು ಮಾನ್ಯ ಸಚಿವರು ಹೇಳಿದ್ದಾರೆ. 2014 ರಲ್ಲಿ ಅವಕಾಶವಿರುವಂತಹ ಕಾನೂನು ನಮ್ಮ ಗಮನಕ್ಕೆ ಬಂದಿಲ್ಲ.

**ಶ್ರೀ ಆರ್. ಅಶೋಕ್:–** 109(2) ಪರಂತು, ಯೋಜನೆಯ ವಿಸ್ತರಣೆಯ ಉದ್ದೇಶಕ್ಕಾಗಿ ಅಥವಾ ಆರ್ಥಿಕ ಮುಗ್ಗಟ್ಟನ್ನು ನಿಭಾಯಿಸುವುದಕ್ಕಾಗಿ, ಅಂದರೆ ಯಾರು ಕೈಗಾರಿಕೆಯನ್ನು ಮಾಡುತ್ತಾರೆ, ಆಗ ಅದು ನಷ್ಟವಾಗಿ ಹೋಗುತ್ತದೆ. ಅಲ್ಲಿರುವಂತಹ ಕೂಲಿ ಕಾರ್ಮಿಕರು ಅಂದರೆ ಐದು ನೂರು, ಒಂದು ಸಾವಿರ, ಎರಡು ಸಾವಿರ ಜನರು ಇರಬಹುದು. ಅವರೆಲ್ಲರೂ ಬೀದಿಗೆ ಬರುವಂತಹ ಪರಿಸ್ಥಿತಿಗೆ ಬಂದಾಗ ಅಥವಾ ಯಾರು ಕೈಗಾರಿಕೆ ಮಾಡಲು ಸಾಲವನ್ನು ತೆಗೆದುಕೊಂಡಿರುತ್ತಾರೋ ಅವರು ಸಾಲವನ್ನು ತೀರಿಸುವುದಕ್ಕಾಗದೇ ನಷ್ಟವಾದಂತಹ ಸಂದರ್ಭದಲ್ಲಿ ಅವರು ಅದನ್ನು ಮಾರಾಟ ಮಾಡುವುದಕ್ಕೆ ಹಿಂದೆಯೂ ಅವಕಾಶವಿತ್ತು. ಆಗ ಅದನ್ನು ಸರಳೀಕರಣ ಮಾಡಿದಿರಿ. ಅದನ್ನು ಮಾಡುವುದಕ್ಕೆ ಹಿಂದೆಯೂ ಅವಕಾಶವಿತ್ತು. ಅದಕ್ಕೊಂದು ಕಮಿಟಿಯನ್ನು ನೇಮಕ ಮಾಡಲು ಮುಂದಾದರೆ, ಅದೆಲ್ಲಾ ಬಹಳ ತಡವಾಗುತ್ತಿತ್ತು. ಪ್ರತಿದಿನ ಬಡ್ಡಿ ಜಾಸ್ತಿಯಾಗುತ್ತಿತ್ತು.

ಆ ಕಾಯಿದೆಯಲ್ಲಿರುವುದರ ಬಗ್ಗೆ ಹೇಳುತ್ತೇನೆ ನೋಡಿ.

ಅಥವಾ ಭೂಮಿಯ ಬಳಕೆಯನ್ನು ಬದಲಾಯಿಸುವುದಕ್ಕಾಗಿ ಯಾವುದೇ ಕಂಪನಿ ಅಥವಾ ಸಂಸ್ಥೆಯು, 109ನೇ ಪ್ರಕರಣದ ಅಡಿಯಲ್ಲಿ ಅನುಮತಿಯನ್ನು ಪಡೆದ ದಿನಾಂಕದಿಂದ ಏಳು ವರ್ಷಗಳ ಅವಧಿಯ ತರುವಾಯ ಅರ್ಜಿಯನ್ನು ಸಲ್ಲಿಸಿದಾಗ, ಅದನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಮುಖ್ಯಸ್ಥರಾಗಿರುವ ಉನ್ನತಾಧಿಕಾರ ಸಮಿತಿಯು, ಸಂದರ್ಭಾನುಸಾರ ಪ್ರಕರಣದ ಆಧಾರದ ಮೇಲೆ ಯುಕ್ತವೆಂದು ಭಾವಿಸಲಾದ ಷರತ್ತುಗಳಿಗೊಳಪಟ್ಟು ಪರಿಗಣಿಸತಕ್ಕದ್ದು. ಅದರಲ್ಲಿ ಏನಿದೆ ಎಂದರೆ, ಭೂಮಿಯ ಬಳಕೆಯನ್ನು ಬದಲಾಯಿಸುವುದಕ್ಕಾಗಿ, ಅಂದರೆ ಯಾವ ಉದ್ದೇಶಕ್ಕಾಗಿ ಭೂಮಿ ತೆಗೆದುಕೊಂಡಿರುತ್ತಾನೋ, ಅದನ್ನು ಬದಲಾಯಿಸಿಕೊಳ್ಳಬಹುದು. ಯಾರು ಕೈಗಾರಿಕೆಯನ್ನು ಮಾಡಲು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭೂಮಿಯನ್ನು ತೆಗೆದುಕೊಂಡಿರುತ್ತಾನೋ, ಅದನ್ನು residential ಹಾಗೂ commercial ಗೆ ಬದಲಾಯಿಸಿಕೊಳ್ಳಬಹುದಾಗಿತ್ತು. ಈಗ ಅದೂ ಇಲ್ಲ. ನಾನು ಅದನ್ನು ತೆಗೆದು ಹಾಕಿದ್ದೇನೆ. ಯಾವ ಉದ್ದೇಶಕ್ಕೆ ಭೂಮಿ ಹಂಚಿಕೆಯಾಗಿರುತ್ತದೆಯೋ, ಆ ಉದ್ದೇಶವನ್ನು ಬಿಟ್ಟು ಮಾರುವಂತಿಲ್ಲ. ನೀವು ಕಾರ್ಖಾನೆ ಮಾಡಲು ಜಾಗವನ್ನು ತೆಗೆದುಕೊಂಡಿದ್ದರೆ, ಅದನ್ನು ಕಾರ್ಖಾನೆಯವರೆಗೆ ಮಾರಾಟ ಮಾಡಬೇಕು. Education Centre ಗೆ ಭೂಮಿ ಇದ್ದರೆ, ಅದನ್ನು Education Centre ನವರಿಗೆ ಕೊಡಬೇಕು. ಅದೇ ಉದ್ದೇಶದಲ್ಲಿಯೇ, ಅದು ಮುಂದುವರೆಯಬೇಕು. ಇದನ್ನು ಸದುದ್ದೇಶದಿಂದ ತಂದಿರುವಂತಹ ಕಾಯಿದೆ. ಅದಕ್ಕೋಸ್ಕರ ತಾವೆಲ್ಲರೂ ಇದಕ್ಕೆ ಅನುಮೋದನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ಮಾನ್ಯ ಕೆ.ಎ. ತಿಪ್ಪೇಸ್ವಾಮಿಯವರೇ ಮಾತನಾಡಿ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನವನ್ನು ಹೊಂದಿದವರು):–**ಮಾನ್ಯ ಸಭಾಪತಿಯವರೇ, ದೇಶದಲ್ಲಿ ಬಹುಶಃ ಪ್ರಗತಿಪರ ಕಾಯಿದೆ ಎಂದರೆ, 1970 ರ ದಶಕದಲ್ಲಿ ಅಂದರೆ ದಿನಾಂಕ 01.03.1974ರಲ್ಲಿ ತಂದಂತಹ ಭೂ ಸುಧಾರಣೆ ಕಾಯಿದೆ ಇವತ್ತು ಅದರ ರೆಕ್ಕೆ–ಪುಕ್ಕ ಪೂರ್ತಿ ಹೋಗಿಬಿಟ್ಟಿದೆ. ಏಕೆಂದರೆ, ಒಂದು ಕಾಲದಲ್ಲಿ non agriculturist ರೂ.1200/–ಗಿಂತ ಜಾಸ್ತಿ ಆದಾಯವಿದ್ದರೆ, ಕೃಷಿ ಜಮೀನನ್ನು ಹೊಂದಲಾರದಂತೆ ಇತ್ತು. ಇವತ್ತು ಸುಮಾರು ಇಪ್ಪತ್ತೈದು ಲಕ್ಷ ರೂಪಾಯಿಗಳವರೆಗೆ ಹೋಗಿದೆ.

ಮಾನ್ಯ ಸಭಾಪತಿಯವರೇ, ಇದಕ್ಕೆ ನಮ್ಮದು ವಿರೋಧವಿಲ್ಲ. ರಾಜ್ಯದಲ್ಲಿ ಯಾವುದೇ ರೀತಿಯ ಕೈಗಾರಿಕೆ ಬರುವುದರ ಬಗ್ಗೆ ಮಾಡಬಹುದು. ಆದರೆ ಇದರಲ್ಲಿ ಏನಾಗಿದೆ ಎಂದು ಹೇಳಿದರೆ, ಯಾವುದೇ ವ್ಯಕ್ತಿ ಏಳು ವರ್ಷಗಳ ಕಾಲ State High Level Committee ನಲ್ಲಿ clear ಮಾಡಿಕೊಂಡು ಸುಮಾರು 40 units ಎಂದು ಹೇಳಿದರೆ A class land. ಅದು D class ಗೆ convert ಮಾಡಿದರೆ 216 ಎಕರೆಗಳಾಗುತ್ತದೆ. ಒಂದು A class land is equal to 5.16 acres of D class land ಇದೆ. A class land ಎಂದು ಹೇಳಿದರೆ, ಎಲ್ಲಿ ಸರ್ಕಾರಿ ನೀರಾವರಿ ಕಾಲುವೇ ಮುಖೇನ ಅಥವಾ ಕೆರೆಕಟ್ಟೆಯ ಮುಖೇನ ಎರಡು ಭತ್ತದ ಬೆಳೆಯನ್ನು ಬೆಳೆಯುತ್ತಾರೆ ಅಥವಾ ಒಂದು sugar crop ಬೆಳೆದರೂ ಕೂಡ ಅದನ್ನು A class land ಎಂದು classify ಮಾಡಿದ್ದಾರೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅರ್ಧದಷ್ಟು ಜಮೀನು ಫಲವತ್ತತೆ ಇರಬೇಕು. ಅಂತಹ ಜಮೀನನ್ನು A class land ಎಂದು ಕರೆಯುತ್ತಾರೆ. ಅದಕ್ಕೆ ಪರಿವರ್ತಿಸಿದರೆ, ಸುಮಾರು 216 ಎಕರೆಗಳಾಗುತ್ತದೆ. ಇಲ್ಲಿ ಏನಾಗುತ್ತದೆ ಎಂದು ಹೇಳಿದರೆ, ಸರ್ಕಾರದ ಸದುದ್ದೇಶವಿರಬಹುದು. ಕೇವಲ ಸರ್ಕಾರದಲ್ಲಿ red tapism ಇದೆ. ಫಾರಿನ್ ಇನ್‌ವೆಸ್ಟ್‌ಮೆಂಟ್ ಬರತಕ್ಕಂತದ್ದು ಅಥವಾ ಬೇರೆ ರಾಜ್ಯಗಳಿಂದ ಕೈಗಾರಿಕೆಗಳ ನೀತಿಯ ಸಲುವಾಗಿ ಒಳ್ಳೆಯ e-bis ನ್ನು ಮಾಡಬೇಕು. ಆ ದೃಷ್ಟಿಯಲ್ಲಿ ಒಳ್ಳೆಯದಿರಬಹುದು. ಆದರೆ ಕೇವಲ ಬರೀ ಇದೇ ದೃಷ್ಟಿಯಲ್ಲಿ ಏಳು ವರ್ಷಗಳ ಕಾಲ ನಾವು ಈ ತರಹ ಇನ್ನೂರು ಎಕರೆ ಜಾಗ ತೆಗೆದುಕೊಳ್ಳುವುದು, ಕಂಪನಿ ನಡೆಯಿತು. ಆದರೆ ಕಂಪನಿ ನಾಳೆ ಸರಿಯಾಗಿ ನಡೆಯಲಿಲ್ಲ. ಅದನ್ನು ಬೇರೆ ಕಂಪನಿಗೆ ಮಾರಾಟ ಮಾಡತಕ್ಕಂತಹ ಅದೇ ಒಂದು ಉದ್ಯೋಗವಾಗಬಾರದು. ಆ ದೃಷ್ಟಿಯಿಂದ ಸರ್ಕಾರ ಇದನ್ನು ಪರಿಶೀಲನೆ ಮಾಡಬೇಕೆಂಬುದು ಹೇಳಿ ನನ್ನ ಭಾವನೆ. ಇನ್ನೂ 109 ಕಲಂ ನಲ್ಲಿ exemption ಏನಿದೆ, ಒಂದು ಸಾರಿ exemption ನಲ್ಲಿ ಕೊಡವುದು. ಅದರಲ್ಲಿ 63 ಕಲಂಗಳೂ ಬರುತ್ತದೆ. Land holding ಕೂಡ ಅದರಲ್ಲಿ exemption ಬರುತ್ತದೆ. 79 (A) and (B) ಕೂಡ cover ಆಗುತ್ತದೆ. ಆದ್ದರಿಂದ ಇದನ್ನು ಪರ್ಯಾಲೋಚನೆ ಮಾಡಬೇಕು. ಏಕೆ ಎಂದು ಹೇಳಿದರೆ, ಬೆಂಗಳೂರು ಸುತ್ತಮುತ್ತಲಿನಲ್ಲಿರುವ ಭೂಮಿಯನ್ನು ನಾಳೆ ಯಾವುದೇ ಸರ್ಕಾರದ ಯಾವುದೇ ಯೋಜನೆಗೆ ಹಾಗೂ ಯಾವುದೇ ಉದ್ದೇಶಕ್ಕೆ ಒಂದು ಇಂಚು ಕೂಡ ಜಾಗ ಸಿಗುವುದಿಲ್ಲ. Real estate or Industrialist ಅವರ್‍ಯಾರಿದ್ದಾರೋ, ಅವರಿಗೆ ಹೋಗುತ್ತದೆ. ದಯವಿಟ್ಟು, ಇದನ್ನು ಪರ್ಯಾಲೋಚನೆ ಮಾಡುವುದಕ್ಕಿಂತ ಮುಂಚಿತವಾಗಿ ಸರ್ಕಾರ ಮತ್ತೊಮ್ಮೆ ಇದನ್ನು ಪರಿಶೀಲನೆ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಪಿ.ಆರ್. ರಮೇಶ್‌ರವರೇ ಮಾತನಾಡಿ.

**ಶ್ರೀ ಪಿ.ಆರ್. ರಮೇಶ್ (ನಾಮ ನಿರ್ದೇಶನವನ್ನು ಹೊಂದಿದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈಗ ಉತ್ತರ ಕೊಟ್ಟಿದ್ದಾರೆ. ಇದೊಂದು ಒಳ್ಳೆಯ ಬೆಳವಣಿಗೆಯಾಗಿದೆ. ಕಂದಾಯ ಇಲಾಖೆಯಲ್ಲಿ ತಂದಿರುವಂತಹ ಈ ತಿದ್ದುಪಡಿ. ಇಲ್ಲಿ ಪ್ರತಿಯೊಂದು ಜಿಲ್ಲೆಯಲ್ಲೂ ಅದರದೇ ಆದಂತಹ ಒಂದು Comprehensive Development Plan or Master Plan ಗಳು ಇರುತ್ತವೆ. ಅಂತಹ ಸಮಯದಲ್ಲಿ ನೀವೂ ಇವತ್ತು ರಾಜಾಜಿನಗರದಲ್ಲಿ ಒಂದು Industrial Area ಇದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇವತ್ತು ಅಲ್ಲಿ ಯಾವುದೇ Industries ಗಳು ಇಲ್ಲ. ಅಲ್ಲಿ ಕಲ್ಯಾಣ ಮಂಟಪಗಳಾಗಿವೆ. ಇಲ್ಲಿ ಹಿಂದೆ ODP ಯಲ್ಲೋ ಅಥವಾ CDP ಯಲ್ಲೋ ಅಂದು Industry ಎಂದು ತೋರಿಸಿದರು. ಇವತ್ತು Commercial ಅಂತಾ, ನಿಮ್ಮ land views ಇರುವುದು ಅದು Urban Development Department ಗೆ ಬರುತ್ತದೆ. ಅದು Town and Country Planning Act ನಲ್ಲಿ ಬರುತ್ತದೆ. ನೀವು ಇವತ್ತು ಕಂದಾಯ ಇಲಾಖೆಯಲ್ಲಿ ಇದನ್ನು ತಂದಿರುವಂತಹದ್ದು. ಇದು Urban Development ನಲ್ಲಿ ನೀವು parallel ಆಗಿ ಮಾಡಲಿಲ್ಲವೆಂದರೆ, ಇದು controversy ಆಗುತ್ತದೆ. ನಿಮ್ಮಲ್ಲಿ ಮಾಡುವಂತಹದ್ದು, ಅವರಲ್ಲೂ ಮಾಡದೇ ಇರಬಹುದು, change ಆಗುತ್ತದೆ. ಹಾಗಾಗಿ ಇದನ್ನು ಸರಿಪಡಿಸುವುದಕ್ಕೆ ಇದರಲ್ಲೊಂದು clause ಹಾಕಬೇಕಾಗುತ್ತದೆ. ನಿಮ್ಮ ಆಯಾಯ Town Planning Authority ಅಥವಾ Planning Authority ಏನಿರುತ್ತದೆ. CDP ಅಥವಾ, Master Plan ಅಥವಾ, Revised Master Plan ಏನೋ ಇರುತ್ತದೆ. ಅದರಲ್ಲಿ ನೀವು ಇದನ್ನು ಅಳವಡಿಸಿಕೊಳ್ಳುವಂತಹದ್ದಕ್ಕೆ provision ನಿಮ್ಮ ಇಲಾಖೆಯಲ್ಲಿ ತರುವುದು ಬಹಳ ಮುಖ್ಯ.

**ಸಭಾಪತಿಯವರು:–** ಮಾನ್ಯ ಕೆ.ಟಿ. ಶ್ರೀಕಂಠೇಗೌಡರೇ ಮಾತನಾಡಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ಭೂ ಸುಧಾರಣೆ ವಿಧೇಯಕವನ್ನು ಏಕೆ ಆಳುವ ಸರ್ಕಾರ ತಂದಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಕಳೆದ ಐದು ವರ್ಷಗಳ ಹಿಂದೆ ಇದೇ ಸದನದಲ್ಲಿ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಇಂತಹದ್ದೇ ತಿದ್ದುಪಡಿಯ ತಂದಾಗ ಪ್ರಬಲವಾಗಿ ವಿರೋಧ ಮಾಡಿದಂತಹವರು ತಾವು.

(ಮುಂದು...)

(664)23.03.2020 1.20 ಟಿಸಿಹೆಚ್–ಬಿಎನ್ಎಸ್

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** (ಮುಂದು)

ಅವೊತ್ತು ಇಂತಹ ಭೂಮಿಯನ್ನು ಖರೀದಿ ಮಾಡುವುದಕ್ಕೆ ಎರಡು ಲಕ್ಷ ಆದಾಯ ಹೊಂದಿರತಕ್ಕಂಥ ರೈತರಿಗೆ ಅವಕಾಶವೆಂದು ಇತ್ತು. ನಂತರ ಅದನ್ನು 25 ಲಕ್ಷಕ್ಕೆ ಹೆಚ್ಚಿಸಿದಾಗ ಆಳುವ ಸರ್ಕಾರದಿಂದ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂದರೆ ಬಿ.ಜೆ.ಪಿ., ಸರ್ಕಾರದಿಂದ ಪೂರ್ಣವಾದ ವಿರೋಧ ವ್ಯಕ್ತವಾಗಿತ್ತು. ನಾನೇಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ತಾವು ಇವತ್ತು ತಂದಿರತಕ್ಕಂಥ ಬಿಲ್‌ನ ಪುಟ ಸಂಖ್ಯೆ 2ರಲ್ಲಿ 63, 79ಎ, 79ಬಿ ಅಥವಾ 80ನೇ ಪ್ರಕರಣಗಳ ಉಪಬಂಧಗಳಿಂದ ಸರ್ಕಾರವು ವಿನಾಯಿತಿಸಿದೆ ಎಂಬುದಾಗಿ ಭಾವಿಸತಕ್ಕದ್ದು ಎಂದು ಹೇಳಿದ್ದೀರಿ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರು ಹೇಳಿದಂತೆ, ನಾವು ಈ ಬಿಲ್‌ನಲ್ಲಿ 63, 79ಎ, 79ಬಿ ಅಥವಾ 80 ನೇ ಪ್ರಕರಣಗಳ ಉಪಬಂಧಗಳು ಇವ್ಯಾವುದನ್ನೂ ಟಚ್ ಮಾಡುತ್ತಿಲ್ಲ. ಕರ್ನಾಟಕ ಭೂ ಸುಧಾರಣೆ ಕಾಯಿದೆಯ ಕಲಂ 109ರ ಅಡಿಯಲ್ಲಿ more than ceiling limit ಕ್ಕಿಂತ ಹೆಚ್ಚಿಗೆ ಜಮೀನು ಕೊಂಡುಕೊಳ್ಳುವುದಕ್ಕೆ ಹಿಂದೆ ಅವಕಾಶ ಕಲ್ಪಿಸಲಾಗಿತ್ತು. ಆ ಸ್ಥಿತಿ ಇದ್ದವರಿಗೆ ಆಕಸ್ಮಾತ್ unit sick ಆಗಿ Institutions fail ಆಗಿ ನಡೆಸುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥವರಿಗೆ ಅದೇ ಕಾರ್ಯ ಮಾಡತಕ್ಕಂಥವರಿಗೆ ಅದನ್ನು ಮಾರಬಹುದು ಎಂದು ವಿನಾಯಿತಿ ಕೊಡುವುದಕ್ಕೆ ಈ ಬಿಲ್‌ನ್ನು ತಂದಿದ್ದೇವೆ ಅಷ್ಟೆ. ಈ Land Ceiling Act ನಲ್ಲಿ ನಾವು ಏನನ್ನೂ ಟಚ್ ಮಾಡಿಲ್ಲ. ಅದು clear ಆಗಿದೆ. ಕಲಂ 109 ರಲ್ಲಿ ಯಾರಿಗೆ exemption given by Deputy Commissioner, exemption given by Government, ಯಾರಿಗೂ ಸುಮಾರು 54-56 ಎಕರೆಗಿಂತ ಜಾಸ್ತಿ ಜಮೀನನ್ನು ಕೊಂಡುಕೊಳ್ಳಬೇಕಾಗಿತ್ತೋ, ಇದು ಕೊಂಡುಕೊಂಡಿರತಕ್ಕಂಥ ಜಮೀನು. ಆದರೆ ಇದನ್ನು acquire ಮಾಡಿಕೊಂಡಿರತಕ್ಕಂಥ ಜಮೀನು ಅಲ್ಲ. ಸರ್ಕಾರ ಕೊಟ್ಟಿರತಕ್ಕಂಥ ಜಮೀನು ಅಲ್ಲ. ಯಾರೋ ಒಬ್ಬ ವ್ಯಕ್ತಿ ಯಾರೊಬ್ಬರ ಹತ್ತಿರ ಜಮೀನು ಖರೀದಿ ಮಾಡುವುದಕ್ಕೆ ಸರ್ಕಾರ ಅನುಮತಿ ಕೊಡುತ್ತಿತ್ತು. ಅದು ಸಿಕ್ ಆಗಿಬಿಡುತ್ತದೆ. ಆಗ ಇಂಡಸ್ಟ್ರಿ ನಡೆಯುವುದಿಲ್ಲ, ಅದನ್ನು ಮಾರಾಟ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲವೆಂದು, ಅದನ್ನು ಮಾರಾಟ ಮಾಡಿ ಅದೇ ರೀತಿ ಇಂಡಸ್ಟ್ರಿ, ಅದೇ ಸಂಸ್ಥೆ ನಡೆಸುವುದಕ್ಕೆ ಮಾಡುತ್ತಿದ್ದೇವೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ಬರೀ ಏಳು ವರ್ಷಗಳವರಗೆ ಮಾತ್ರ ಕೊಟ್ಟಿದ್ದೀರಿ. Gestation period is minimum seven years only.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಉದ್ದೇಶ ಬದಲಾವಣೆಯಾಗುವುದಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಚಿವರೇ, ತಾವು ಓರಲ್ ಆಗಿ ಈ submission ಮಾಡುತ್ತಿದ್ದೀರಿ. ತಾವು ತಂದಿರತಕ್ಕಂಥ ಬಿಲ್‌ನ ಪುಟ ಸಂಖ್ಯೆ2ರಲ್ಲಿ ಮೊದಲನೆಯ ಪ್ಯಾರದ 3ನೇ ಲೈನ್‌ನಲ್ಲಿ "63, 79ಎ, 79ಬಿ ಅಥವಾ 80 ನೇ ಪ್ರಕರಣಗಳ ಉಪಬಂಧಗಳಿಂದ ಸರ್ಕಾರವು ವಿನಾಯಿತಿಸಿದೆ ಎಂಬುದಾಗಿ ಭಾವಿಸತಕ್ಕದ್ದು" ಎಂದು ಹೇಳಿದ್ದೀರಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಅವೊತ್ತೇ ಆ Clause ಗಳಿಗೆ ಕಲಂ 109ರಲ್ಲಿ ವಿನಾಯಿತಿ ನೀಡಲಾಗಿದೆ. ಆದರೆ ಈಗ ನಾವೇನು ಮಾಡಿದ್ದೇವೆಂದರೆ, ಒಂದು ಇಂಡಸ್ಟ್ರಿ ಪ್ರಾರಂಭವಾಗಿ ಸುಮಾರು 7 ವರ್ಷ ಆಗಿದ್ದು, ಅದನ್ನು ನಡೆಸುವುಕ್ಕೆ ಆಗುತ್ತಿಲ್ಲ. ಅದನ್ನು ಮಾರಾಟ ಮಾಡುವುದಕ್ಕೂ ಆಗುತ್ತಿಲ್ಲ. ಅದೇ ರೀತಿ ಒಂದು ಸಂಸ್ಥೆ ಕಟ್ಟಿ ನಡೆಸುತ್ತಿದ್ದು ಮತ್ತೆ ಅದನ್ನು ನಡೆಸಲು ಸಾಧ್ಯವಾಗದೇ disable ಆದಾಗ, ಮತ್ತೆ ಅದೇ ಉದ್ದೇಶಕ್ಕಾಗಿ ಅದನ್ನು ಬೇರೆಯವರಿಗೆ ಮಾರಾಟ ಮಾಡಿಕೊಳ್ಳಲು ಅನುಮತಿ ಕೊಡುವುದಕ್ಕಾಗಿ ಈ ಬಿಲ್‌ನ್ನು ತಂದಿದ್ದೇವೆ ಅಷ್ಟೆ ಮತ್ತೆ ಏನೂ ತಿದ್ದುಪಡಿ ಇಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಅಷ್ಟಕ್ಕೆ ಮಿತಿಯಾಗಿ ಉಳ್ಳವರಿಗೆ, ಅನುಕೂಲಸ್ಥರಿಗೆ.. .

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಇದರಲ್ಲಿ ಅವರ ಮನಸ್ಸಿಗೆ ಬಂದಂತೆ ಮಾರಾಟ ಮಾಡುವುದಕ್ಕಾಗುವುದಿಲ್ಲ. ಆ ಇಂಡಸ್ಟ್ರಿ ಅಥವಾ ಸಂಸ್ಥೆ ನಡೆಸುತ್ತಿದ್ದಂತಹ ಮಾಲೀಕ ನಮಗೆ ನಷ್ಟವಾಗಿದೆಯೆಂದು prove ಮಾಡಬೇಕು. ಅವನು ಬ್ಯಾಂಕ್‌ನಲ್ಲಿ ಎಷ್ಟು ಸಾಲ ಹೊಂದಿದ್ದಾನೆಂದು prove ಮಾಡಬೇಕು. ಅದರಲ್ಲಿ ಎಷ್ಟು ಜನ ನೌಕರರಿದ್ದಾರೆ, ಮುಂದೆ ಅವರ ಗತಿ ಏನು ಎಂಬುದನ್ನು prove ಮಾಡಬೇಕು. ಅದಾದ ನಂತರ ಅವರು ಮಾರಾಟ ಮಾಡಲು ಅನುಮತಿ ಕೊಟ್ಟಿರುವುದು. ಹಾಗೆಯೇ ಏಕಾಏಕಿ ಅದನ್ನು ಮಾರಾಟ ಮಾಡಿಕೊಂಡು ಹೋಗುವುಕ್ಕೆ ಆಗುವುದಿಲ್ಲ. ಇದೆಲ್ಲಾ ಇದೆ.

**ಶ್ರೀ ಎಸ್.ರುದ್ರೇಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ,. . .

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ರೈತ ಮುಖಂಡರ ಆತಂಕ ಏನಿದೆಯೆಂದರೆ, ನೀವು ಕೃಷಿಕನಾಗಿರಬೇಕು, ಇಲ್ಲವೇ ಕೃಷಿ ಕುಟುಂಬದವನು ಮಾತ್ರ ಈ ರೀತಿಯ ವಹಿವಾಟು ಮಾಡಬೇಕು ಎಂದು ಇರುವುದಕ್ಕೆ ತೊಂದರೆ ಆಗುವುದಿಲ್ಲವೇ?

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಇನ್ನೊಬ್ಬರು ಸದಸ್ಯರು ಕೇಳಿದರು, ಒಂದುವೇಳೆ ಆತ ಏನಾದರೂ 7 ವರ್ಷದೊಳಗೆ ಆ ಇಂಡಸ್ಟ್ರಿ ಅಥವಾ ಸಂಸ್ಥೆಯನ್ನು ಸ್ಥಾಪನೆ ಮಾಡದಿದ್ದರೆ, ಅದನ್ನು ಮಾರಾಟ ಮಾಡುವುದಕ್ಕೆ ಪರ್ಮಿಷನ್ ಸಿಗುವುದಿಲ್ಲ. ಎರಡು ವರ್ಷದಲ್ಲಿ ಅವನು ಏನಾದರು ಇಂಡಸ್ಟ್ರಿ, ಸಂಸ್ಥೆ ಅಥವಾ ವಿದ್ಯಾಸಂಸ್ಥೆಯನ್ನು ಕಟ್ಟಲಿಲ್ಲವೆಂದರೆ ಎರಡು ವರ್ಷದಲ್ಲೇ ವಾಪಸ್ಸು ಸರ್ಕಾರಕ್ಕೆ ತೆಗೆದುಕೊಳ್ಳುವಂತಹ ಕಾನೂನು ಹಾಗೆಯೇ ಇರುತ್ತದೆ, ಅದನ್ನು ನಾವು ತಿದ್ದುಪಡಿ ಮಾಡುವುದಿಲ್ಲ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಎರಡನ್ನು ಒಟ್ಟಿಗೆ ಓದಿದಾಗ ಗೊತ್ತಾಗುತ್ತದೆ.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ನಾನು ಇಲ್ಲಿ ಸರ್ಕಾರದ ಪ್ರಶ್ನೆಯನ್ನು ಮಾಡುತ್ತಿಲ್ಲ, ಸರ್ಕಾರದ acquisition. ಅವನು ಕೊಟ್ಟಿರತಕ್ಕಂಥ ದುಡ್ಡಿನಲ್ಲೇ ಅವನೇ ಖರೀದಿ ಮಾಡಿ, ಅವನೇ ವ್ಯಾಪಾರ ಮಾಡಿ ರೈತರಿಂದ ತೆಗೆದುಕೊಂಡಿರುವುದನ್ನೇ ನಾವು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಕಾನೂನಿನಲ್ಲಿ ಅಧಿಕಾರವಿದೆ. ಅವರು ತೆಗೆದುಕೊಂಡಿರತಕ್ಕಂಥ ಜಮೀನನ್ನು ಸರ್ಕಾರ ಎರಡು ವರ್ಷದಲ್ಲಿ purpose ಗೆ ಉಪಯೋಗಿಸಲಿಲ್ಲವೆಂದರೆ, ವಾಪಸ್ಸು ಪಡೆಯುವಂತಹ ಅಧಿಕಾರ ಸರ್ಕಾರದಲ್ಲಿ retain ಆಗಿಯೇ ಇದೆ. ಅದನ್ನು ನಾವೇನೂ ಬದಲಾವಣೆ ಮಾಡುವುದಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಇದು ಕೃಷಿ ವಲಯ . . .

**ಸಭಾಪತಿಯವರು:–** ಮಾನ್ಯ ಆರ್.ಅಶೋಕ್‌ರವರೇ, ತಾವು ಕೊನೆಯಲ್ಲಿ ಒಂದೇ ಬಾರಿಗೆ ಉತ್ತರ ಕೊಡಿ.

**ಶ್ರೀ ಎಸ್.ರುದ್ರೇಗೌಡ:–** ಮಾನ್ಯ ಸಭಾಪತಿಯವರೇ, ಕರ್ನಾಟಕ ಭೂಸುಧಾರಣೆಗಳ ತಿದ್ದುಪಡಿ ವಿದೇಯಕ 2020 ನ್ನು ತಂದಿರುವುದು ಖಂಡಿತವಾಗಿಯು ಕೈಗಾರಿಕಾ ಬೆಳವಣಿಗೆಗೆ ಬಹಳ ಒಳ್ಳೆಯ ಪ್ರೋತ್ಸಾಹವೆಂದು ನಾನು ಭಾವಿಸುತ್ತೇನೆ. ಆದರೆ, ಇದರಲ್ಲಿ ಒಂದು ಬಾರಿ ನಾವು High Power

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Committee ಯಲ್ಲಿ ಒಪ್ಪಿಗೆ ಪಡೆದು, ರಾಜ್ಯದ ಯಾವುದೇ ಭಾಗದಲ್ಲಿ ಜಮೀನು ಖರೀದಿ ಮಾಡಬಹುದಾ, ಅದಕ್ಕೆ ಏನಾದರೂ ಷರತ್ತು ಇದೆಯೇ? ಹಾಗಾದರೆ, ಸರ್ಕಾರ ಮುಂದಿನ ಬೆಳವಣಿಗೆ ದೃಷ್ಟಿಯಿಂದ ಬೇಕಾದಂತಹ ಮೂಲಭೂತ ಸೌಕರ್ಯಗಳನ್ನು ಕೊಡುತ್ತದೆ ಎನ್ನುವುದು ಅರ್ಥ. ಅದರ ಬಗ್ಗೆ ಬಿಲ್‌ನಲ್ಲಿ ಏನೂ ಪ್ರಸ್ತಾಪವಿಲ್ಲ.

**ಶ್ರೀ ಎಸ್.ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ಬಿಲ್‌ನ್ನು ತಂದಿರುವುದಕ್ಕೆ ಧನ್ಯವಾದಗಳನ್ನು ಹೇಳುತ್ತೇವೆ. ಬಹುತೇಕ 7 ವರ್ಷಗಳ ಸಮಯ ನಿಗದಿಪಡಿಸಿರುವುದು ಸಾಲುವುದಿಲ್ಲ. ಸಾಧ್ಯವಾದರೆ ಅದನ್ನು ಇನ್ನೊಂದು ಮೂರು ವರ್ಷಗಳಿಗೆ ವಿಸ್ತರಿಸಿ 10 ವರ್ಷ ಎಂದು ಸಮಯ ನಿಗದಿಪಡಿಸಿ. ಉದಾಹರಣೆಗೆ ಹೇಳುವುದಾದರೆ, ಕಲಂ 109ರಡಿಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭ ಮಾಡುವುದಕ್ಕೆ ಅನುಮತಿಸಲಾಗಿದೆ. ಕಲಂ 109ರಡಿಯಲ್ಲಿ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಭೂ ಪರಿವರ್ತನೆ ಮಾಡಿಕೊಂಡು ವಿದ್ಯಾಸಂಸ್ಥೆಗಳನ್ನು ನಡೆಸುತ್ತಿರುತ್ತಾರೆ. 109ರ ಪ್ರಕರಣದಲ್ಲಿ ತಂದಿರುವುದಕ್ಕೆ 1+1 ಮಾತ್ರ ಕಟ್ಟಡ ಕಟ್ಟುವುದಕ್ಕೆ ಅನುಮತಿ ಇರುತ್ತದೆ. ಆದರೆ ಈ ವಿದ್ಯಾಸಂಸ್ಥೆಗಳ ಸುತ್ತಲೂ ಬೆಂಗಳೂರು ಬೆಳೆದುಬಿಟ್ಟಿದೆ. ಮಾನ್ಯ ಸಚಿವರೇ, ಅದನ್ನು vertical ಆಗಿ ಮಾಡಿ. ಈಗ ಬೆಂಗಳೂರಿನಲ್ಲಿ ಬಸ್‌ಗಳಿಲ್ಲದೇ ಯಾವುದೇ ಶಾಲೆಗಳನ್ನು ನಡೆಸುವುದಕ್ಕೆ ಆಗುವುದಿಲ್ಲ. ಬಸ್‌ನಿಂದಲೇ ಶಾಲೆಯ ವಿದ್ಯಾರ್ಥಿಗಳನ್ನು ಶಾಲೆಯಿಂದ ಮನೆಗೆ ಮತ್ತು ಮನೆಯಿಂದ ಶಾಲೆಗೆ ಕರೆದುಕೊಂಡು ಹೋಗಬೇಕು. ಈಗ 1+1 ಮಾತ್ರ ಕಟ್ಟಡ ಕಟ್ಟುವುದಕ್ಕೆ ಅನುಮತಿ ಕೊಟ್ಟರೆ ಹೇಗೆ? ಅದನ್ನು 1+4ಗೆ ಅನುಮತಿ ಕೊಟ್ಟು, ಜಾಗ ಕೊಡಿ. ಇವತ್ತಿನ ದಿವಸ ವಾಹನ ನಿಲುಗಡೆಗೆ ಎರಡು ಎಕರೆ ಮಕ್ಕಳು ಆಟವಾಡಲು ಫೀಲ್ಡ್ ಬೇಕು. ಬೆಂಗಳೂರಿನಲ್ಲಿ ಜಾಗವೇ ಇಲ್ಲ. ದಯಮಾಡಿ ಇದರ ಬಗ್ಗೆಯೂ ಕೂಡ ತಾವು ಪರಿಶೀಲನೆ ಮಾಡಬೇಕು. ಇದರ ಜೊತೆಗೆ ಕಲಂ 79ಎ ಮತ್ತು 79ಬಿ ಮತ್ತು 109 ರ ಪ್ರಕರಣಗಳಿಗೆ ವಿನಾಯಿತಿ ನೀಡಲಾಗುವುದೆಂದು ಮಾಡಿದ್ದೀರಿ. ಕಲಂ 79ಎ ಮತ್ತು 79ಬಿ ಸಲುವಾಗಿಯೇ ಒಂದು ಕಾನೂನು ತಂದು ಅದನ್ನು ಕಿತ್ತುಹಾಕಿ. ಕಲಂ 79 ಎ ಮತ್ತು 79 ಬಿ ಎನ್ನತಕ್ಕಂಥ ಕಾನೂನು ಓಬೀರಾಯನ ಕಾಲದ್ದಾಗಿದೆ. ಕಲಂ 79 ಎ ಮತ್ತು 79 ಬಿ ಯಲ್ಲಿ ಇದುವರೆಗೂ ರಾಜ್ಯದಲ್ಲಿ 3 ಲಕ್ಷ ಪ್ರಕರಣಗಳು ದಾಖಲಾಗಿವೆ. ಆದರೆ ಅದರ ಬಗ್ಗೆ ಸುಮಾರು 50–54 ಪ್ರಕರಣಗಳನ್ನು forfeit ಮಾಡಿಕೊಂಡಿದ್ದಾರಷ್ಟೆ. ಕಲಂ 79 ಎ ಮತ್ತು 79 ಬಿ ನಲ್ಲಿ ಅಧಿಕೃತವಾಗಿ ಆಗಿರತಕ್ಕಂಥ ಪ್ರಕರಣಗಳೆಷ್ಟು ಮತ್ತು ಎಷ್ಟು ಪ್ರಕರಣಗಳಲ್ಲಿ ಕ್ರಮ ಜರುಗಿಸಿದ್ದಾರೆಂದು ಮಾನ್ಯ ಕಂದಾಯ ಸಚಿವರು ಹೇಳಬೇಕು. ಕಲಂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

79 ಎ ಮತ್ತು 79 ಬಿ ಪ್ರಕರಣಗಳು ಇರುವುದು Assistant Commissioner ಮತ್ತು ತಹಶೀಲ್ದಾರ್‌ಗಳಿಗೆ ದುಡ್ಡು ಮಾಡಿಕೊಡುವುದಕ್ಕಾಗಿ ಇದೆಯೇ? ಇದು ವಸೂಲಿ ಕಾರ್ಯಕ್ರಮವೇ? 25 ಲಕ್ಷ ರೂಪಾಯಿಗಳಿಗೆ ಬೆಂಗಳೂರು ಸುತ್ತಮುತ್ತ ಹಾಗೂ ರಾಮನಗರ ಜಿಲ್ಲೆಯಲ್ಲಿ ಒಂದು ಎಕರೆ ಜಮೀನು ಬರುವುದಿಲ್ಲ. ಕಲಂ 79 ಎ ಮತ್ತು 79 ಬಿ ಎನ್ನುವುದು ಬರೀ ವಸೂಲಿ ಮಾಡುವುಕ್ಕಾಗಿ ಇದ್ದು, ಓಬಿರಾಯನ ಕಾಲದ್ದು ಹಾಕಿಕೊಂಡು ಕುಳಿತಿದ್ದಾರೆ. ಮಾನ್ಯ ಸಚಿವರೇ, ಒಳ್ಳೆಯ ಕೆಲಸ ಮಾಡುತ್ತಿದ್ದೀರಿ. ದಯಮಾಡಿ ಇದರ ಜೊತೆಗೆ 79 ಎ ಮತ್ತು 79 ಬಿ ಪ್ರಕರಣಕ್ಕೆ ಏನಾದರೂ ತನ್ನಿ. ನಾವಲ್ಲರೂ ನಿಂತಿದ್ದೇವೆ. ನಮಗೂ ಕೂಡ ಸಾಕಾಗಿಬಿಟ್ಟಿದೆ. 79 ಎ ಮತ್ತು 79 ಬಿ ಪ್ರಕರಣದ ಸಂಬಂಧ ಅವರಿಗೆ ಫೋನ್ ಮಾಡಿ ಎಂದು ನಮ್ಮ ಹತ್ತಿರ ಜನ ಬರುತ್ತಾರೆ. ಯಾವ್ಯಾವ ಎ.ಸಿ. ಯವರ ಕಚೇರಿಗಳಲ್ಲಿ 79 ಎ ಮತ್ತು 79 ಬಿ ಪ್ರರಣಗಳು ಎಷ್ಟಿವೆಯೊ, ಅಷ್ಟೂ ಪ್ರಕರಣಗಳಿಗಾಗಿ ಎ.ಸಿ.ಯವರ ಹುದ್ದೆಗೆ ಹೆಚ್ಚು ಡಿಮ್ಯಾಂಡ್ ಇದೆ. ಅವರ ಮೇಲೂ ಕೂಡ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯಿಸುತ್ತಿದ್ದೇನೆ.

**ಶ್ರೀ ಕೆ.ಗೋವಿಂದರಾಜ್:-** ಅದಕ್ಕೆ discount ಬೇರೆ ಇದೆಯೆಂದು ಹೇಳಿದರಲ್ಲಾ.

**ಶ್ರೀ ಹೆಚ್.ಎಂ.ರಮೇಶಗೌಡ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಏನು ಈಗಾಗಲೇ 1961ರ ಭೂಸುಧಾರಣೆಗಳ ಕಾಯ್ದೆಗೆ ಏನು ತಿದ್ದುಪಡಿ ತಂದಿದ್ದಾರೆ, ಅದಕ್ಕೆ ನಾನು ಸರ್ಕಾರಕ್ಕೆ ಮತ್ತು ಮಾನ್ಯ ಕಂದಾಯ ಸಚಿವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಇಷ್ಟಪಡುತ್ತೇನೆ. ಬಹಳ ಒಳ್ಳೆಯ ಕಾಯ್ದೆಯನ್ನು ತಂದಿದ್ದಾರೆ. ಈಗಾಗಲೇ ಹಿಂದೆ ನಾವೆಲ್ಲಾ ನೋಡಿದ್ದೇವೆ. ಯಾವುದೋ ಒಂದು ಉದ್ದೇಶಕ್ಕಾಗಿ ಜಾಗವನ್ನು ತೆಗೆದುಕೊಳ್ಳುತ್ತಾರೆ. ಆದರೆ, ಆ ಉದ್ದೇಶಕ್ಕೆ ಬಳಸುವುದೇ ಇಲ್ಲ. ಎಷ್ಟೋ ಕಂಪನಿಗಳು ಕೂಡ ಆ ಉದ್ದೇಶಕ್ಕೆ ಬಳಸಿಕೊಳ್ಳುವುದೇ ಇಲ್ಲ. ಸರ್ಕಾರದೊಂದಿಗೆ adjustment ಮಾಡಿಕೊಂಡು ಜಾಗವನ್ನು ಖರೀದಿ ಮಾಡುತ್ತಾರೆ. ಆದರೆ 2-3 ವರ್ಷಗಳಾದ ನಂತರ ನಾವು ಆ ಉದ್ದೇಶಕ್ಕೆ ಬಳಸಲಿಲ್ಲವೆಂದು ಬೇರೆ ಇನ್ನೊಬ್ಬರಿಗೆ ಯಾರಿಗೋ ಕೊಡುತ್ತಾರೆ. ಉದಾಹರಣೆಗೆ, ವಿಶೇಷವಾಗಿ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಭೂಮಿಗೆ ಅತಿಹೆಚ್ಚು ಬೇಡಿಕೆ ಇದೆ. ಅಂತಹ ಜಾಗದಲ್ಲಿ ಯಾರೋ ಒಬ್ಬರು ಸಚಿವರು ಅಥವಾ ಸರ್ಕಾರದಲ್ಲಿ ಬೇಕಾದವರಿದ್ದರೆ, ಅಂತಹವರ ಹತ್ತಿರ ತೆಗೆದುಕೊಳ್ಳುತ್ತಾರೆ. ಅದನ್ನು ಅವರು ಪ್ರಾರಂಭ ಮಾಡುವುದೇ ಇಲ್ಲ. ಒಂದಷ್ಟು ದಿನಗಳು ಕಳೆದ ನಂತರ, ಅದನ್ನು ರಿಯಲ್ ಎಸ್ಟೇಟ್

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದಕ್ಕೋಸ್ಕರ ಉಪಯೋಗ ಮಾಡುತ್ತಾರೆ. ಮಾನ್ಯ ಎಸ್.ರವಿಯವರು ಹೇಳಿದಂತೆ, 79ಎ ಮತ್ತು 79ಬಿ ಪ್ರಕರಣದಲ್ಲಿ ಯಾರೇ ಒಂದು ಜಾಗವನ್ನು ಖರೀದಿಸಿದ್ದರೆ, ಸರ್ಕಾರ ಎಷ್ಟು ಜಾಗವನ್ನು ಮುಟ್ಟುಗೋಲು ಹಾಕಿಕೊಂಡಿದೆ. ಈ ಹಿಂದೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಒಂದು ಸಭೆ ನಡೆಯಿತು. ಅವರ ಕಚೇರಿಗೂ ಸಹ ಹೇಳಿದ್ದೇವೆ. ಈ ಹಿಂದೆ ಮಾನ್ಯ ಆರ್.ವಿ.ದೇಶಪಾಂಡೆಯವರು ಕಂದಾಯ ಸಚಿವರು ಇದ್ದಾಗಲೂ ಹೇಳಲಾಗಿದೆ. ಯಾರು ರೆವಿನ್ಯೂ ಇನ್ಸ್‌ಪೆಕ್ಟರ್‌ಗಳಿರುತ್ತಾರೆ, ತಹಶೀಲ್ದಾರ್‌ಗಳು ಇರುತ್ತಾರೋ, ಅವರ್‍ಯಾರೇ ಒಂದು ಜಮೀನು ಖರೀದಿ ಮಾಡಿದರೂ ಕೂಡ 79ಎ ಮತ್ತು 79 ಬಿ ಪ್ರಕರಣದಲ್ಲಿ ನೊಟೀಸ್ ಕೊಡುತ್ತಾರೆ. ನೊಟೀಸ್ ಕೊಟ್ಟನಂತರ ಹಣ ವಸೂಲಿ ಮಾಡುತ್ತಾರೆ ಮತ್ತು ಅದನ್ನು ಯಾವ ರೀತಿ ಮಾಡಬೇಕೆಂದು ಅವರೇ ಒಂದು ಐಡಿಯಾ ಕೊಡುತ್ತಾರೆ. ಅದಕ್ಕೆ ಸಂಬಂಧಪಟ್ಟಂಹ ಯಾವುದೋ ಒಂದು ಪಹಣಿ ಕೊಟ್ಟು ಆ ಪ್ರಕರಣವನ್ನು ಮುಕ್ತಾಯಗೊಳಿಸುತ್ತಾರೆ. ಆ ರೀತಿ ಆಗಬಾರದು. ಆದ್ದರಿಂದ ದಯಮಾಡಿ 79ಎ ಮತ್ತು 79 ಬಿ ಪ್ರಕರಣವನ್ನು ತೆಗೆಯಿರಿ.

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ಭೂ ಸುಧಾರಣೆಗಳ ತಿದ್ದುಪಡಿ ವಿಧೇಯಕ 2020ಕ್ಕೆ ನಾನು ಸಹಮತಿ ನೀಡುತ್ತಿದ್ದೇನೆ. ಮಾನ್ಯ ಕಂದಾಯ ಸಚಿವರು ವಿವರಣೆಯನ್ನು ಕೊಟ್ಟಿದ್ದಾರೆ. ಈ ಬಿಲ್‌ನಲ್ಲಿ ಅವರು ಹೇಳಿದ್ದೇನೆಂದರೆ, ಸರ್ಕಾರ ಯಾವುದೇ industry ಯನ್ನು registration ಮಾಡಿ, High Power Committee ಯಲ್ಲಿ ಅದು ಅಪ್ರೂವ್ ಆದ ನಂತರ, ಅವರು ಯಾವ ಭೂಮಿಯನ್ನು ಸರ್ಕಾರದಿಂದ ತೆಗೆದುಕೊಳ್ಳುವುದಿಲ್ಲ. ನೇರವಾಗಿ ಅವರು ರೈತರಿಂದ ಖರೀದಿ ಮಾಡಬಹುದು. ಆ ಖರೀದಿ ಮಾಡಿರುವುದನ್ನು ಆತನು 7 ವರ್ಷದೊಳಗೆ ಇಂಡಸ್ಟ್ರಿ ಪ್ರಾರಂಭ ಮಾಡಿ run ಆಗಬೇಕು. ಒಂದುವೇಳೆ, 7 ವರ್ಷದೊಳಗೆ ಅವನ ಕಂಪನಿ ನಷ್ಟಕ್ಕೊಳಗಾದರೆ, ಅವನು ಅದೇ ಉದ್ದೇಶಕ್ಕಾಗಿ ಬೇರೆ ಒಬ್ಬರಿಗೆ ಮಾರಾಟ ಮಾಡಬಹುದು ಎಂದು ಸರಳೀಕರಣ ಮಾಡಿದ್ದಾರೆ.

**(ಮುಂದು…)**

**(665)23.3.2020/1.30/ಎಂ.ಎಂ–ಬಿ.ಎನ್.ಎಸ್**

**ಶ್ರೀ ಕೆ.ಸಿ. ಕೊಂಡಯ್ಯ(ಮುಂದು):–**

ಏಳು ವರ್ಷದಲ್ಲಿ ಏನಾದರೂ ಆ ಕಂಪನಿ ನಷ್ಟವಾದರೆ ಅದೇ ಉದ್ದೇಶಕ್ಕಾಗಿ ಮಾರಾಟ ಮಾಡಬಹುದು ಎಂದು ಸರಳೀಕರಣ ಮಾಡಿದ್ದಾರೆ. ಇವತ್ತು ಭೂಮಿಯನ್ನು ಕಾರ್ಖಾನೆಗೋಸ್ಕರ ಖರೀದಿ ಮಾಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖರೀದಿ ಮಾಡಿದ ನಂತರ ಏಳು ವರ್ಷ, 10 ವರ್ಷ ಅಥವಾ 15 ವರ್ಷ ಕಾರ್ಖಾನೆಯನ್ನು ನಡೆಸುತ್ತಾರೆ. ಏಳು ವರ್ಷವಾದ ನಂತರ ನಷ್ಟವಾದರೆ ಮಾತ್ರ ಮಾರುವುದಕ್ಕೆ ಅವಕಾಶ ಕೊಡುತ್ತಾರೆ. 'Industry' ಎಂದರೆ ಅದೇ ಉದ್ದೇಶಕ್ಕೆ; ಅಂದರೆ, same industryಅಲ್ಲ any industry. ಆ ಏಳು ವರ್ಷದೊಳಗಡೆ ಅಥವಾ 10 ವರ್ಷದೊಳಗಡೆ ಆ ಉದ್ಯಮ/ಕೈಗಾರಿಕೆ sick ಆಗಿ ಆ ಉದ್ಯಮ ಸಂಪೂರ್ಣವಾಗಿ ನಷ್ಟ ಹೊಂದುತ್ತಾರೆ. ಅದನ್ನು ಬ್ಯಾಂಕ್‌ಗೆ ಅಡವಿಟ್ಟಿರುತ್ತಾರೆ, ಬ್ಯಾಂಕ್‌ನವರು with land ಹರಾಜು ಹಾಕುತ್ತಾರೆ. With land auction ಎಂದ ಮೇಲೆ ಬ್ಯಾಂಕ್‌ನವರು ಯಾವುದನ್ನೂ ನೋಡುವುದಿಲ್ಲ, ಮತ್ತೆ ಕೈಗಾರಿಕೆ/ಕಾರ್ಖಾನೆ ನಡೆಸುವವರೇ ಬಂದು ಅದನ್ನು ತೆಗೆದುಕೊಳ್ಳಬೇಕು. ಅದರ ಸಲುವಾಗಿ ಸರ್ಕಾರ ವಿವೇಚನೆ ಇಟ್ಟುಕೊಳ್ಳಬೇಕು. ಒಂದು ವೇಳೆ ಅವರೇನಾದರೂ ನಷ್ಟ ಹೊಂದಿ ಆ ಕೈಗಾರಿಕೆ; ಒಂದು ಸಲ ಉಕ್ಕಿನ ಕಾರ್ಖಾನೆಯನ್ನು ಹಾಕುತ್ತಾರೆ, 7 ವರ್ಷ ಅಥವಾ 10 ವರ್ಷದಲ್ಲಿ ಆ ಪ್ರದೇಶದಲ್ಲಿ ವಸತಿ ನಿರ್ಮಾಣ ಬೆಳವಣಿಗೆಯಾಗುತ್ತದೆ. ಅದಾದ ನಂತರ ಅಲ್ಲಿನ ಸುತ್ತ ಮುತ್ತಲಿನ ಜನರು ಆ ಕಾರ್ಖಾನೆಯಿಂದ ಬಹಳ ಮಾಲಿನ್ಯವಾಗುತ್ತಿದೆ, ಈ ಕಾರ್ಖಾನೆ ಬೇಡವೆಂದು ಹೇಳುತ್ತಾರೆ. ಆಗ ಆ ಕಾರ್ಖಾನೆಯನ್ನು ಬಂದ್ ಮಾಡುವ ಬದಲು ಸರ್ಕಾರ ವಿವೇಚನೆ ಇಟ್ಟುಕೊಳ್ಳಬೇಕು. ಒಂದು ವೇಳೆ genuine cause ಇದ್ದು, ಎಲ್ಲಾ ರೀತಿಯಾಗಿ; ಇದರ ಬಗ್ಗೆ ಮಾನ್ಯ ಸಚಿವರಿಗೆ ಅರ್ಥವಾಗುತ್ತದೆ, ಆ ಪ್ರದೇಶದಲ್ಲಿ ಕಾರ್ಖಾನೆಗಳಿವೆ ಎಂಬುದು ಅವರಿಗೂ ಗೊತ್ತಿದೆ. ಈ ವಿವೇಚನೆಯನ್ನು ಸರ್ಕಾರ ಇಟ್ಟುಕೊಳ್ಳಬೇಕು. ಈ ಬಿಲ್ ತಂದ ಉದ್ದೇಶ, ಕಂದಾಯ ಇಲಾಖೆಗೆ ಇದರಿಂದ ಒಳ್ಳೆಯದಾಯಿತು. ಇದೇ ರೀತಿಯಾಗಿ High Power Committee ಯಲ್ಲಿ ಮಂಜೂರಾದ ಯೋಜನೆಗಳು ಕೆ.ಇ.ಬಿ., ಯಾಗಲೀ ಅಥವಾ ನೀರಾವರಿ ಇಲಾಖೆಯಾಗಲೀ; ಏಕೆಂದರೆ, ನೀರಿಲ್ಲದಿದ್ದರೆ ಕಾರ್ಖಾನೆ ನಡೆಯುವುದಿಲ್ಲ, ವಿದ್ಯುತ್ ಇಲ್ಲದಿದ್ದರೂ ಕಾರ್ಖಾನೆ ನಡೆಯುವುದಿಲ್ಲ. ಅವುಗಳ ಹಿತದೃಷ್ಟಿಯಿಂದ ಇದೇ ರೀತಿಯಾಗಿ ಒಂದು ಬಿಲ್ ಅನ್ನು ತಂದರೆ ಒಳ್ಳೆಯದಾಗುತ್ತದೆ. ಏಕೆಂದರೆ, ತಾವು ಹೇಳಿದಿರಿ Red- tapism ಅನ್ನು ಕಟ್ ಮಾಡುವ ಸಲುವಾಗಿ ಸರಳೀಕರಣ ಮಾಡಿದ್ದೇವೆ, ಒಂದು ಸಲ High Power Committee ಯಲ್ಲಿ ಮಂಜೂರಾದರೆ ಅವನಿಗೆ land usage ಗಾಗಿ 50 ಎಕರೆ, 100 ಎಕರೆ ಭೂಮಿಯನ್ನು ಆಡಿಟ್ ಮಾಡಿ ಕೊಡುತ್ತಾರೆ. ತದನಂತರ, automatically ಅವನು ರೈತರ ಬಳಿಯೇ ಭೂಮಿಯನ್ನು ಖರೀದಿ ಮಾಡಬೇಕಾಗುತ್ತದೆ, ಸರ್ಕಾರದ ಭೂಮಿ ಇರುವುದಿಲ್ಲ. ಅದೇ ರೀತಿಯಾಗಿ ಪವರ್ ಬೇಕಾದರೆ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅವನು ಮತ್ತೆ ಕೆಳ ಹಂತದಿಂದ ಅರ್ಜಿ ಕೊಡಬೇಕು. ಅದರ ಬಗ್ಗೆಯೂ ಸರ್ಕಾರ ಒಂದು ತಿದ್ದುಪಡಿ ತಂದರೆ, comprehensively ಒಂದುindustry ಆಗುತ್ತದೆ ಎನ್ನುವುದು ನನ್ನ ಸಲಹೆಯಾಗಿದೆ.

**Sri K.Govindaraj**:- Under one Umbrella all clearance has to be done.

**ಡಾ: ವೈ.ಎ. ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಈ ಬಿಲ್ಲನ್ನು ಸ್ವಾಗತ ಮಾಡುತ್ತೇನೆ. ಏಕೆಂದರೆ, 'ಬಾಗೇಪಲ್ಲಿ' ತಾಲ್ಲೂಕಿನ ಪಕ್ಕದಲ್ಲಿ 'ಕಿಯಾ ಮೋಟಾರ್ಸ್'ನವರ ಒಂದು ದೊಡ್ಡ ಕಾರ್ಖಾನೆ ಬಂದಿದೆ. 'ಕಿಯಾ ಮೋಟಾರ್ಸ್'ನವರು ಕರ್ನಾಟಕದಲ್ಲಿ ಕಾರ್ಖಾನೆ ಪ್ರಾರಂಭಿಸಬೇಕೆಂದು ಆಸೆ ಇಟ್ಟುಕೊಂಡಿದ್ದರು. ಆದರೆ ಕರ್ನಾಟಕದ ಗಡಿ ಭಾಗದಲ್ಲಿ ಲಕ್ಷಾಂತರ ಕೋಟಿ ರೂಪಾಯಿಗಳನ್ನು ತೊಡಗಿಸಿ ಈ ಕಾರ್ಖಾನೆ ಬಂದಿದೆ. ಅವರಿಗೆ ಕರ್ನಾಟಕಕ್ಕೆ ಬರಬೇಕೆಂಬ ಆಸೆ ಇದ್ದರೂ ನಮ್ಮಲ್ಲಿದ್ದ ಕಾನೂನುಗಳ ಕ್ಲಿಷ್ಟತೆಯನ್ನು ಅನುಭವಿಸಿ, ಇವರಿಗೆ ನಿಜವಾಗಲೂ ನಮಗೆ ಜಮೀನನ್ನು ಮಂಜೂರು ಮಾಡಿಕೊಡುವುದಕ್ಕಾಗುವುದಿಲ್ಲ ಎಂದು ಆಂಧ್ರಪ್ರದೇಶಕ್ಕೆ ಹೋದರು. ಅದೇ ರೀತಿ ಇನ್ನೊಂದು, 'ಹೋಂಡಾ' ಕಂಪನಿ ಒಂದು ದೊಡ್ಡ ಕಂಪನಿಯಾಗಿದೆ. ಅದು ಸುಮಾರು 50 ಸಾವಿರ ಕೋಟಿ ರೂಪಾಯಿಗಳಷ್ಟು ಬಂಡವಾಳ ಹೂಡುವುದಕ್ಕೆ ಬಂದಿತ್ತು. ನಮ್ಮಲ್ಲಿರುವ ಕಾನೂನಿನ ಚೌಕಟ್ಟುಗಳನ್ನು ಅವರು ಅರಗಿಸಿಕೊಳ್ಳಲಾಗದೇ ಅಲ್ಲಿಗೆ ಹೋದರು. ಮೊನ್ನೆ ಮಾನ್ಯ ಮುಖ್ಯಮಂತ್ರಿಯವರು 'ದಾವೋಸ್'ಗೆ ಹೋಗಿ ಬಂದಿದ್ದಾರೆ. ಹುಬ್ಬಳ್ಳಿಯಲ್ಲಿ Global Investors Meet ಮಾಡಿದ್ದರು. ಕಾನೂನಿನ ದ್ವಾರ permission under Sec.109 of the Karnataka Land Reforms Act ಗೆ ಕಾನೂನು ಏನು ತಂದಿದ್ದೇವೆ, ಅದರಡಿಯಲ್ಲಿ HLCC, SLCC ಕಮಿಟಿ ಅನುಮೋದನೆಯಾದ ಮೇಲೆ suo moto ಆ ಜಮೀನನ್ನು ಅವರು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ಆದ್ದರಿಂದ ಈ ಕಾನೂನು ಸೆಕ್ಷನ್ 63, 79ಎ, 79ಬಿ ಮತ್ತು 80 ಅನ್ನು "ಸರ್ಕಾರವು ವಿನಾಯಿತಿಸಿದೆ ಎಂಬುದಾಗಿ ಭಾವಿಸತಕ್ಕದ್ದು" ಎಂದು ಸೇರಿಸಿರುವುದು industry ಗೆ ಬಹಳ ಪೂರಕವಾದ ವ್ಯವಸ್ಥೆಯಾಗಿದೆ ಎಂದು ಇದನ್ನು ಸ್ವಾಗತ ಮಾಡುತ್ತೇನೆ, ಇದು ಮೊದಲನೆಯದು. ಎರಡನೆಯದಾಗಿ ಮಾನ್ಯ ರಮೇಶ್ ಗೌಡರವರು ಹೇಳಿದ ಅಂಶ ಸರಿಯಾಗಿದೆ. 'ವೆಸ್ಟ್ ಆಫ್ ಕಾರ್ಡ್' ರಸ್ತೆಯಲ್ಲಿನ industrial area ಎಲ್ಲವೂ ಕಲ್ಯಾಣ ಮಂಟಪಗಳಾಗಿವೆ. ಅದನ್ನು ಯಾವ

"ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉದ್ದೇಶವಿದೆ, the purpose for which the land has been acquired, same purpose to continueಎನ್ನುವ ಒಂದು ಪದವಿರುವುದು, it has got a great meaning. ಅದಕ್ಕೋಸ್ಕರವಾಗಿ ನಾನು ಈ ಬಿಲ್ಲನ್ನು ಸ್ವಾಗತ ಮಾಡಿ ಮಾನ್ಯ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಶ್ರೀ ಕೆ. ಗೋವಿಂದರಾಜ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದು retrospective ಆಗಿಯೋ ಅಥವಾ ಮುಂದಿನದಕ್ಕೋ ಎಂದು ಮಾನ್ಯ ಸಚಿವರು ಸ್ಪಷ್ಟನೆ ನೀಡಬೇಕು. ಈ ವಿಧೇಯಕಕ್ಕೆ ನನ್ನ ಸ್ವಾಗತ ಇದೆಯಾದರೂ ಕಲಂ 79ಎ, 79ಬಿಯನ್ನು ತಾವು consider ಮಾಡಬೇಕೆಂದು; ಅಂದರೆ, ಅದನ್ನು ತೆಗೆದುಹಾಕಬೇಕೆಂದು ಹೇಳಬಯಸುತ್ತೇನೆ.

**ಶ್ರೀ ಟಿ.ಎ. ಶರವಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರು ತಂದಿರುವ 2020ನೇ ಸಾಲಿನ ಕರ್ನಾಟಕ ಭೂ ಸುಧಾರಣೆ ವಿಧೇಯಕವನ್ನು ಸ್ವಾಗತ ಮಾಡುವುದಷ್ಟೇ ಅಲ್ಲದೆ, ಈಗಾಗಲೇ ಮಾನ್ಯ ರಮೇಶ್‌ಗೌಡರು ಹೇಳಿದ ಹಾಗೆ ಉಪ ವಿಭಾಗಾಧಿಕಾರಿಗಳಿರಬಹುದು ಅಥವಾ ಜಿಲ್ಲಾಧಿಕಾರಿಗಳಿರಬಹುದು ಅನುಮತಿ ಕೇಳಿಕೊಂಡು ಬಂದ ಬಹಳಷ್ಟು ಅರ್ಜಿಗಳನ್ನು ವರ್ಷಾನುಗಟ್ಟಲೆ ಕಾಯ್ದುಕೊಂಡು ದುಡ್ಡು ಮಾಡುವಂತಹ ಒಂದು ದಂಧೆಯನ್ನು ಕಲ್ಪಿಸಿಕೊಟ್ಟಿದ್ದರು. ಇವತ್ತು ಶಿಕ್ಷಣ ಸಂಸ್ಥೆಗಳಿರಬಹುದು, ಕೈಗಾರಿಕಾ ಸಂಸ್ಥೆಗಳಿರಬಹುದು ಇಂತಹ ಬಹಳಷ್ಟು ಸಂಸ್ಥೆಗಳು ಕೂಡ ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ನಮ್ಮ ರಾಜ್ಯವನ್ನು ಬಿಟ್ಟು ಹೊರ ರಾಜ್ಯಕ್ಕೆ ಹೋಗಿರುವಂತಹ; ಆಗಲೇ ಮಾನ್ಯ ನಾರಾಯಣಸ್ವಾಮಿಯವರು ಹೇಳಿದ ಹಾಗೆ 'ಹೋಂಡಾ' ಕಂಪನಿ ಮಾನ್ಯ ಚಂದ್ರಬಾಬು ನಾಯ್ಡುರವರು ಮುಖ್ಯಮಂತ್ರಿಯಾಗಿದ್ದಾಗ ಅಲ್ಲಿಗೆ ಹೋಗಿರುವುದನ್ನು ನೆನಪಿಸಿಕೊಳ್ಳಲು ಬಯಸುತ್ತೇನೆ. ಇದರಿಂದ ಕೈಗಾರಿಕೆ ಯಾವಾಗ ಬೆಳೆಯುತ್ತದೋ ಆಗ ಉದ್ಯೋಗಗಳು ಕೂಡ ಸೃಷ್ಟಿಯಾಗುತ್ತವೆ. ಬಹಳಷ್ಟು ಜನ ನಿರುದ್ಯೋಗಿಗಳಿಗೆ ಉದ್ಯೋಗ ಕೊಡುವುದಕ್ಕೆ ಅವಕಾಶ ಸಿಗುತ್ತದೆ, ಜೊತೆಗೆ ನೆರೆ ರಾಜ್ಯಗಳಲ್ಲಿ ತಮಗೆ ಗೊತ್ತಿರುವಂತೆ ತಮಿಳುನಾಡು ಇರಬಹುದು, ಆಂಧ್ರಪ್ರದೇಶ ಇರಬಹುದು ಅಥವಾ ತೆಲಂಗಾಣ ಇರಬಹುದು; ನೆರೆ ರಾಜ್ಯಗಳಲ್ಲಿ ಕೂಡ ನಿಗದಿ ಪಡಿಸಿ ಈ ರೀತಿ ಕೃಷಿ ಭೂಮಿಯನ್ನು ತೆಗೆದುಕೊಳ್ಳಬೇಕೆಂದು ಮಾಡಿರುವ ಕಾಯಿದೆಯಿಲ್ಲ, ನಾನು ಈ ವಿಧೇಯಕವನ್ನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ, ಮಂತ್ರಿಗಳಿಗೂ ಕೂಡ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ನಸೀರ್ ಅಹ್ಮದ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಧೇಯಕದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಅದರಲ್ಲಿ ಒಂದು ವೇಳೆ ಅನುಮತಿ ಕೊಟ್ಟು ಹತ್ತಾರು ವರ್ಷವಾಗಿರುತ್ತದೆ, ಹೊಸ CDP (Comprehensive Development Plan) ಬಂದಿರುತ್ತದೆ. ಆ ಹೊಸ ಸಿ.ಡಿ.ಪಿ.ಯಲ್ಲಿ 'residential' ಎಂದು ಬಂದಿರಬಹುದು ಅಥವಾ ವಾಣಿಜ್ಯ ಎಂದು ಬಂದಿರಬಹುದು. ಆಗ ಆ ಸಂದರ್ಭದಲ್ಲಿ ಏನಾಗುತ್ತದೆ ಅದರ ಬಗ್ಗೆ ತಮ್ಮಿಂದ ಒಂದು ಸ್ಪಷ್ಟನೆ ಬೇಕು. ಅದರ ಜೊತೆಗೆ ತಾವು ಮಾಡಿರುವ ಉದ್ದೇಶ ಸರಿಯಾಗಿದೆ. ತಾವು ಇದಕ್ಕೆ ಒಂದು ಸಮಯ ನಿಗದಿ ಮಾಡಬೇಕು. 15 ದಿವಸದಲ್ಲಿ ಕರ್ನಾಟಕ ಭೂ ಸುಧಾರಣೆ ಕಾಯಿದೆ ಕಲಂ 109 ಅಡಿ ಅನುಮತಿ ಕೊಡುವುದಾಗಲೀ, ಸಮಯವನ್ನು ನಿಗದಿಪಡಿಸದಿದ್ದರೆ ನಿಜವಾಗಲೂ, we are giving a free hand to the Officers. ಅವರು negotiate ಮಾಡುವುದಕ್ಕೆ ಒಂದೊಂದು ತಿಂಗಳು, ಒಂದೊಂದು ವರ್ಷ ಇಟ್ಟುಕೊಂಡಿರುತ್ತಾರೆ, ಆದ್ದರಿಂದ ಅದಕ್ಕೆ 10 ಅಥವಾ 15 ದಿನಗಳ ಸಮಯ ನಿಗದಿ ಮಾಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಭೂ ಸುಧಾರಣೆ ಕಾಯಿದೆ ತಿದ್ದುಪಡಿ ವಿಧೇಯಕದಲ್ಲಿ ಎರಡು ಪ್ರಮುಖವಾದಂತಹ ಅಂಶಗಳಿವೆ. ಮೊದಲನೆಯದಾಗಿ ಕರ್ನಾಟಕ ಭೂ ಸುಧಾರಣೆ ಕಾಯಿದೆ ಕಲಂ 109ರಡಿಯಲ್ಲಿ ಭೂಮಿ ಖರೀದಿ ಮಾಡಲು ಅನುಮತಿ ಕೊಡುವುದಕ್ಕೆ ಸರಳೀಕರಣ ಮಾಡಿರುವುದು. ಎರಡನೆಯದಾಗಿ ಯಾವ ಉದ್ದೇಶಕ್ಕೆ ಆ ಭೂಮಿಯನ್ನು ಪಡೆದುಕೊಳ್ಳುತ್ತಾರೆ, ಅವರು ನಷ್ಟವಾಗಲಿ ಅಥವಾ ಮತ್ತೊಂದಾಗಲಿ ಬೇರೆಯವರಿಗೆ ಅದನ್ನು ಮಾರಾಟ ಮಾಡಿದ್ದರೂ ಕೂಡ ಕೈಗಾರಿಕೆ ಉದ್ದೇಶದಲ್ಲಿಯೇ ಕೈಗಾರಿಕೆಯನ್ನು ಮುಂದುವರೆಸಬೇಕೆನ್ನುವುದು. ಇವೆರಡೂ ಕೂಡ ಬಹಳ ಪ್ರಮುಖವಾದಂತಹದ್ದಾಗಿದೆ. ಮಾನ್ಯ ರಮೇಶ್‌ಗೌಡರವರು, ಮಾನ್ಯ ರವಿಯವರು ಮತ್ತು ಮಾನ್ಯ ವೈ.ಎ. ನಾರಾಯಣಸ್ವಾಮಿಯವರು ಪ್ರಮುಖವಾಗಿ ಮೂರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಗರಾಭಿವೃದ್ಧಿ ಸಚಿವರು ಕೂಡ ಇಲ್ಲಿದ್ದಾರೆ. ಮೈಸೂರು ನಗರದಲ್ಲಿ ಮತ್ತು ಮೈಸೂರು ನಗರದ ಆಸುಪಾಸಿನಲ್ಲಿರುವಂತಹ ಕೈಗಾರಿಕೆಗಳು ಈಗ ಅಲ್ಲಿ ಇಲ್ಲವೇ ಇಲ್ಲ. ಎಲ್ಲಾ ಕೂಡ ಕಲ್ಯಾಣ ಮಂಟಪಗಳಾಗಿವೆ ಮತ್ತು ಅಲ್ಲಿ ವಸತಿ ಬಡಾವಣೆಗಳು ಬಂದಿವೆ. ಅಲ್ಲಿ civic amenities ಗೆ ಬಹಳ ತೊಂದರೆಯಾಗಿದೆ. ಅಲ್ಲಿ ಮನೆ ಕಟ್ಟಿಕೊಂಡು ವಾಸಿಸುತ್ತಿರುವವರಿಗೆ ಬಹಳ ತೊಂದರೆಯಾಗಿದೆ. ಅಲ್ಲಿ ಕೈಗಾರಿಕಾ ಉದ್ದೇಶ ಕೂಡ ಹಾಳಾಗಿದೆ, ಬಹಳಷ್ಟು ಜನರು ಉದ್ಯೋಗವನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಳೆದುಕೊಂಡಿದ್ದಾರೆ. ಅದರಿಂದ ನಗರಾಭಿವೃದ್ಧಿ ಇಲಾಖೆಯಲ್ಲಿ ಕೂಡ ಇದಕ್ಕೆ ಒಂದು ತಿದ್ದುಪಡಿ ತಂದು ಯಾವ ಉದ್ದೇಶಕ್ಕೆ ಭೂಮಿಯನ್ನು ಮಂಜೂರು ಮಾಡಲಾಗಿರುತ್ತದೆಯೋ; ಉದಾಹರಣೆಗೆ ಹೇಳುವುದಾದರೆ ಆ ಭೂಮಿಯನ್ನು ಕೈಗಾರಿಕೆ ಉದ್ದೇಶಕ್ಕೆ ಕೊಟ್ಟ ಮೇಲೆ ಕೈ ಬದಲಾವಣೆಯಾದರು ಕೂಡ ಉದ್ದೇಶ ಬದಲಾವಣೆಯಾಗಬಾರದು ಎನ್ನುವುದನ್ನು ತಂದರೆ ಅದು ಬಹಳ ಒಳಿತಾಗುತ್ತದೆ ಎಂದು ಈ ಸಂದರ್ಭದಲ್ಲಿ ತಿಳಿಸುತ್ತಾ ಮತ್ತು ಮೊದಲ ಮಹಡಿ, ಎರಡನೇ ಮಹಡಿ ಮಾತ್ರ ಕಟ್ಟಬಹುದು ಎಂದು ಹೇಳಿದರೆ ಕರ್ನಾಟಕ ಭೂ ಸುಧಾರಣೆ ಕಾಯಿದೆ ಕಲಂ 109ರಡಿಯಲ್ಲಿ ಬಹಳ ಕಷ್ಟವಾಗುತ್ತದೆ. ದಯಮಾಡಿ ಕನಿಷ್ಟ ಪಕ್ಷ ನಾಲ್ಕು ಅಂತಸ್ತನ್ನಾದರೂ ಕಟ್ಟುವುದಕ್ಕೆ ವ್ಯವಸ್ಥೆಯನ್ನು, ಬದಲಾವಣೆಯನ್ನು ತಂದರೆ ಆ ಜಾಗ ಇನ್ನೂ ಕೂಡ ಉಪಯುಕ್ತವಾಗುತ್ತದೆ ಎಂದು ಹೇಳಿ, ಈ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ.

**ಶ್ರೀ ಸಿ.ಎಂ. ಇಬ್ರಾಹಿಂ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೊದಲು ಹೇಳಿದ ಹಾಗೆ ಇದನ್ನು retrospective effect ಕೊಡುತ್ತಿದ್ದೀರೋ ಅಥವಾ ಬಿಲ್ ಪಾಸ್ ಆದ ದಿನದಿಂದ effectಕೊಡುತ್ತಿದ್ದೀರೋ? ಹಿಂದೆ ಇದ್ದುದ್ದನ್ನು ಏನು ಮಾಡುತ್ತೀರಿ?

**ಶ್ರೀ ಜೆ.ಸಿ. ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಇದು Ordinance replacement ಬಿಲ್ ಆಗಿದೆ. Ordinance ಆದ ದಿವಸದಿಂದ effect ನಲ್ಲಿದೆ.

(ಮುಂದು)

(666) 23-03-2020/ 01-40/ ಕೆಹೆಚ್-ಜಿಆರ್

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):-** ವೈಟ್‌ಫೀಲ್ಡ್‌ನಲ್ಲಿ ನೀವು ಕೊಟ್ಟಿರುವಂತಹ ಜಮೀನಿನಲ್ಲಿ ಈಗ ಶಾಪಿಂಗ್ ಮಾಲ್ ಆಗಿದೆ, ಅದು ಈ ಆಕ್ಟ್‌ನಲ್ಲಿ ಬರುತ್ತದೆಯೇ? ಎರಡನೆಯದಾಗಿ Greenbelt ನಲ್ಲಿ ಇವತ್ತು 1+2 ಆಗಿದೆ ಎಂದರೆ, ಜನ ಬೆಳೆಯುತ್ತಿದ್ದಾರೆ, ಭೂಮಿ ಬೆಳೆಯುತ್ತಿಲ್ಲ ಎಂದು ಮಾನ್ಯ ಸದಸ್ಯರಾದ ರವಿಕುಮಾರ್‌ರವರು ಹೇಳಿದರು. ಇದರ ಬಗ್ಗೆ ನಗರಾಭಿವೃದ್ಧಿ ಇಲಾಖೆಯವರು ಒಂದು ತಿದ್ದುಪಡಿಯನ್ನು ತಂದು ಮೇಲಕ್ಕೆ ಹೋಗುವುದಕ್ಕೆ ನೋಡಬೇಕೇ ಹೊರತು, ಅಗಲ ಆಗುವುದಕ್ಕೆ ಅವಕಾಶ ಇಲ್ಲ. ಭೂಮಿ ಬಹಳ ಕಡಿಮೆ ಇದೆ. ಇನ್ನೊಂದು ಸಿ.ಡಿ.ಪಿ., ನಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

industries ಬರಲು ಅವಕಾಶ ಇಲ್ಲ. ಅಲ್ಲಿ pollution ಇರುವುದರಿಂದ, ಕೈಗಾರಿಕೆಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಇದಕ್ಕೆ Karnataka State Pollution Control Board ನವರು ಅನುಮತಿಯನ್ನು ಕೊಡುವುದಿಲ್ಲ. ಅವನು ಆಗ ಏನು ಮಾಡಬೇಕು? ಅದೇ ಉದ್ದೇಶಕ್ಕೆ ಮಾಡಬೇಕೆಂದು ತಾವು ಹೇಳಿದ್ದೀರಿ. ಅಲ್ಲಿ pollution ಇದೆ, ಅಲ್ಲಿ change ಆಗಿದೆ. ಇಲ್ಲಿ ಮಾಡುವುದಕ್ಕೆ ಆಗುವುದಿಲ್ಲ ಎಂದಾಗ Karnataka State Pollution Control Board ನವರು ನಿಮಗೆ ಕೊಡುವುದಿಲ್ಲ. ಈಗಾಗಲೇ ನಿಂಬೆಕಾಯಿಪುರದ ಪಕ್ಕದಲ್ಲಿಯೇ ಫ್ಲಾಟ್‌ಗಳು ಬಂದಿವೆ. ಆ ಫ್ಲಾಟ್‌ನವರೇ ಗಲಾಟೆ ಮಾಡಿ ಕೈಗಾರಿಕೆಗಳನ್ನು ತಪ್ಪಿಸಿದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ಗಮನದಲ್ಲಿಟ್ಟುಕೊಳ್ಳಬೇಕು. ಮೂರನೆಯದಾಗಿ, ಮಾನ್ಯ ಸಚಿವರು ಈಗ ಅನುಮತಿ ಬಗ್ಗೆ ಹೇಳಿದ್ದಾರೆಯೋ, ಇದಕ್ಕೆ 15 ದಿವಸ, 20 ದಿವಸ ಅಥವಾ ಒಂದು ತಿಂಗಳು ಟೈಮ್ ನಿಗದಿಮಾಡಬೇಕು. ಇದು ಒಂದು ತಿಂಗಳಲ್ಲಿ ಆಗದೇ ಇದ್ದರೆ, it has been deemed permission ಆಗಿದೆ ಎನ್ನುವಂತಹದ್ದು, ಮಾನ್ಯ ಎಸ್.ಬಂಗಾರಪ್ಪನವರು ಇದ್ದಾಗ ಯಾವ ರೀತಿಯಲ್ಲಿ ಜಮೀನು conversion ಗೆ ಕಾಯಿದೆ ಆದ ನಂತರ ಒಂದು ತಿಂಗಳು ಆದ ಮೇಲೆ deemed permission ಆಗಿಹೋಗುತ್ತಿತ್ತು. ಇದನ್ನು ಅಧಿಕಾರಿಗಳ ಕೈಗೆ ಸಿಗದಿರುವ ಹಾಗೆ ಲೋಪದೋಷಗಳನ್ನು ಸರಿಪಡಿಸಿದರೆ ಈ ವಿಧೇಯಕ ಖಂಡಿತವಾಗಿಯೂ ಸ್ವಾಗತಾರ್ಹವಾದಂತಹದ್ದು.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ ವಿಧೇಯಕ ಬಹಳ ಸ್ವಾಗತಾರ್ಹವಾಗಿದೆ. ಈಗ ಇರುವಂತಹದ್ದರಲ್ಲಿ ಬಹಳಷ್ಟು ನ್ಯೂನತೆಗಳು ಇವೆ. ಆದರೆ, ಈ ತಿದ್ದುಪಡಿಯಿಂದ ಇವೆಲ್ಲಾ ದೂರ ಆಗುತ್ತದೆ ಎಂಬ ನಂಬಿಕೆ ಇದೆ. ಏಕೆಂದರೆ, ಭರವಸೆಗಳ ಸಮಿತಿಯಲ್ಲಿ ಲಕ್ಷಾಂತರ ಪ್ರಕರಣಗಳು Sections 79A and 79B of the Karnataka Land Reforms Act ಯಲ್ಲಿ ಇರುವುದನ್ನು ನಾವು ನೋಡುತ್ತಿರುತ್ತೇವೆ. ಇದರ ಬಗ್ಗೆ ಮಾನ್ಯ ಸಚಿವರಿಗೆ ಮತ್ತು ಕಾರ್ಯದರ್ಶಿಯವರಿಗೆ ಇದನ್ನು ತೆಗೆದು ಹಾಕಬೇಕೆಂದು ಈ ಹಿಂದೆ ವಿನಂತಿಯನ್ನು ಮಾಡಿದ್ದೇವೆ. ಇವತ್ತಿನ ದಿವಸ ಬಹಳ ಒಳ್ಳೆಯ ವಿಧೇಯಕವನ್ನು ತಂದಿದ್ದಾರೆ. ಇದರಲ್ಲಿ ಒಂದು ಟೈಮ್ ಲಿಮಿಟ್ ಅನ್ನು ಸೇರಿಸಬೇಕು. ಮತ್ತೆ ಇದನ್ನು ಅಧಿಕಾರಿಗಳ ಕೈಗೆ ಕೊಟ್ಟರೆ ತಪ್ಪಾಗುತ್ತದೆ. ಇದು 30 ದಿನಗಳಲ್ಲಿ ಆಗಲಿಲ್ಲವೆಂದರೆ deemed permission ಮಾಡಿ, ಈ ವಿಧೇಯಕದಲ್ಲಿ ಸ್ವಲ್ಪ ಸುಧಾರಣೆಯನ್ನು ಮಾಡಿ, ಇದು ಒಳ್ಳೆಯ ವಿಧೇಯಕವೆಂದು ಹೇಳಿ ನಾನು ಸ್ವಾಗತ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2020 ಕ್ಕೆ ಮಾನ್ಯ ಕಂದಾಯ ಸಚಿವರು 109ನೇ ಪ್ರಕರಣದ ತಿದ್ದುಪಡಿಯನ್ನು ತಂದಿದ್ದಾರೆ. ಇದು ಸ್ವಾಗತಾರ್ಹವಾದದು. ಎಲ್ಲಾ ಮಾನ್ಯ ಸದಸ್ಯರು ಹೇಳಿರುವಂತೆ, ಅವರು ಯಾವ ಉದ್ದೇಶಕ್ಕಾಗಿ ಕೈಗಾರಿಕೆಗಳನ್ನು ಪ್ರಾರಂಭ ಮಾಡಿರುತ್ತಾರೆ. ಅವರು ಏನಾದರೂ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದಾಗ, ಆ ಉದ್ದೇಶಕ್ಕೋಸ್ಕರ ಇದನ್ನು ಪ್ರಾರಂಭ ಮಾಡಬೇಕೆಂಬ ಕಟ್ಟುನಿಟ್ಟಿನಲ್ಲಿ ಮಾಡಿರುತ್ತಾರೆ. ಮುಖ್ಯವಾಗಿ ಯಾವುದೇ ಒಬ್ಬ ಉದ್ದಿಮೆದಾರ, ಯಾರೋ ಕೆಲವು ವ್ಯಕ್ತಿಗಳು ರಿಯಲ್ ಎಸ್ಟೇಟ್ ಮಾಡುವ ಉದ್ದೇಶದಿಂದ ತೆಗೆದುಕೊಳ್ಳುತ್ತಾರೆ ಎಂಬ ಬಗ್ಗೆ ಎಲ್ಲರಿಗೂ ಆತಂಕ ಇದೆ. ನನ್ನ ಪ್ರಕಾರ ಅದು ಕೆಲವೇ ವ್ಯಕ್ತಿಗಳು ಇರಬಹುದು. ಎಲ್ಲಾ ಉದ್ದಿಮೆದಾರರ ಉದ್ದೇಶವೇನೆಂದರೆ, ಇಲ್ಲಿ ಕೈಗಾರಿಕೆಗಳನ್ನು ಮಾಡಬೇಕು. ಸ್ಥಳೀಯವಾಗಿ ಕೆಲಸ ಕೊಡಬೇಕೆಂಬ ಉದ್ದೇಶ ಇರುತ್ತದೆ. ಆದರೆ ಮನುಷ್ಯ ಪರಿಸ್ಥಿತಿಯ ಕೈಗೊಂಬೆಯಾಗಿ ಮಾರಬೇಕಾದ ಅನಿವಾರ್ಯ ಪರಿಸ್ಥಿತಿ ಬಂದೇ ಬರುತ್ತದೆ. ಇವತ್ತಿನ ದಿವಸ ನಾವು ಕರೋನಾ ವೈರಸ್ ಬಗ್ಗೆ ನಾವ್ಯಾರೂ ಸಹ ಊಹೆ ಮಾಡಿರಲಿಲ್ಲ. ಇಡೀ ಪ್ರಪಂಚದಲ್ಲಿ ಪರಿಸ್ಥಿತಿ ಏನಾಗುತ್ತಿದೆ ಎಂಬುದು ಗೊತ್ತಿರುವ ವಿಚಾರ. ಇವತ್ತು ಆರ್ಥಿಕ ಪರಿಸ್ಥಿತಿ ಯಾವ ಕೆಳಮಟ್ಟಕ್ಕೆ ಹೋಗಿದೆ. ಇದರ ಬಗ್ಗೆ ಯಾರು ಊಹೆ ಮಾಡುವುದಕ್ಕೆ ಆಗುವುದಿಲ್ಲ. ಈಗ ದೊಡ್ಡ ದೊಡ್ಡ ಕೈಗಾರಿಕೋದ್ಯಮಿಯನ್ನು ಮನಸ್ಸಿನಲ್ಲಿಟ್ಟುಕೊಂಡು, ಇದು ರಿಯಲ್ ಎಸ್ಟೇಟ್ ಆಗುತ್ತದೆ ಎನ್ನುವ ಒಂದು ನಮ್ಮ ಕಲ್ಪನೆ ಇದೆಯಲ್ಲವೇ, ನಿಜವಾಗಿಯೂ ಅದು ತಪ್ಪು ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಇದರ ಜೊತೆಗೆ ಕೆಲವು ಮಾನ್ಯ ಸದಸ್ಯರು ಹೇಳುತ್ತಿದ್ದರು. ಯಾವುದೋ ಒಂದು industrial purpose ಗೆ ಸರ್ಕಾರದ concept ನಿಂದ ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿರುತ್ತಾರೆ. ನಗರ ಬೆಳೆದಿರುತ್ತದೆ. ಜನರು ವಾಸವಾಗಿರುವ ಅಕ್ಕಪಕ್ಕದಲ್ಲಿ ಏನಾದರೂ ಕೈಗಾರಿಕೆಗಳನ್ನು ನಡೆಸಿದರೆ, ಅವರು Karnataka State Pollution Control Board ಗೆ, ಸರ್ಕಾರಕ್ಕೆ ಮತ್ತು ನಮ್ಮಂಥ, ನಿಮ್ಮಂಥ ಜನಪ್ರತಿನಿಧಿಗಳಿಗೆ ದೂರನ್ನು ಹೇಳಿಕೊಳ್ಳುತ್ತಾರೆ. ಸ್ವಾಮಿ, ಇಲ್ಲಿ ನಮಗೆ ವಾಸ ಮಾಡುವುದಕ್ಕೆ ಆಗುವುದಿಲ್ಲ. ಕೈಗಾರಿಕೆಗಳನ್ನು ನಡೆಸಬೇಡಿ ಎಂದು ಹೇಳುತ್ತಾರೆ. ಆಗ ಏನು ಮಾಡುವುದು? ಇದರ ಜೊತೆಗೆ ಕಲಂ 79ಎ, 79ಬಿ ಅಡಿಯಲ್ಲಿನ ಪ್ರಕರಣಗಳು ನಿಜವಾಗಿಯೂ ಕೂಡ ಅಧಿಕಾರಿಗಳ ಹಿಡಿತದಲ್ಲಿ ಯಾರ್‍ಯಾರು ಜಮೀನನ್ನು ತೆಗೆದುಕೊಂಡಿದ್ದಾರೆ, ಅವರು ಇದೊಂದು ರೀತಿಯಲ್ಲಿ blackmailing ಕಾನೂನು ಆಗಿದೆ. ಕಲಂ 79ಎ, 79ಬಿ ಅಡಿಯಲ್ಲಿನ ಪ್ರಕರಣಗಳ ಬಗ್ಗೆ ಎಲ್ಲರಿಗೂ ಸತ್ಯ ಗೊತ್ತು. ಇದರಲ್ಲಿ ದುರಂತ ಏನೆಂದರೆ, ಬಹುಶಃ ಸದನದಲ್ಲಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇರುವಂತಹ ಎಲ್ಲಾ ಸದಸ್ಯರಿಗೂ ನನ್ನ ಮಾತು ವ್ಯತಿರಿಕ್ತ ಎಂದು ಭಾವಿಸುತ್ತೇನೆ. ಇವತ್ತು ಬೆಂಗಳೂರು ನಗರ ಆಗಬಹುದು, ತಾಲ್ಲೂಕು ಮಟ್ಟದಲ್ಲಿ 25 ಲಕ್ಷಕ್ಕೆ in a radius of 2 ರಿಂದ 3 ಕಿ.ಮೀ ನಲ್ಲಿ ಎಲ್ಲಿ ಜಮೀನು ಸಿಗುತ್ತದೆ. ಇದರ ಬಗ್ಗೆ ನಾವು ಸತ್ಯ ಮಾತನಾಡೋಣ. ಈಗ ಮಾನ್ಯ ಕಂದಾಯ ಸಚಿವರಾದ ಅಶೋಕ್‌ರವರು ಸದನದಲ್ಲಿ ಇದ್ದಾರೆ. ಇದರಲ್ಲಿ ಒಂದು ದುರಂತ ಏನೆಂದರೆ, ನನಗೆ ಆಗಿರುವ ಅನುಭವದ ಪ್ರಕಾರ ಬೆಂಗಳೂರು ದಕ್ಷಿಣದಲ್ಲಿ ನಾವು ಜಮೀನನ್ನು ಕೊಂಡುಕೊಳ್ಳಬೇಕಾದರೆ 75 ರಿಂದ 85 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಆದರೆ guidance value of Sub-Registrar ಎರಡೂವರೆ ಕೋಟಿ ರೂಪಾಯಿಗಳು ಇದೆ. ಇದು ಎಂತಹ ದುರಂತವೆಂದರೆ, ನಾವು ವ್ಯಾಪಾರಸ್ಥರನ್ನು ಬಹಳ ಕಳ್ಳರು ರೀತಿಯಲ್ಲಿ ನೋಡುತ್ತೇವೆ. ನಿಜವಾಗಿಯೂ ವ್ಯಾಪಾರ ಮಾಡುವವರು ಮತ್ತು ಉದ್ದಿಮೆದಾರರ ಕಷ್ಟ ಅವರಿಗೆ ಮಾತ್ರ ಗೊತ್ತಿರುತ್ತದೆ. ಯಾರೋ ಕೆಲವು ವ್ಯಕ್ತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಇದನ್ನು ಮಾಡುವುದಕ್ಕೆ ಹೋದರೆ ಇದು ತಪ್ಪು ಎಂದು ಅನಿಸುತ್ತದೆ. ಮಾನ್ಯ ಕಂದಾಯ ಸಚಿವರಲ್ಲಿ ಮನವಿ ಮಾಡುವುದೇನೆಂದರೆ, guidance value ಮೊದಲು ಏನಿತ್ತು, Sub-Registrar recommendation ನಲ್ಲಿ ಒಂದು ಕಮಿಟಿ ಇತ್ತು. ಈಗ ಎಲ್ಲರೂ ಎ.ಸಿ., ರೂಮಿನಲ್ಲಿ ಕುಳಿತುಕೊಂಡು I.G.R., ಎರಡೂವರೆ ಕೋಟಿ ರೂಪಾಯಿಗಳಿಗೆ ಜಮೀನನ್ನು acquire ಮಾಡಿ ಕೊಡಿಸಲಿ. ನೀವು ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಿ. ನಮ್ಮದೇ ಒಂದು ಜಮೀನು ಇದೆ. ಎರಡೂವರೆ ಕೋಟಿ ರೂಪಾಯಿಗಳನ್ನು ಕೊಟ್ಟು, ಜಮೀನನ್ನು ತೆಗೆದುಕೊಳ್ಳಿ. ನಂತರ ಭೂಸ್ವಾಧೀನಪಡಿಸಿಕೊಳ್ಳಿ. 70 ಲಕ್ಷ ರೂಪಾಯಿಗಳನ್ನು ಕೊಟ್ಟು ಜನರು ಜಮೀನನ್ನು ತೆಗೆದುಕೊಳ್ಳುವ ಅಗತ್ಯ ಇಲ್ಲ. ಅಂತಹದ್ದನ್ನು ತಾವು ಎರಡೂವರೆ ಕೋಟಿ ರೂಪಾಯಿಗಳನ್ನು ಮಾಡಿದ್ದೀರಿ. ಅದಕ್ಕೆ ಕಾನೂನು ಏನಿದೆ, ಇದಕ್ಕೆ ಅರ್ಥ ಬೇಡವೇ, ಇದು ನನ್ನ ಒಬ್ಬನದು ಅಲ್ಲ. ಇಲ್ಲಿ ಬೇರೆಯವರು ಕುಳಿತುಕೊಂಡು ವ್ಯಾಪಾರಸ್ಥರ ಬಗ್ಗೆ, ರಾಜಕಾರಣಿಯ ಬಗ್ಗೆ ಮಾತನಾಡುವುದು ಬಹಳ ಸುಲಭ. ಆದರೆ, ಅವರದೇ ಆದ ನೋವನ್ನು ತಿನ್ನುತ್ತಿರುತ್ತಾರೆ. ಆ ನೋವನ್ನು ಕೂಡ ಸರ್ಕಾರ ಮತ್ತು ಅಲ್ಲಿರುವಂತಹ ಎಲ್ಲಾ ಸದಸ್ಯರು ಕೂಡ ಇದನ್ನು ಪರಿಗಣಿಸಬೇಕು. ಇದರ ಬಗ್ಗೆ ಈಗಾಗಲೇ ಹೇಳಿದ್ದೇನೆ ಅಲ್ಲವೇ? ಅಲ್ಲಿ ಜಮೀನಿನ ಮೌಲ್ಯ 75 ಲಕ್ಷ ರೂಪಾಯಿಗಳು ಇಲ್ಲ. ಈಗ ಎರಡೂವರೆ ಕೋಟಿ ರೂಪಾಯಿಗಳನ್ನು ಮಾಡಿದ್ದೀರಿ. ಇದಕ್ಕೆ ಏನಾದರೂ ಅರ್ಥ ಇದೆಯೇ? ಇದರ ಜೊತೆಗೆ 25 ಲಕ್ಷ ರೂಪಾಯಿಗಳಿಗೆ ಕಲಂ 79ಎ, 79ಬಿ ಅಡಿಯಲ್ಲಿನ ಪ್ರಕರಣಗಳಿಗೆ ಕಾನೂನು ಇದೆ. ವ್ಯವಸಾಯದಾರರು ಪಡೆದಿರುವಂತಹ . . .

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಇದಕ್ಕೆ ಬೇಡಿಕೆ ಇರಲಿಲ್ಲವೇ? ಅಥವಾ ದರ ಜಾಸ್ತಿಯಾಗಿದೆ ಎಂದು ಇದನ್ನು ಹಾಗೆಯೇ ಬಿಟ್ಟಿದ್ದಾರೆಯೇ.

**ಶ್ರೀ ಎನ್. ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಇದಕ್ಕೆ ಬೇಡಿಕೆ ಇಲ್ಲವೇ ಇಲ್ಲ. ಇದರ ಜೊತೆಗೆ ಕಲಂ 79ಎ, 79ಬಿ ಅಡಿಯಲ್ಲಿನ ಪ್ರಕರಣಗಳು ಇದೆಯಲ್ಲವೇ, ಇದರ ಬಗ್ಗೆ ಎಲ್ಲರಿಗೂ ಗೊತ್ತಿದೆ. ವ್ಯವಸಾಯಗಾರರ ಕುಟುಂಬದವರಿಗೆ 25 ಲಕ್ಷ ರೂಪಾಯಿಗಳಿಗಿಂತ ಜಾಸ್ತಿ ಆದಾಯ ಇದ್ದರೆ, ವ್ಯವಸಾಯ ಜಮೀನನ್ನು ಕೊಂಡುಕೊಳ್ಳಬಾರದೆಂಬ ನಿಯಮ ಇದೆ. ಆದರೆ ಈಗ ಪರಿಸ್ಥಿತಿ ಏನಾಗಿದೆ ಎಂದರೆ, ಹಾಗಾದರೆ ಯಾವುದೇ ಜಮೀನನ್ನು ಕೊಂಡುಕೊಳ್ಳಬೇಡಿ.ಮಾನ್ಯ ಕಂದಾಯ ಸಚಿವರಿಗೆ ನನ್ನ ಭಿನ್ನಹ ಏನೆಂದರೆ, . . .

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಎನ್.ಅಪ್ಪಾಜಿಗೌಡರವರೇ ಸಾಕು. ಕುಳಿತುಕೊಳ್ಳಿ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಇದು ಹಿಂದೆಯೇ ಆಗಿದೆ. ಈ ಕಾನೂನನ್ನು ತಂದಿರುವುದಕ್ಕೆ ಸ್ವಾಗತ ಮಾಡುತ್ತೇನೆ. ಇದರ ಬಗ್ಗೆ K.I.A.D.B., ಅಧಿಕಾರಿಗಳಿಗೆ ಬಹಳ ಖುಷಿಯಾಗಿದೆ. ಈ ಕೈಗಾರಿಕೋದ್ಯಮಿಗಳಿಗಿಂತ K.I.A.D.B., ಅಧಿಕಾರಿಗಳು ಬಹಳ ಖುಷಿಯಾಗಿದ್ದಾರೆ. ಏಕೆಂದರೆ, ಮಾನ್ಯ ಸಚಿವರು 7 ವರ್ಷ ಎಂದು ಹೇಳಿದ್ದರು. ಆ 7 ವರ್ಷದ ಲಿಮಿಟ್ ಬೇರೆ ಇದೆ ಎಂಬುದು ನನ್ನ ಮನಸ್ಸಿಗೆ ಅನಿಸುತ್ತಿದೆ. ಒಬ್ಬ ನಷ್ಟ ಹೊಂದಿದವನು why will he wait for seven years? ಎರಡನೆಯದು, ಆ ಭಾಗದ ಸಿ.ಡಿ.ಪಿ., ಗಳೆಲ್ಲಾ ಬದಲಾವಣೆಯಾದಾಗ ಅವರುಗಳ ಅಗತ್ಯ ಏನು, ಇನ್ನೊಂದು ಈಗ ಈ K.I.A.D.B., ಅಧಿಕಾರಿಗಳು ಈಗ free. ಇದನ್ನು ತಕ್ಷಣ ಎಷ್ಟು ದಿನದೊಳಗೆ ಇಂಪ್ಲಿಮೆಂಟ್ ಮಾಡುತ್ತೀರಿ, after seven years, if he is giving an application? ಎಷ್ಟು ದಿನದೊಳಗೆ transferಮಾಡುವುದಕ್ಕೆ, ಸೇಲ್ ಮಾಡುವುದಕ್ಕೆ ಅನುಮತಿಯನ್ನು ಕೊಡುತ್ತೀರಿ ಎನ್ನುವ ಬಗ್ಗೆ ಮಾನ್ಯ ಸಚಿವರು ನಿಗದಿ ಮಾಡಬೇಕೆಂದು ನಾನು ಕೋರುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2020 ರನ್ನು ಸರ್ಕಾರ ತಂದಿದೆ. ಇದರಲ್ಲಿ ಕಲಂ 79ಎ, 79ಬಿ ಅಥವಾ 80ನೇ ಪ್ರಕರಣಗಳು, ಸೆಕ್ಷನ್ 63 ಗಳಿಗೆ ಸಂಬಂಧಿಸಿದಂತೆ the Karnataka

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Industries (facilitation) Act ಅನ್ನು ತಂದಿದ್ದಾರೆ. ಬಹುಶಃ ಈ Karnataka Land Reforms Act ಯಾವಾಗ ಬಂದಿದೆ. ಮಾನ್ಯ ಡಿ.ದೇವರಾಜ ಅರಸುರವರ ಕಾಲದಲ್ಲಿ ರೈತರಿಗೆ ಅನುಕೂಲ ಆಗಬೇಕು. ಇದರಲ್ಲಿ ಸಾಕಷ್ಟು industrialisation ಆಗಬಾರದು. ಅವರಿಗೆ ರಕ್ಷಣೆ ಕೊಡಬೇಕೆನ್ನುವ ಬಗ್ಗೆ ಈ ಕಾಯಿದೆಯನ್ನು ತಂದಿದ್ದೆವು. ಅದನ್ನು ಮಾಡಿದ ಮೇಲೆ ಕೈಗಾರಿಕೆಗೆ ಸಾಕಷ್ಟು ಪ್ರೋತ್ಸಾಹ ಕೊಡಬೇಕೆಂದು ತಾವು ಕಾನೂನನ್ನು ತಂದಿದ್ದೀರಿ. ಈಗ ಮತ್ತೆ ಏನು ಮಾಡುತ್ತಿದ್ದಾರೆ ಎಂದರೆ, ಈ ಕಾನೂನಿನ ಉದ್ದೇಶದಿಂದ ಇದನ್ನು ಮತ್ತೆ ಮಾರುವುದಕ್ಕೆ, ಯಾರು industrialists ಗೆ, ಕೈಗಾರಿಕೆಗಳಿಗಾಗಿ ಕೊಟ್ಟಿದ್ದೀರಿ, ಅವರಿಗೆ ಮಾರುವುದಕ್ಕೆ ಅಧಿಕಾರವನ್ನು ಕೊಡುತ್ತಿದ್ದೀರಿ. ರೈತರಿಗೆ ಏನು ಷರತ್ತು ಇದೆ ಎಂದರೆ, ರೈತರ ಜಮೀನನ್ನು ತೆಗೆದುಕೊಂಡಿದ್ದೀರಿ. ರೈತರ ಜಮೀನನ್ನು ಮಾತ್ರ ತಾವು ಭೂಸ್ವಾಧೀನಪಡಿಸಿಕೊಂಡಿದ್ದೀರಿ. Industries land ಅನ್ನು ಎಲ್ಲಿಂದ ತೆಗೆದುಕೊಳ್ಳಲಾಗಿದೆ? ತಾವು ಎಲ್ಲಿಂದ ತೆಗೆದುಕೊಂಡಿದ್ದೀರೋ, ಅದನ್ನು ಮತ್ತೆ ರೈತರಿಗೆ ತಾವು ಅವಕಾಶವನ್ನು ಮಾಡಿಕೊಡದೇ ಹೋದರೆ ಇದು ಬಹಳ ಕಷ್ಟವಾಗುತ್ತದೆ. ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕೆಂದು ಕೋರುತ್ತೇನೆ.

(ಮುಂದು)

**(667) 23/03/2020/1:50/ಎಸ್‌ಪಿಆರ್/ಜಿಆರ್**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2020 ಇದು ಒಳ್ಳೆಯ ವಿಧೇಯಕವೆಂದು ನಾನು ಭಾವಿಸಿ, ಸ್ವಾಗತಿಸುತ್ತೇನೆ. ಈ ವಿಧೇಯಕದ ಬಗ್ಗೆ ಮಾನ್ಯ ಸದಸ್ಯರಾದ ನಾರಾಯಣಸ್ವಾಮಿಯವರು ತಮ್ಮಲ್ಲಿ ಈ ಹಿಂದೆ ಹೊಂಡ ಇತ್ತು, ಈಗ ಹೋಯಿತು ಎಂದು ಬಹಳ glorify ಮಾಡಿ ಹೇಳಿದ್ದಾರೆ. ಆದರೆ, ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ದೊಡ್ಡ ದೊಡ್ಡ ಉದ್ಯಮಿಗಳನ್ನು ಆಕರ್ಷಣೆ ಮಾಡುವುದಕ್ಕಾಗಿ ಈ ವಿಧೇಯಕವನ್ನು ತಂದಿಲ್ಲ. ಈಗಾಗಲೇ ಯಾರಿಗೆ ಉದ್ಯಮ ಪ್ರಾರಂಭ ಮಾಡಬೇಕೆಂಬ ವಿಚಾರವಿದೆ, ಆ ಉದ್ಯಮಿಪತಿಗಳು ಭೂ ಮಾಲಿಕರ ಜೊತೆ negotiation ಮಾಡಿ, ಅವರು ಹೇಳಿದ ಬೆಲೆಗೆ ಒಪ್ಪಿಕೊಂಡು ಜಮೀನನ್ನು ಖರೀದಿ ಮಾಡುವ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಿಗೆ ಕಲಂ 109 ರಡಿ ಪರವಾನಿಗೆಯನ್ನು ಪಡೆದು ಖರೀದಿ ಮಾಡಬೇಕು. ಒಂದು ವೇಳೆ ನಿಗದಿಕ್ಕಿಂತ ಹೆಚ್ಚು ಜಮೀನು ಇದ್ದರೆ ಸರ್ಕಾರದ ಪರವಾನಿಗೆಯನ್ನು ಪಡೆಯಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Because, only the agriculturist can hold the land. ರೈತನೇ ಖೇತಿ ಭೂಮಿಯನ್ನು ಖರೀದಿ ಮಾಡಬೇಕೆಂಬ ಕಾನೂನು ಇದೆ. ಇದಕ್ಕೆ ಅಪವಾದವಾಗಿ ಉದ್ಯಮವನ್ನು ಪ್ರಾರಂಭಿಸಬೇಕಾದರೆ, ಕಂಪೆನಿಯವರು ಬರುತ್ತಾರೆ. That Company cannot hold the agriculture land, unless and until they get the permission under Section 109 of the Karnataka Land Reforms Act, 1961. ಕಲಂ 109 ರಡಿ ಪರವಾನಿಗೆ ದೊರೆತ ಮೇಲೆ ಕಂಪೆನಿಯವರು ಜಮೀನನ್ನು ಖರೀದಿ ಮಾಡುತ್ತಾರೆ. ನಂತರದಲ್ಲಿ ಅದು ಕೃಷಿ ಭೂಮಿ ಹೋಗಿ ಕೈಗಾರಿಕಾ ಉದ್ದೇಶಗಳಿಗಾಗಿ ಪರಿವರ್ತನೆಯಾಗುತ್ತದೆ. ಹೀಗೆ ಪರಿವರ್ತನೆಗೊಂಡ ಭೂಮಿಯನ್ನು ಬ್ಯಾಂಕ್‌ಗಳೊಂದಿಗೆ negotiation ಮಾಡಿ Consortium ಸಭೆ ಮಾಡಿದಾಗ ಉದ್ಯಮವು ಪ್ರಾರಂಭವಾಗುತ್ತದೆ. ಅಗತ್ಯವಿರುವಷ್ಟು ಸಾಲ ಪಡೆಯುತ್ತಾರೆ. ಉದ್ಯಮವನ್ನು ನಡೆಸುವ ಸಂದರ್ಭದಲ್ಲಿ, ಯಾವುದೋ ಒಂದು ದುರ್ದೈವದಿಂದಾಗಿ ಅಥವಾ mismanagement, ಆ ಉದ್ಯಮವು ಸರಿಯಾಗಿ ನಡೆಯದಿದ್ದರೆ, ಕಷ್ಟದಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ. ಆಗ ಜಮೀನು ಮಾರುವಂತಹ ಪರಿಸ್ಥಿತಿಗೆ ಬರುತ್ತದೆ. ಈ ಮೊದಲು ಜಮೀನನ್ನು ಮಾರುವುದಕ್ಕೆ ಅವಕಾಶವಿರಲಿಲ್ಲ. ಕಲಂ 109 ರಡಿ ಪರವಾನಿಗೆಯನ್ನು ಪಡೆದು ಜಮೀನನ್ನು ಮಾರದಿರುವ ದುಸ್ಥಿತಿಗೆ ಬರುತ್ತಿದ್ದರು. Plant and machinery along with the land ಮಾರುವ ಅವಕಾಶವಿರಲಿಲ್ಲ. ಈಗ ಕಲಂ 109 ಕ್ಕೆ ಸರಳೀಕರಣ ಮಾಡಿರುವ ಕಾರಣದಿಂದಾಗಿ, ಇದರನ್ವಯ ಮತ್ತೊಬ್ಬ ಉದ್ಯಮಪತಿಗೆ ಮಾರಾಟ ಮಾಡಬಹುದು. ಉದಾಹರಣೆಗೆ ಸಕ್ಕರೆ ಕಾರ್ಖಾನೆ ಇದ್ದರೆ ಅದನ್ನು ಮತ್ತೊಬ್ಬರು ಸಕ್ಕರೆ ಕಾರ್ಖಾನೆಯನ್ನು ನಡೆಸುತ್ತಾರೆ ಎಂದರೆ ಆಗ ಮಾರಾಟ ಮಾಡಬಹುದು. ಯಾವುದೇ ಕಾರ್ಖಾನೆ ಅಥವಾ ಉದ್ಯಮ ನಡೆಸಲು ಮಾರಾಟ ಮಾಡಬಹುದು. ಅದನ್ನು ಬೇರೆ ಉದ್ದೇಶಗಳಿಗೆ ಮಾರಾಟ ಮಾಡುವುದಕ್ಕೆ ಬರುವುದಿಲ್ಲ. ಮತ್ತೊಂದು ಉದಾಹರಣೆ ಎಂದರೆ, ಶಿಕ್ಷಣ ಸಂಸ್ಥೆ ನಡೆಯುತ್ತಿದ್ದರೆ, ಅದನ್ನು ಶಿಕ್ಷಣ ಸಂಸ್ಥೆಯನ್ನು ನಡೆಸಲು ಮಾತ್ರವೇ ಮಾರಾಟ ಮಾಡಬಹುದು. ಅದನ್ನು ಹೊರತುಪಡಿಸಿ, ಬೇರೆ ಉದ್ದೇಶಗಳಿಗಾಗಿ ಭೂಮಿ ಬಳಕೆಯಾಗಬಾರದು ಎನ್ನುವ ಸದುದ್ದೇಶ ಸರ್ಕಾರಕ್ಕೆ ಇದೆ. ಅಂದರೆ, ಮೀಸಲಾದ ಉದ್ದೇಶ ಹೊರತು ಪಡಿಸಿ, ಭೂಮಿಯನ್ನು ನೀಡಿದರೆ, ಉದ್ಯಮವು ಹೊರಟು ಹೋಗುತ್ತದೆ. ಕಾರ್ಖಾನೆ ಬಂದಾಗ ಅಲ್ಲಿ employment generation ಆಗುತ್ತದೆ ಹಾಗೂ ಆರ್ಥಿಕ ಚಟುವಟಿಕೆಗಳು ನಡೆಯುತ್ತವೆ ಮತ್ತು ಆ ಭಾಗವು ಅಭಿವೃದ್ಧಿಯಾಗುವುದಕ್ಕೆ ಸಹಕಾರಿಯಾಗುತ್ತದೆ. ಶ್ರೀ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಹೇಳಿದಂತೆ, 'industrialise or perish', ಉದ್ಯಮ ಮಾಡಿ, ಇಲ್ಲವೆಂದರೆ ಅದು ನಶಿಸಿ ಹೋಗುತ್ತದೆ. ಉದ್ಯಮದಿಂದ ಬಹಳಷ್ಟು ಆರ್ಥಿಕ ಚಟುವಟಿಕೆಗಳು ನಡೆಯುವುದರ ಜೊತೆಗೆ ಉದ್ಯೋಗಗಳಿಗೆ ಅವಕಾಶ ದೊರೆಯುತ್ತದೆ ಅಂದರೆ ದುಡಿಯುವ ಕೈಗಳಿಗೆ ಕೆಲಸವು ದೊರೆಯುತ್ತದೆ. ಈಗ ಸರ್ಕಾರವು ವಿಧೇಯಕವನ್ನು ತಂದಿರುವ ಉದ್ದೇಶದಿಂದ ಯಾವುದಾದರೊಂದು ಉದ್ಯಮವನ್ನು ಪ್ರಾರಂಭ ಮಾಡುವುದಕ್ಕೆ ಉದ್ಯಮಕ್ಕೆ ಉದ್ಯಮವೇ ಬದಲಾವಣೆಯಾಗುತ್ತದೆ. ಇದರಿಂದ ಒಳ್ಳೆಯದಾಗುತ್ತದೆ. ನಮ್ಮ ಅನೇಕ ಗೌರವಾನ್ವಿತ ಸದಸ್ಯರು Sections 79A and 79B ಬಗ್ಗೆ ಪ್ರಸ್ತಾಪಿಸಿದ್ದಾರೆ. ಈ ಸದನದ ಬಹಳಷ್ಟು ಸದಸ್ಯರು ಬೇರೆ ಬೇರೆ ಮೂಲಗಳಿಂದ ಬಂದಿರುವವರಿದ್ದಾರೆ. But, majority have come from agriculture family. ನಾನೂ ಸಹ ಒಬ್ಬ ಕೃಷಿ ಕುಟುಂಬದಿಂದ ಬಂದಿದ್ದೇನೆ. ಕೃಷಿ ಕುಟುಂಬದಿಂದ ಬಂದ ಸದಸ್ಯರಿಗೆ ಹಾಗೂ ಬೇರೆ ಮೂಲದಿಂದ ಬಂದ ಸದಸ್ಯರಿಗೆ, ಕೃಷಿ ಕುಟುಂಬದಿಂದ ಬಂದು ವಿಚಾರಗಳನ್ನು ಬದಲಾವಣೆ ಮಾಡಿಕೊಂಡಿರುವವರಿಗೆ ಬಹಳಷ್ಟು ಅಂತರವಿದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಆ ವಿಷಯವನ್ನು ನಾನು ಈಗ ಪ್ರಸ್ತಾಪಿಸುವುದಿಲ್ಲ. Sections 79A and 79B ಗೆ ಸಂಬಂಧಪಟ್ಟಂತೆ, ನಮ್ಮ ಸ್ನೇಹಿತರು ಪ್ರಸ್ತಾಪಿಸಿದಂತೆ, ಸಹಾಯಕ ಆಯುಕ್ತರು Sections 79A and 79B ರಡಿ ಹಣ ಮಾಡುವುದಕ್ಕಾಗಿಯೇ ಬರುವ ಬಹಳಷ್ಟು ಮಂದಿ ಇರುತ್ತಾರೆ. ನಾನು ನಮ್ಮ ಜಿಲ್ಲೆಗೆ ಉಸ್ತುವಾರಿ ಮಂತ್ರಿಯಾಗಿದ್ದಾಗ, ಅಲ್ಲಿನ ಆಗಿನ ಸಹಾಯಕ ಆಯುಕ್ತರು ಏನು ಮಾಡುತ್ತಿದ್ದರು ಎನ್ನುವುದು ನನಗೆ ಬಹಳಷ್ಟು ಪರಿಚಯವಾಗಿದೆ. ಇದು ಹಣ ಮಾಡುವ ಉದ್ಯೋಗವಾಗಿದೆ. With due respect to you, ನಾನು ಕೇಳುವುದೇನೆಂದರೆ, ಯಾವುದೇ ಒಂದು ಕಾನೂನನ್ನು ಮಾಡಿದಾಗ ಅದಕ್ಕೆ merits and demerits ಗಳಿರುತ್ತವೆ. Merit should outlive the demerits. 'ದೀಪದ ಕೆಳಗೆ ಕತ್ತಲೆ ಇರುವಂತೆ' ಯಾವುದೇ ಕಾನೂನನ್ನು ತೆಗೆದುಕೊಂಡಾಗ ಆ ಕಾನೂನಿನ drawbacks ಗಳಿರುತ್ತವೆ. ಆದರೆ ಯಾವುದೇ ಕಾನೂನನ್ನು ಮಾಡಿದಾಗ, ಆ ಕಾನೂನಿನ drawbacks ಅಧಿಕಾರಿಗಳಿಗೆ ದುಡ್ಡು ತಿನ್ನುವುದಕ್ಕೆ ಅವಕಾಶ ಸಿಕ್ಕಿದೆ ಎಂದು ತಿಳಿದುಕೊಳ್ಳುತ್ತಾರೆ. ಹೀಗೆ ದುಡ್ಡು ತಿನ್ನಲಾರದ ಹಾಗೆ ನಿಯಮಗಳನ್ನು ಮಾಡಿ, ಕಾನೂನನ್ನು ಹದ್ದುಬಸ್ತಿಗೆ ಇಟ್ಟು, accountability fix ಮಾಡುವುದಕ್ಕೂ ಸಹ ಅವಕಾಶವಿದೆ. ಈಗ ಮಾಡಿರುವ ಕಾನೂನು ಹಣ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಿನ್ನಲು ಅನುಕೂಲವಾಗಿದೆ ಎಂದು ಅಧಿಕಾರಿಗಳು ತಿಳಿದುಕೊಳ್ಳಬಾರದು. ಶೀತವಾಗಿದೆ ಎಂದು ನಾವು ಮೂಗಿಗೆ ಚಿಕಿತ್ಸೆಯನ್ನು ಮಾಡುವುದಿಲ್ಲ. ಅದರ ಬದಲಾಗಿ ಮೂಗನ್ನೇ ತೆಗೆದರೆ ಹೇಗೆ? ಹಗಲೆಲ್ಲಾ ಶೀತ ಬರುತ್ತದೆ ಎಂದು ಮೂಗನ್ನೇ ತೆಗೆದರೆ ಹೇಗೆ? ಹೀಗೇನೂ ಮಾಡಬಾರದು. ಕಾನೂನಿನ ಸಾಧಕ–ಬಾಧಕಗಳ ಬಗ್ಗೆ ಸಮಸ್ಯೆಗಳು ಬಂದಾಗ ವಿಚಾರವನ್ನು ಮಾಡೋಣ. ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2020 ನ್ನು ಸರಳೀಕರಣ ಮಾಡುವ ಸದುದ್ದೇಶದಿಂದ ಅಂದರೆ ಉದ್ಯಮಕ್ಕೆ ಉದ್ಯಮವೇ ಉಳಿಯಬೇಕು ಹೊರತು ಅದು ನಶಿಸಿ ಹೋಗಬಾರದು. ದುಡಿಯುವ ಕೈಗಳಿಗೆ ಉದ್ಯೋಗ ಕೊಡಬೇಕು. ಇದರಿಂದ ರಾಜ್ಯದ output ಹೆಚ್ಚಾಗುತ್ತದೆ ಎನ್ನುವ ಉದ್ದೇಶವನ್ನಿಟ್ಟುಕೊಂಡು ಈಗ ಮಂಡಿಸಿರುವ ಪ್ರಸ್ತುತ ವಿಧೇಯಕವನ್ನು ನಾನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. ಈಗ ಇರುವ ಕಾನೂನಿಗೆ ಸಮಾನಾಂತರವಾಗಿ N.C.L.T., (National Company Law Tribunal) ಎಂಬ ಕಾನೂನನ್ನು ಕೇಂದ್ರ ಸರ್ಕಾರವು ಜಾರಿಗೆ ತಂದಿದೆ. N.C.L.T., ಕಾನೂನು ಸಹ ಇದೇ ರೀತಿಯ ಕೆಲಸವನ್ನು ಮಾಡುತ್ತದೆ. ನಮ್ಮ ರಾಜ್ಯದ ಮಟ್ಟಿಗೆ ಯಾರು ಬ್ಯಾಂಕ್‌ನಿಂದ ಸಾಲವನ್ನು ಪಡೆದು ಎನ್.ಪಿ., ಆದಾಗ, N.C.L.T., ಕಾನೂನಿನಡಿಯಲ್ಲಿಯೂ ಸಹ ಇಂತಹ ವ್ಯವಸ್ಥೆ ಇದೆ. ಕಾರ್ಖಾನೆ ಮಾರಾಟ ಮಾಡುವ ಉದ್ದೇಶಕ್ಕಾಗಿ ಮಾಡಲಾಗಿದೆ. ಈಗ ಸರ್ಕಾರ ತಂದಿರುವ ವಿಧೇಯಕವು ಸ್ವಾಗತಪರ ಕಾನೂನುವಾಗಿದ್ದು, ಅದನ್ನು ನಾನು ಸ್ವಾಗತಿಸುತ್ತೇನೆ.

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಈ ಕಾಯಿದೆಯ ಬಗ್ಗೆ ಹೆಚ್ಚು ಬೆಳಕನ್ನು ಚೆಲ್ಲಿದ್ದಾರೆ. ಅದೇ ರೀತಿಯಾಗಿ ಈ ಮನೆಯ ಬಹಳಷ್ಟು ಸದಸ್ಯರು ಈ ಕಾಯ್ದೆಯ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ನಾರಾಯಣಸ್ವಾಮಿಯವರು ಒಂದು ವಿಷಯದ ಬಗ್ಗೆ ಪ್ರಸ್ತಾಪಿಸಿದರು. ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿಯ ಎರಡು ಕಿಲೋಮೀಟರ್ ದೂರದಲ್ಲಿ ಕಿಯಾ ಕಾರ್ಖಾನೆಯು ಸುಮಾರು 50 ಸಾವಿರ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಫ್ಯಾಕ್ಟರಿಯನ್ನು ಮಾಡಿದ್ದಾರೆ. ಏಕೆಂದರೆ ಬೆಂಗಳೂರು ನಗರದ ಸುತ್ತಮುತ್ತ ಆ ರೀತಿಯ ಫ್ಯಾಕ್ಟರಿಗಳು ಹೆಚ್ಚಾಗಿ ಬರುತ್ತವೆ. ಆದರೆ ಇಲ್ಲಿನ ಬಹಳಷ್ಟು ಕಾಯ್ದೆಗಳು ತೊಂದರೆಯನ್ನುಂಟು ಮಾಡುತ್ತಿರುವುದರಿಂದ ಅವರು ಕರ್ನಾಟಕ ರಾಜ್ಯದ ಗಡಿ ಭಾಗಗಳಿಗೆ ಹೋಗುತ್ತಿದ್ದಾರೆ. ಹೊಸೂರು ದಾಟಿ ಬರುವ ಪ್ರದೇಶದಲ್ಲಿ ಬಹಳಷ್ಟು ಇಂಡಸ್ಟ್ರಿಗಳು ಬಂದಿವೆ. ಏಕೆಂದರೆ, ಅಲ್ಲಿ ನಿಯಮಗಳ ಸರಳೀಕರಣವಿದೆ. ಈ ದೃಷ್ಟಿಯಿಂದ ಏಕೆಂದರೆ, ಇವತ್ತಿನ ದಿವಸ ನಮಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ವ್ಯವಸಾಯ ಹಾಗೂ ಇದರ ಜೊತೆಗೆ ಕೈಗಾರಿಕೆಗಳ ಅವಶ್ಯಕತೆ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರು ಸರ್.ಎಂ.ವಿಶ್ವೇಶ್ವರಯ್ಯನವರು ಹೇಳಿದ ಮಾತನ್ನು ಉಲ್ಲೇಖಿಸಿದ್ದಾರೆ. ಆ ಕಾಲದಲ್ಲಿಯೇ ವಿಶ್ವೇಶ್ವರಯ್ಯನವರು ಸಕ್ಕರೆ ಕಾರ್ಖಾನೆ ಹಾಗೂ ಪವರ್ ಕಂಪೆನಿಗಳು ... ನಾನು ಈ ಮಾತನ್ನು ಕೇಳಿದ್ದೇನೆ. ಅದು ನಿಜವೋ ಗೊತ್ತಿಲ್ಲ. ಇಡೀ ಏಷಿಯಾ ಖಂಡದಲ್ಲಿಯೇ ಮೊದಲ power plant ಮಂಡ್ಯ ಜಿಲ್ಲೆಯ ಶಿಂಷಾದಲ್ಲಿ ಬಂದಿದ್ದು.

**ಶ್ರೀ ನಸೀರ್ ಅಹ್ಮದ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಿಯಾ ಮೋಟಾರ್ಸ್ ಅನಂತಪುರ ಜಿಲ್ಲೆಯಲ್ಲಿದೆ. ಇದು ಬಾಗೇಪಲ್ಲಿಯಿಂದ ಸುಮಾರು 45-50 ಕಿಲೋಮೀಟರ್‌ಗಳ ದೂರದಲ್ಲಿದೆ. ಆದರೆ ಮಂತ್ರಿಗಳು ಕೇವಲ ಎರಡು ಕಿಲೋ ಮೀಟರ್‌ಗಳು ಎಂದು ಹೇಳಿದ್ದಾರೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ದೂರವನ್ನು ಕಡಿಮೆ ಮಾಡಿದ್ದಾರೆ. ನಗರೀಕರಣವಾದ ಮೇಲೆ ... ಮಾನ್ಯ ಸದಸ್ಯರಾದ ಶ್ರೀ ಶ್ರೀಕಂಠೇಗೌಡರು ಮತ್ತು ಇನ್ನಿತರೆ ಸದಸ್ಯರು...

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದು ಕರ್ನಾಟಕ ರಾಜ್ಯದ ಗಡಿ ಭಾಗವಾಗಿದೆ. ಮಾನ್ಯ ಸದಸ್ಯರಿಗೆ ಕರ್ನಾಟಕ ರಾಜ್ಯದ ವಿಮಾನ ನಿಲ್ದಾಣ ಬೇಕು. ಆದರೆ ಅವರಿಗೆ ರಾಜ್ಯ ಗಡಿ ಯಾವುದೆಂದು ಗೊತ್ತಾಗುವುದಿಲ್ಲ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಎರಡು ಮಹಡಿಯುಳ್ಳ ಶಾಲಾ-ಕಾಲೇಜುಗಳನ್ನು ಕಟ್ಟಬೇಕೆಂಬುದರ ಬಗ್ಗೆ ಬಹಳಷ್ಟು ಸದಸ್ಯರು ತಿಳಿಸಿದ್ದಾರೆ. ಒಂದು ಬಾರಿ ನಗರೀಕರಣವಾದರೆ, ಇಲ್ಲಿನ ಮಾಸ್ಟರ್ ಪ್ಲಾನ್ ಏನಿದೆ ಇದಕ್ಕೆ ತಾನಾಗಿಯೇ ಬರುತ್ತದೆ. ಇಲ್ಲಿ 60-80 ಅಡಿಗಳ ರಸ್ತೆ ಇದೆ. ಇದರನ್ವಯ F.A.R., (Floor Area Ratio) ಸ್ವಾಭಾವಿಕವಾಗಿ ಬರುತ್ತದೆ. ಈ ಹಿಂದೆ ಕೃಷಿ ಭೂಮಿ ಆಗಿದ್ದರೆ, ಅದು ನಗರ ಪ್ರದೇಶ ವ್ಯಾಪ್ತಿಯೊಳಗೆ ಬಂದರೆ, ಈಗ ವಲಯಗಳನ್ನಾಗಿ ಮಾಡಲಾಗಿದೆ. ಈಗ ಎಲ್ಲಾ ಜಿಲ್ಲೆಗಳಲ್ಲಿ ಪ್ರಾಧಿಕಾರವಿದೆ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(668)/23-3-2020/2-00/ಎಲ್ಎಂ/ಎಂಡಿ

**ಶ್ರೀ ಆರ್.ಅಶೋಕ(ಮುಂದು):-**

ಎಲ್ಲಾ ಕಡೆಗಳಲ್ಲಿ ನಗರದ ಸುತ್ತ ಪ್ರಾಧಿಕಾರವಿದೆ. ಪ್ರಾಧಿಕಾರದ ಒಳಗೆ ಬಂದರೆ 109 ಹೋಗುತ್ತದೆ. ಪ್ರಾಧಿಕಾರದಲ್ಲಿ ಏನು notify ಆಗಿರುತ್ತದೆ. Residential, Commercial ಅದರ ಪ್ರಕಾರ ಅದಕ್ಕೆ ಅನ್ವಯವಾಗುತ್ತದೆ. ಅದು ಕೂಡಾ ಉಪಯೋಗವಾಗುತ್ತದೆ. 79(ಎ)(ಬಿ) ಪ್ರಕರಣಗಳ ಬಗ್ಗೆ ಶ್ರೀ ಎಸ್.ರವಿ, ಶ್ರೀ ಟಿ.ಎ.ಶರವಣ, ಶ್ರೀ ಎನ್.ಅಪ್ಪಾಜಿಗೌಡರವರು ಮಾತನಾಡಿದ್ದಾರೆ. 40 ವರ್ಷಗಳಿಂದ ಒಟ್ಟು 81,000 ಪ್ರಕರಣಗಳು ದಾಖಲಾಗಿವೆ. 1,83,000 ಎಕರೆ ಅದಕ್ಕೆ 79(ಎ)(ಬಿ) ಕೇಸ್‌ಗಳನ್ನು ಎಸಿ ಯವರೆ ಹಾಕಿದ್ದಾರೆ. ಕೇಸ್ ಹಾಕಿ ಸರ್ಕಾರ ವಾಪಸ್ ಪಡೆದಿರುವುದು ಬಹಳ ದೊಡ್ಡ ಸಂಖ್ಯೆಯಲ್ಲಿ ಮಾಡಿದ್ದಾರೆ, ಎಷ್ಟು ಎಂದರೆ 1.83,000 ಎಕರೆಯಲ್ಲಿ ಬರಿ 48 ಎಕರೆ ಜಮೀನನ್ನ ಅದು ಕೋರ್ಟ್‌ಗೆ ಹೋಗಿ ತೆಗೆದುಕೊಂಡಿರುತ್ತಾರೆ. 79(ಎ)(ಬಿ) ಪ್ರಕರಣಗಳು ಬಹಳ ಸಮಸ್ಯೆಗಳನ್ನು ಹುಟ್ಟು ಹಾಕುತ್ತಿದೆ. ಈಗ 109 ತಂದಿರುವುದಕ್ಕೆ ಕೈಗಾರಿಕೆಗಳು ಬರುವುದರಿಂದ ಇದು ಯಾವುದೇ ಕಾಯ್ದೆ ಬರುವುದಿಲ್ಲ. 79(ಎ)(ಬಿ) ಪ್ರಕರಣಗಳೇನು ಬರುವುದಿಲ್ಲ, Normally, Industries ಗೆ ಏನು apply ಆಗುತ್ತದೆ ಅದೇ ಆಗುತ್ತದೆ. ಇದು ಕೂಡಾ ಮಾರಕ. ಇಲ್ಲಿ ಅನೇಕ ಸದಸ್ಯರು ಪ್ರಸ್ತಾಪ ಮಾಡಿರುವ ಸಲಹೆಗಳನ್ನು ಗಮನಿಸಲಾಗುತ್ತದೆ. 79(ಎ)(ಬಿ) ಪ್ರಕರಣ ತೆಗೆಯಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಮುಂದಿನ ದಿನಗಳಲ್ಲಿ ಅದರ ಬಗ್ಗೆಯು ನಾನು ಯೋಚನೆ ಮಾಡುತ್ತೇನೆ. ಒಂದು ಕುಟುಂಬಕ್ಕೆ 56 ಎಕರೆ ಎನ್ನುವ limit ಹಾಗೆ ಇಟ್ಟುಕೊಂಡು, ಉಳಿದಿರುವುದನ್ನು ಏನೇನು ಸರಳೀಕರಣ ಮಾಡಬಹುದು ಎನ್ನುವುದನ್ನು ವಿಚಾರ ಮಾಡುತ್ತೇನೆ. ಏಕೆಂದರೆ ಇದೊಂದು ವಸೂಲಿ ಮಾಡುವ ದಂಧೆಯಾಗಬಾರದು. ಎಸಿ ಯವರಿಗೆ ಮತ್ತು ತಹಸೀಲ್ದಾರರಿಗೆ ಇದೇ ಕೆಲಸವಾಗಿಬಿಟ್ಟರೆ ಅವರಿಗೆ ಬೇರೆ ಕೆಲಸವೇ ಬೇಡ. ಅದರ ಬಗ್ಗೆ ಗಮನಹರಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, 79(ಎ)(ಬಿ) ಪ್ರಕರಣ ತೆಗೆದು ಹಾಕಬೇಕು ಎಂದು ಸದಸ್ಯರು ಹೇಳಿದ್ದಾರೆ ಎನ್ನುವುದು ಕಡತಕ್ಕೆ ಹೋಗಿದೆ. ದಯಮಾಡಿ ಅದನ್ನು ಕಡತದಿಂದ ತೆಗೆಯಬೇಕು. ಆ ರೀತಿಯಾದರೆ ನಮಗೆ ಹೊರಗೆ ಹೋಗುವುದೇ ಕಷ್ಟವಾಗುತ್ತದೆ. Every member has got his own right. It is an inherent

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

right. ಎಲ್ಲರೂ ಹೇಳಿದ್ದಾರೆ ಎಂದು ಹೇಳಿದರೆ ತಪ್ಪಾಗುತ್ತದೆ. Don't make me a party to that.

**ಶ್ರೀ ಆರ್.ಅಶೋಕ(ಕಂದಾಯ ಸಚಿವರು):-** ಮಾನ್ಯ ಸಭಾಪತಿಗಳೆ, ಎಲ್ಲರೂ ಹೇಳಿರುವುದಿಲ್ಲ. ಮಾನ್ಯ ಎಸ್.ರವಿಯವರು ಮತ್ತು ಕೆಲವು ಸದಸ್ಯರು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ಆದರೆ ವಿರೋಧ ಪಕ್ಷದ ನಾಯಕರು ಹೇಳಿರುವುದಿಲ್ಲ.

**ಶ್ರೀ ಯು.ಬಿ.ವೆಂಕಟೇಶ್:-** 109 ಕ್ಕೆ 20 ದಿನಗಳೋ ಅಥವಾ 30 ದಿನಗಳ ಸಮಯ ನಿಗದಿ ಮಾಡುತ್ತೀರಾ? ಎಷ್ಟು ದಿನಗಳು ಎನ್ನುವುದಕ್ಕೆ ಒಂದು ಆಶ್ವಾಸನೆ ಕೊಟ್ಟರೆ ಒಳ್ಳೆಯದು.

**ಶ್ರೀ ಆರ್.ಅಶೋಕ:-** ಮಾನ್ಯ ಸಭಾಪತಿಗಳೆ, ರೂಲ್ಸ್ ಮಾಡುವ ಸಮಯದಲ್ಲಿ ಇದೆಲ್ಲವನ್ನೂ ಗಮನಿಸಲಾಗುತ್ತದೆ. ದಯಮಾಡಿ ಸದರಿ ವಿಧೇಯಕವನ್ನು ಪಾಸ್ ಮಾಡಿಕೊಡಬೇಕಾಗಿ ವಿನಂತಿಸುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ, **ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ "2020 ರ ಕರ್ನಾಟಕ ಭೂ ಸುಧಾರಣೆಗಳ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."**

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

<u>ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು</u>

<u>ಖಂಡ 2 ಮತ್ತು 3</u>

**ಸಭಾಪತಿಯವರು:-** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>
(ಖಂಡ 2 ಮತ್ತು 3 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

<u>ಖಂಡ 1 ಇತ್ಯಾದಿ</u>

ಸಭಾಪತಿಯವರು:- ಪ್ರಸ್ತಾವ ಏನೆಂದರೆ,

**"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"**

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವದ ಅಂಗೀಕಾರ**

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ "2020 ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ)ವಿಧೇಯಕ"ವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ "2020 ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ)ವಿಧೇಯಕ"ವನ್ನು ಅಂಗೀಕರಿಸುವುದು.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**ಊ) ಕರ್ನಾಟಕ ನಗರಪಾಲಿಕೆಗಳ(ತಿದ್ದುಪಡಿ)ವಿಧೇಯಕ,2020**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಜೆ.ಸಿ.ಮಾಧುಸ್ವಾಮಿ**(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):- ಮಾನ್ಯ ಸಭಾಪತಿಗಳೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ2020 ರ ನಗರಪಾಲಿಕೆಗಳ(ತಿದ್ದುಪಡಿ)ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):** ಮಾನ್ಯ ಸಭಾಪತಿಗಳೆ, ನಗರಪಾಲಿಕೆಗಳ ಸ್ಥಳದಲ್ಲಿ ಲೈಸೆನ್ಸ್ ಮೀರಿ ಏನಾದರೂ construction ಆಗಿದ್ದರೆ, ಅದರ ಬಗ್ಗೆ ಕಾನೂನಿನ ಕ್ರಮ ತೆಗೆದುಕೊಂಡು ಅದನ್ನು ತೆರವುಗೊಳಿಸಲು ಅವಕಾಶವಿತ್ತು. ಅದು ಬಹಳ ಸಮಯವಾದರೆ ಏನು ಆಗುತ್ತಿಲ್ಲ ಎನ್ನುವ ಭಾವನೆ ಬರುತ್ತದೆ ಎನ್ನುವ ಕಾರಣಕ್ಕೆ ಯಾರು ಲೈಸೆನ್ಸ್ ಮೀರಿ ಕಟ್ಟಡ ಕಟ್ಟಿರುತ್ತಾರೆ, ಹೆಚ್ಚಿನ ಸ್ಥಳವನ್ನು ಉಪಯೋಗ ಮಾಡಿರುತ್ತಾರೆ, ಅವರಿಗೆ ದಂಡವಿಧಿಸಲು ಈ ಕಾಯಿದೆಯನ್ನು ತರುತ್ತಿದ್ದೇವೆ. Two

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

time the regular tax ಎಂದು ಹೇಳಲಾಗುತ್ತದೆ. ಲೈಸೆನ್ಸ್ ಮೀರಿ ಎಷ್ಟು ಪ್ರದೇಶವನ್ನು ಅವರು ತೆಗೆದುಕೊಂಡಿರುತ್ತಾರೆ, ಅದರ ಎರಡರಷ್ಟು ದಂಡವನ್ನು ನಗರಪಾಲಿಕೆಯವರು ತೆರವುಗೊಳಿಸುವರೆಗೆ ಕಟ್ಟಬೇಕು. Regular Tax ಕಂದಾಯ ಎಷ್ಟು ಇರುತ್ತದೆ ಅದರ ಎರಡು ಭಾಗದಷ್ಟು ಅವರು ಕಟ್ಟಿಕೊಡಬೇಕು. ಎರಡನೆಯದು, Optic Fibres ಗೆ ಸಂಬಂಧಿಸಿದಂತೆ ಶುಲ್ಕ ವಿಧಿಸಲು ಎಂದು ಇತ್ತು, ಬೆಂಗಳೂರು ನಗರದಲ್ಲಿ Optic Fibres ಕಥೆ ಗೊತ್ತಿದೆ. ಎಲ್ಲಿಬೇಕು ಅಲ್ಲಿ ಹೇಗೆ ಬೇಕೊ ಹಾಕಿ ಅಂಟಿಸಿಕೊಂಡು ಹೋಗುತ್ತಿದರು. ಇದನ್ನು ನಿಯಂತ್ರಣಕ್ಕೆ ತರಬೇಕು ಎನ್ನುವುದರ ಜೊತೆಗೆ, ಒಂದು ಸಾರಿ ಶುಲ್ಕವನ್ನು ನಿಗದಿಗೊಳಿಸಲು One-time permission ಕೊಡಲಾಗುವುದು. Optic Fibres ಹಾಕಲು ನಮ್ಮ ರಸ್ತೆಗಳನ್ನು ಬಳಸುವವರೆಗೆ One-time fee fix ಮಾಡಬೇಕು ಎಂದು ಈ ವಿಧೇಯಕವನ್ನು ತರಲಾಗಿದೆ. ಇದನ್ನು ದಯಮಾಡಿ ಪರ್ಯಾಲೋಚಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದು unauthorized buildings ಗಳಿಗೆ ಅನ್ವಯವಾಗುವುದಿಲ್ಲ. 94(c), 94 (c)(c) ಯಾವುದೂ ಬರುವುದಿಲ್ಲ. Licensed building ಜಾಗ ಅವನದೇ ಇದ್ದು, ನಮ್ಮ ಹತ್ತಿರ ಲೈಸೆನ್ಸ್ ತೆಗೆದುಕೊಂಡು ಕಟ್ಟಡ ಕಟ್ಟುವಾಗ ತಮ್ಮ ಜಾಗವನ್ನು ಮೀರಿ ಕಟ್ಟಿದರೆ ಅಥವಾ deviation...

**ಶ್ರೀ ಟಿ.ಎ.ಶರವಣ:–** ಬಹಳಷ್ಟು ಕಡೆಗಳಲ್ಲಿ deviation ಇರುವವರಿಗೆ ಬೆಸ್ಕಾಂ ಸಂಪರ್ಕ ಕೊಡದೇ ಇರುವ ಕಟ್ಟಡಗಳಿವೆ. ಅದರ ಕಡೆಗೂ ಗಮನಹರಿಸಬೇಕು.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಹೇಳಿರುವುದೆಲ್ಲವು ಇದರಲ್ಲಿ ಇದೆ. ಅದರ ಜೊತೆಗೆ penalization clause ತಂದಿದ್ದೆವೆ. ಪ್ರಕರಣ ಇತ್ಯರ್ಥ ಆಗುವವರೆವಿಗೂ ಅವನು ಅಷ್ಟು ಪ್ರದೇಶಕ್ಕೆ double the tax ಹಣವನ್ನು ಕಟ್ಟಬೇಕು.

**ಶ್ರೀ ಟಿ.ಎ.ಶರವಣ:–** ಬೆಸ್ಕಾಂ ದು ಇದರಲ್ಲಿ ಬರುತ್ತದೆಯೇ?

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಎಲ್ಲವನ್ನು ಸೇರಿಸಿ two times tax ಕಟ್ಟಬೇಕು.

**ಡಾ: ಸಿ.ಎನ್.ಅಶ್ವಥನಾರಾಯಣ(ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಗಳೆ, ಇಲ್ಲಿ property legalize ಮಾಡಿಕೊಡುತ್ತಿಲ್ಲ. Extra portion ಏನು ಕಟ್ಟಿದ್ದಾರೆ, ಅದಕ್ಕೆ normal

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

tax ಕಟ್ಟುವ ಬದಲು double tax ತೆಗೆದುಕೊಳ್ಳುತ್ತೇವೆ. ಇದು ಅಕ್ರಮ–ಸಕ್ರಮಗೊಳಿಸುವುದಲ್ಲ. Illegal portion ಏನು ಹೆಚ್ಚಿಗೆ ನಿರ್ಮಾಣ ಮಾಡಿದ್ದಾರೆ, ಅದರ ಸಲುವಾಗಿ ವಸೂಲಿ ಮಾಡಲಾಗುತ್ತದೆ; regularization ಮಾಡುವಂಥಾದ್ದು ಇಲ್ಲ. ಅಕ್ರ,ಮ–ಸಕ್ರಮ ವಿಧೇಯಕವೇ ಬೇರೆ ಇದೆ.

**ಶ್ರೀ ಶರಣಪ್ಪ ಮಟ್ಟೂರು(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ. ನನಗೆ ಇದರಲ್ಲಿ ಒಂದು clarification ಬೇಕಾಗಿದೆ, ಕರ್ನಾಟಕ ನಗರಪಾಲಿಕೆಗಳ(ತಿದ್ದುಪಡಿ)ವಿಧೇಯಕ, 2020ರಲ್ಲಿ ಒಂದೆರಡು ಅಂಶಗಳನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಪೂರ್ತಿ ಓದುವುದು ಬೇಕಾಗಿಲ್ಲ ಅನ್ನಿಸುತ್ತದೆ.

> *"....without obtaining permission under this Act or in contravention of any of the condition specified in such permission granted under this Act or any rule or any byelaw made there under, shall be liable to pay every year a penalty of an additional amount in respect of such floor area or deviation constructed in excess of the permitted area or in violation of the permission granted equal to the property ta leviable on such floor area or deviation of the building levied under sub-section (3), so long as it remains as unlawful construction and without prejudice to any proceedings which may be instituted against him in respect of such unlawful construction...."*

ಇದರಲ್ಲಿ ಪ್ರತಿ ವರ್ಷ ಎಂದು ಹೇಳುತ್ತಿರಲ್ಲ ಅದು ಹೇಗೆ?

(ಮುಂದು)

**(669)23–03–2020(02–10)ಬಿಎಸ್‌ಡಿ–ಎಂಡಿ**

**Sri J.C.MADHUSWAMY:-** Please yield for one minute. ನಾನು ಸ್ಪಷ್ಟವಾಗಿ ಹೇಳಿದ್ದೇನೆಂದರೆ, till the Authority takes decision, ಅವರು demolition ಮಾಡುತ್ತೇವೆಂದು ಹೇಳುತ್ತಾರೋ, regularize ಮಾಡುತ್ತೇವೆಂದು ಹೇಳುತ್ತಾರೋ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

that is other law. ಅವರು ಆ ತೀರ್ಮಾನವನ್ನು ತೆಗೆದುಕೊಳ್ಳುವವರೆಗೆ every year two times the regular tax ಅಷ್ಟು ಜಾಗಕ್ಕೆ ಕಟ್ಟಲೇಬೇಕು ಎನ್ನುವುದು ಈ ವಿಧೇಯಕದಲ್ಲಿದೆ.

**ಶ್ರೀ ಶರಣಪ್ಪ ಮಟ್ಟೂರು (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಂದಿರುವ bill ಒಳ್ಳೆಯದು. Violation ಅನ್ನು ಯಾರು ಮಾಡಿರುತ್ತಾರೆ, they are liable to pay tax is correct. ಪ್ರತಿ ವರ್ಷ ಕೊಡುವುದಕ್ಕೆ ಕಾನೂನಿನಲ್ಲಿ ಅವಕಾಶ ಇದೆಯೇ? Suppose if it is challenged before the judicial system will it stand ಎನ್ನುವ ಪ್ರಶ್ನೆ ಬರುತ್ತದೆ.

**Sri J.C.MADHUSWAMY:-** Mr. Chairman, Sir, yes, we will certainly stand on law point. Because, we are not regularizing out of this law. ಈ ಕಾನೂನಿನಲ್ಲಿ regularize ಮಾಡುವುದಕ್ಕೆ ಹೊರಟಿಲ್ಲ. That is a different law. ಮಾಡುವುದು ಬಿಡುವುದು Authority ಗೆ ಬಿಟ್ಟದ್ದು. ಎಲ್ಲಿಯವರೆಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ಎಲ್ಲಿಯವರೆಗೆ ಏನು ಮಾಡಬೇಕು ಎಂದು Authority ತೀರ್ಮಾನ ಮಾಡುವುದಕ್ಕೆ ಆಗುವುದಿಲ್ಲವೋ, ಅಲ್ಲಿಯವರೆಗೆ license ಗಿಂತ ಹೆಚ್ಚಾಗಿ construction ಮಾಡಿದ್ದರೆ ನಾವು double the tax ಮಾಡಬಹುದು. ಅಷ್ಟು ಪ್ರದೇಶಕ್ಕೆ ಮಾತ್ರ ಹಾಕಲು ಅವಕಾಶ ಇದೆ. This won't enable him to get regularized. ಇದು regularization ಪ್ರಕಾರ ಅಲ್ಲ ಅಥವಾ 94(ಸಿ) ಪ್ರಕರಣವೂ ಅಲ್ಲ. ಅವರು Government ಜಾಗದಲ್ಲಿ ಕಟ್ಟಿರುವುದಿಲ್ಲ. ಆದರೆ ಅವರದೇ ಜಾಗದಲ್ಲಿ license ಅನ್ನು violate ಮಾಡಿ ಕಟ್ಟಿರುವುದಕ್ಕೆ ಮಾತ್ರ ಹಾಕುತ್ತಿರುವ ದಂಡವಾಗಿದೆ. We are enabled.

**Sri ALLUM VEERABHADRAPPA:-**Double the tax is from today or from the day it is constructed?

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಬೆಂಗಳೂರು ಸಿಟಿಯಲ್ಲಿ ಕೆಲವರು violation ಮಾಡಿಕೊಂಡು ಲಕ್ಷಾಂತರ building ಗಳನ್ನು ಕಟ್ಟಿದ್ದಾರೆ. ಅವರಿಗೆ BESCOM

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನವರು power connection ಕೊಡದೇ ಮುಂದೆ ಏನು ಮಾಡಬೇಕು ಎಂದು ತಟಸ್ಥರಾಗಿದ್ದಾರೆ. ಇದರಲ್ಲಿ ಏನಾದರೂ ಸಲಹೆ ಕೊಡುತ್ತಾರೆಯೇ? ಬಹಳಷ್ಟು ಜನ ಮುಂದೆ ಏನು ಮಾಡಬೇಕೆಂಬ ಗೊಂದಲದಲ್ಲಿದ್ದಾರೆ.

**ಶ್ರೀ ಜೆ.ಸಿ. ಮಾಧುಸ್ವಾಮಿಃ-** ನಾವು only unlicensed ಸುದ್ದಿ ಮಾತನಾಡುತ್ತಿಲ್ಲ. ನಾವು permission ತೆಗೆದುಕೊಳ್ಳದೇ license ಕೊಡದೇ ಕಟ್ಟಿರುವ building ಗಳ ವಿಷಯ ಪ್ರಸ್ತಾಪ ಮಾಡುತ್ತಿಲ್ಲ. ನಾವು license ಅನ್ನು ಕೊಟ್ಟಿದ್ದೇವೆ. ಉದಾಹರಣೆಗೆ ನಾಲ್ಕು ಚದರಕ್ಕೆ ಕೊಟ್ಟು, ನಾಲ್ಕೂವರೆ ಚದರ ಕಟ್ಟಿರುತ್ತಾರೆ. ನಮಗೆ ಏನೋ ಒಂದು plan ಕೊಟ್ಟು violate ಮಾಡಿ excess ಕಟ್ಟಿರುತ್ತಾರೆ. ಆ ಭಾಗಕ್ಕೆ ಮಾತ್ರ double the tax ತೆಗೆದುಕೊಳ್ಳುತ್ತೇವೆ. Only license ಇಲ್ಲ ಎಂದಾಗ ಮಾತ್ರ BESCOM connection ಪ್ರಶ್ನೆ ಬರುತ್ತದೆ.

**ಶ್ರೀ ಟಿ.ಎ. ಶರವಣಃ-**License ಇದೆ, plan approval ಆಗಿದೆ. Construction ಆಗಿ building ಕಟ್ಟಿದ್ದಾರೆ. ಹೊಸದಾಗಿ violation ನೆಪ ಹೂಡಿ BESCOM ನಿಂದ ಪವರ್ ಕೊಡುತ್ತಿಲ್ಲ. ಅವರು temporary power connection ತೆಗೆದುಕೊಂಡು ನಡೆಸುತ್ತಿರುತ್ತಾರೆ.

**Sri J.C.MADHUSWAMY:-** Sir, We have not come across that. ನಮಗೆ ಸಂಬಂಧಪಟ್ಟಂತೆ ಕಟ್ಟಡ ಕಟ್ಟಿ ಎಂಟತ್ತು ವರ್ಷಗಳಿಂದ action ತೆಗೆದುಕೊಳ್ಳುವುದಕ್ಕೆ ಆಗಿರುವುದಿಲ್ಲ. ಅವರು construct ಮಾಡಿಆರಾಮವಾಗಿ ಇದ್ದಾರಲ್ಲ, ಅವರಿಗೆ ಏನಾದರೂ penalty clause ತರಬೇಕು ಎಂಬ ಉದ್ದೇಶದಿಂದ ತಂದಿದ್ದೇವೆ.

**ಶ್ರೀ ಐವನ್ ಡಿ'ಸೋಜಾಃ-** ಮಾನ್ಯ ಸಭಾಪತಿಯವರೆ, ನನಗೊಂದು clarity ಬೇಕು, ಈಗ double the tax ಅನ್ನು collection ಮಾಡುತ್ತಾರೆ. ಅದನ್ನು unauthorized ಎಂದು deviation ಮಾಡಿ construction ಮಾಡಿರುತ್ತಾರೆ. Once you impose the penalty, whether you will not go to the court and say that, the Government has imposed penalty and collected the tax, you

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

regularize it ಎಂದು ಕೋರ್ಟಿಗೆ ಹೋಗಿ regularization ಮಾಡಕೊಳ್ಳಲು ಆಗುವುದಿಲ್ಲವೇ? Is this not giving a license to him?

**Sri J.C.MADHUSWAMY:-** To avoid the question of equity before the court, ಕೋರ್ಟ್‌ನಲ್ಲಿ regularize ಮಾಡಿ ಎನ್ನುವ ಪ್ರಶ್ನೆ ಉದ್ಭವವಾಗಬಾರದೆಂದು ಇದನ್ನು ತಂದಿದ್ದೇವೆ. This will not enable him to regularization or the question of equity before the court.

**Sri IVAN D'SOUZA:-** I am also living in City Corporation limits. ಇದೇ ಸದನದಲ್ಲಿ unauthorized buildings ಗಳನ್ನು ಸಕ್ರಮ ಮಾಡಲು ಒಂದು ಕಾನೂನಿನ provision ತಂದಿದ್ದೇವೆ. It says, ಅದು ಇರುವಾಗ that act is in force. ಅದು force ನಲ್ಲಿರುವಾಗ ಮತ್ತೊಂದು penalty ಕಟ್ಟುವ ಬಗ್ಗೆ ಮಾಡಿದರೆ, simply you will go to court and say that, I am paying penalty, it is being noticed by the City Municipality. Why can't you regularize me ಎಂದು ಕೇಳಿದಾಗ I think again this will be a problem in the court of law ಎಂದು ನನ್ನ ಅಭಿಪ್ರಾಯ.

**Sri J.C.MADHUSWAMY:-** Even otherwise, ಅವರು ಕೋರ್ಟಿಗೆ ಹೋಗಿ ವರ್ಷಗಟ್ಟಲೆ ಇರುತ್ತಾರೆ ಎಂದರೆ ನಾವೇನು penalize ಮಾಡಬಾರದೇ? Reverse ಆಗಿ ತೆಗೆದುಕೊಳ್ಳಿ. ನಾವು ನೋಟೀಸ್ ಕೊಡುತ್ತಿದ್ದಂತೆ ಅವರು stay ತಂದು if you pull it on for 20-30 years, ಈ ರೀತಿ ಆದರೆ ನಗರ ಸಭೆಗಳನ್ನು ನೋಡಿಕೊಳ್ಳುತ್ತಾ ಕುಳಿತುಕೊಳ್ಳಬೇಕೇ? There we want to penalize and collect some tax for the Authorities. ಆ ಕೆಲಸ ಮಾಡಲೇ ಬೇಕಲ್ಲವೇ?

**ಶ್ರೀ ಐವನ್ ಡಿ'ಸೋಜಾ:-** ಸಕ್ರಮ ಮಾಡಲು ಕಾನೂನು ರೂಪದಲ್ಲಿ ತರುತ್ತಿದ್ದಾರೆಯೇ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ. ಮಾಧುಸ್ವಾಮಿಃ–** ಇಲ್ಲ, we have examined everything. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. This law will not enable any person for regularization. Unauthorized construction, without license ಕಟ್ಟಿರುವವರಿಗೆ regularize ಮಾಡಲು ತಂದಿರುವ ಕಾನೂನಲ್ಲ. ನಾವು license ಕೊಟ್ಟು violation ಆಗಿದ್ದರೆ, license deviate ಆಗಿದ್ದರೆ ಅದರ ಬಗ್ಗೆ action ತೆಗೆದುಕೊಳ್ಳುವವರೆಗೆ....... we are certainly empowered to take such action. Corporation or Authority ಅದರ ಮೇಲೆ action ತೆಗೆದುಕೊಳ್ಳುವುದಕ್ಕೆ ಬೇರೆ ಕಾನೂನಿನಲ್ಲಿ ಇದೆ. ಅದು execute ಆಗುವವರೆಗೆ ಇದರಲ್ಲಿ two-times the tax collect ಮಾಡುತ್ತೇವೆ.

**ಶ್ರೀ ಐವನ್ ಡಿಸೋ'ಜಃ–** ಮಾನ್ಯ ಸಭಾಪತಿಯವರೇ, ಇದರಲ್ಲಿ ಅದು ಆಗುವವರೆಗೆ ಎಂದು ಇಲ್ಲ. ಇದರಲ್ಲಿ ನಿಯಂತ್ರಿಸಲು ಎಂದು ಹೇಳಿದ್ದಾರೆ. What you said is just to control them. ಅಂತಹ unauthorized construction ಗಳನ್ನು control ಮಾಡುವುದಕ್ಕೆ ಎಂದು ಹೇಳಿದ್ದಾರೆ. This will give a....

**Sri J.C.MADHUSWAMY:-** Mr. Chairman Sir, until the Authority takes decision for demolition ಗೋ, regularization ಗೋ, ಮತ್ತೊಂದಕ್ಕೆ ನಾವು ಕ್ರಮ ಜರುಗಿಸುವವರೆಗೆ two-times the tax ತೆಗೆದುಕೊಳ್ಳುತ್ತೇವೆ.

**Sri IVAN D'SOUZA:-** This will give license to him directly ಎಂದು ನನ್ನ ಭಾವನೆ. Kindly go through this. ನಾನು ಇದನ್ನು study ಮಾಡಿರುವುದರಿಂದ ಮತ್ತೊಮ್ಮೆ ಗಮನಕ್ಕೆ ತರುತ್ತೇನೆ. Rules ಮಾಡುವ ಮುಂಚೆ ಆಲೋಚನೆ ಮಾಡಬೇಕು. In case, ನಿಯಂತ್ರಿಸಲು ಅಂದಾಗ you will give a permission to him for regularization ಎಂದಾಗುತ್ತದೆ ಎಂದು ನನ್ನ ಅನಿಸಿದೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ. ರಮೇಶ್‌ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಈ ಕಾಯ್ದೆಗೆ ತಿದ್ದುಪಡಿ ತಂದಿದ್ದಾರೆ, building license ಅನ್ನು ತೆಗೆದುಕೊಂಡು ಅದನ್ನು violation ಮಾಡಿರುವವರು ದುಪ್ಪಟ್ಟು ದಂಡವನ್ನು ಕಟ್ಟುವುದು ಎಂದು ಹೇಳಿದ್ದಾರೆ. ಇದು ಅಕ್ರಮ-ಸಕ್ರಮಕ್ಕೂ ಬರುವುದಿಲ್ಲ. ಹಿಂದೆ ಮಾನ್ಯ ಸಿದ್ದರಾಮಯ್ಯನವರು ಸರ್ಕಾರದಲ್ಲಿ ಅಕ್ರಮ-ಸಕ್ರಮ ವಿಧೇಯಕವನ್ನು ತೆಗೆದುಕೊಂಡು ಬಂದ ಸಂದರ್ಭದಲ್ಲಿ 50 percent above ಆಗಿದ್ದರೆ ಅದನ್ನು ಸಕ್ರಮ ಮಾಡುವುದಿಲ್ಲ. 50% ಒಳಗೆ ಇದ್ದರೆ ಮಾತ್ರ ಸಕ್ರಮ ಮಾಡುವ ಬಗ್ಗೆ ಇತ್ತು. ಬೆಂಗಳೂರಿನಲ್ಲಿ ಇರುವ ಎಲ್ಲಾ building ಗಳು 100% percent violation ಆಗಿಹೋಗಿದೆ. ಅದನ್ನು ಅಕ್ರಮ-ಸಕ್ರಮಕ್ಕೂ ತರುವುದಕ್ಕೆ ಆಗುವುದಿಲ್ಲ. ಸರ್ಕಾರ ಈಗ ಒಂದು ವಿಧೇಯಕವನ್ನು ತಂದಿದೆ. ಇದು ಹೇಗೆಂದರೆ ಶಾಸ್ತ್ರ ಕೇಳುವುದಕ್ಕೆ ಕೈ ಕೊಟ್ಟು ಶಾಸ್ತ್ರ ಕೇಳುತ್ತಾರೆ, ಆ ರೀತಿ ಶಾಸ್ತ್ರ ಕೇಳುವುದಕ್ಕೆ ಹೋದವರಿಗೆ ಮಾತ್ರ ದಂಡ ಹಾಕುವುದು ಎನ್ನುವಂತೆ ಆಗಬಾರದು. ಏಕೆಂದರೆ ಸರ್ಕಾರಿ ಜಾಗದಲ್ಲಿ ಕಟ್ಟಿರುವ building ಗಳು, unauthorized constructions, license ತೆಗೆದುಕೊಳ್ಳದೇ building ಗಳನ್ನು ಕಟ್ಟಿರುವುದು, ಇಂತಹ ಲಕ್ಷಾಂತರ buildings ಗಳು ಬೆಂಗಳೂರಿನಲ್ಲಿ ಇವೆ. Municipal Corporation ಬರುವ ಕಡೆಗಳಲ್ಲಿ ಮಾಡಿಬಿಟ್ಟಿದ್ದಾರೆ. ದಯಮಾಡಿ ಇವತ್ತಿನವರೆಗೂ ಯಾರು building ಗಳನ್ನು ಕಟ್ಟಿರುತ್ತಾರೋ, ಅಂತಹವರಿಗೆ ಒಂದು ದರವನ್ನು fix ಮಾಡಲಿ, ಈಗ 40*60, 40*80, 100*100 ನಿವೇಶನಗಳಲ್ಲಿ ಏನು violation ಮಾಡಿರುತ್ತಾರೋ, ಅಂದರೆ 2020ರವರೆಗೆ ಯಾರ್ಯಾರು building ಗಳನ್ನು ಕಟ್ಟುವಾಗ violation ಮಾಡಿರುತ್ತಾರೋ, ಅಂತಹವರಿಗೆ ಸರ್ಕಾರವು ಒಂದಷ್ಟು fix ಮಾಡಬೇಕು. ಅದಕ್ಕೆ penalty fix ಅಥವಾ slab wise fix ಮಾಡುತ್ತೋರೋ, ಆ ಕೆಲಸ ಮಾಡಲಿ. ಜನರು ನೆಮ್ಮದಿಯಾಗಿರುತ್ತಾರೆ, ಸರ್ಕಾರಕ್ಕೆ ಕಟ್ಟಬೇಕಾದ ತೆರಿಗೆಯನ್ನು ಕಟ್ಟುತ್ತಾರೆ. ಆದರೆ ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ ಮತ್ತು ಈ ಕಡೆ ಹಾವು ಸಾಯಬಾರದು, ಕೋಲು ಮುರಿಯಬಾರದು ಎನ್ನುವಂತಹ ಕಾಯ್ದೆಗಳನ್ನು ತೆಗೆದುಕೊಂಡು ಬಂದರೆ ಜನರು ನೆಮ್ಮದಿಯಿಂದ ಇರುವುದಿಲ್ಲ. ಜನರಿಗೆ loan ಸಹ ಸಿಗುವುದಿಲ್ಲ. ಈ ರೀತಿ ಆಗುವುದು ಬೇಡ. ದಯಮಾಡಿ ತಿದ್ದುಪಡಿ ತಂದಿದ್ದಾರೆ. ಇಂತಹವುಗಳಿಗೆ ಸರಿಯಾದ ರೀತಿಯಲ್ಲಿ ಕಾನೂನಿನ ತಿದ್ದುಪಡಿ ತಂದು, ಜನರು ನೆಮ್ಮದಿಯಿಂದ ಬದುಕಿ-ಬಾಳಲು ಅವಕಾಶ ಮಾಡಿಕೊಡಬೇಕು. ಈಗಾಗಲೇ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

2003ರಲ್ಲಿ betterment charges ಅನ್ನು stop ಮಾಡಿದರು. ಈಗ 2020ರಲ್ಲಿಯೂ betterment open ಆಗಲಿಲ್ಲ. Self-Assessment Tax ಎಂದು ಮಾಡಿದ್ದು, ಆತ ಇಷ್ಟ ಬಂದ ಹಾಗೆ ಏನೋ ಒಂದಷ್ಟು ಕಟ್ಟುತ್ತಾನೆ. ಇದುವರೆಗೂ regularize ಆಗಲಿಲ್ಲ. ಅವನಿಗೆ loan ಸಿಗುವುದಿಲ್ಲ. ಮನೆ ಕಟ್ಟಲು 2003ರಲ್ಲಿ stop ಮಾಡಿ, ಇದುವರೆಗೂ betterment charges ತೆಗೆದುಕೊಳ್ಳದೇ, license ಸಹ ಕೊಡುವುದಿಲ್ಲ ಎಂದರೆ ಜನರು ಹೇಗೆ ಮನೆಗಳನ್ನು ಕಟ್ಟಬೇಕು? ಜನರು ಹೇಗೆ ಬದುಕಿ ಬಾಳಬೇಕು?

(ಮುಂದು)

(670)/23.03.2020/2.20/ಹೆಚ್‌ವಿ–ಎಕೆ

**ಶ್ರೀ ಪಿ.ಆರ್.ರಮೇಶ್:–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಈ ಕಾಯಿದೆಯ ತಿದ್ದುಪಡಿಯನ್ನು ತರುತ್ತಿರುವ ಸಂದರ್ಭದಲ್ಲಿ 108 'ಎ' ಎನ್ನುವ ಹೊಸ ಸೆಕ್ಷನ್ ಅನ್ನು ಸೇರ್ಪಡೆ ಮಾಡಿದೆ. ಈ ಸೆಕ್ಷನ್ ಏನು ಹೇಳುತ್ತದೆಯೆಂದರೆ, "Levy and calculation of property tax in respect of Bruhath Bangalore Mahanagara Palike". ಇದು ನನಗೆ ಅರ್ಥವಾಗಲಿಲ್ಲ. Further, clause (1) of Section 108A reads as follows:-

> *"Notwithstanding anything contrary contained in this Act, subject to such exemptions provided under this Act and such rules as may be prescribed, the property tax of all buildings or vacant lands or both situated within the city of Bruhath Bangalore Mahanagara Palike area shall be levied every year in the following manner."*

ನಮ್ಮ ಮುಂದಿರುವಂತಹ ತಿದ್ದುಪಡಿ ವಿಧೇಯಕದಲ್ಲಿ, in clause (3) of Section 108A, it is stated as follows:-

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

> *"…vacant land or both including a building constructed in violation of the provisions of building byelaw…"*

ಇದು ಸರಿಯಾಗಿದೆ. ಮಾನ್ಯ ಸಚಿವರು ಹೇಳಿದಂತೆ ಯಾವ ಕಟ್ಟಡಗಳು building byelaw or building regularizationor land use ಇವುಗಳನ್ನು ಉಲ್ಲಂಘನೆ ಮಾಡಿದ್ದರೆ, ಅಂತಹ ಕಟ್ಟಡಗಳಿಗೆ ಇದು ಅನ್ವಯಿಸುತ್ತದೆ. ಮುಂದುವರೆದು ಹೇಳಿರುವಂತಹ ಈ ಸಾಲುಗಳು ಸ್ವಲ್ಪ ಗೊಂದಲಮಯವಾಗಿದೆ. ಅದು ಹೀಗಿದೆ, *"…or in an unauthorized layout…"* Suppose unauthorized layout ಆಗಿದೆ. ಅನಧಿಕೃತ ಬಡಾವಣೆ ಎಂದು ಹೇಳಿದ ಮೇಲೆ ಅಲ್ಲಿ ಕಟ್ಟಡ ಕಟ್ಟುವವರಿಗೆ ಯಾವ ರೀತಿಯಲ್ಲಿ ಸರ್ಕಾರ ಪ್ಲಾನ್‌ಗೆ ಅನುಮತಿಯನ್ನು ಕೊಡುತ್ತದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. Unauthorized layout means it is not alienated, it has not taken permission from the local planning area and it is not permitted under the Town and Country Planning Act. Here, this portion of land is not at all attracted for this type of section.

ಮುಂದುವರೆದು ಹೇಳಿರುವಂತಹುದು ಈ ರೀತಿ ಇದೆ, *"…or in a revenue land…"* ರೆವಿನ್ಯೂ ಲ್ಯಾಂಡ್ ಎಂದರೆ ಯಾವುದು? ಬೆಂಗಳೂರು ಸುತ್ತಮುತ್ತ ಇರುವಂತಹ ಹಲವಾರು ಲ್ಯಾಂಡ್‌ಗಳನ್ನು ಸರ್ಕಾರ rapid urbanization ಮಾಡಿ, ಹಲವಾರು unplanned urbanization ಆಗಿ, ಯಾವುದೇ ರೀತಿಯಲ್ಲಿಯೂ ಸರ್ಕಾರದ ಪ್ಲಾನಿಂಗ್ ಅಡಿಯಲ್ಲಿ ಬರದೇ ಇರುವಂತಹ ಲ್ಯಾಂಡ್‌ಗಳನ್ನು ನಗರದ administration ಒಳಗೆ ಅಥವಾ amalgamation limits ಒಳಗೆ ತಂದಿರುವಂತಹ ಲ್ಯಾಂಡ್‌ಗಳಾಗಿರುತ್ತವೆ. ಆದರೆ, ಆ ಲ್ಯಾಂಡ್‌ಗಳ ಸ್ಟೇಟಸ್ ಏನಾಗಿದೆ ಎಂದರೆ it is still an agriculture land. ಇಂತಹ ಕೃಷಿ ಭೂಮಿಗಳಲ್ಲಿ ಕಟ್ಟಿರುವಂತಹ ಕಾಂಪ್ಲೆಕ್ಸ್‌ಗಳು, ಕಾರ್ಖಾನೆಗಳು ಮತ್ತು ಮನೆಗಳು ಇವೆ. ಒಂದು ಫ್ಲೋರ್ ಮನೆಯ ಮೇಲೆ ಇನ್ನೊಂದು ನಾಲ್ಕು ಫ್ಲೋರ್‌ಗಳನ್ನು ಕಟ್ಟಿರುತ್ತಾರೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಜೆ.ಸಿ.ಮಾಧುಸ್ವಾಮಿः–** ಸನ್ಮಾನ್ಯ ಸಭಾಪತಿಯವರೇ, 108 ಸೆಕ್ಷನ್ ಬಗ್ಗೆ ಮಾನ್ಯ ಸದಸ್ಯರು ಉಲ್ಲೇಖ ಮಾಡುತ್ತಿದ್ದಾರೆ. ಹಾಲಿ ಇರುವುದನ್ನು ಅಂದರೆ existing laws ನ್ನು ನಾವು ಕೊಟ್ಟಿದ್ದೇವೆ.

**ಶ್ರೀ ಪಿ.ಆರ್.ರಮೇಶ್ः–** ಸನ್ಮಾನ್ಯ ಸಭಾಪತಿಯವರೇ, Section 108 is a new section. ನನ್ನ ಬಳಿ ಮುನಿಸಿಪಲ್ ಆಕ್ಟ್ ಬುಕ್ ಇದೆ. ಅದರಲ್ಲಿ ಸೆಕ್ಷನ್ 108 ಇದೆ. 108 'ಎ' ಇಲ್ಲ. ಈಗ ಇವರು ಹೊಸದಾಗಿ 108 'ಎ' ಅನ್ನು ಸೇರಿಸುತ್ತಿದ್ದಾರೆ.

**ಶ್ರೀ ಜೆ.ಸಿ.ಮಾಧುಸ್ವಾಮಿः–** ಸನ್ಮಾನ್ಯ ಸಭಾಪತಿಯವರೇ, ಅವರ ಮುಂದೆ ಈಗ ನಾವು ತಂದಿರುವುದು it's an annexure of the earlier law.

**ಸಭಾಪತಿಯವರುः–** ಅದು ಅಪ್‌ಡೇಟ್ ಆಗಿಲ್ಲವೆಂದು ಕಾಣುತ್ತದೆ.

**ಶ್ರೀ ಪಿ.ಆರ್.ರಮೇಶ್ः–** ಸನ್ಮಾನ್ಯ ಸಭಾಪತಿಯವರೇ, ನನ್ನ ಬಳಿ ಇರುವಂತಹ 1976 ರ ಮುನಿಸಿಪಲ್ ಆಕ್ಟ್‌ನಲ್ಲಿ ಸೆಕ್ಷನ್ 108 ಆದ ಮೇಲೆ ಸೆಕ್ಷನ್ 109 ಇದೆ. ಅದರಲ್ಲಿ ಸೆಕ್ಷನ್ 108 'ಎ' ಇಲ್ಲ. ಈಗ ಸರ್ಕಾರ ತಂದಿರುವಂತಹ ಸೆಕ್ಷನ್ 108 'ಎ' ಅನ್ನು ಹೊಸದಾಗಿ ಸೇರಿಸಿಕೊಳ್ಳಲಾಗಿದೆ. A section has been created. ಈ ರೀತಿ ಹೊಸದಾಗಿ ಸೇರ್ಪಡೆಗೊಂಡಿರುವ ಸೆಕ್ಷನ್‌ನಲ್ಲಿರುವ ಅಂಶಗಳ ಬಗ್ಗೆ ಇಷ್ಟು ಹೊತ್ತು ಮಾನ್ಯ ಸಚಿವರು ನಮಗೆ ಮನವರಿಕೆ ಮಾಡಿಕೊಂಡಿರುವುದು ಏನೆಂದರೆ, 'any violation against the sanctioned plan or permitted buildings is attracted under this section' ಎಂದು ಹೇಳಿದ್ದಾರೆ. ಅಂದರೆ, ಆ ಕಟ್ಟಡಕ್ಕೆ ಖಾತೆದಾರರು ಇರಬೇಕಾಗುತ್ತದೆ. ಖಾತೆದಾರನಾಗಿ ಅವನು ಪ್ಲಾನ್‌ಗೆ ಅನುಮತಿಯನ್ನು ಪಡೆದುಕೊಂಡಿರುತ್ತಾನೆ. ಆ ಪ್ಲಾನ್‌ಗೆ ವ್ಯತಿರಿಕ್ತವಾಗಿ ಯಾವುದಾದರು ಕಟ್ಟಡವನ್ನು ಕಟ್ಟಿದ್ದರೆ, ಅಂತಹ ಅರ್ಜಿದಾರನಿಗೆ ಲೆವಿ ಮಾಡುವುದಕ್ಕೆ it is permitted. Deviated buildings or additional floors, where there is complete violation and is against land use, ಇಂತಹವುಗಳು ಬಂದಾಗ ಅದೆಲ್ಲ ಬರುತ್ತದೆ. ಆದರೆ, ಇಲ್ಲಿ *"...in an*

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*unauthorized layout or in a revenue land…"*ಎಂದು ಇದೆ. ಅಂದರೆ, how the government can consider that?

ಈಗ ಸರ್ಕಾರ ತಂದಿರುವಂತಹ ವಿಧೇಯಕ ಕಾನೂನಾದರೆ, ನಾಳೆ ದಿನ ಕೋರ್ಟ್‌ಗೆ ಹೋಗಬಹುದು. ಏಕೆಂದರೆ, ಒಂದು ಜಡ್ಜ್‌ಮೆಂಟ್ ಇದೆ; *"A levy of property tax by Bangalore Development Authority…"*ಏಕೆಂದರೆ ಇದೆಲ್ಲ Town and Country Planning Act ಕೆಳಗೆ ಬರುತ್ತದೆ. So the BDA is also one of the planning authorities for the entire Bangalore. ಇಂತಹವುಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ತೆರಿಗೆ ಹಾಕುವುದಕ್ಕೆ ಬರುವುದಿಲ್ಲವೆಂದು ಇದೆ. ಕಟ್ಟಡ ನಿರ್ಮಾಣ ಪ್ಲಾನ್ ಅನ್ನು ಉಲ್ಲಂಘನೆ ಮಾಡಿರುವಂತಹ ಪ್ರಕರಣಗಳಿಗೆ ತೆರಿಗೆ ಹಾಕುವುದಕ್ಕೆ ಹೋದರೆ, ರೆವಿನ್ಯೂ ಭೂಮಿಯಲ್ಲಿ ಮತ್ತು ಅನಧಿಕೃತ ಬಡಾವಣೆಗಳಲ್ಲಿರುವವರಿಗೆ the government is creating khatas. Without creating a khata, the government can't levy the taxes.

ಬೆಂಗಳೂರಿನಲ್ಲಿ ಸುಮಾರು 825 ಚದುರ ಕಿಲೋ ಮೀಟರ್ ಇರುವಂತಹ ಪ್ರದೇಶವಿದೆ. 'ಎ' ಖಾತಾ ಹೊಂದಿರುವವರಿಗೆ ಅಥವಾ ಕನ್ವರ್ಷನ್ ಮಾಡಿಸಿಕೊಂಡಿರುವವರಿಗೆ ಅಥವಾ ಟೌನ್ ಪ್ಲಾನಿಂಗ್ ಅಥವಾ ಬಿ.ಡಿ.ಎ. ಅವರಿಂದ ಅನುಮತಿಯನ್ನು ತೆಗೆದುಕೊಂಡಿರುವ ಬಡಾವಣೆಗಳಿಗೆ ಸರ್ಕಾರ ಖಾತಾ ಮಾಡಿಕೊಡುವುದಕ್ಕೆ ಸಾಧ್ಯವಾಗುತ್ತದೆ. ರೆವಿನ್ಯೂ ಲ್ಯಾಂಡ್ ಸಿಂಗಲ್ ಕನ್ವರ್ಷನ್ ಆಗಿದ್ದರೆ, ಅಂತಹವರಿಗೆ ಸಿಂಗಲ್ ಖಾತಾ ಮಾಡಿಕೊಡುವುದಕ್ಕೆ ಸಾಧ್ಯವಾಗುತ್ತದೆ. ಇವರಿಗೆ 'ಎ' ಖಾತಾವನ್ನು ಕೊಡಲಾಗುತ್ತದೆ. ಆದರೆ, 'ಬಿ' ಖಾತಾವನ್ನು ಏತಕ್ಕೋಸ್ಕರ ಕೊಡುತ್ತಿದ್ದಾರೆಂದರೆ, it is just to collect tax. And they are taking all the facilities from the local body. ಈಗ ಇವರು ಹಾಕುತ್ತಿರುವ ತೆರಿಗೆ 'ಬಿ' ಖಾತಾ ತರಹವೇ ಬರುತ್ತದೆ. ಆದರೆ, ಈ ತೆರಿಗೆಯನ್ನು ವಿಧಿಸುವುದಕ್ಕೆ ಇವರಿಗೆ ಅಧಿಕಾರವೇ ಇಲ್ಲ. ಈ ಉಲ್ಲಂಘನೆಗಳನ್ನು ಮೌಲ್ಯಮಾಪನ ಮಾಡುವುದು Town and Country Planning Act ಅಡಿಯಲ್ಲಿ ಬರುತ್ತದೆ. These violations are assessed under

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

the Town and Country Planning Act, the Zonal Regulations, the Building Byelaws as well as the Land Users. ಇಷ್ಟೂ ಕವರ್ ಆಗುತ್ತದೆ. ಇದೆಲ್ಲ ಬರುವುದರಲ್ಲಿ *"...in an unauthorized layout or in a revenue land..."*ಎಂದು ಹೇಗೆ ವಿಂಗಡಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಇದಕ್ಕೆ ಮಾನ್ಯ ಸಚಿವರಿಂದ ಸ್ಪಷ್ಟೀಕರಣವನ್ನು ಬಯಸುತ್ತಿದ್ದೇನೆ. If the hon. Minister clarifies this point, I will ask the next clarification.

**ಶ್ರೀ ಎಸ್.ರವಿಃ–** ಸನ್ಮಾನ್ಯ ಸಭಾಪತಿಯವರೇ, ಇದರಲ್ಲಿ ನಿರ್ದಿಷ್ಟತೆ ಎನ್ನುವುದು ಇಲ್ಲ. ಇದನ್ನು ರೆಗ್ಯುಲರೈಸ್ ಮಾಡುವುದಕ್ಕೆ ಒಂದು ಸ್ಪಷ್ಟವಾಗಿರುವಂತಹ ಕಾನೂನು ತರಬೇಕಾಗುತ್ತದೆ. ಒಂದು ನಿರ್ದಿಷ್ಟತೆ ಇಲ್ಲ. ಸರ್ಕಾರ penalize ಮಾಡಿ, ಇರುವುದನ್ನೇ ಮುಂದುವರಿಸಿಕೊಂಡು ಹೋಗುತ್ತೇವೆನ್ನುವುದು ಒಳ್ಳೆಯ ಲಕ್ಷಣವಲ್ಲ. This is not a good move. ಇದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣವನ್ನು ನೀಡಬೇಕಾಗಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ನಾನು ವಿಧೇಯಕದ ಕನ್ನಡ ಪ್ರತಿಯನ್ನು ಇಟ್ಟುಕೊಂಡು ಮಾತನಾಡುತ್ತಿದ್ದೇನೆ. ಅವರು ಆಂಗ್ಲ ಪ್ರತಿಯಲ್ಲಿನ ಅಂಶಗಳನ್ನು ಉಲ್ಲೇಖ ಮಾಡಿ ಮಾತನಾಡಿದ ಕಾರಣಕ್ಕಾಗಿ ನಾನು ಈಗ ಆಂಗ್ಲ ಪ್ರತಿಯನ್ನು ತೆಗೆದುಕೊಂಡಿದ್ದೇನೆ. I will read the relevant paragraph i.e. clause (3) of Section 108A. It is as follows:-

> *"Provided that levy and collection of property tax under this sub-section from such building does not confer any right to regularize violation made, or title, ownership or legal status to such building. Such buildings shall always be liable for any action for violation of law in*

"ತಿದ್ದುಪಡಿಯಾಗದ ಪ್ರತಿ- ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

> *accordance with the provisions of this Act or any other law."*

ಪ್ರಾವಿಷನ್ ಬಹಳ ಸ್ಪಷ್ಟವಾಗಿದೆ.

**ಶ್ರೀ ಪಿ.ಆರ್.ರಮೇಶ್:–** ಸನ್ಮಾನ್ಯ ಸಭಾಪತಿಯವರೇ, ಅವರು ಹೇಳುತ್ತಿರುವುದು ಸರಿಯಾಗಿದೆ. The government has given a cap.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, this clause is governed by the rule of law. ಕೋರ್ಟ್‌ಗೆ ಹೋದಾಗ ಈ ಕ್ಲಾಸ್ ಸಹ ಆಕ್ಟ್ ಆಗುತ್ತದೆ. We have told it very clearly. I will read the same which is as follows:-

> *"Provided that levy and collection of property tax under this sub-section from such building does not confer any right to regularize violation made, or title, ownership or legal status to such building. Such buildings shall always be liable for any action for violation of law in accordance with the provisions of this Act or any other law.".*

ಬೇರೆ ಅವರಿಗೆ ಕನ್ಫರ್ಮ್ ಮಾಡಬೇಕೇ ಬೇಡವೇ ರೆಗ್ಯುಲರೈಸ್ ಮಾಡಬೇಕೇ ಬೇಡವೇ ಎನ್ನುವುದಕ್ಕೆ ಬೇರೆ ಕಾನೂನುಗಳು ಇವೆ. ಒಟ್ಟಾರೆ two times penalty ಹಾಕುವುದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇವೆ. The hon. Member has gone with the first paragraph. But we are clear in the third paragraph.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದುವರಿದಿದೆ)

(671) 23.3.2020 2.30 ಪಿಕೆ:ಎಕೆ

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳುತ್ತಿರುವುದು ಸರಿಯಿದೆ. ಆದರೆ ಅದಕ್ಕೆ ಮುಂಚೆ ನೀವು revenue lands ಅನ್ನು ಕನ್ಸಿಡರ್ ಮಾಡುತ್ತಿದ್ದೀರಿ. Unauthorized layouts consider ಮಾಡುತ್ತಿದ್ದೀರಿ; that is the point. ಯಾರು ಖಾತಾ ತೆಗೆದುಕೊಂಡಿರುತ್ತಾರೋ, ಯಾರು ಪ್ಲ್ಯಾನ್ ತೆಗೆದುಕೊಂಡಿರುತ್ತಾರೋ ಅದನ್ನು ಡೀವಿಯೇಟ್ ಮಾಡಿ, ಪ್ಲ್ಯಾನ್‌ಗೆ ವ್ಯತಿರಿಕ್ತವಾಗಿ ಕಟ್ಟುವಂಥದ್ದಕ್ಕೆ ಸಂಬಂಧಪಟ್ಟಂತೆ ನೀವು ಹೇಳುತ್ತಿರುವುದು ಸರಿಯಿದೆ. ಆದರೆ ಇಲ್ಲಿ unauthorized layouts and revenue lands ನಲ್ಲಿ ಬರುವಂಥಾದ್ದು ಆದಾಗ ನೀವು ಎರಡನೆಯದು ಏನು "Provided that..." ಎಂದೇನು ಓದಿದಿರಿ, ಅದು ಬಂದಾಗ ಅವನು ಟ್ಯಾಕ್ಸ್ ಕಟ್ಟಿಕೊಂಡು, ಖಾತಾ ಮಾಡಿಕೊಂಡಾಗ, ನೀವು 'ಎ' ಖಾತವನ್ನೇ ಕೊಡಬೇಕಾಗುತ್ತದೆ. ರೆವಿನ್ಯೂ ಲ್ಯಾಂಡ್‌ಗೆ ಖಾತೆ ಕೊಡಲು ಬರದೇ ಇದ್ದಾಗ ಅಂಥವರಿಂದ ಟ್ಯಾಕ್ಸ್ ತೆಗೆದುಕೊಂಡರೆ ಆತ ಎರಡು ಸಲ ಟ್ಯಾಕ್ಸ್ ಕಟ್ಟುತ್ತಾನೆ ಮತ್ತು ಅವನ ಖಾತಾ ಕೂಡ ರೆಗ್ಯುಲರೈಸ್ ಆಗುತ್ತದೆ. As such the first statement which the hon. Minister made when he presented this bill was very clear. ಅದೇನೆಂದರೆ, ಲೈಸೆನ್ಸ್ ಪಡೆದವರು ಯಾರು sanction ತೆಗೆದುಕೊಂಡಿರುತ್ತಾರೋ ಅಂತಹ ಕಟ್ಟಡಗಳಲ್ಲಿ additional floor bed ಕಟ್ಟುವುದು ಅಥವಾ setback ನಲ್ಲಿ deviation ಮಾಡುತ್ತಾನೋ ಅಥವಾ plinth area ನಲ್ಲಿ deviation ಮಾಡುತ್ತಾನೋ ಅಥವಾ coverage ನಲ್ಲಿ deviation ಮಾಡುತ್ತಾನೋ ಅಥವಾ land use ನಲ್ಲಿ change ಮಾಡುತ್ತಾನೋ ಇಂಥದ್ದಕ್ಕೆ ನೀವು ಹೇಳಿದ್ದು attract ಆಗುತ್ತದೆ. ನೀವು ಹೇಳಿರುವುದು ಸರಿಹೋಗುತ್ತದೆ. ಆದರೆ ಇಲ್ಲಿ unauthorized layout ಅಂದರೆ ಅವನಿಗೆ ಪ್ಲ್ಯಾನ್ ಕೊಡುವುದಕ್ಕೆ ಬರುವುದಿಲ್ಲ, ಖಾತಾ ಕೊಡುವುದಕ್ಕೆ ಬರುವುದಿಲ್ಲ. And that is also revenue land. The status of that land is 'revenue land'. Conversion ಆಗಿರುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ತಾವು ಕೆಳಗಿನ ಭಾಗವನ್ನೇನು ಓದಿದಿರೋ ಅದು ಸರಿಯಿದೆ. ಆದರೆ ಮೇಲಿನ ಭಾಗದಲ್ಲಿ ಏನಿದೆಯೋ ಅದು ಬಂದ ನಂತರವೇ ಕೆಳಗಿರುವುದು ಬರುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಸಭೆಯನ್ನು 3.15 ಗಂಟೆಯ ತನಕ ಮುಂದೂಡಲಾಗಿದೆ.

(672)23.03.2020/4.10/ವೈಎಲ್–ಬಿಎನ್ಎಸ್

**(ಮಧ್ಯಾಹ್ನ 2.32 ಗಂಟೆಗೆ ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನಃ ಸಂಜೆ 4 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು)**

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪಿ.ಆರ್.ರಮೇಶ್‌ರವರ ಮನವೊಲಿಸಲು ಪ್ರಯತ್ನ ಮಾಡುತ್ತಿದ್ದೆ. ನಮ್ಮ ಮೂಲ Karnataka Municipal Corporations Act ನ Section 112C ನಲ್ಲಿ "Levy of penalty on unlawful building" ನಲ್ಲಿ ಈ provision ಇತ್ತು. ಕರ್ನಾಟಕ ರಾಜ್ಯದ ಬೇರೆ ಎಲ್ಲಾ ನಗರಗಳಿಗೂ ಅನ್ವಯವಾಗುತ್ತಿತ್ತು. ಬೆಂಗಳೂರು ನಗರ ಪಾಲಿಕೆಗೆ ಇದನ್ನು ಸೇರಿಸಿಲ್ಲವೆಂಬ ಕಾರಣಕ್ಕೆ ಈ ವಿಧೇಯಕವನ್ನು ತರಲಾಗಿದೆ. ಇದರ ಮೂಲ ಉದ್ದೇಶ, violation of licence ಅನ್ನು ಅವರಿಗೆ ಬಿಟ್ಟರೆ ಯಾರು revenue land ನಲ್ಲಿ ಅಥವಾ unauthorized land ನಲ್ಲಿಕಟ್ಟಡ ನಿರ್ಮಿಸಿರುತ್ತಾರೆ, ಅವರನ್ನು confirm ಮಾಡುವುದಕ್ಕಾಗುವುದಿಲ್ಲ. ಆದರೆ, ಈಗಾಗಲೇ ಅವರ ಹತ್ತಿರ one time tax ತೆಗೆದುಕೊಳ್ಳುತ್ತಿದ್ದರೆ, ಅವರಿಗೂ two times tax ತೆಗೆದುಕೊಳ್ಳುವ ಪರಿಸ್ಥಿತಿ ಇದೆ. ಮಾನ್ಯ ಸದಸ್ಯರು ಹೇಳಿದ lacuna ವನ್ನು ನಾನು observeಮಾಡಿದ್ದೇನೆ. ಅದರ ಬಗ್ಗೆ ಚರ್ಚೆಯನ್ನು ಮಾಡಲಾಗಿದೆ. If something has to be done ಇದನ್ನು ನಿಯಮಾವಳಿಯಲ್ಲಿ ಬದಲಾವಣೆ ಮಾಡಿಕೊಂಡು, ಮಾನ್ಯ ಸದಸ್ಯರ ಮನವೊಲಿಸುವಂಥ ಕೆಲಸ ಮಾಡುತ್ತೇನೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರು:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ rectify ಮಾಡುವುದಕ್ಕೆ ಅವಕಾಶ ಇದೆಯೇ?

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, rectify ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಶರಣಪ್ಪ ಮಟ್ಟೂರು:–** ಮಾನ್ಯ ಸಭಾಪತಿಯವರೇ, ಹೇಗೆ ಮಾಡುವುದಕ್ಕೇ ಸಾಧ್ಯ? Because, it goes to the root of the issues which has been raised by the Hon'ble Member of this House.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಏನಾಗಿದೆ ಎಂದರೆ, ಹಳೆಯ ಕಾನೂನಿನಲ್ಲಿ ಏನು ನಿಯಮ ಇತ್ತು ಅದನ್ನು ಸೇರಿಸಿ, ಒಂದು ಸಲ ತೆರಿಗೆಯನ್ನು ಕಟ್ಟಿಸಿಕೊಂಡಿದ್ದಾರೆ. As rightly said by the Member, by collecting the tax we have to create Katha. Once Katha is created equity starts. I have agreed that. Once ನಾವೇನಾದರೂ ಖಾತಾ ಮಾಡಿಸಿ, ಅವರು ತೆರಿಗೆ ಕಟ್ಟಲು ಪ್ರಾರಂಭಿಸಿದರೆ, he has got every right to go before the Court. We try to avoid this lacuna while framing Statues or Rules

**Sri SHARANAPPA MATTUR** :- If we fail to frame Statutes in this regard, definitely he knocks the doors of justice. In future, the Bill should not fail, that is our concern.

**Sri J.C.MADHUSWAMY:-** I appreciate his points and we will rectify the issues.

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿರುವಂತೆ ಈ ಒಂದು ಕಾಯ್ದೆಯನ್ನು prospective ಆಗಿ ಮಾಡಿ. Retrospective ಆಗಿ ಮಾಡುವುದು ಬೇಡ. Retrospective ಆಗಿ ನೀಡಿದರೆ ಬಹಳ ಅನಾನುಕೂಲವಾಗುತ್ತದೆ. From the Date of the Act ಕೊಡುವಂಥ ವ್ಯವಸ್ಥೆ ಮಾಡಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:–**ಆಗಬಹುದು. We have not said so. ಈ ವಿಧೇಯಕವನ್ನು Retrospective ಆಗಿ ನಾವು ಜಾರಿಗೆ ತಂದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಲ್ಲಿ ನನ್ನ ಒಂದು ಮನವಿಯೇನೆಂದರೆ, penalty ಅಥವಾ double tax ಹಾಕಿ ಏನು ತೆಗೆದುಕೊಳ್ಳುತ್ತಾರೆ ಅದನ್ನು ಒಪ್ಪಿಕೊಳ್ಳುತ್ತೇವೆ. ಆದರೆ, ಈಗಾಗಲೇ ನಗರದಲ್ಲಿಯೇ ವಾಸವಾಗಿರುವಂಥ 3 ಜನ ಸಚಿವರು ಸದನದಲ್ಲಿಯೇ ಇರುವುದರಿಂದ ಅವರಿಗೆ ಒಂದು ವಿಚಾರವನ್ನು ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಮನೆಗಳನ್ನು ನಿರ್ಮಿಸಿ violation ಆಗಿರುವುದಕ್ಕೆ ವಿದ್ಯುತ್ ಸೌಲಭ್ಯ ನೀಡುತ್ತಿಲ್ಲ. ಆದ್ದರಿಂದ, ತೆರಿಗೆಯನ್ನು ಕಟ್ಟಿ regularise ಆಗುವುದಾದರೆ ಅವರಿಗೆ ವಿದ್ಯುತ್ ಮತ್ತು ನೀರಿನ ಸೌಲಭ್ಯ ಒದಗಿಸಲು ಅನುಮತಿ ನೀಡಬೇಕೆಂಬುದು ನನ್ನ ಮನವಿ. ತಾತ್ಕಾಲಿಕ ಸಂಪರ್ಕವನ್ನು ಕಲ್ಪಿಸಲಾಗಿದೆ, ಖಾಯಂ ಸಂಪರ್ಕವನ್ನು ನೀಡುತ್ತಿಲ್ಲ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):-**ಅವರ ಹತ್ತಿರ O.C. (Occupancy Certificate) ಕೇಳುತ್ತಾರೆ. ಖಾಯಂ ಸಂಪರ್ಕವನ್ನು ನೀಡಿದರೆ, ಹೆಚ್ಚಾಗಿ ವಿದ್ಯುತ್ ಬಿಲ್ಲನ್ನು ಭರಿಸಬೇಕಾಗುತ್ತದೆ. ಅದು ಸಹ ಸಮಸ್ಯೆಯಾಗುತ್ತದೆ. ಅದನ್ನು ಸರಳೀಕರಣ ಮಾಡಿ, exemption ಮಾಡಿ ಅವಕಾಶ ಮಾಡಿದರೆ ಅನುಕೂಲವಾಗುತ್ತದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರೊಂದಿಗೆ ಚರ್ಚೆ ಮಾಡಿ ಮಾನ್ಯ ಸದಸ್ಯರುಗಳಿಗೆ ತಿಳಿಸುತ್ತೇವೆ.

**ಶ್ರೀ ಟಿ.ಎ.ಶರವಣ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ವಿಷಯವೇನೆಂದರೆ, ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿರುವ ಕಟ್ಟಡಗಳಿಗೆ ಸಿ.ಸಿ. ಮತ್ತು ಒ.ಸಿ. ಯನ್ನು ಕೇಳುತ್ತಾರೆ. ಇದರಿಂದಾಗಿ ಕೆಲವು ನಕಲಿ ದಾಖಲೆಗಳನ್ನು ನೀಡಿ, ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡಿರುತ್ತಾರೆ. ಇನ್ನೂ ಕೆಲವರಿಗೆ ವಿದ್ಯುತ್ ಸೌಲಭ್ಯ ಇಲ್ಲದೇ ಇರುವಂಥಾಗಿದೆ. ಅದರ ಬಗ್ಗೆ ಮಾನ್ಯ ಕಂದಾಯ ಸಚಿವರಾದ ಶ್ರೀ ಆರ್.ಅಶೋಕ್‌ರವರು ಇಲ್ಲಿಯೇ ಇದ್ದು, ಅವರಿಗೂ ಚೆನ್ನಾಗಿ ಗೊತ್ತಿದೆ. ಬೆಂಗಳೂರು ಬಿ.ಬಿ.ಎಂ.ಪಿ. ಬಗ್ಗೆ ತುಂಬಾ ಚೆನ್ನಾಗಿ ತಿಳಿದುಕೊಂಡಿದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ಗಮನಹರಿಸಬೇಕು. ಬಹಳಷ್ಟು ಕಟ್ಟಡಗಳಲ್ಲಿ BESCOM ನಿಂದ power connection ಇಲ್ಲದೇ ಅವರು ಯಾವುದೇ ಕೆಲಸವನ್ನು ಮಾಡುವುದಕ್ಕಾಗುತ್ತಿಲ್ಲ. ಅದಕ್ಕೇನ್ನಾದರೂ ವ್ಯವಸ್ಥೆ ಮಾಡಿ, penalty/fine ವಿಧಿಸಿ, ಅದರಿಂದ ಸರ್ಕಾರಕ್ಕೆ ಆದಾಯ ಸಹ ಬರುತ್ತದೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದ್ದರಿಂದ ಇದನ್ನು ಇತ್ಯರ್ಥಪಡಿಸಬೇಕು. ಮಾನ್ಯ ಸಚಿವರು ಈ ಒಂದು ವಿಚಾರಕ್ಕೆ ಉತ್ತರ ನೀಡಬೇಕು.

**ಸಭಾಪತಿಯವರು:–** ಮಾನ್ಯ ಸಚಿವರೇ ಉತ್ತರ ನೀಡಿದ್ದು ಮುಗಿಯಿತೇ?

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಆಯಿತು.

**ಸಭಾಪತಿಯವರುಃ–** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ನಗರಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಸಭಾಪತಿಯವರುಃ–** "ಖಂಡ 2 ಮತ್ತು 3 ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ಮತ್ತು 3ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರುಃ–** ಪ್ರಸ್ತಾವ ಏನೆಂದರೆ;

**"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**<u>ಪ್ರಸ್ತಾವದ ಅಂಗೀಕಾರ</u>**

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ನಗರಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ..

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ನಗರಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."**

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು</u>**

**6. <u>ನಿಯಮ 68ರ ಮೇರೆಗೆ ಚರ್ಚೆ</u>**

**ವಿಷಯ: ರಾಜ್ಯದಲ್ಲಿ ಹರಡುತ್ತಿರುವ ಕೋವಿಡ್–19 ಕಾಯಿಲೆ ನಿಯಂತ್ರಣದ ಬಗ್ಗೆ**

–––

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ರಾಜ್ಯಾದ್ಯಂತ ಹರಡುತ್ತಿರುವ ಕೋವಿಡ್–19 ಕಾಯಿಲೆಯ ನಿಯಂತ್ರಣಕ್ಕೆ,...

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರಿಗೆ ಸಂಬಂಧಿಸಿದಂತೆ, ಎರಡು ಸಣ್ಣ ವಿಧೇಯಕ ಇದೆ.

**ಸಭಾಪತಿಯವರು:–** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ಎರಡು ನಿಮಿಷ ವಿಧೇಯಕ ಮುಗಿದ ಮೇಲೆ ನಿಯಮ 68 ತೆಗೆದುಕೊಳ್ಳೋಣ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ವಿಧೇಯಕವು ಅರ್ಧ ಚರ್ಚೆಗೆ ನಿಂತಿಲ್ಲ. ಹೊಸ ವಿಧೇಯಕವನ್ನು ತೆಗೆದುಕೊಳ್ಳಬೇಕಾಗಿದೆ. ನಾನು ನಿಯಮ 68ರ ಮೇಲೆ 2 ನಿಮಿಷ ಪ್ರಸ್ತಾಪ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ರಾಜ್ಯಾದ್ಯಂತ ಹರಡುತ್ತಿರುವ ಕೋವಿಡ್–19 ನಿಯಂತ್ರಣಕ್ಕೆ ಸರ್ಕಾರ ಏನೇನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ತಿಳಿಸಬೇಕಾಗಿದೆ. ಏಕೆಂದರೆ, ಇದರ ಬಗ್ಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾರ್ವಜನಿಕರಿಗೂ ತಿಳಿಸುವುದು ಅಷ್ಟೇ ಮಹತ್ವದ್ದಾಗಿದೆ. ಸಾರ್ವಜನಿಕರು ಭಯಭೀತರಾಗಿದ್ದಾರೆ. People are under panic. ಜೀವನ್ಮರಣ ಎದುರಿಸುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಸಾರ್ವಜನಿಕರು ಜೀವವನ್ನು ಕೈಯಲ್ಲಿಟ್ಟುಕೊಂಡು, ಯಾವಾಗ ಏನಾಗುತ್ತದೆಯೋ, ಎಲ್ಲಿ ನಮಗೆ ಕೋವಿಡ್-19 ಬರುತ್ತದೆಯೋ, ನನ್ನ ಕುಟುಂಬ ಸದಸ್ಯರಿಗೆ ಎಲ್ಲಿ ಬರುತ್ತದೆಯೋ ಎಂಬ ಭಯದಿಂದ ಬದುಕುವಂಥ ಪರಿಸ್ಥಿತಿ ನಿರ್ಮಾಣವಾಗಿದೆಯೆಂದು people are very much panic. ಕೋವಿಡ್-19 ಖಾಯಿಲೆಗೆ ತುತ್ತಾಗುತ್ತಿರುವಂತಹ ಸಾರ್ವಜನಿಕರಿಗೆ ತುರ್ತು ಸೇವೆ ಒದಗಿಸಲು ರಾಜ್ಯ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಏನು ವ್ಯವಸ್ಥೆ ಇದೆ ಎಂಬುದರ ವಿಚಾರವಾಗಿ ಸರ್ಕಾರ ಸಂಪೂರ್ಣವಾದ ಮಾಹಿತಿ ನೀಡಬೇಕಾಗಿದೆ. ಇವತ್ತು ತಾಲ್ಲೂಕು ಮತ್ತು ಜಿಲ್ಲಾ ಸರ್ಕಾರಿ ಆಸ್ಪತ್ರೆಗಳು, ಖಾಸಗಿ ಆಸ್ಪತ್ರೆಗಳು, ನರ್ಸಿಂಗ್ ಹೋಂ ಗಳಿದ್ದು, ಸದ್ಯಕ್ಕೆ ಲಭ್ಯವಿರುವ, ಜೀವ ಉಳಿಸುವಂಥ ಒಂದೇ ಒಂದು medical equipment; ventilator. ಏಕೆಂದರೆ, ಈ ಖಾಯಿಲೆಯು ಉಸಿರಾಟಕ್ಕೆ ತೊಂದರೆ ಮಾಡುತ್ತದೆ. ಈ ಖಾಯಿಲೆಯಿಂದ ನೆಗಡಿ, ಕೆಮ್ಮು, ಜ್ವರ, ಗಂಟಲ ಉರಿತ ಉಂಟಾಗಿ ಒಬ್ಬ ವ್ಯಕ್ತಿಯ respiration ನಿಲ್ಲಿಸುತ್ತದೆ. ಕಷ್ಟಪಟ್ಟು ಉಸಿರಾಡಿಸುವಂಥ ಸ್ಥಿತಿ ನಿರ್ಮಿಸುತ್ತದೆ. ಆಗ through ventilator, he can survive. ಒಂದು ವೇಳೆ ventilator ಇಲ್ಲದಿದ್ದರೆ, it can be taken as granted that the patient is dead. ಅದಕ್ಕಾಗಿ ತಾಲ್ಲೂಕು ಮಟ್ಟ, ಜಿಲ್ಲಾ ಮಟ್ಟ, ರಾಜ್ಯ ಮಟ್ಟದ ಆಸ್ಪತ್ರೆಗಳಲ್ಲಿ ventilator ವ್ಯವಸ್ಥೆ ಏನಿದೆ,...

**ಸಭಾಪತಿಯವರು:-** ಮಾನ್ಯ ಸಚಿವರು ಅವರ ಸ್ಥಾನಕ್ಕೆ ಬಂದು ಕುಳಿತುಕೊಳ್ಳಬೇಕು.

(ಮುಂದು) . . .

(673)/23.03.2020/4.20/ಎಸ್‌ಕೆ-ಜಿಆರ್

**ಶ್ರೀ ಎಸ್. ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, COVID19 ಕಾಯಿಲೆಗೆ ತುತ್ತಾಗುತ್ತಿರುವಂತಹ ಸಾರ್ವಜನಿಕರಿಗೆ ತುರ್ತು ವೈದ್ಯಕೀಯ ಸೇವೆ ಒದಗಿಸುವ ಸಲುವಾಗಿ, ರಾಜ್ಯ ಮಟ್ಟ ಅಂದರೆ, ಬೆಂಗಳೂರು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಕೇಂದ್ರ ಸ್ಥಾನದ ಆಸ್ಪತ್ರೆಗಳಲ್ಲಿ ಏನೇನು ಸಿದ್ಧತೆಗಳನ್ನು ಮಾಡಿಕೊಂಡಿದೆ ಎಂಬುದರ ಬಗ್ಗೆ ಸರ್ಕಾರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಪೂರ್ಣವಾಗಿ ಹೇಳಬೇಕಾಗಿದೆ. ರಾಜ್ಯ ಮಟ್ಟದಲ್ಲಿರುವ ಜಿಲ್ಲಾವಾರು, ತಾಲ್ಲೂಕುವಾರು, ಸರ್ಕಾರಿ ಆಸ್ಪತ್ರೆಗಳಲ್ಲದೇ, ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂನಲ್ಲಿ ventilator ಲಭ್ಯತೆ ಮತ್ತು ತೀವ್ರ ನಿಗಾ ಘಟಕಗಳು ಎಂದರೆ I.C.U., (Intensive Care Unit) ಎಷ್ಟೆಷ್ಟು ವ್ಯವಸ್ಥೆ ಮಾಡಿದ್ದಾರೆ, ಕಾಯಿಲೆ ಉಲ್ಬಣವಾದಾಗ ರೋಗಿಗಳು I.C.U., ನಲ್ಲಿ admit ಆಗುತ್ತಾರೆ. ಇಂತಹ ರೋಗಿಗಳನ್ನು I.C.U., ನಲ್ಲಿಇಡಬೇಕಾಗುತ್ತದೆ. ಅದರಲ್ಲಿ ಪ್ರಮುಖವಾಗಿ ನಾವುಗಳು ಅನೇಕ ಮೂಲಗಳಿಂದ ಸಂಗ್ರಹಿಸಿದ ಮಾಹಿತಿ ಪ್ರಕಾರ respiration ಅನ್ನು ನಿಲ್ಲಿಸುತ್ತದೆ. ಕಷ್ಟಪಟ್ಟು ಉಸಿರಾಡಿಸುವಂತಹ ಸ್ಥಿತಿ ನಿರ್ಮಾಣವಾಗುತ್ತದೆ. ಆಗ ventilator ಇದ್ದರೆ ಮಾತ್ರ ಬದುಕುವುದಕ್ಕೆ ಸಾಧ್ಯವಿದೆ. ventilator ಇಲ್ಲವೆಂದರೆ, treatment ಕೊಡುವ ಅವಶ್ಯಕತೆಯೇ ಇಲ್ಲ. Metropolitan City ಯಾದಂತಹ, ರಾಜ್ಯದ ರಾಜಧಾನಿಯಾದಂತಹ ಬೆಂಗಳೂರಿನಲ್ಲಿ, ತಾಲ್ಲೂಕು ಮಟ್ಟ, ಜಿಲ್ಲಾ ಮಟ್ಟದ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಹಾಗೂ ಎಲ್ಲಾ ಕಡೆಗಳಲ್ಲಿ ಎಷ್ಟೆಷ್ಟು ventilator ಗಳನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದೀರಿ? ಇಲ್ಲಿಯವರೆಗೆ ರಾಜ್ಯ ಜಿಲ್ಲಾ, ತಾಲ್ಲೂಕು ಮಟ್ಟಗಳಲ್ಲಿರುವಂತಹ isolation ಕೊಠಡಿಗಳು ಎಷ್ಟು? ಚಿಕಿತ್ಸೆ ಕೊಡುವಂತಹ ವೈದ್ಯರುಗಳ ಸಂಖ್ಯೆ ಎಷ್ಟು? ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು? ಚಿಕಿತ್ಸೆ ನೀಡುವುದಕ್ಕೆ ಅವಶ್ಯಕತೆ ಇರುವಂತಹ ಔಷಧಿಗಳ ವ್ಯವಸ್ಥೆಯ ವಿವರವನ್ನು ಕೂಡ ಕೊಡಬೇಕು. ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಲಭ್ಯವಿರುವಂತಹ ಔಷಧಿ ವ್ಯವಸ್ಥೆ ಏನಿದೆ. Hand sanitizers, masks ಇತ್ಯಾದಿ ಪರಿಕರಗಳು ದೊರೆಯುವಂತಹ ಸ್ಥಳದ ಬಗ್ಗೆ ಮಾಹಿತಿ ಕೊಡಬೇಕಾಗಿದೆ. ಇದರ ಬಗ್ಗೆ ನಾವು ಏತಕ್ಕಾಗಿ ಚರ್ಚೆ ಮಾಡುತ್ತಿದ್ದೇವೆಂದರೆ, ಇಡೀ ಕರ್ನಾಟಕ ರಾಜ್ಯದಲ್ಲಿರುವ ಆರೂವರೆ ಕೋಟಿ ಜನರು, ಅಂದರೆ ಅವರೂ ಇವರೂ ಎಂದು ಹೇಳುವುದಿಲ್ಲ, ಗ್ರಾಮೀಣ ಪ್ರದೇಶಗಳಲ್ಲಿರಬಹುದು, ಬೆಂಗಳೂರಿನಂತಹ metropolitan city ಯಾದರೂ ಇರಬಹುದು. ಎಲ್ಲರೂ panic ಆಗಿದ್ದಾರೆ. ಅವರುಗಳಿಗೆ ಇದರ ಬಗ್ಗೆ ಮಾಹಿತಿಯಿಲ್ಲ. ಸರ್ಕಾರ ಈ ರೀತಿಯಾದಂತಹ ಆಸ್ಪತ್ರೆ ವ್ಯವಸ್ಥೆಯನ್ನು ಮಾಡಿದ್ದೇವೆ ಈ ರೀತಿಯ ವೈದ್ಯರ ವ್ಯವಸ್ಥೆ ಮಾಡಿದ್ದೇವೆ ಮತ್ತು ಈ ರೀತಿಯ ventilator ನ ವ್ಯವಸ್ಥೆಯಿದೆ. ತೀವ್ರ ನಿಗಾ ಘಟಕ (Intensive Care Unit) ದ ವ್ಯವಸ್ಥೆಯನ್ನು ಮಾಡಿದ್ದೇವೆ ಮತ್ತು ಔಷಧಿಗಳ ಸಂಪೂರ್ಣ ವ್ಯವಸ್ಥೆಯನ್ನು ಮಾಡಿದ್ದೇವೆ, ಜನ ಭಯಭೀತರಾಗುವ ಅವಶ್ಯಕತೆಯಿಲ್ಲ ಎನ್ನುವಂತಹ

**"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಒಂದು ಸಂದೇಶ ಹೋಗಬೇಕಾಗಿದೆ. ಬಹುತೇಕವಾಗಿ ಸದನ ಇವತ್ತು ಅಥವಾ ನಾಳೆ ಮುಗಿಯಿತ್ತೋ ಎನ್ನುವಂತಹ ಪರಿಸ್ಥಿತಿಯಾಗಿದೆ. ಈಗಾಗಲೇ ಲೋಕಸಭೆಯಲ್ಲಿ adjourn ಆಯಿತು. Business Advisory Committee ಯಲ್ಲಿ ಮಧ್ಯಾಹ್ನ ಏನು ನಿರ್ಣಯವನ್ನು ಕೈಗೊಂಡಿದ್ದಾರೆಂಬ ಬಗ್ಗೆ ನನಗೆ ಗೊತ್ತಿಲ್ಲ. ನಾಳೆ ಸದನ ಮುಗಿಯಬಹುದೆಂದು ನಾನು ಬಹುತೇಕವಾಗಿ ಭಾವಿಸುತ್ತೇನೆ. ಇಂತಹ ಸಂದರ್ಭದಲ್ಲಿ ಜ್ವಲಂತ ಸಮಸ್ಯೆ ಮತ್ತು ತಲೆ ತಿನ್ನುವಂತಹ ಸಮಸ್ಯೆ. ರಾಜ್ಯದ ಜನಕ್ಕೆ ಇದು ಜೀವನ್ಮರಣದ ಪ್ರಶ್ನೆಯಾಗಿದೆ. ಇವತ್ತು ಈಗಾಗಲೇ ಒಂಭತ್ತು ಜಿಲ್ಲೆಗಳು lockdown ಆಗಿವೆ. ನಾಳೆ ಇನ್ನೆಷ್ಟು ಜಿಲ್ಲೆಗಳು lockdown ಆಗುತ್ತವೆಂಬುದು ಗೊತ್ತಿಲ್ಲ.

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶನವನ್ನು ಹೊಂದಿದವರು):-** ನಮ್ಮ ಜಿಲ್ಲೆಯಲ್ಲಿ ಆಗಿದೆ.

**ಶ್ರೀ ಎಸ್. ಆರ್. ಪಾಟೀಲ್:-** ನಿಮ್ಮ ಜಿಲ್ಲೆ ಆಗಿದೆ. ನಮ್ಮ ಜಿಲ್ಲೆ ಇನ್ನೂ ಆಗಿಲ್ಲ. ನಿಮ್ಮ ಜಿಲ್ಲೆಯಲ್ಲಿ ಆಗಿರುವುದಕ್ಕೆ ನಮಗೆ ನೋವಿದೆ.

**ಶ್ರೀ ಐವನ್ ಡಿ'ಸೋಜಾ:-** ಸುಮಾರು ಮೂವತ್ಮೂರು ಜನರಿಗೆ ಟೆಸ್ಟ್‌ಗೆ ಕಳುಹಿಸಿದ್ದೇವೆ. ಇನ್ನೊಬ್ಬರಿಗೆ traceಆಗಿತ್ತು. ಅವನು ಹೋದ ಕಡೆಗಳಲ್ಲಿ ಮೂವತ್ಮೂರು ಜನರಿಗೆ ಸಹ ಹತ್ತಿಕೊಂಡಿದೆ.

**ಶ್ರೀ ಎಸ್. ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ವಿದೇಶದಿಂದ ಬಂದಂತಹವರನ್ನು 'ಎ', 'ಬಿ' ಹಾಗೂ 'ಸಿ' ಎಂದು ಮೂರು ವರ್ಗಗಳನ್ನಾಗಿ ಮಾಡಿದ್ದಾರೆ. ಬಾಗಲಕೋಟೆ ಜಿಲ್ಲೆಯ ನನ್ನ ಮನೆಯ ಪಕ್ಕದಲ್ಲಿರುವ ಡಾಕ್ಟರ್‌ರವರು Abu Dubai ಯಿಂದ ಬಂದಿದ್ದೇವೆಂದು ನನಗೆ ದೂರವಾಣಿ ಮುಖಾಂತರ ಮಾತನಾಡಿದರು. Dubai ಗೆ ಏತಕ್ಕಾಗಿ ಹೋಗಿದ್ದೀರಿ ಎಂದು ನಾನು ಕೇಳಿದಾಗ, ಅವರು ಇಲ್ಲ ನನ್ನ ಮಗಳು ಕರೆದಿದ್ದಳು. ಅದರ ಸಲುವಾಗಿ ನಾನು ಹೋಗಿದ್ದೆ ಎಂದು ಹೇಳಿದರು. ಅವರನ್ನು ತೆಗೆದುಕೊಂಡು ಹೋಗಿ ದೇವನಹಳ್ಳಿಯಲ್ಲಿರುವ ಆಕಾಶ್ ಆಸ್ಪತ್ರೆಯ ಒಂದು ವಾರ್ಡ್‌ನೊಳಗೆ ಇಪ್ಪತ್ತು ಜನರ ಜೊತೆಗೆ ಅವರನ್ನು ಹಾಕಿ ಬಿಟ್ಟಿದ್ದಾರೆ. Basically ಅವರು ನಮ್ಮ ಬಾಗಲಕೋಟೆಯ ಸರ್ಕಾರಿ ಆಸ್ಪತೆಯಲ್ಲಿ ವೈದ್ಯರಾಗಿ ಕೆಲಸ ಮಾಡುತ್ತಾರೆ. ಅವರಿಗೆ ಮಧುಮೇಹ ಇಲ್ಲ, ರಕ್ತದೊತ್ತಡ ಏನೋ ಸ್ವಲ್ಪ ಹೆಚ್ಚು ಇದೆ. ಅವರನ್ನು ಈ category ಯಲ್ಲಿ ಬರುತ್ತೀರಿ, ಅದರಲ್ಲಿ ಇರಿ ಎಂದಾಗ, ಅವರಿಗೆ ಭಯವೇನೆಂದರೆ, ಇಪ್ಪತ್ತು ಜನರ ಜೊತೆಗೆ ಅವರನ್ನು ಸೇರಿಸಿ ಹಾಕಿಬಿಟ್ಟಿದ್ದಾರೆ. ಅವರೆಲ್ಲಾ

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Abu Dubai ಯಿಂದ ಬಂದವರು. ಆ ಇಪ್ಪತ್ತು ಜನರನ್ನು ಒಂದು ದೊಡ್ಡ ವಾರ್ಡ್‌ನಲ್ಲಿ ಹಾಕಿದ್ದಾರೆ. ಅದರಲ್ಲಿ ಯಾರಿಗಾದರೊಬ್ಬರಿಗೆ 'ಪಾಸಿಟಿವ್' ಇತ್ತೆಂದರೆ, ಇನ್ನು ಹತ್ತೊಂಭತ್ತು ಜನರಿಗೆ ಈ ಕಾಯಿಲೆ ಬರುತ್ತದೆಯಲ್ಲಾ. ಅವರನ್ನು isolation ನಲ್ಲಿಟ್ಟಿಲ್ಲ. ಆಕಾಶ್ ಆಸ್ಪತ್ರೆಯಲ್ಲಿ ಒಂದು ದೊಡ್ಡ ಗುಂಪನ್ನು ಒಂದು ವಾರ್ಡ್‌ನಲ್ಲಿಟ್ಟಿದ್ದಾರೆ. I will give his name. ಡಾ॥ ಕಾಮರೆಡ್ಡಿಯವರು ಎಂದು ಹೇಳಿ, ನಮ್ಮ ಬಾಗಲಕೋಟೆ ಜಿಲ್ಲೆಯ ನಮ್ಮ neighbor ಮತ್ತು ನಮ್ಮ ಮನೆಯಿಂದ ಎರಡನೇ ಮನೆಯೇ ಅವರದು. ನನಗೆ ಇಲ್ಲಿ ಹದಿನಾಲ್ಕು ದಿವಸಗಳ ಕಾಲ ಇರುವುದಕ್ಕೆ ಯಾವುದೇ ತೊಂದರೆಯಿಲ್ಲ. ಅವರ ಜೊತೆಯಿದ್ದಂತಹ ಇಪ್ಪತ್ತು ಜನರಲ್ಲಿ, ಯಾರಿಗಾದರೂ ಒಬ್ಬರಿಗೆ ಪಾಸಿಟಿವ್ ಇದ್ದರೆ, ಆ ಕಾಯಿಲೆ ಬರಬಹುದೆಂದು ಭಯಪಟ್ಟಿಕೊಂಡು ಅವರು ನನಗೆ ದೂರವಾಣಿ ಮುಖಾಂತರ ಕರೆ ಮಾಡಿದ್ದಾರೆ. ನೋಡಿರಿ, isolation ನಲ್ಲಿ ಅವರನ್ನು ತೆಗೆದುಕೊಂಡು ಹೋಗಿ ಇಡಬೇಕೆಂದರೆ, independent ಆಗಿ ಇಡಬಹುದಲ್ಲ. ಆ ವೈರಸ್ ಏನಾದರೂ ನಮ್ಮ ದೇಹಕ್ಕೆ ಪ್ರವೇಶ ಮಾಡಿದರೆ, ಹದಿನಾಲ್ಕು ದಿವಸಗಳ ಕಾಲ dormancy period ನೊಳಗೆ ಇರುತ್ತದೆ. ಹದಿನಾಲ್ಕು ದಿವಸಗಳ ನಂತರ ನಿಜವಾದಂತಹ ಚಿತ್ರಣ ಹೊರಗೆ ಬರುತ್ತದೆ. ಅಷ್ಟರೊಳಗೆ ಏನಾದರೂ affect ಆದರೆ? ಮಾನ್ಯ ಸಭಾಪತಿಯವರೇ, ಇದನ್ನು ಸರ್ಕಾರ ಮಾಡುವಂತಹ ವ್ಯವಸ್ಥೆ.

ಮಾನ್ಯ ಸಭಾಪತಿಯವರೇ, ಈ ಕಾಯಿಲೆ ಇಲ್ಲದೇ ಇರುವಂತಹವರಿಗೆ ಈ ಕಾಯಿಲೆಯನ್ನು ತಂದಿಟ್ಟರೆ ಹೇಗೆ? ಈಗ ಅವರು ನನಗೆ ಹೇಳುತ್ತಾರೆ. Definitely ಯಾರಿಗಾದರೂ ಇದ್ದರೂ ಇರಬಹುದು. ನಾನಂತೂ I am confident. ನಾನು ಹೋಗಿದ್ದೆ. ಒಂದು ವಾರ ಇದ್ದು ಬಂದಿದ್ದೇನೆ. ನಮ್ಮ ಮನೆಯನ್ನು ಅಷ್ಟು ಕಾಳಜಿ ಮಾಡಿದ್ದೇನೆ. ನಾನು ಡಾಕ್ಟರ್ ಇರುವುದರಿಂದ ಏನೇನು ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕೋ, ನಾನು ಅದನ್ನು ಕೈಗೊಂಡಿದ್ದೇನೆ. ಈ ಸರ್ಕಾರದವರು ಆಸ್ಪತ್ರೆಯಲ್ಲಿ ಇಪ್ಪತ್ತು ಜನರ ಜೊತೆಗೆ ನನ್ನನ್ನು ಸೇರಿಸಿ ಒಂದೇ ವಾರ್ಡ್‌ನಲ್ಲಿ ಹಾಕಿಬಿಟ್ಟಿದ್ದಾರೆ. ಅದರಲ್ಲಿ ಯಾರಿಗಾದರೂ ಪಾಸಿಟಿವ್ ಇದ್ದರೆ, ನನ್ನ ಗತಿ ಏನು ಎಂದು ಹೇಳಿ ಅವರು ಚಿಂತೆ ಮಾಡುತ್ತಿದ್ದಾರೆ. ನೋಡಪ್ಪಾ ನಿನ್ನನ್ನು ಆಸ್ಪತ್ರೆಯಿಂದ ಹೊರಗೆ ತರುವುದಕ್ಕೆ ಶಕ್ತಿ ಯಾರಿಗೂ ಇಲ್ಲ. ನಿನಗೆ ಪ್ರತ್ಯೇಕವಾಗಿ independent ಆಗಿ isolate ಮಾಡಿ, ನಿಮ್ಮನ್ನು ಇಡುವಂತಹ ವ್ಯವಸ್ಥೆ. ಮಾನ್ಯ ಉಪ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಖ್ಯಮಂತ್ರಿಗಳೇ he is innocent. He was much worried. He was weeping. ದೂರವಾಣಿಯಲ್ಲಿ ಮಾತನಾಡಿದ್ದಾರೆ.

**ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):–** ಮಾನ್ಯ ವಿರೋಧಪಕ್ಷದ ನಾಯಕರೇ ನಮಗೆ ಎರಡು ನಿಮಿಷ ಅವಕಾಶ ಕೊಟ್ಟರೆ ಎರಡು ಬಿಲ್ ಪಾಸ್ ಮಾಡುವುದು ಇದೆ. ಕೆಳಮನೆಯಿಂದ ಆರೋಗ್ಯ ಸಚಿವರನ್ನು ಕಳುಹಿಸಿಕೊಡುತ್ತೇನೆ. ಆನಂತರ ಹೇಳಿಕೆ ಕೊಡುತ್ತಾರೆ. ಅವರು ಈಗ ಕೆಳಮನೆಯಲ್ಲಿ ಹೇಳಿಕೆ ಕೊಡುತ್ತಿದ್ದಾರೆ.

**ಶ್ರೀ ಎಸ್. ಆರ್. ಪಾಟೀಲ್:–** ಅವರು ಹೇಳಿಕೆ ಕೊಡಲಿ. ನನ್ನ ವಿಚಾರವನ್ನು ಹೇಳಬಾರದೇನು?

**ಶ್ರೀ ಜೆ.ಸಿ. ಮಾಧುಸ್ವಾಮಿ:–**ಈಗ ಕೆಳಮನೆಯಲ್ಲಿ ಹೇಳಿಕೆ ಕೊಡುತ್ತಿದ್ದಾರೆ. ಆ ಹೇಳಿಕೆ ಕೊಟ್ಟ ನಂತರ ಮೇಲ್ಮನೆಗೆ ಕಳುಹಿಸುತ್ತೇವೆ. ಇದರ ಬಗ್ಗೆ ಏನೇನು arrangement ಆಗಿದೆ ಎಂಬುದರ ಬಗ್ಗೆ ಉತ್ತರ ಕೊಡುತ್ತಾರೆ.

**ಶ್ರೀ ಎಸ್. ಆರ್. ಪಾಟೀಲ್:–** ನೋಡಿ ಅದರ ಬಗ್ಗೆ ನನ್ನ ಎರಡೂ ಮಾತಿಲ್ಲ. I am giving his name. ದೇವನಹಳ್ಳಿಯಲ್ಲಿರುವ ಆಕಾಶ್ ಎಂಬ ಆಸ್ಪತ್ರೆಯಲ್ಲಿ ......

**ಶ್ರೀ ಜೆ.ಸಿ. ಮಾಧುಸ್ವಾಮಿ:–**ಮಾನ್ಯ ವಿರೋಧಪಕ್ಷದ ನಾಯಕರೇ, Hon'ble Health Minister will come.

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಸಚಿವರು ಹೇಳಿರುವಂತಹದ್ದು ಸರಿಯಿದೆ. ಮಾನ್ಯ ಆರೋಗ್ಯ ಸಚಿವರು ಮೇಲ್ಮನೆಗೆ ಕಳುಹಿಸಿದ ನಂತರ ನಾವು ಆಗ ಮಾತಾಡೋಣ.

**ಶ್ರೀ ಎಸ್. ಆರ್. ಪಾಟೀಲ್:–**ಘಟನೆ ನಡೆದಿರುವ ಬಗ್ಗೆ ನಾನು ಒಂದು ಉದಾಹರಣೆಯನ್ನು ಕೊಟ್ಟಿದ್ದೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಆಯಿತು ಬಿಡಿ ನಾವು ಮುಂದೆ ಚರ್ಚೆಗೆ ಹೋಗೋಣ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):–** ಒಂದು ಕೆಲಸವನ್ನು ಮಾಡಿ. ಮಾನ್ಯ ಸಚಿವರು ಈ ವಿಧೇಯಕವನ್ನು ಮುಗಿಸಲಿ. ಮಾನ್ಯ ಆರೋಗ್ಯ ಸಚಿವರು ಬಂದ ನಂತರ ತಾವು ಪುನಃ ಚರ್ಚೆಯ ಪ್ರಸ್ತಾಪವನ್ನು ಮುಂದುವರಿಸಿ.

**ಶ್ರೀ ಎಸ್. ಆರ್. ಪಾಟೀಲ್:–** ಆಯಿತು. I don't want to take much time.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ತಾವು ಮುಂದುವರೆಸಿ.

**ಶ್ರೀ ಎಸ್. ಆರ್. ಪಾಟೀಲ್:–**ಮಾನ್ಯ ಸಭಾಪತಿಯವರೇ, time constraint ಇದೆ ಎಂಬುದು ನನಗೂ ಗೊತ್ತಿದೆ. ನಾನು ಮಾತನಾಡಲು ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ನಾನು ಹೇಳುವಾಗ, ಈ ಉದಾಹರಣೆಯೊಂದು ನನ್ನ ಗಮನಕ್ಕೆ ಬಂದಿದೆ. ಬೆಳಿಗ್ಗೆ ದೂರವಾಣಿ ಮುಖಾಂತರ ವೈದ್ಯರು ನನ್ನ ಬಳಿ ಮಾತನಾಡಿದರು. ಇದು ಜ್ವಲಂತ ಸಮಸ್ಯೆಯಿದೆ. ಅದಕ್ಕೆ ...

**ಶ್ರೀ ಜೆ.ಸಿ. ಮಾಧುಸ್ವಾಮಿ :–**ಕೆಳಮನೆಯಲ್ಲಿ ನಿಮ್ಮವರು ಇದೇ ವಿಷಯವನ್ನು raise ಮಾಡಿದ್ದಾರೆ. ಮಾನ್ಯ ಆರೋಗ್ಯ ಸಚಿವರು ಕೆಳಮನೆಯಲ್ಲಿ ಹೇಳಿಕೆ ಕೊಡುತ್ತಿದ್ದಾರೆ. ಆದಾದ ತಕ್ಷಣ ಈ ಮೇಲ್ಮನೆಗೆ ಕಳುಹಿಸಿಕೊಡುತ್ತೇವೆಂದು ಹೇಳುತ್ತಿದ್ದೇನೆ.

**ಶ್ರೀ ಎಸ್. ಆರ್. ಪಾಟೀಲ್:–** ನಾನು ಸ್ವಾಗತ ಮಾಡುತ್ತೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ :–**ಆಯಿತು.

**ಶ್ರೀ ಎಸ್. ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದರ ಮೇಲೆ ಸುದೀರ್ಘವಾದಂತಹ ಹೇಳಿಕೆ ಕೊಡಬೇಕು. ರಾಜ್ಯ, ಜಿಲ್ಲಾ, ತಾಲ್ಲೂಕು ಮಟ್ಟಗಳಲ್ಲಿ ಏನು ವ್ಯವಸ್ಥೆಯಿದೆ. ನಾನು ಇದರ ಬಗ್ಗೆ ಚರ್ಚೆ ಏನು ಮಾಡಿದ್ದೇನೆ. ಆ ನೋಟಿಸ್‌ನಲ್ಲಿ ಕೂಡ ನಾವು mention ಮಾಡಿದ್ದೇನೆ. ಅದರ ಜೊತೆಗೆ ಇದೊಂದು ಉದಾಹರಣೆಯನ್ನು ಕೊಟ್ಟಿದ್ದೇನೆ. ಈ ರೀತಿಯಾದರೆ, ಪರಿಸ್ಥಿತಿ ಚಿಂತಾಜನಕವಾಗುತ್ತದೆ. ಇದು COVID19 ಇರಲಾರದವರಿಗೆ ಬರುವಂತಹ ವ್ಯವಸ್ಥೆಯಾಗಬಾರದೆಂಬ ಸಲುವಾಗಿ ಈ ವಿಚಾರವನ್ನು ವ್ಯಕ್ತ ಮಾಡಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಈ ಪ್ರಸ್ತಾಪ ಮಾಡಿರುವ ಉದ್ದೇಶ ಅದಕ್ಕೆ ಉತ್ತರ ಕೊಡುವಾಗ ತಯಾರಾಗಿ ಬರಲಿ ಎನ್ನುವಂತಹದ್ದು ಹೊರತು ಮತ್ತೆ ಏನಲ್ಲ.

**ಶ್ರೀ ಎಂ. ನಾರಾಯಣ ಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ ಈ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲರೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಸಭಾಪತಿಯವರು:–** ಮಾನ್ಯ ಸಚಿವರು ಬರಲಿ. ಈಗ ಮಾನ್ಯ ಮುಖ್ಯಮಂತ್ರಿಯವರು ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ನೇ ಸಾಲಿನ "ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ" ವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು.

**7. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2020**

**ಪರ್ಯಾಲೋಚನ ಪ್ರಸ್ತಾವ**

**ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಬೇಕಾದ "ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ 2020 ರ ವನ್ನು ಪರ್ಯಾಲೋಚಿಸಬೇಕೆಂದು ಸಭೆಯನ್ನು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(674)23.03.2020 4.30 ಟಿಸಿಹೆಚ್-ಜಿಆರ್

**ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):-**ಮಾನ್ಯ ಸಭಾಪತಿಯವರೇ, ಚುನಾವಣೆಗಳಲ್ಲಿ ನಾನು ಯಾರಿಗೂ ಓಟು ಹಾಕುವುದಿಲ್ಲವೆನ್ನತಕ್ಕಂಥ ಪ್ರಾವಿಷನ್ ಅನ್ನು ಇತ್ತೀಚೆಗೆ ಚುನಾವಣಾ ಆಯೋಗ ಮಾಡಿತ್ತು. ಪುರಸಭೆ ಚುನಾವಣೆಯಲ್ಲಿ ನಮಗೆ 'NOTA' (None of the above) ಗೆ ಓಟು ಹಾಕುವಂತಹ ಪ್ರಾವಿಷನ್ ಇರಲಿಲ್ಲ. ಅದನ್ನು introduce ಮಾಡುವುದಕ್ಕೆ ನಾವು ಈ ಪ್ರಸ್ತಾಪವನ್ನು ತಂದಿದ್ದೇವೆ, ಇದು ಸರಳವಾಗಿದೆ. ಇದಕ್ಕೆ ತಾವೆಲ್ಲರೂ ಒಪ್ಪಿಗೆ ಕೊಡಬೇಕೆಂದು ತಮ್ಮ ಮೂಲಕ ಕೇಳುತ್ತಿದ್ದೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ "ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು

**ಸಭಾಪತಿಯವರು:-** "ಖಂಡ 2 ಮತ್ತು 3 ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 3ನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಜೆ.ಸಿ. ಮಾಧುಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಆ) ಕರ್ನಾಟಕ ಬಹಿರಂಗ ಸ್ಥಳಗಳ (ವಿರೂಪಗೊಳಿಸುವುದನ್ನು ಪ್ರತಿಬಂಧಿಸುವ)(ತಿದ್ದುಪಡಿ) ವಿಧೇಯಕ, 2020**

**ಪರ್ಯಾಲೋಚನ ಪ್ರಸ್ತಾವ**

**ಶ್ರೀ ಜೆ.ಸಿ. ಮಾಧುಸ್ವಾಮಿ ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಬಹಿರಂಗ ಸ್ಥಳಗಳ (ವಿರೂಪಗೊಳಿಸುವುದನ್ನು ಪ್ರತಿಬಂಧಿಸುವ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಸ್ಥಳಗಳಲ್ಲಿ ಹೋರ್ಡಿಂಗ್ಸ್ ಹಾಕುವುದು, ಪೋಸ್ಟರ್‌ಗಳನ್ನು ಅಂಟಿಸುವುದು ಇನ್ನಿತರೆ ಮಾಡುವುದು ಅದೊಂದು ನ್ಯೂಸೆನ್ಸ್ ಎಂದು ಪರಿಗಣಿಸಿ, 1975ರಲ್ಲಿ ಕಾಯ್ದೆ ರಚನೆಯಾಗಿ ಬೆಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡ, ಮಂಗಳೂರು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ 1981ನೇ ಮೇ ತಿಂಗಳಿನಿಂದ ಜಾರಿಗೆ ಬಂದಿದೆಯೆಂದು ಒಂದು ಆಕ್ಟ್ ಇತ್ತು. ನಾವು ಈಗ ಇದನ್ನು ಎಲ್ಲಾ ಪ್ರಾಧಿಕಾರಗಳಿಗೆ ಹಾಗೂ ಮುನಿಸಿಪಾಲಿಟಿಗಳಿಗೆ ವಿಸ್ತರಿಸಬೇಕು ಎನ್ನತಕ್ಕಂಥ ಉದ್ದೇಶದಿಂದ ಈ ಪ್ರಸ್ತಾವನ್ನು ತಂದಿದ್ದೇವೆ. ದಯಮಾಡಿ ತಾವೆಲ್ಲಾ ಈ ಬಿಲ್ಲನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ, "ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಬಹಿರಂಗ ಸ್ಥಳಗಳ (ವಿರೂಪಗೊಳಿಸುವುದನ್ನು ಪ್ರತಿಬಂಧಿಸುವ)(ತಿದ್ದುಪಡಿ) ವಿಧೇಯಕವನ್ನುಪರ್ಯಾಲೋಚಿಸುವುದು"

**ಪ್ರಸ್ತಾವವನ್ನು ಅಂಗೀಕರಿಸಲಾಯಿತು**

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.

**ಸಭಾಪತಿಯವರು:-** "ಖಂಡ 2 ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2ನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಸ್ತಾವದ ಅಂಗೀಕಾರ**

**ಶ್ರೀ ಜೆ.ಸಿ. ಮಾಧುಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಇ) ಕರ್ನಾಟಕ ನಾವಿನ್ಯತಾ ಪ್ರಾಧಿಕಾರ ವಿಧೇಯಕ, 2020**

**ಪರ್ಯಾಲೋಚನ ಪ್ರಸ್ತಾವ**

**ಡಾ॥ ಅಶ್ವತ್ಥನಾರಾಯಣ ಸಿ.ಎನ್ (ಉಪ ಮುಖ್ಯಮಂತ್ರಿಯವರು ಹಾಗೂ ಉನ್ನತ ಶಿಕ್ಷಣ, ಐ.ಟಿ. ಮತ್ತು ಬಿ.ಟಿ., ವಿಜ್ಞಾನ ತಂತ್ರಜ್ಞಾನ ಕೌಶಲ್ಯಾಭಿವೃದ್ಧಿ ಸಚಿವರು):–**ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ನಾವಿನ್ಯತಾ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಡಾ॥ ಅಶ್ವತ್ಥನಾರಾಯಣ ಸಿ.ಎನ್:–** ಮಾನ್ಯ ಸಭಾಪತಿಯವರೇ, ಹೊಸ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವ ಸಂಶೋಧಕರನ್ನು ಯಾವ ರೀತಿಯಲ್ಲಿ ಪ್ರೋತ್ಸಾಹಿಸಬಹುದು, ಇಂತಹ ಹೊಸ ತಂತ್ರಜ್ಞಾನ ಆಧಾರಿತ ಆವಿಷ್ಕಾರಗಳು ಜನರಿಗೆ ಯಾವ ರೀತಿ ನೆರವಾಗಬಲ್ಲದು, ಕರ್ನಾಟಕ ಆರ್ಥಿಕತೆ ಮತ್ತು ಉದ್ಯೋಗ ಸೃಷ್ಟಿಯಲ್ಲಿ ಇದರ ಪಾತ್ರವೇನು? ಈ ಆವಿಷ್ಕಾರದ ಅನುಕೂಲಗಳು ಯಾವುದೇ ಒಂದು ವರ್ಗಕ್ಕೆ ಸೀಮಿತವಾಗಿರುವುದಿಲ್ಲ, ಎಲ್ಲರಿಗೂ ತಲುಪಬಲ್ಲದು. ಕರ್ನಾಟಕ ಇನ್ನೋವೇಷನ್

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಥಾರಿಟಿ ವಿಧೇಯಕದಲ್ಲಿ ಈ ಎಲ್ಲಾ ಪ್ರಶ್ನೆಗಳಿಗೂ ಉತ್ತರವಿದೆ. ಈ ಮೂಲಕ ಹೊಸ ಆವಿಷ್ಕಾರಗಳನ್ನು ಮಾಡುವ ಸಂಶೋಧಕರು ಹೊಣೆಗಾರಿಕೆಯನ್ನು ಹಾಗೂ ಅದರ ಪರಿಣಾಮಗಳನ್ನು ಪರಿಶೀಲಿಸುವ ಒಂದು ವ್ಯವಸ್ಥೆಯೊಂದಿಗೆ ಕರ್ನಾಟಕದಲ್ಲಿ ಆವಿಷ್ಕಾರಗಳಿಗೆ ಒತ್ತು ನೀಡುತ್ತದೆ. ಸಮಾಜದ ಅತಿದೊಡ್ಡ ಸವಾಲುಗಳಿಗೆ ಪರಿಹಾರ ಸೂಚಿಸುವಂತಹ ಆವಿಷ್ಕಾರಗಳು ಅತ್ಯಗತ್ಯವಾಗಿವೆ. ಆದರೆ, ಇನ್ನೋವೇಷನ್ ನಿಯಂತ್ರಣ ಹಾಗೂ ಗ್ರಾಹಕರ ಹಿತಾಸಕ್ತಿಯ ನಡುವೆ ಸಮತೋಲನ ಕಾಯ್ದುಕೊಳ್ಳುವುದು ಬಹಳ ಮುಖ್ಯ. ಕರ್ನಾಟಕ ಆವಿಷ್ಕಾರ ಪ್ರಾಧಿಕಾರ ಈ ಎಲ್ಲಾ ಅಂಶಗಳನ್ನು ಒಳಗೊಂಡಿರುತ್ತದೆ. ಮುಖ್ಯವಾಗಿ ಈ ಕಾನೂನಿನ ಅಡಿಯಲ್ಲಿ ಈಗಿನ ಒಂದು ಕಾನೂನಿನಲ್ಲಿ ಯಾವುದೇ ರೀತಿಯಾದಂತಹ ಆವಿಷ್ಕಾರಗಳನ್ನು ನಮ್ಮ ದೇಶದಲ್ಲಿ ಅಥವಾ ನಮ್ಮ ಕರ್ನಾಟಕದಲ್ಲಿ ಮಾಡಬೇಕೆಂದರೆ, ಕಾನೂನಿನಲ್ಲಿ ಎಲ್ಲೂ ಅವಕಾಶಗಳಿಲ್ಲ; ಒಂದು ಕಾನೂನಿನಲ್ಲಿ ಸಡಿಲಗೊಳಿಸಿ, ವಿನಾಯಿತಿ ಮತ್ತು ರಿಯಾಯಿತಿಯನ್ನು ಕೊಡುವುದಕ್ಕೆ ಈಗಿನ ಕಾನೂನಿನಲ್ಲಿ ಅವಕಾಶವಿಲ್ಲ. ಹಾಗಾಗಿ, ಕರ್ನಾಟಕ ಇನ್ನೋವೇಷನ್ ಅಥಾರಿಟಿಯಲ್ಲಿ ಯಾವುದೇ ಹೊಸ ತಂತ್ರಜ್ಞಾನ ಆವಿಷ್ಕಾರಗಳು, ಬ್ಯುಸಿನೆಸ್ ಮಾಡೆಲ್‌ಗಳು, ಹೊಸ ಸರ್ವಿಸಸ್ ಹಾಗೂ ಹೊಸ ಪ್ರಾಡಕ್ಟ್ ತರುವುದಕ್ಕೆ ಇದನ್ನು ಅಳವಡಿಸಿಕೊಂಡು ನಮ್ಮ ಕಾನೂನಿನಲ್ಲಿ ರಿಯಾಯಿತಿ ಮತ್ತು ವಿನಾಯಿತಿ ಕೊಡಬೇಕು ಎನ್ನುವಂತಹ ಉದ್ದೇಶಕ್ಕೋಸ್ಕರ ಈ ಕಾಯ್ದೆಯನ್ನು ತರಲಾಗುತ್ತಿದೆ. ಇದನ್ನು ನಾವಿನ್ಯ ತಂತ್ರಜ್ಞಾನವನ್ನು ಬಳಸಿಕೊಂಡು ಕೆಲಸ ಮಾಡುವಂತಹ ಸಂಸ್ಥೆಗಳಿಗೆ ಕಾನೂನು ಹಾಗೂ ನಿಬಂಧನೆಗಳ ಅಡ್ಡಿಯಾಗದಂತೆ ಕೆಲವು ಮಾರ್ಪಾಡು ಮಾಡಿ ವಿನಾಯಿತಿ ನೀಡಲು ರೂಪಿಸುವಂತಹ ವ್ಯವಸ್ಥೆಯೇ regulatory sandbox.

**(ಮುಂದು. . .)**

**(675)23.3.2020/4.40/ಎಂ.ಎಂ–ಎಂ.ಡಿ**

**ಡಾ: ಸಿ.ಎನ್. ಅಶ್ವಥ್ ನಾರಾಯಣ(ಮುಂದು):–**

ಕಾನೂನು ಹಾಗೂ ನಿಬಂಧನೆಗಳು ಅಡ್ಡಿಯಾಗದಂತೆ ಕೆಲವು ಮಾರ್ಪಾಡು ಮಾಡಿ ವಿನಾಯತಿ ನೀಡಲು ರೂಪಿಸುವಂತಹ ವ್ಯವಸ್ಥೆಯೇ Regulatory Sandbox. ಆದರೆ ಈ ಸಂಸ್ಥೆಗಳು ಕೈಗೊಳ್ಳುವ ಪ್ರಯೋಗ ಮತ್ತು ಯೋಜನೆಗಳು ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು Regulatory Sandbox ಉಳಿಸಿಕೊಳ್ಳುತ್ತದೆ. Karnataka Innovation Authority ಅಡಿಯಲ್ಲಿ Regulatory Sand Box ಅನ್ನು ನಾವು ಸ್ಥಾಪನೆ ಮಾಡುತ್ತೇವೆ. ಒಂದೊಂದು ಕ್ಷೇತ್ರಕ್ಕೂ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಒಂದೊಂದು Regulatory Sandbox ಮಾಡುವುದಕ್ಕೆ ಸಾಧ್ಯವಿದೆ. ಈ Regulatory Sandbox ನಲ್ಲಿ ಎಲ್ಲಾ ಈಗಿನ ಕಾನೂನಿನಲ್ಲಿ ಏನು ಒಂದು ನಿಯಮಗಳಿವೆ, ಕಾನೂನಿನಲ್ಲಿ ಯಾವುದೇ ಹೊಸ ತಂತ್ರಜ್ಞಾನಗಳನ್ನು ತರುವುದಕ್ಕೆ ಆಗುವುದಿಲ್ಲ, ಇದರಡಿಯಲ್ಲಿ ರಿಯಾಯಿತಿ, ವಿನಾಯಿತಿಯನ್ನು ಕೊಟ್ಟು ಯಾವುದೇ ಹೊಸ ಸಂಶೋಧನೆ, ಹೊಸ ಆವಿಷ್ಕಾರಗಳನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡುವುದೇ Regulatory Sandbox. ಈ Regulatory Sandbox ಗೆ ಮೇಲ್ವಿಚಾರಣೆ ಮಾಡುವುದಕ್ಕೆ, ನಿಯಂತ್ರಣ ಮಾಡುವುದಕ್ಕೆ ಎಲ್ಲಾ ಅಧಿಕಾರ, ಮಾರ್ಗಸೂಚಿ ಮತ್ತು ಎಲ್ಲಾ ಜವಾಬ್ದಾರಿ Regulatory Sandbox ಗೆ ಇರುತ್ತದೆ. Karnataka Innovation Authority ಅಧ್ಯಕ್ಷರು ಸನ್ಮಾನ್ಯ ಮುಖ್ಯಮಂತ್ರಿಯವರಾಗಿರುತ್ತಾರೆ. ಎಲ್ಲಾ Ex-Officio members ಇರುತ್ತಾರೆ, ಪ್ರಧಾನ ಕಾರ್ಯದರ್ಶಿಯವರು ಮತ್ತು ಐ.ಟಿ., ಬಿ.ಟಿ., ಕಾರ್ಯದರ್ಶಿಗಳು ಇರುತ್ತಾರೆ. ಉಪಾಧ್ಯಕ್ಷರಾಗಿ ಐ.ಟಿ., ಬಿ.ಟಿ., ಸಚಿವರಾದ ನಾನು ಇರುತ್ತೇನೆ ಮತ್ತು ಇನ್ನೆಲ್ಲಾ ಸದಸ್ಯರು ಇರುತ್ತಾರೆ, ಮತ್ತು ಎಲ್ಲಾ Invitees ಯಾವುದಾದರೂ particular expertise ಬೇಕು ಎಲ್ಲರ ಮಾಹಿತಿ ತೆಗೆದುಕೊಳ್ಳಬೇಕೆಂದಾಗ ಆಗಾಗ ಅಧಿಕೃತವಾಗಿ ಪರಿಣತರನ್ನು ಆಹ್ವಾನಿಸಿ Karnataka Innovation Authority ಯಲ್ಲಿ ಸದಸ್ಯರಾಗಿ ಆಹ್ವಾನಿಸಿ ಕರೆಯುವುದಕ್ಕೆ ಅವಕಾಶ ಇದೆ. ಈ ಅಥಾರಿಟಿ ಅಡಿಯಲ್ಲಿ Regulatory Sandbox ಅನ್ನು ಸ್ಥಾಪನೆ ಮಾಡುತ್ತೇವೆ. ಈ Regulatory Sandbox ಗಳು ಸ್ಥಾಪನೆಯಾಗಿ ಆಯಾ ಕ್ಷೇತ್ರದಲ್ಲಿ ಎಲ್ಲರ ಆವಿಷ್ಕಾರ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಾರೆ. ಸ್ಥಾಪನೆಯಾದ ನಂತರ ಭಾಗವಹಿಸುವವರು ಯಾರೇ ಇದ್ದರೂ Regulatory Sandbox ನಲ್ಲಿ Financial Sector ನಲ್ಲಿ ಏನಾದರೂ ಹೊಸ ಆವಿಷ್ಕಾರ, ಪ್ರಯತ್ನಗಳನ್ನು ಮಾಡಬೇಕೆಂದು ಇಚ್ಛೆ ಪಡುವಂತಹ ಸಂಸ್ಥೆಗಳು Regulatory Sandbox ನೊಂದಾಯಿಸಿಕೊಂಡು ಎಲ್ಲಾ ರೀತಿಯಾದಂತಹ ನಿಗದಿತ ಸಮಯದಲ್ಲಿ, ನಿಗದಿತವಾದ ಸ್ಥಳದಲ್ಲಿ ನಿಗದಿತವಾದ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಒಂದು ವರ್ಷದ ಕಾಲ ಅವಕಾಶ ಕೊಡುತ್ತೇವೆ. ಗರಿಷ್ಠ ಎಂದರೆ ಎರಡು ವರ್ಷ ಕಾಲಾವಕಾಶ ಕೊಡುತ್ತೇವೆ. ಈ ಕಾಲದೊಳಗೇ ಅವರು ಎಲ್ಲಾ ರೀತಿಯ ನಿಯಂತ್ರಿತವಾದ Limited Area ದಲ್ಲಿ ಆ ಪ್ರಯೋಗವನ್ನು ಮಾಡಿ ಇದು ಸಮಾಜಕ್ಕೆ ಒಳ್ಳೆಯದು, ಸಮಾಜಕ್ಕೆ ಇದರ ಅವಶ್ಯಕತೆ ಇದೆ, ಇದರಿಂದ ಸಮಾಜಕ್ಕೆ ವ್ಯತ್ಯಾಸವಾಗುತ್ತದೆ ಎನ್ನುವುದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರೆಲ್ಲರೂ demonstrate ಮಾಡಿ ಗ್ರಾಹಕರಿಗೂ ಯಾವುದೇ ರೀತಿಯ ಸಮಸ್ಯೆಯಾಗದೇ ಉತ್ತಮವಾಗಿ ಆ ಉತ್ಪನ್ನವನ್ನು ಅಭಿವೃದ್ಧಿಪಡಿಸಿ trial ಮಾಡಿ ಸಾಬೀತುಪಡಿಸುವುದಕ್ಕೆ ಅವಕಾಶವನ್ನು ಮಾಡಿಕೊಡುವುದಕ್ಕೆ ಈ Regulatory Sandbox ನಲ್ಲಿ ಅವಕಾಶವಿದೆ. ಹೊಸದಾಗಿ ಏನೇ ಮಾಡಿದರೂ, ನಮ್ಮ ಸಮಾಜದಲ್ಲಿ deploy ಮಾಡುವುದಕ್ಕೂ ಕಾನೂನಿನಲ್ಲಿ ಅಡೆತಡೆಗಳಿರುತ್ತದೆ. ಏಕೆಂದರೆ, ಈ ಕಾನೂನುಗಳು ಆಯಾ ಕಾಲಕ್ಕೆ ಪ್ರಸ್ತುತವಾದ ರೀತಿಯಲ್ಲಿ ಕಾನೂನುಗಳನ್ನು ಮಾಡಿದ್ದೇವೆ. ಹೊಸ ಬದಲಾವಣೆಗಳು, ಹೊಸ ಆವಿಷ್ಕಾರಗಳಾದಾಗ ನಮ್ಮ ಕಾನೂನಿನಲ್ಲಿ ಯಾವುದೇ ಅವಕಾಶ ಇರುವುದಿಲ್ಲ. ಹಾಗಾಗಿ ಇದರಲ್ಲಿ ವಿನೂತನವಾಗಿ ಕೆಲಸ ಮಾಡುವುದಕ್ಕೆ ಅವಕಾಶ ಇಲ್ಲ, ವಿನೂತನವಾಗಿ ಏನೇ ಕಾರ್ಯ ಮಾಡಿದರೂ ಅಥವಾ product develop ಮಾಡಿದ್ದರೂ ಅದನ್ನು ನಮ್ಮ system ಗೆ deploy or implement ಮಾಡುವುದಕ್ಕೂ ಅದನ್ನು ಅನುಷ್ಠಾನ ಮಾಡುವುದಕ್ಕೂ ಅವಕಾಶ ಇರುವುದಿಲ್ಲ. ಇದಕ್ಕೆಲ್ಲಾ ಅವಕಾಶ ಮಾಡಿಕೊಡಬೇಕೆಂದರೆ, ಕಾನೂನನ್ನು ತರುವ ಮೂಲಕವೇ ಅವಕಾಶ ಮಾಡಿಕೊಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ನಮ್ಮೆಲ್ಲಾ ಸದಸ್ಯರನ್ನು ಕೇಳಿಕೊಳ್ಳುತ್ತೇನೆ, ನಮ್ಮ ನಾಡು ಇಡೀ ವಿಶ್ವದ ಗಮನವನ್ನು ಸೆಳೆದು, ನಮ್ಮ ಕರ್ನಾಟಕ ಅತಿ ವೇಗದಲ್ಲಿ ಸಾಗುತ್ತಿದೆ, ಇಡೀ ದೇಶದಲ್ಲಿಯೇ Innovation ನಲ್ಲಿ ಮೊದಲನೇ ಸ್ಥಾನದಲ್ಲಿದ್ದೇವೆ ಮತ್ತು Global Innovation Cluster ನಲ್ಲಿ ಮೊದಲನೇ ಸ್ಥಾನದಲ್ಲಿದ್ದೇವೆ ಮತ್ತು ತಂತ್ರಜ್ಞಾನ ವಿನೂತನವಾಗಿ ಅಭಿವೃದ್ಧಿಪಡಿಸುವುದರಲ್ಲಿ ಇದ್ದೇವೆ, ಇಡೀ ವಿಶ್ವದಲ್ಲಿಯೇ 8ನೇ ಸ್ಥಾನದಲ್ಲಿ ನಮ್ಮ ಕರ್ನಾಟಕ ಇದೆ. ಹಾಗಾಗಿ ಇದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಬೆಳೆಸಿಕೊಳ್ಳಬೇಕೆಂದರೆ, ಇದಕ್ಕೆ ಪೂರಕವಾಗಿರುವಂತಹ ಕಾನೂನುಗಳು, ಅವಕಾಶಗಳು ಕಳೆದ ಹಲವಾರು ವರ್ಷದಿಂದ ಇದೊಂದು ಬೇಡಿಕೆ ಇತ್ತು. 2018ರಲ್ಲಿಯೂ ಸನ್ಮಾನ್ಯ ಸಿದ್ದರಾಮಯ್ಯನವರು ತಮ್ಮ ಬಜೆಟ್ ಭಾಷಣದಲ್ಲಿ ಈ ರೀತಿ Karnataka Innovation Authority ತರಬೇಕೆಂದು ಬಜೆಟ್ ಭಾಷಣದಲ್ಲಿ ತಿಳಿಸಿದ್ದರು. ಆವತ್ತಿನಿಂದಲೂ ಈ ಕಾನೂನನ್ನು ತರಬೇಕೆಂಬ ಒತ್ತಾಯ ಇತ್ತು. ಈಗಾಗಲೇ ಇದನ್ನು ordinance ರೂಪದಲ್ಲಿ ತರಲಾಗಿದೆ. ಏಕೆಂದರೆ, Bangalore Tech Summit ಇತ್ತು, ಆ Bangalore Tech Summit ಮುಂಚೆ ನಮ್ಮ ನಾಡಿನಲ್ಲಿ ಇಂತಹ ಕಾನೂನು, ಕಾಯಿದೆಯನ್ನು ತರಬೇಕು, ಇಡೀ ವಿಶ್ವಕ್ಕೆ ತಿಳಿಸಬೇಕು, ನಮ್ಮಲ್ಲಿ ಎಲ್ಲಾ ರೀತಿಯಾದಂತಹ ಪ್ರೋತ್ಸಾಹವನ್ನು ಕೊಡುವುದಕ್ಕೆ ತಯಾರಿದ್ದೇವೆ, ಕಾನೂನಾತ್ಮಕವಾಗಿ ಈ ಕಾಯಿದೆಯನ್ನು ತಂದು ನಿಮಗೆ ಅನುಕೂಲಕರವಾದಂತಹ ವಾತಾವರಣವನ್ನು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿರ್ಮಾಣ ಮಾಡುತ್ತೇವೆಂಬ ವಿಶ್ವಾಸವನ್ನು ನಾವು ಕೊಡಬೇಕಾಗಿತ್ತು. ಹಾಗಾಗಿ ನಮ್ಮ ಕರ್ನಾಟಕ ಯಾವಾಗಲೂ ಮುಂಚೂಣಿಯಲ್ಲಿರುತ್ತದೆ, ಪೂರಕವಾದಂತಹ ಕಾನೂನುಗಳನ್ನು ತರುತ್ತೇವೆ ಎಂಬ ಸಂದೇಶವನ್ನು ಕೊಡಬೇಕಾಗಿತ್ತು, ಆ ಕಾರಣದಿಂದ ನಾವು Bangalore Tech Summit ಮುಂಚೆಯೇ ಈ ordinance ಅನ್ನು ತರುವಂತಹದ್ದನ್ನು ಮಾಡಿದ್ದೇವೆ. ಇದನ್ನು ಕಾನೂನಿನ ರೂಪದಲ್ಲಿ ಇಂದು ನಾವು ತಂದಿದ್ದೇವೆ, ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಯವರು ತಂದಿರುವ ಕರ್ನಾಟಕ ನಾವಿನ್ಯತಾ ಪ್ರಾಧಿಕಾರ, 2020 ಅನ್ನು ಸ್ವಾಗತ ಮಾಡುತ್ತಾ, ಇದಕ್ಕೆ ಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತಾ, Innovation Technology is basis for 4th Industrial Revolution ಎಂದು ಹೇಳುತ್ತಾರೆ. ಬಹುಶಃ ಇದರ ಆಧಾರದ ಮೇಲೆ ಈ ವಿಧೇಯಕವನ್ನು ತಂದಿದ್ದೀರಿ ಎಂದು ಕಾಣುತ್ತದೆ. ಮಾನ್ಯ ಉಪ ಮುಖ್ಯಮಂತ್ರಿಯವರಿಗೆ 2-3 ಸಲಹೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. Composition of Authority ನಲ್ಲಿ ತಾವು ಅಧಿಕಾರಿಗಳನ್ನು ಮಾತ್ರ ಇಟ್ಟಿದ್ದೀರಿ. ಈ ಕ್ಷೇತ್ರದಲ್ಲಿ Bio-Technology, Nano Technology ಆಗಲೀ ಇರುವಂತಹವರನ್ನು ಸೇರ್ಪಡೆ ಮಾಡುವುದಕ್ಕೆ ಅವಕಾಶ ಮಾಡಿಲ್ಲ. ಅವರನ್ನು ಸೇರಿಸಬೇಕಾಗಿತ್ತು ಅಥವಾ ಅವರನ್ನು ಆಹ್ವಾನಿಸುವುದಕ್ಕೂ ಕೂಡ ಅವಕಾಶ ಮಾಡಿಲ್ಲ. ಬಹುಶಃ ಹಾಗೆ ಮಾಡುವುದಕ್ಕೆ ಆಗಲಿಲ್ಲ ಎಂದರೆ, ಭಾರತ ಸರ್ಕಾರವು Start-up Advisory Council ಮಾಡಿದೆ, ಅದೇ ರೀತಿಯಲ್ಲಿ ದಯಮಾಡಿ, Start-up Advisory Council ಅನ್ನು ತಾವು ಮಾಡುವುದು ಒಳ್ಳೆಯದು ಎಂಬುದು ನನ್ನ ಭಾವನೆಯಾಗಿದೆ. ಎರಡನೆಯದಾಗಿ, Start-up Advisory Council ನಲ್ಲಿ ತಾವು ಡಾ: ನಾರಾಯಣ ಮೂರ್ತಿಯವರಾಗಬಹುದು, ಡಾ: ಕಿರಣ್ ಮಜುಂದಾರ್ ಷಾ ಅವರಾದರೂ ಆಗಬಹುದು, ಶ್ರೀ ಅಜೀಂ ಪ್ರೇಂಜಿ ಆಗಬಹುದು, ಬೇರೆ ಬೇರೆ ಸಾಕಷ್ಟು ಮಹನೀಯರುಗಳಿದ್ದಾರೆ. ನಮ್ಮಲ್ಲಿ ಸಾಕಷ್ಟು ಎಂ.ಎನ್.ಸಿ ಕಂಪನಿಗಳಿವೆ, ಆ ಕಂಪನಿಗಳ ಕಾರ್ಯವೈಖರಿ ಬಗ್ಗೆ ಅಲ್ಲಿರುವವರಿಂದ ತಿಳಿದುಕೊಂಡು ಅವರ ಸಲಹೆ, ಸೂಚನೆಗಳನ್ನು ತಾವು ತೆಗೆದುಕೊಳ್ಳಬೇಕು. ಅದೇ ರೀತಿ ಪ್ರಪಂಚದಲ್ಲಿಯೇ ಅತಿ ಹೆಚ್ಚು ವಿಶ್ವಾಸ ಪಡೆದಿರುವ Indian Institute of

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Science ಇದೆ. ಅದು Innovation Technology ಗೆ ಹೆಸರುವಾಸಿಯಾಗಿರುವಂತಹದ್ದು. ಅದೇ ರೀತಿಯಲ್ಲಿ ಬೆಂಗಳೂರಿನಲ್ಲಿ Indian Institute of Management-Bangalore, Institute of Nano Technology ಇವರೆಲ್ಲರ ಸಹಕಾರವನ್ನು ಪಡೆದುಕೊಳ್ಳಬೇಕು, ಮತ್ತು ತಾವು ಕೂಡ Innovation Technology ನಲ್ಲಿ Macro, Small and Medium Enterprises Development Act 2006 ನಲ್ಲಿಯಾವ ರೀತಿಯಾಗಿ ಪ್ರೋತ್ಸಾಹ ಕೊಡುತ್ತಾರೆ, ಬೇರೆ ಬೇರೆ ರೀತಿ ಸೆಕ್ಟರ್‌ಗಳಲ್ಲಿ ಬರುವಂತಹ ಸಹಾಯಧನ ಆಗಬಹುದು, Venture Capital ಆಗಬಹುದು, Angel Investors ಆಗಬಹುದು ಇವುಗಳಿಂದ ಕೂಡ ಸಹಾಯವನ್ನು ಪಡೆದುಕೊಳ್ಳಬೇಕು. ಏಕೆಂದರೆ, ನೂರಾರು, ಸಾವಿರಾರು Start-up's ಪ್ರಾರಂಭವಾಗುತ್ತಿವೆ. ನೂರಕ್ಕೆ ಶೇ.90 ರಷ್ಟು ಒಂದು ವರ್ಷವೂ ಇರುವುದಿಲ್ಲ. ಕೇವಲ ಶೇ.10ರಷ್ಟು Start-up ಗಳು ಒಂದೈದು ವರ್ಷಗಳ ಕಾಲ ಕೆಲಸ ಮಾಡುತ್ತವೆ ನಂತರ ಅವು ಮುಚ್ಚಲ್ಪಡುತ್ತವೆ ಅಥವಾ ಬೇರೆ ಯಾರಾದರೂ take-over ಮಾಡುತ್ತಾರೆ. ಯಾವ ಉದ್ದೇಶಕ್ಕೆ ನಾವು Start-up's ಪ್ರಾರಂಭ ಮಾಡುತ್ತೇವೆ ಎಂದರೆ, ಸ್ಥಳೀಯರಿಗೆ ಕೆಲಸ ಕೊಡಬೇಕು, ಇಲ್ಲಿನ ತಂತ್ರಜ್ಞಾನ ಅಭಿವೃದ್ಧಿಯಾಗಬೇಕು, innovations ಆಗಬೇಕು ಅಂತಹ ಕಾರ್ಯ ಆಗುತ್ತಿಲ್ಲ. ಅದಕ್ಕೋಸ್ಕರವಾಗಿ ಈ ವಿಧೇಯಕ ಒಳ್ಳೆಯದಾಗಿದ್ದು, ಇದನ್ನು ನಾನು ಸ್ವಾಗತ ಮಾಡುತ್ತೇನೆ. ತಾವು ಇದರಲ್ಲಿ ಮುಂದುವರೆಯಬೇಕು, ಸರ್ಕಾರಕ್ಕೆ ನನ್ನ ಬೆಂಬಲ ಇದೆಯೆಂದು ಹೇಳುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್(ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಕರ್ನಾಟಕ ನಾವಿನ್ಯತಾ ಪ್ರಾಧಿಕಾರ ವಿಧೇಯಕ, 2020ಕ್ಕೆ ನಾನು ಬೆಂಬಲವನ್ನು ಸೂಚಿಸುತ್ತೇನೆ. ಏಕೆಂದರೆ, ಇಡೀ ಭಾರತ ದೇಶದಲ್ಲಿ ಕರ್ನಾಟಕವು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನದಲ್ಲಿ ತನ್ನದೇ ಆದ ಒಂದು ಪ್ರಮುಖವಾದ ಸ್ಥಾನ ಪಡೆದಿದೆ. ಎಷ್ಟರಮಟ್ಟಿಗೆ ಎಂದರೆ, Bangalore is called as an IT capital of India, Knowledge capital of India ಎನ್ನುವಷ್ಟರ ಮಟ್ಟಿಗೆ ಬೆಂಗಳೂರು ನಗರ ಮಹತ್ವ ಪಡೆದುಕೊಂಡಿದೆ. ಅಷ್ಟು ಬಹುತರವಾಗಿ ಪ್ರಪಂಚದ ಒಟ್ಟು IT Company ಗಳಲ್ಲಿ ಸಾಕಷ್ಟು IT Companies ಬೆಂಗಳೂರು ನಗರದಲ್ಲಿವೆ. ನಮ್ಮ ರಾಜ್ಯಕ್ಕೆ GSDP (Gross State Domestic Product)ಯಿಂದ ಮಾಹಿತಿ ತಂತ್ರಜ್ಞಾನ, ಜೈವಿಕ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನದಿಂದ ಕರ್ನಾಟಕದ ನಮ್ಮ ಜಿ.ಡಿ.ಪಿ. ಗೆ ಶೇ.40ರಷ್ಟು ದೊಡ್ಡ ಕೊಡುಗೆಯನ್ನು ಸೇರಿಸಿದೆ.

(ಮುಂದು)

(676) 23–03–2020/ 04–50/ ಕೆಹೆಚ್–ಎಂಡಿ

**ಶ್ರೀ ಎಸ್.ಆರ್.ಪಾಟೀಲ್ (ಮುಂದು):–**

ಬಹುತರವಾಗಿ ವಿದೇಶದಲ್ಲಿ ಭಾರತ ದೇಶ ಎಂದರೆ ನನಗೆ ಅನಿಸಿದ ಮಟ್ಟಿಗೆ ದೆಹಲಿ ಎಂದು ಯಾರು ಹೇಳುವುದಿಲ್ಲ. ಬೆಂಗಳೂರು ಎಂದು ಹೇಳುತ್ತಾರೆ. ಭಾರತ ಎಂದರೆ 'ಬೆಂಗಳೂರು' ಎನ್ನುವಷ್ಟು ಮಟ್ಟಿಗೆ ಇವತ್ತು ಮಾಹಿತಿ ತಂತ್ರಜ್ಞಾನದಲ್ಲಿ ತನ್ನದೇ ಆದಂತಹ ಖ್ಯಾತಿಯನ್ನು ಪಡೆದಿದೆ. ತನ್ನದೇ ಆದಂತಹ ಇತಿಹಾಸ ಹೊಂದಿದೆ.ಇಡೀ ದೇಶದ ಹೆಚ್ಚಿನ ಪಾಲು export revenue ನಮ್ಮ ಕರ್ನಾಟಕ ರಾಜ್ಯದ್ದು. ಇದನ್ನು ಬಹಳ ಹುಮ್ಮಸ್ಸಿನಿಂದ ಹೇಳುತ್ತೇನೆ. We must be very proud of this. ಈ ಸಂದರ್ಭದಲ್ಲಿ ಬಹಳಷ್ಟು ಕಾನೂನುಗಳನ್ನು ರಚನೆ ಮಾಡಿಕೊಳ್ಳುತ್ತಾ ಹೋಗುತ್ತೇವೆ. ಈ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ತಂತ್ರಜ್ಞಾನದಲ್ಲಿ ಹೇಗೆ ತಂತ್ರಜ್ಞಾನಗಳು ಬೆಳವಣಿಗೆಯಾಗುತ್ತದೆಯೋ, ಹಾಗೆಯೇ ಹೊಸ ಹೊಸ ಅವಿಷ್ಕಾರಗಳು ಬರುತ್ತವೆ. ನಾನು ಐ.ಟಿ., ಬಿ.ಟಿ., ಮಂತ್ರಿಯಾಗಿದ್ದಾಗ Start-up policy ಅನ್ನು ತಂದಿರುವುದು ನನಗೆ ನೆನಪಿದೆ. ಈಗಿನ ಸರ್ಕಾರ Start-up policy ಗೆ ಕೇಂದ್ರ ಸರ್ಕಾರ ಸಂಪೂರ್ಣವಾಗಿ ಬೆಂಬಲ ಸೂಚಿಸಿರುವುದನ್ನು ನಾನು ನೆನಪಿಸಿಕೊಳ್ಳುತ್ತೇನೆ. ಅಂತಹ ಸಂದರ್ಭದಲ್ಲಿ . .

**ಡಾ|| ಅಶ್ವತ್ಥನಾರಾಯಣ ಸಿ.ಎನ್. (ಉಪ ಮುಖ್ಯಮಂತ್ರಿಯವರು ಹಾಗೂ ಉನ್ನತ ಶಿಕ್ಷಣ, ಐ.ಟಿ., ಮತ್ತು ಬಿ.ಟಿ., ವಿಜ್ಞಾನ ತಂತ್ರಜ್ಞಾನ ಕೌಶಲ್ಯಾಭಿವೃದ್ಧಿ ಸಚಿವರು):–** ಮಾನ್ಯ ವಿರೋಧ ಪಕ್ಷದ ನಾಯಕರೇ, ಇಡೀ ದೇಶದಲ್ಲಿಯೇ 2015ನೇ ಸಾಲಿನಲ್ಲಿ ಮೊದಲನೇ ಬಾರಿಗೆ Start-up policy ಅನ್ನು ತಾವು ಮಂತ್ರಿಯಾಗಿದ್ದಾಗ ತರಲಾಗಿತ್ತು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಸಚಿವನಿದ್ದಾಗ our country is the first to bring the Start-up policy. ಅಷ್ಟೇ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಅಲ್ಲ. We are also first in bringing IT policy and Bio-Technology policy. We are pioneer and we are number one in the entire country. ಅದಕ್ಕೆ ನಾನು ಹೇಳಿದ್ದು, ಯಾವುದೇ ವಿದೇಶಿಗರು ವಿಚಾರ ಮಾಡುವುದಾದರೆ ಭಾರತ ಎಂದ ಕೂಡಲೇ ಅವರು ನವ ದೆಹಲಿ ಅಥವಾ ನ್ಯೂ ಡೆಲ್ಲಿ ಎಂದು ಹೇಳುವುದಿಲ್ಲ. ಬೆಂಗಳೂರು ಎಂದು ಹೇಳುತ್ತಾರೆ. ಏಕೆಂದರೆ, ಅಮೇರಿಕಾದ ಅಧ್ಯಕ್ಷರಾದ ಬರಾಕ್ ಹುಸೇನ್ ಒಬಾಮ ರವರು ಶಿಕ್ಷಣ ಪಡೆದರೆ ಬೆಂಗಳೂರಿನಲ್ಲಿ ಶಿಕ್ಷಣವನ್ನು ಪಡೆಯಬೇಕು. ಅಲ್ಲಿ ಅತ್ಯುತ್ತಮವಾದ ಶಿಕ್ಷಣ ಸಂಸ್ಥೆಗಳು ಇವೆ ಎಂದು ಹೇಳಿರುವ ಬಗ್ಗೆ ಉಲ್ಲೇಖ ಮಾಡಿರುವುದು ನನಗೆ ನೆನಪಿದೆ. ಆ ದೃಷ್ಟಿಯಿಂದ ಇವತ್ತು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನಗಳು ಬಹಳಷ್ಟು ಬೆಳವಣಿಗೆ ಆಗಿರುವುದರಿಂದ, ತಂತ್ರಜ್ಞಾನದಲ್ಲಿ ಬಹಳಷ್ಟು ಹೊಸ ಹೊಸ ಅವಿಷ್ಕಾರಗಳು ಬರುತ್ತವೆ. ಇವತ್ತಿನ ದಿವಸ ಮಾನ್ಯ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿಯವರು ಭಾಷಣ ಮಾಡುವಾಗ Start-up policyಬಗ್ಗೆ ಹೇಳಿದರು. ಆ ಸಮಿತಿಯಲ್ಲಿ ಇನ್ಫೋಸಿಸ್ ಮುಖ್ಯಸ್ಥರು, Co-founder ನಾರಾಯಣ ಮೂರ್ತಿಯವರು, ಬಯೋ ಟೆಕ್ನಾಲಜಿಯಲ್ಲಿ ಕಿರಣ್ ಮಜುಮ್ದಾರ್–ಷಾ ರವರು ಮತ್ತು ಅಜೀಮ್ ಪ್ರೇಮ್‌ಜೀಯವರು ಇವರೆಲ್ಲಾ ಹೆಸರು ಮಾಡಿರುವಂತಹ ಪ್ರಖ್ಯಾತರು ಮತ್ತು ವಿಶ್ವವಿಖ್ಯಾತರು ಇದ್ದಾರೆ. ಇವರು ವಿಶ್ವದ ದಿಗ್ಗಜರು. ಇವರು ನ್ಯಾನೋ ಟೆಕ್ನಾಲಜಿಯೊಳಗೆ ನಮ್ಮ ಭಾರತದ ವಿಜ್ಞಾನಿಯಾದ ಸಿ.ಎನ್.ರಾವ್ ರವರು ತಮ್ಮದೇ ಆದಂತಹ ಖ್ಯಾತಿ ಪಡೆದಂತಹ ವಿಜ್ಞಾನಿಗಳಾಗಿದ್ದಾರೆ. ಸಿ.ಎನ್.ರಾವ್‌ರವರು ನಾನು ಮಂತ್ರಿಯಾಗಿದ್ದಾಗ ನಮ್ಮ ಜೊತೆಯಲ್ಲಿ 3 ವರ್ಷ ಬಹಳ ಅದ್ಭುತವಾಗಿ ಕೆಲಸ ಮಾಡಿದ್ದಾರೆ. ಈ ಸಂದರ್ಭದಲ್ಲಿ ಅವರನ್ನು ನೆನಪಿಸಿಕೊಳ್ಳಬೇಕು. ಅದಕ್ಕೆ ಇವತ್ತು ತಾವು ತಂದಿರುವ ವಿಧೇಯಕ ಬಹಳ ಒಳ್ಳೆಯದು. ಇವತ್ತು Start-up policy ಏನಾಗುತ್ತದೆ ಎಂದರೆ, ಬರುತ್ತವೆ, ಹೋಗುತ್ತವೆ ಎಂದು ಹೇಳಿದರು. ಇವತ್ತು ಹೊಸ ಅವಿಷ್ಕಾರವನ್ನು, ಹೊಸ innovation ನಿಂದ ಅವರು ಕೆಲಸವನ್ನು ಮಾಡುತ್ತಾರೆ. ಈ ಸಮಾಜಕ್ಕೆ, ನಾಡಿಗೆ, ಜನಸಾಮಾನ್ಯರಿಗೆ, ರೈತರಿಗೆ ಮತ್ತು ಎಲ್ಲರಿಗೂ ಉಪಯೋಗವಾಗುವಂತಹ ಹೊಸ ಹೊಸ innovation ಅನ್ನು Start-up policy ಯಲ್ಲಿ ತಂದು feasible ಆಗಬೇಕಲ್ಲವೇ, ಹೊಸ ಅವಿಷ್ಕಾರ ಇರಬಹುದು. ಹೊಸ innovation ಇರಬಹುದು. ಅದು practically, commercially viable ಆಗಬೇಕು. ಕೆಲವು commercially viable ಆಗುವುದಿಲ್ಲ. ಇದು ಬಹಳ ಶ್ರೇಷ್ಠವಾದದ್ದು ಇರಬಹುದು. ಈ ಸಮಸ್ಯೆಯಲ್ಲಿ commercially viable ಆಗದೇ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇರುವುದಕ್ಕೆ Start-up ಗೆ ಸ್ವಲ್ಪ ತೊಂದರೆಯಾಗುತ್ತಿದೆ. ಕೆಲವು ಮಂದಿ ಏನೂ ಇಲ್ಲದವರು plug and play ಮಾಡುವುದಕ್ಕೆ ಅವರಿಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಅಷ್ಟರೊಳಗೆ ನಮ್ಮ ಇಂಜಿನಿಯರ್‌ಗಳು, ಹೊಸದಾಗಿ ಬಿ.ಇ. (ಕಂಪ್ಯೂಟರ್ ಸೈನ್ಸ್) ಆದವರು, ಬಿ.ಇ. (ಇ ಅಂಡ್ ಇ) and Information Science ನಲ್ಲಿ ಪ್ರಾವಿಣ್ಯತೆ ಪಡೆದಂತಹ ಏನೂ ಇಲ್ಲದವರು, ಎಲ್ಲೋ ಒಂದು ನೌಕರಿಯನ್ನು ಕಂಪನಿಯೊಳಗೆ ಕೊಡಿಸಿರಪ್ಪಾ ಎಂದು ಹೇಳುವವರು billionaire ಆದಂತಹ ಉದಾಹರಣೆಗಳು ನಮ್ಮ ಕಣ್ಣ ಮುಂದೆ ಇದೆ. ಬಿಲ್‌ಗೇಟ್ಸ್ ರವರಂತೂ ಏನನ್ನೂ ಕಲಿತೇ ಇಲ್ಲ. ಅವರು ಎಸ್.ಎಸ್.ಎಲ್.ಸಿ., ನಲ್ಲಿ drop out ಎಂದು ಕಾಣುತ್ತದೆ. ಅವರು 5 ನಿಮಿಷ ಹೆಚ್ಚಿಗೆ ಮಾತನಾಡಿದರೆ ಎಷ್ಟೋ ಕೋಟಿ ರೂಪಾಯಿಗಳ ಹಣ ಹಾನಿಯಾಗುತ್ತದೆಯಂತೆ ಎಂದು ಹೇಳುತ್ತಾರೆ. ಅಷ್ಟು ಅವಕಾಶ ಇದೆ. ಈ ಸಂದರ್ಭದಲ್ಲಿ ಕೆಲವು ಕಾನೂನುಗಳು ಅಡ್ಡ ಬಂದಿರಬಹುದು. ಆ ಕಾನೂನುಗಳಿಗೆ ಅನಾನುಕೂಲತೆ ಆಗಬಾರದೆಂಬ ದೃಷ್ಟಿಯಿಂದ ತಾವು ವಿಧೇಯಕವನ್ನು ತಂದಿದ್ದೀರಿ. ನಾನು ಕೂಡ ಸ್ವಾಗತ ಮಾಡುತ್ತೇನೆ. ನಾನು ಒಂದು ಸ್ಪಷ್ಟೀಕರಣವನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ತಾವು ಕೊಟ್ಟಿರುವಂತಹ ಮಾಹಿತಿಯಲ್ಲಿ ದೆಹಲಿಯ ಉಚ್ಚ ನ್ಯಾಯಾಲಯದಿಂದ ಭಾರತಾದ್ಯಂತe-Pharmacy ಗಳನ್ನು ನಿಷೇಧಿಸಿದ್ದರೂ ಸಹ Med Plus, Medlife, IMG Pharma, PharmEasy etc Start-up ಗಳು ಒಂದು ನೂರು ಮಿಲಿಯನ್ ಯು.ಎಸ್., ಡಾಲರ್ ಮತ್ತು ಎರಡು ನೂರು ಮಿಲಿಯನ್ ಯು.ಎಸ್., ಡಾಲರ್‌ನಷ್ಟು ಬಂಡವಾಳ ಹೂಡಿಕೆಯನ್ನು ಕ್ರೋಢೀಕರಿಸುವುದರಲ್ಲಿ ಯಶಸ್ವಿಯಾಗಿದೆ. ದೆಹಲಿ ಉಚ್ಚ ನ್ಯಾಯಾಲಯದವರು ಇದನ್ನು allow ಮಾಡದೇ, ನಿಷೇಧ ಮಾಡಿದ್ದಾರೆ. ಆನ್‌ಲೈನ್‌ನಲ್ಲಿ ಇಂತಹ ಮೆಡಿಸಿನ್ ಬೇಕು, ಆನ್‌ಲೈನ್ demand ಇಟ್ಟರೆ, ಅದನ್ನು ಸರಬರಾಜು ಮಾಡುತ್ತಾರೆ. ಅದನ್ನು ದೆಹಲಿ ಉಚ್ಚ ನ್ಯಾಯಾಲಯದವರು ನಿಷೇಧ ಮಾಡಿದ್ದಾರೆ. ಏಕೆಂದರೆ, ನಾವು ಯಾವುದಾದರೂ ಮೆಡಿಕಲ್ ಶಾಪ್‌ಗೆ ಹೋದರೆ ಡಾಕ್ಟರ್ prescription ಅನ್ನು ಕೇಳುತ್ತಾರೆ. ಡಾಕ್ಟರ್ prescription ಎಲ್ಲಿದೆ ಎಂದು ಕೇಳುತ್ತಾರೆ. ಆ prescription ಇಲ್ಲವೆಂದರೆ ಅವರು ಮೆಡಿಸಿನ್‌ಗಳನ್ನು ಕೊಡುವುದೇ ಇಲ್ಲ. ಈಗ ಆನ್‌ಲೈನ್ ಮೆಡಿಸನ್ ಬಗ್ಗೆ ಹೇಳುವುದಾದರೆ, it may be useful or not useful for the human beings. Sometimes it may be detrimental. ಅವರಿಗೆ health

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

damage ಆಗುವಂಥಾದ್ದು ಇರಬಹುದು. ಅದಕ್ಕೆ ಆ ಎಲ್ಲಾ ವಿಚಾರಗಳನ್ನು ಮಾಡಿ, ದೆಹಲಿ ಉಚ್ಚ ನ್ಯಾಯಾಲಯದವರು ಇದನ್ನು ನಿಷೇಧ ಮಾಡಿದ್ದಾರೆ. ಈಗ ನೀವು ಇದಕ್ಕೆ ಅವಕಾಶ ಮಾಡಿಕೊಟ್ಟರೆ, ಅವರು ತಮ್ಮ ನಿಶ್ಚಿತ ಅವಧಿಯಲ್ಲಿ ಏನು ಹಣ ಮಾಡಿಕೊಳ್ಳಬೇಕೋ, ಆ ಹಣವನ್ನು ಮಾಡಿಕೊಂಡು ಹೋಗಬಹುದು. ಉದಾಹರಣೆಗೆ ಇನ್ನೊಂದು ವಿಚಾರದ ಬಗ್ಗೆ ಹೇಳುತ್ತೇನೆ. ಹಣ ಭಾಜಿ ಕಟ್ಟುವ ಆನ್‌ಲೈನ್ ಗೇಮ್‌ಗಳನ್ನು ಒದಗಿಸುವ Start-up ಗಳ ಮೇಲೆ ಇತ್ತೀಚೆಗೆ ನಿರ್ಬಂಧಗಳನ್ನು ಹೇರಿದ್ದಾರೆ. ಭಾಜಿ ಕಟ್ಟುವುದು ಎಂದು ಹೇಳುತ್ತಾರೆಯಲ್ಲವೇ, ಆನ್‌ಲೈನ್ ಭಾಜಿ ಕಟ್ಟುವುದು, it is nothing but a gambling. ಆನ್‌ಲೈನ್‌ನಲ್ಲಿ ಅಷ್ಟು ಇದ್ದಾಗಲೂ ಸಹ Green Label Fantasy Sports Startup Company ಯ Stewart Capital ಅವರಿಂದ 60 ಮಿಲಿಯನ್ ಯು.ಎಸ್., ಡಾಲರ್ ಭಾರತದ ನವೀಕರಣ ಮತ್ತು ಅವರು ಕೆಲವು ಕಾನೂನನ್ನು, ಇದಕ್ಕೆಲ್ಲಾ ಬೆಂಬಲ ಕೊಟ್ಟರೆ, ಇದು ಅವ್ಯಾಹತವಾಗಿ ನಡೆಯುತ್ತದೆ. ಇದಕ್ಕೆ ನಿರ್ಬಂಧ ಎಲ್ಲಿ ಉಳಿಯುತ್ತದೆ. ಅವರಿಗೆ legal protection ಕೊಟ್ಟರೆ, ಅವರು ಭಾಜಿ ಕಟ್ಟಿಕೊಂಡು gambling ಮಾಡಿಕೊಳ್ಳುತ್ತಾರೆ. ಆನ್‌ಲೈನ್‌ಗಳಿಂದ ಎಷ್ಟೋ ಕುಟುಂಬಗಳು ಸರ್ವನಾಶವಾಗುವ ಸಾಧ್ಯತೆ ಇದೆ. ಬಹಳ ಜನರು ಮೊಬೈಲ್‌ನಲ್ಲಿ ಅವರದೆಲ್ಲಾ ನಡೆಯುತ್ತಿರುತ್ತದೆ. ಎಷ್ಟೋ ಕುಟುಂಬಗಳನ್ನು ನಾನು ಕಣ್ಣಾರೆ ನೋಡಿದ್ದೇನೆ. ನಮ್ಮ ಬಹಳ ಸಮೀಪದಲ್ಲಿರುವ ಒಬ್ಬ ವ್ಯಕ್ತಿಯನ್ನು ನೋಡಿದ್ದೇನೆ. ಅವನು ಬಹಳ ಒಳ್ಳೆಯ ಮನೆತನದ ಹುಡುಗ. ಆನ್‌ಲೈನ್‌ನಲ್ಲಿ ಮೊಬೈಲ್‌ನಲ್ಲಿ ಗೇಮ್ ಆಡಿಕೊಂಡು ಕೊನೆಗೆ ಎಲ್ಲಿಗೆ ಬಂತೆಂದರೆ, ಮನೆ ಬೀದಿಗೆ ಬಂತು. ಅಷ್ಟರಲ್ಲಿ ಅವನು ವಿಷವನ್ನು ತೆಗೆದುಕೊಂಡು ಸತ್ತು ಹೋದ. ಇವರಿಗೆ ಲಾಭ ಆಗುತ್ತದೆ. ಹೊಸ invention ನಿಂದ ಅವರು ಲಾಭವನ್ನು ಪಡೆಯಬಹುದು. ಆದರೆ, ಅನೇಕರು at the young age ಅವರಿಗೆ tempt ಆಗುತ್ತದೆ. ಅವನಿಗೆ ಹಣ ಬಂದ ಹಾಗೆ ಆಗುತ್ತದೆ. ಅವರು ಬೆನ್ನತ್ತಿದಾಗ ಸರ್ವಸ್ವವನ್ನೇ ಕಳೆದುಕೊಂಡಿರುವಂತಹ ಉದಾಹರಣೆಗಳು ನನ್ನ ಕಣ್ಣ ಎದುರಿಗೆ ಇವೆ. ಅಂತಹವರಿಗೆ ಇದು legal shelter ಕೊಟ್ಟರೆ ಕಾನೂನಾತ್ಮಕವಾದಂತಹ ಒಂದು ಬೆಂಬಲ ಅವರಿಗೆ ನೀಡಿದರೆ, ಅದರಲ್ಲಿ ಅವರು ಇನ್ನೂ ಹೆಚ್ಚು ಹೆಚ್ಚು ಮುಂದಕ್ಕೆ ಹೋಗುತ್ತಾರೆ. ಆ ರೀತಿಗೆ ಅವಕಾಶ ಕೊಡಬಾರದು. ಏಕೆಂದರೆ, ನಾನು ಆ ಕ್ಷೇತ್ರದಲ್ಲಿ ಕೆಲಸ ಮಾಡಿದ್ದೇನೆ. ನನಗೆ ಬಹಳ ಅಭಿಮಾನ ಮತ್ತು ಗೌರವ ಇದೆ. ತಾವು ಅದೇ portfolio ತೆಗೆದುಕೊಂಡಿದ್ದೀರಿ ಎಂದು ನಿಮ್ಮ ಬಗ್ಗೆ ನಮಗೆ affection ಇದೆ. ಕರ್ನಾಟಕ ನಾವಿನ್ಯತಾ ಪ್ರಾಧಿಕಾರ ವಿಧೇಯಕ, 2020 ರನ್ನು ಸ್ವಾಗತ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ರೀತಿ ಇದರಲ್ಲಿ disadvantages ಇದೆ. Getting a legal protection ನನಗೆ ಕಾನೂನಿನಲ್ಲಿಯೇ ಅವಕಾಶ ಮಾಡಿಕೊಟ್ಟಿದೆ. I will do this ಎಂದು ಅವನು ದುಡ್ಡನ್ನು ಗಳಿಸಬಹುದು. Innocent people, ಮುಗ್ಧರು, ನೂರಾರು, ಸಾವಿರಾರು, ಲಕ್ಷಾಂತರ ಜನರು ಮತ್ತು ಅನೇಕ ಜನರು ಅವರ innovation ಹೊಸದಾಗಿ ಇರುತ್ತದೆ. ದುಡ್ಡು ಗಳಿಸುವುದಕ್ಕೆ ಒಂದು ಒಳ್ಳೆಯದಾಗುತ್ತದೆ. ಎಷ್ಟೋ ಕುಟುಂಬಗಳು ಸಮಾಜದಲ್ಲಿ ಸ್ವಾಸ್ಥ ಸಮಾಜವನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. ಈ ರೀತಿ ದುರುಪಯೋಗ ಆಗಬಾರದು. ಅದಕ್ಕೆಲ್ಲಾ ನಾವು protection ಕೊಡಿಸೋಣವೆಂದರೆ, Start-up ನವರು ಹೊಸ ಹೊಸ ಅವಿಷ್ಕಾರವನ್ನು ಕಂಡು ಹಿಡಿದಿದ್ದಾರೆ. ಹೊಸ innovation ಮುಖಾಂತರ ಸಮಾಜಕ್ಕೆ ಉಪಯೋಗವಾಗುವಂತಹದ್ದನ್ನು ಮಾಡಲಿ. ಸಮಾಜಕ್ಕೆ ಮಾರಕವಾಗಬಾರದು ಎನ್ನುವಂತಹ precaution ಹೇಳಿ, ನಾನು ಕರ್ನಾಟಕ ನಾವಿನ್ಯತಾ ಪ್ರಾಧಿಕಾರ ವಿಧೇಯಕ, 2020 ನ್ನು ಸ್ವಾಗತ ಮಾಡುತ್ತೇನೆ.

**ಡಾ|| ಅಶ್ವತ್ಥನಾರಾಯಣ ಸಿ.ಎನ್.:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿಯವರು ಈ ಒಂದು ಕಮಿಟಿಯ ಬಗ್ಗೆ Composition of the Authority ಬಗ್ಗೆ ಒಂದಿಷ್ಟು ಗಮನವನ್ನು ಸೆಳೆದು ವಿಚಾರವನ್ನು ತಿಳಿಸಿದ್ದಾರೆ. ಇಲ್ಲಿ permanent ಒಂದು ಭಾಗವಾದರೆ, ನಮ್ಮ ಸೆಕ್ಷನ್–5 ರಲ್ಲಿ

> *"The Authority may invite such other persons as it deems, fit to attend the meeting in order to obtain their views or expertise on any item on the agenda for the meeting."*

(ಮುಂದು)

**(677) 23/03/2020/5:00/ಎಸ್‌ಪಿಆರ್/ಎಕೆ**
**ಡಾ|| ಸಿ.ಎನ್.ಅಶ್ವಥ್ ನಾರಾಯಣ್ (ಮುಂದು):–**

ಇವತ್ತಿನ ದಿವಸ ಯಾರೇ ಪರಿಣತರುಗಳನ್ನು ಕರೆಯುವುದಕ್ಕೆ ಈ ವಿಧೇಯಕದಲ್ಲಿ ಅವಕಾಶ ಮಾಡಿಕೊಡಲಾಗಿದೆ. Special Invitee ಆಗಿ ಬರುತ್ತಾರೆ. ಈ ರೀತಿಯ ಅವಕಾಶವಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ವಿರೋಧ ಪಕ್ಷದ ನಾಯಕರು ಈ ಹಿಂದೆ ಸಚಿವರಾಗಿದ್ದಾಗ, Start-up Policy ನ್ನು ಪ್ರಾರಂಭಿಸಿದರು. ಇಡೀ ದೇಶದಲ್ಲಿಯೇ ನಮ್ಮ ರಾಜ್ಯದಲ್ಲಿ ಮೊದಲ ಬಾರಿಗೆ Start-up Policy ಪ್ರಾರಂಭವಾಯಿತು. ಮಾನ್ಯ ವಿರೋಧ ಪಕ್ಷದ ನಾಯಕರು ಸಾಕಷ್ಟು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಈ ರೀತಿ ಬೇರೆ ಬೇರೆ ಕ್ಷೇತ್ರದಲ್ಲಿ ಕೆಲಸ ಮಾಡಿರುವವರಾಗಿದ್ದಾರೆ. ಬಹಳ ಮುಖ್ಯವಾಗಿ ಪ್ರಸ್ತುತ ಕಾಯ್ದೆಯಲ್ಲಿ ಕಾನೂನಿನನ್ವಯ ಇವತ್ತಿನ ದಿವಸ ಎಲ್ಲರಿಗೂ ಅವಕಾಶ ಮಾಡಿಕೊಟ್ಟಿದ್ದೇವೆ. ಅವರು ತಾತ್ಕಾಲಿಕವಾಗಿ ನಿರ್ದಿಷ್ಟವಾದ ಕಾಲಮಿತಿ ಹಾಗೂ ಸ್ಥಳದಲ್ಲಿ ಮಾಡುವ ಟ್ರೈಯಲ್ ಸಮಾಜಕ್ಕೆ ಉಪಯೋಗವಿದೆಯೇ ಅಥವಾ ಮಾರಕವಾಗಿದೆಯೇ ಅಥವಾ ಇದರಿಂದ ಸಮಾಜಕ್ಕೆ ಒಳ್ಳೆಯದಾಗುತ್ತದೆಯೇ ಅಥವಾ ಇದರಿಂದ ಸಮಾಜದಲ್ಲಿ ಯಾವುದೇ ವ್ಯತ್ಯಾಸವಾಗುತ್ತದೆಯೇ ... ಅವಶ್ಯಕತೆ ಆಧಾರಿತವಾಗಿ ಟ್ರೈಯಲ್ ಮತ್ತು ಟೆಸ್ಟಿಂಗ್ ಮೇಲೆ ಅದು successful ಇದ್ದರೆ, ನಾವು ನಮ್ಮ ಕಾನೂನಿನಲ್ಲಿ ಬದಲಾವಣೆ ಮಾಡಬಹುದು. ಕಾನೂನಿನಲ್ಲಿ ಅಲ್ಪಾವಧಿಯಲ್ಲಿ ಮಾಡುವುದಕ್ಕೆ ಕೆಲವರಿಗೆ ಅವಕಾಶವಿರುವುದಿಲ್ಲ. ಹೀಗಾಗಿ ಕಾನೂನಿನಲ್ಲಿ ಅವಕಾಶ ಮಾಡಿಕೊಟ್ಟರೆ ಪ್ರಯೋಗ ಮಾಡುವುದಕ್ಕೆ ಅವಕಾಶವಿದೆ. ಇದರಲ್ಲಿ ಶಾಶ್ವತವಾಗಿ ಮಾಡುವ ವ್ಯವಸ್ಥೆ ಇಲ್ಲ. ಇವತ್ತಿನ ಕಾನೂನಿನಲ್ಲಿ ಆ ರೀತಿಯ ಸಡಿಲತೆ ಇಲ್ಲ. ಈ ರೀತಿಯ ಸಡಿಲತೆ ಮತ್ತು ಅವಕಾಶವಿಲ್ಲದ ಕಾರಣ ಯಾರೂ ಸಹ ಹೊಸತನ ಅಥವಾ ವಿನೂತನವಾಗಿ ಹೊಸ ಪ್ರಯೋಗ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಈ ಕಾರಣದಿಂದಾಗಿ ಪ್ರಸ್ತುತ ವಿಧೇಯಕದಲ್ಲಿ ಅವಕಾಶವನ್ನು ಮಾಡಿಕೊಟ್ಟಿದ್ದೇವೆ ಎಂದು ವಿರೋಧ ಪಕ್ಷದ ನಾಯಕರಿಗೆ ತಿಳಿಸಬಯಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವಿಧೇಯಕದ ನಿಯಮ 4 (3) ರಲ್ಲಿ **'ನಿಯಮಿಸಬಹುದಾದ ವಿಧಾನದಲ್ಲಿ ಸರ್ಕಾರವು ನಾಮನಿರ್ದೇಶಿಸಬಹುದಾದ ಐವರಿಗಿಂತ ಹೆಚ್ಚಿಲ್ಲದ ಪದನಿಮಿತ್ತ ಸದಸ್ಯರು'** ಎಂದು ನಮೂದಿಸಿದೆ. ಆದರೆ ಸಾಮಾನ್ಯವಾಗಿ ಯಾರೆಲ್ಲಾ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಪರಿಣಿತರು ಇರುತ್ತಾರೆ ಅವರೇ ಐದು ಜನ ಸದಸ್ಯರು ಎಂದು ಹೇಳಲಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ex-officioಗೆ ಬರುವುದಿಲ್ಲ. ಅಲ್ಲಿ ಯಾರಾದರೂ ಅಪರ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ ಅಂತಹವರುಗಳು ಅಲ್ಲಿರುತ್ತಾರೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಅಂಶಗಳನ್ನು ವಿಧೇಯಕದ ನಿಯಮ 4 (4) ರಲ್ಲಿ ನಮೂದಿಸಲಾಗಿದೆ. ಅದೇ ರೀತಿಯಾಗಿ ನಿಯಮ 4 (5) ರಲ್ಲಿ ನಿರ್ದೇಶಕರು, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯವರು ಇದ್ದಾರೆ. ಆದರೆ, ನಿಯಮ 4 (3) ರಲ್ಲಿ ಯಾರಾದರೂ ಐದು ಜನರನ್ನು ಸರ್ಕಾರ ಶಿಫಾರಸ್ಸು ಮಾಡಬಹುದು ಎಂಬುದಾಗಿ ತಿಳಿಸುತ್ತಾರೆ. ಸರ್ಕಾರವು ಯಾರಯಾರನ್ನೋ ಶಿಫಾರಸ್ಸು ಮಾಡುವ ಬದಲು ಈ ಕ್ಷೇತ್ರದಲ್ಲಿರುವ ಪರಿಣಿತರನ್ನೇ ಶಿಫಾರಸ್ಸು ಮಾಡಲಿ. ಈ ರೀತಿಯ ಸಣ್ಣ ಬದಲಾವಣೆಯನ್ನು ಸರ್ಕಾರ ಮಾಡಬೇಕು. ಇಲ್ಲಿಯೂ ಸಹ political shelter ಆಗಬಾರದು.

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, 'ಯಾರಾದರೂ ತಪ್ಪುಗಳನ್ನು ಮಾಡಿದರೆ, 30 ದಿನದೊಳಗಾಗಿ ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿಯನ್ನು ಸಲ್ಲಿಸಬಹುದು' ಎಂಬುದಾಗಿ ವಿಧೇಯಕದಲ್ಲಿ ತಿಳಿಸಲಾಗಿದೆ. But the hon.Minister told that appealing is there only for the district courts. Lower court ಗಳಿಗೆ ಅಧಿಕಾರವನ್ನು ಕೊಟ್ಟಿಲ್ಲ. ಜಿಲ್ಲಾ ನ್ಯಾಯಾಲಯಗಳಿಗೆ ಮೇಲ್ಮನವಿಯನ್ನು ಸಲ್ಲಿಸಬಹುದು. But your establishment and everything is at the state level. ಈ ಪ್ರಾಧಿಕಾರವು ರಾಜ್ಯಮಟ್ಟದಲ್ಲಿದ್ದು, ಆದರೆ Appellate Authority ಇರುವುದು ಜಿಲ್ಲಾ ಮಟ್ಟದಲ್ಲಿ. ಈ ವಿಚಾರದಲ್ಲಿ ಸರ್ಕಾರವು ಸ್ವಲ್ಪ ಆಲೋಚನೆಯನ್ನು ಮಾಡಬೇಕಾಗುತ್ತದೆ.

**ಡಾ॥ ಸಿ.ಎನ್.ಅಶ್ವಥ್ ನಾರಾಯಣ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಅಂಶಕ್ಕೆ, ವಿಧೇಯಕದಲ್ಲಿ 'ಕನಿಷ್ಠ' ಎಂಬುದಾಗಿ ತಿಳಿಸಲಾಗಿದೆ. ಸಾಮಾನ್ಯವಾಗಿ ಪ್ರಾಧಿಕಾರದಲ್ಲಿಯೇ ಮೇಲ್ಮನವಿಗಳನ್ನು ಸಲ್ಲಿಸುವ ಅವಕಾಶವಿದೆ. ಇದರ ಜೊತೆಗೆ ಆಕ್ಷೇಪಣೆ ಕರೆಯುವುದಕ್ಕೆ, ಮೇಲ್ಮನವಿ ಸಲ್ಲಿಸುವುದಕ್ಕೆ ಪ್ರಾಧಿಕಾರದಲ್ಲಿಯೇ ಅವಕಾಶವಿದೆ. ಇದರಲ್ಲಿ 'ಕನಿಷ್ಠ ಜಿಲ್ಲಾ ಮಟ್ಟದ ನ್ಯಾಯಾಲಯ' ಎಂದು ತಿಳಿಸಲಾಗಿದೆ. ಇದಕ್ಕಿಂತ ಕೆಳಮಟ್ಟದ ನ್ಯಾಯಾಲಯಗಳಲ್ಲಿ ಮೇಲ್ಮನವಿಯನ್ನು ಸಲ್ಲಿಸಬಾರದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಂದುವರೆದು, ಮಾನ್ಯ ಶ್ರೀಕಂಠೇಗೌಡರು ಪ್ರಸ್ತಾಪಿಸಿದಂತೆ, ವಿಧೇಯಕದಲ್ಲಿ ತಿಳಿಸಿರುವ ಐದು ಜನರು ಪ್ರಮುಖವಾಗಿ ಕಾನೂನು, ವಾಣಿಜ್ಯ ಮತ್ತು ಕೈಗಾರಿಕೆ, ಹಣಕಾಸು ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಂತಹ ಪ್ರಮುಖ ಇಲಾಖೆಯ ಕಾರ್ಯದರ್ಶಿಗಳಿರುತ್ತಾರೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

**ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ "ಕರ್ನಾಟಕ ನಾವಿನ್ಯತಾ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.

ಖಂಡ 2 ರಿಂದ 32 ರವರೆಗೆ

**ಸಭಾಪತಿಯವರು:–** "ಖಂಡ 2 ರಿಂದ 32 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 32ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವದ ಅಂಗೀಕಾರ**

**ಡಾ॥ ಸಿ.ಎನ್.ಅಶ್ವಥ್ ನಾರಾಯಣ್** (ಉಪ ಮುಖ್ಯಮಂತ್ರಿ ಮತ್ತು ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ):-ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ 'ಕರ್ನಾಟಕ ನಾವಿನ್ಯತಾ ಪ್ರಾಧಿಕಾರ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ನಾವಿನ್ಯತಾ ಪ್ರಾಧಿಕಾರ ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**(ಈ) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ, 2020**

**ಪರ್ಯಾಲೋಚನ ಪ್ರಸ್ತಾಪ**

**ಡಾ॥ ಸಿ.ಎನ್.ಅಶ್ವಥ್ ನಾರಾಯಣ್** (ಉಪ ಮುಖ್ಯಮಂತ್ರಿ ಮತ್ತು ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಮಂತ್ರಿ):- ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಡಾ॥ ಸಿ.ಎನ್.ಅಶ್ವಥ್ ನಾರಾಯಣ್:-** ಮಾನ್ಯ ಸಭಾಪತಿಯವರೇ, ಗುಲ್ಬರ್ಗಾ ವಿಶ್ವವಿದ್ಯಾನಿಲಯ ದೊಡ್ಡ ವಿಶ್ವವಿದ್ಯಾನಿಲಯವಾಗಿದ್ದು ಕಲ್ಯಾಣ ಕರ್ನಾಟಕ ಭಾಗದ ನಾಲ್ಕು ಜಿಲ್ಲೆಗಳಾದ ರಾಯಚೂರು, ಬೀದರ್, ಯಾದಗಿರಿ ಮತ್ತು ಗುಲ್ಬರ್ಗಾಗಳನ್ನು ಒಳಗೊಂಡಿರುತ್ತದೆ. 423 ಪದವಿ ಪೂರ್ವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಲೇಜುಗಳು ಮತ್ತು 76 ಸ್ನಾತಕೋತ್ತರ ಕಾರ್ಯಕ್ರಮಗಳು ಈ ವಿಶ್ವವಿದ್ಯಾನಿಲಯದ ಅಡಿಯಲ್ಲಿರುತ್ತವೆ. ಇನ್ನು ಹಲವಾರು B.P.Ed ಹಾಗೂ ಇನ್ನಿತರೆ ಕಾರ್ಯಕ್ರಮಗಳನ್ನು ಒಳಗೊಂಡಿರುತ್ತದೆ. ಈ ವಿಶ್ವವಿದ್ಯಾನಿಲಯದ geographical extent ಬಹಳ ದೊಡ್ಡದಾಗಿದೆ. ಇದಕ್ಕೆ National Knowledge Commission ಶಿಫಾರಸ್ಸು ಇತ್ತು. ರಾಜ್ಯದ ಪ್ರತಿಯೊಂದು ಜಿಲ್ಲೆಗಳಲ್ಲಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಬೇಕು. ನಮ್ಮ ಹೊಸ Education Policyಯಲ್ಲಿ ಪ್ರತಿಯೊಂದು ಸಂಸ್ಥೆಯು ವಿಶ್ವವಿದ್ಯಾನಿಲಯ ಆಗಬೇಕೇನ್ನುವ ಚಿಂತನೆ ಇದೆ. ಕನಿಷ್ಠವಾಗಿ Autonomous Centre ಆಗಿರಬೇಕು. ಇದರ ಮುಂದಿನ ಹಂತದಲ್ಲಿ ವಿಶ್ವವಿದ್ಯಾನಿಲಯವಾಗಬೇಕು. ಇವತ್ತಿನ ದಿವಸ ಉತ್ತರ ಕರ್ನಾಟಕ ಭಾಗದ ನಾಲ್ಕು ಜಿಲ್ಲೆಗಳನ್ನು ಒಳಗೊಂಡು ಗುಲ್ಬರ್ಗಾ ವಿಶ್ವವಿದ್ಯಾನಿಲಯವನ್ನು ಮಾಡಲಾಗಿದೆ. ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳನ್ನು ಗುಲ್ಬರ್ಗಾ ವಿಶ್ವವಿದ್ಯಾನಿಲಯದಡಿ ತೆಗೆದುಕೊಂಡು ಬಂದಿದ್ದು, ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳನ್ನು ಪ್ರತ್ಯೇಕವಾದ ವಿಶ್ವವಿದ್ಯಾನಿಲಯದಡಿ ತರಬೇಕೆಂದು ಅದರಲ್ಲೂ ಪ್ರಮುಖವಾಗಿ ರಾಯಚೂರು ವಿಶ್ವವಿದ್ಯಾನಿಲಯದಡಿಯಲ್ಲಿ ತರಬೇಕು. ಈ ರೀತಿಯ ವಿಂಗಡನೆಯಾಗಬೇಕೆಂದು ಆ ಭಾಗದ ಜನರು ಒತ್ತಾಯಿಸಿದ್ದರು. ಇದಕ್ಕೆ ಪೂರಕವಾಗಿ ಇವತ್ತಿನ ದಿವಸ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕಕ್ಕೆ ತಿದ್ದುಪಡಿಯನ್ನು ತರುವುದಕ್ಕಾಗಿ ವಿಧೇಯಕವನ್ನು ಮಂಡಿಸಲಾಗಿದೆ. ಈ ತಿದ್ದುಪಡಿಯನ್ನು ಅಂಗೀಕರಿಸಬೇಕೆಂದು ನಾನು ಕೋರುತ್ತೇನೆ. ಆ ಭಾಗದ ರಾಯಚೂರು ವಿಶ್ವವಿದ್ಯಾನಿಲಯದಲ್ಲಿ 250 ಎಕರೆ ವಿಸ್ತೀರ್ಣವನ್ನೊಳಗೊಂಡ ಸ್ನಾತಕೋತ್ತರ ಸೆಂಟರ್‌ನ ಬಹಳ ದೊಡ್ಡದಾದ ಹಾಗೂ ಉತ್ತಮವಾದ ಕ್ಯಾಂಪಸ್ ಇದೆ. ವಿಶ್ವವಿದ್ಯಾನಿಲಯವನ್ನು ಮಾಡುವ ಎಲ್ಲಾ ವ್ಯವಸ್ಥೆಗಳು ಸಿದ್ಧ ಇವೆ. ನಾನು ಸ್ವತಃ ರಾಯಚೂರು ಸ್ನಾತಕೋತ್ತರ ಕ್ಯಾಂಪಸ್‌ಗೆ ಭೇಟಿ ನೀಡಿದ್ದೇನೆ. ಅಂದರೆ, ಉದ್ದೇಶಿತ ವಿಶ್ವವಿದ್ಯಾನಿಲಯ ಮಾಡುವ ಸ್ಥಳಕ್ಕೆ ನಾನು ಭೇಟಿ ನೀಡಿದ್ದೆನು.

**(ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(678)/23-3-2020/5-10/ಎಲ್‌ಎಂ/ಎಕೆ

**Dr. C.N. ASHWATH NARAYANA (contd.):** Infrastructure ready ಇದೆ. ಈ ವಿಧೇಯಕಕ್ಕೆ ಅನುಮೋದನೆಯನ್ನು ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ಎಸ್.ಬೋಸ್‌ರಾಜು:-** ಮಾನ್ಯ ಸಭಾಪತಿಗಳೆ, ಸದರಿ ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಬೇಕು ಎನ್ನುವಂತಹ ವರದಿಯನ್ನು ಡಾ: ನಂಜುಂಡಪ್ಪನವರು ತಮ್ಮ ವರದಿಯಲ್ಲಿ ತಿಳಿಸಿದ್ದರು. ಅಂದಿನಿಂದಲೂ ಅದರ ಪ್ರಯತ್ನ ನಡೆಯುತ್ತಲೇ ಇದೆ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು 2017-18ನೇ ಸಾಲಿನ ಬಜೆಟ್‌ನಲ್ಲಿ ಸದರಿ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಬೇಕು ಎಂದು ಈ ವಿಧೇಯಕವನ್ನು ತಂದಿದ್ದರು. ಆದರೆ ಅದು ಮಾನ್ಯ ರಾಜ್ಯಪಾಲರ ಹತ್ತಿರ ಹೋಗಿ ಕಾರಣಾಂತರಗಳಿಂದ ವಾಪಸ್ ಬಂದಿತ್ತು. ಹಿಂದಿನ ಸರ್ಕಾರದಲ್ಲಿ ordinance pass ಮಾಡಲಾಗಿತ್ತು. ಅದು ಕಾರಣಾಂತರಗಳಿಂದ ವಾಪಸ್ ಬಂತು. ಈಗ ಈ ಸರ್ಕಾರ ಸದರಿ ವಿಧೇಯಕವನ್ನು ತಂದಿದೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಮಾನ್ಯ ಸಚಿವರು ಹೇಳಿದ ಹಾಗೆ ಸದರಿ ವಿಧೇಯಕವನ್ನು ಸ್ಥಾಪನೆ ಮಾಡಲು 250 ಎಕರೆ ಜಮೀನನ್ನು ರಲ್ಲಿ ಸರ್ಕಾರ ಗುರುತಿಸಿ ಸರ್ಕಾರ ಆದೇಶ ಮಾಡಿದೆ. ED 236 UGV 2016 ರ ಅಡಿಯಲ್ಲಿ ದಿನಾಂಕ: 6-3-2019ರಲ್ಲಿ 200 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಇದೇ ಶೈಕ್ಷಣಿಕ ವರ್ಷದಲ್ಲಿಯೇ ಈ ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಈಗಾಗಲೇ ಮೂಲಭೂತ ಸೌಲಭ್ಯಗಳ ಲಭ್ಯತೆ ಇದೆ. ಅದಕ್ಕೆ ಬೇಕಾದಂತಹ ಅನುದಾನವನ್ನು ಸಹ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ರಾಜ್ಯಪಾಲರು ಅನುಮತಿಯನ್ನು ಏಕೆ ಕೊಡಲಿಲ್ಲ ಎನ್ನುವುದನ್ನು ಸ್ವಲ್ಪ ತಿಳಿಸಬೇಕು.

**ಶ್ರೀ ಶರಣಪ್ಪ ಮಟ್ಟೂರು:-** ಮಾನ್ಯ ಸಭಾಪತಿಗಳೆ, ಡಾ: ನಂಜುಂಡಪ್ಪ ವರದಿಯನ್ನು ಆಧಾರಿಸಿ ರಾಯಚೂರು, ಬೀದರ್ ಮತ್ತು ವಿಶೇಷವಾಗಿ ಗುಲ್ಬರ್ಗಾ ವಿಭಾಗದ ಎಲ್ಲಾ ಜಿಲ್ಲೆಗಳನ್ನು ಇದರಲ್ಲಿ ಸೇರಿಸಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡುತ್ತಿರುವುದು ಒಳ್ಳೆಯ ಕೆಲಸವಾಗಿದೆ. ಇಲ್ಲಿ work loadಕೂಡಾ ತುಂಬಾ ಇದೆ. ಇಲ್ಲಿ divide ಮಾಡಿದ್ದಾರೆ. ನಮ್ಮಲ್ಲಿ GRE ಕೂಡಾ ಕಡಿಮೆ ಇದೆ. ಇಲ್ಲಿ 16 ಇದ್ದರೆ ಅಲ್ಲಿ ಆರುವರೆ ಇದೆ. ಮಾನ್ಯ ಮಂತ್ರಿಗಳಿಗೆ ಅದರ ಬಗ್ಗೆ ತುಂಬಾ ಅರಿವು ಇದೆ ಎಂದು ಭಾವಿಸುತ್ತೇನೆ. ಮಾನ್ಯ ಮಂತ್ರಿಗಳು ಅಲ್ಲಿಗೆ ಹೋಗಿ ವೀಕ್ಷಣೆ ಮಾಡಿ ಬಂದಿದ್ದಾರೆ. ಅಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ಒದಗಿಸುವಲ್ಲಿ ಇದರಿಂದ ಆ ಭಾಗದವರಿಗೆ ಅನುಕೂಲವಾಗಿದೆ. ಆ ಭಾಗದ ಅಸಮತೋಲನವನ್ನು ಹೋಗಲಾಡಿಸಲು ಒಳ್ಳೆಯ ಪ್ರಯತ್ನವನ್ನು ಮಾಡಿದ್ದಾರೆ. ಈ ಹಿಂದೆ ಈ

proposal ನ್ನು ಮಾನ್ಯ ರಾಜ್ಯಪಾಲರಿಗೆ ಕಳುಹಿಸಿದಾಗ ಅದು technical ground ಮೇಲೆ ವಾಪಸ್ ಬಂತು. ತಡವಾದರೂ ಪರವಾಗಿಲ್ಲ ಈಗ ತಾವು ಈ ವಿಧೇಯಕವನ್ನು ತಂದು ನಮ್ಮ ಭಾಗದಲ್ಲಿ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡುತ್ತಿರುವುದಕ್ಕೆ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ, ಮತ್ತು ವಿಶೇಷವಾಗಿ ರಾಯಚೂರ ಮತ್ತು ಯಾದಗಿರಿ ಜಿಲ್ಲೆಯ ಜನತೆಯ ಪರವಾಗಿ ಅಭಿನಂದಿಸುತ್ತೇನೆ. ಈ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಸಂವಿಧಾನ Article 371(ಜೆ) ಅನ್ವಯವಾಗುವಂತಹ ಕಲ್ಯಾಣ ಕರ್ನಾಟಕದ ರಾಯಚೂರು ಮತ್ತು ಯಾದಗಿರಿಯಲ್ಲಿ ಈ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡುವಂತಹ ನಿರ್ಣಯ ಸ್ವಾಗತಾರ್ಹವಾದದು. ಆ ಭಾಗ ಶೈಕ್ಷಣಿಕವಾಗಿ ಮುಂದುವರೆಯಬೇಕು. ಬಹಳ ದಿನಗಳಿಂದ ನೆನೆಗುದಿಗೆ ಬಿದ್ದಿರುವಂತಹ ವಿಧೇಯಕ ಇಂದು ಬಂದಿರುವುದರಿಂದ ನನಗೆ ತುಂಬಾ ಖುಷಿಯಾಗಿದೆ. ಇದರ ಜೊತೆಗೆ ನನ್ನ ಒಂದೇ ಒಂದು ಸಲಹೆ ಎಂದರೆ, ವಿಶ್ವದಲ್ಲಿರುವಂತಹ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ best 200 universities ಗಳಲ್ಲಿ ಬರುವಂತೆ ಮಾಡಬೇಕು ಎನ್ನುವುದು ನನ್ನ ಅಭಿಪ್ರಾಯ. ಜಿಲ್ಲೆಗ ಒಂದು ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಲಾಗುತ್ತದೆ ಎಂದು ಸರ್ಕಾರ ಹೇಳುತ್ತಿದೆ, ನಮ್ಮ ಭಾರತ ದೇಶದಲ್ಲಿರುವ ವಿಶ್ವವಿದ್ಯಾಲಯಗಳಲ್ಲಿ ಒಂದೂ ವಿಶ್ವವಿದ್ಯಾನಿಲಯವು ಆ best 200 universities ಒಳಗೆ ಬರುವುದಿಲ್ಲ. ಅದೇ ನನಗೆ ತುಂಬಾ ನೋವಿನ ಸಂಗತಿಯಾಗಿದೆ. ಜಿಲ್ಲೆಗೆ ಒಂದು ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡುವುದರ ಜೊತೆಗೆ world's best 200 universities ನಲ್ಲಿ ನಮ್ಮ ವಿಶ್ವವಿದ್ಯಾಲಯಗಳು ಬರುವಂತೆ ಮಾಡಿ. The Indian Institute of Science is near that mark. 200 ಅತ್ಯುತ್ತಮ ವಿಶ್ವವಿದ್ಯಾಲಯಗಳಲ್ಲಿ ಅದು ಬರುವುದಿಲ್ಲ, ಆದರೆ ಸಮೀಪದಲ್ಲಿ ಬರುತ್ತಿದೆ. ಇಂತಹ ಮಹತ್ವದ ವಿಶ್ವವಿದ್ಯಾನಿಲಯಗಳು ಆಗಬೇಕು. Vice-Chancellor ಕೂಡಾ ಅಷ್ಟೇ ಅತ್ಯುತ್ತಮವಾಗಿ ಕೆಲಸವನ್ನು ಮಾಡಬೇಕು. ನಾವೆಲ್ಲರೂ ಕರ್ನಾಟಕದ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು. ನಾವು ಓದುವಂತಹ ಸಂದರ್ಭದಲ್ಲಿ ಡಿ.ಸಿ. ಪಾವಟೆ ಎಂದು ಇದ್ದರು. Wrangler D.C. Pavate ಅವರನ್ನು ಮುಂದೆ ಪಂಜಾಬ್ ರಾಜ್ಯದ ರಾಜ್ಯಪಾಲರನ್ನಾಗಿ ಮಾಡಿದರು. ಅವರು ಜೀವಂತ ಇರುವಾಗಲೇ ಅವರ ಮುತ್ಥಳಿಯನ್ನು ಕರ್ನಾಟಕ ವಿಶ್ವವಿದ್ಯಾನಿಲಯದ ಆವರಣದಲ್ಲಿ ಸ್ಥಾಪನೆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದಾರೆ. ಅವರು ವಿಶ್ವವಿದ್ಯಾನಿಲಯವನ್ನು ಅಭಿವೃದ್ಧಿಗೊಳಿಸಿ ಎತ್ತರದ ಮಟ್ಟಕ್ಕೆ ತಂದರು. ಶಿಕ್ಷಣದ ವ್ಯವಸ್ಥೆಯಲ್ಲಿ ಸಾಕಷ್ಟು ಸುಧಾರಣೆಗಳನ್ನು ತಂದರು. ಇಂತಹ ಸಮರ್ಥ Vice-Chancellor ರನ್ನು ನಾವು ಯಾರನ್ನು ನೋಡಲಿಲ್ಲ, ಬೇರೆಯವರ ಹೆಸರನ್ನು ಕೇಳಲಿಲ್ಲ. ಕರ್ನಾಟಕ ವಿಶ್ವವಿದ್ಯಾನಿಲಯ ಎಂದರೆ ಮೊದಲು D.C. Pavate ಹೆಸರನ್ನು ಕೇಳುತ್ತಿದ್ದೆವು. ಅವರಲ್ಲಿ ಇರುವ ವಿದ್ವತನ್ನು ನೋಡಿ ಅವರಿಗೆ political background ಏನು ಇರಲಿಲ್ಲ, ಅದರೂ ಅವರನ್ನು ಪಂಜಾಬ್ ರಾಜ್ಯದ ರಾಜ್ಯಪಾಲರನ್ನಾಗಿ ಮಾಡಿದರು. ಈಗಿನ ವಿಶ್ವವಿದ್ಯಾನಿಲಯಗಳ standard ಹೆಚ್ಚಾಗಬೇಕು. ಮಾನ್ಯ ಸಚಿವರು  ಸಾಕಷ್ಟು ತಿಳಿದುಕೊಂಡಿದ್ದೀರಿ, ಸಾಕಷ್ಟು ಓದಿದ್ದೀರಿ, ಇದರಲ್ಲಿ ಆಸಕ್ತಿವಹಿಸುತ್ತೀರಿ ಎಂದು ಭಾವಿಸುತ್ತೇನೆ. ಜಗತ್ತಿನ ಅತ್ಯುತ್ತಮ 200 ವಿಶ್ವವಿದ್ಯಾನಿಲಯಗಳಲ್ಲಿ ನಮ್ಮ ಕರ್ನಾಟಕದ ಒಂದು ಅಥವಾ ಎರಡು ವಿಶ್ವವಿದ್ಯಾನಿಲಯಗಳು ಬರುವಂತೆ ನಿಮ್ಮ ಕಾಲದಲ್ಲಿ ಮಾಡಿ. ಇತಿಹಾಸದ ಪುಟದಲ್ಲಿ ನಿಮ್ಮ ಹೆಸರು ಬರುತ್ತದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಗಳೆ, ಹೊಸ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುತ್ತಿರುವುದಕ್ಕೆ ನಮದೇನು ಅಭ್ಯಂತರ ಇಲ್ಲ. ಆದರೆ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಲಾಗುತ್ತದೆ. ಆದರೆ ಅಲ್ಲಿ ಮೂಲಭೂತ ಸೌಲಭ್ಯಗಳು ಇರುವುದಿಲ್ಲ, ಸಿಬ್ಬಂದಿಗಳು ಇರುವುದಿಲ್ಲ. ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿದರು. ಅದು ಪ್ರಾರಂಭವಾಗಿ 20 ವರ್ಷಗಳಾದವು. ಆದರೆ ಅದು ಅವತ್ತು ಯಾವ ಸ್ಥಿತಿಯಲ್ಲಿ ಇತ್ತು ಇವತ್ತು ಅದೇ ಸ್ಥಿತಿಯಲ್ಲಿಯೇ ಇದೆ. ಅಲ್ಲಿ ಖಾಯಂ ಉಪನ್ಯಾಸಕರು ಇಲ್ಲ. ಇನ್ನು temporary ಉಪನ್ಯಾಸಕರುಗಳೆ ಅಲ್ಲಿ ಇದ್ದಾರೆ. ಮತ್ತೆ ಏಕೆ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡುತ್ತೀರಿ? ನಿಮ್ಮ ಸರ್ಕಾರ ಎಂದು ಹೇಳುತ್ತಿಲ್ಲ, ಯಾವ ಸರ್ಕಾರ ಬಂದರೂ ಇದೇ ಗತಿ. ಯಾರಾದರೊಬ್ಬರನ್ನು Vice-Chancellor ಮಾಡಲು ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಲಾಗುತ್ತಿದೆ. ಮುಂದಿನ ಸಾರಿ ಯಾವ-ಯಾವ ವಿಶ್ವವಿದ್ಯಾನಿಲಯಗಳಲ್ಲಿ ಎಷ್ಟು ಸಿಬ್ಬಂದಿಗಳು ಇದ್ದಾರೆ, ಇನ್ನು ಎಷ್ಟು ಹುದ್ದೆಗಳು ಖಾಲಿ  ಇವೆ, ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ ಎನ್ನುವ ಎಲ್ಲಾ ಮಾಹಿತಿಯನ್ನು ಒದಗಿಸಿ. ಅತ್ಯುತ್ತಮ 200 ವಿಶ್ವವಿದ್ಯಾನಿಲಯಗಳಲ್ಲಿ ನಮ್ಮ ವಿಶ್ವವಿದ್ಯಾನಿಲಯಗಳು ಬರಬೇಕು ಎಂದು ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಹೇಳುತ್ತಾರೆ. ಆದರೆ ನಾವು ಯಾರು ನಮ್ಮ ಕಣ್ಣಿನಿಂದ ಅದನ್ನು ನೋಡುವುದಿಲ್ಲ. ಬರಲು ಸಾಧ್ಯವೆ ಇಲ್ಲ, ಬೇಕಾದರೆ ನಾನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರೆದುಕೊಡುತ್ತೇನೆ. ಪಶುಸಂಗೋಪನಾ ವಿಶ್ವವಿದ್ಯಾನಿಲಯವನ್ನು ರಚನೆ ಮಾಡಲಾಯಿತು. ಆದರೆ Animal Husbandry UniversityVice-Chancellor ವಾರದಲ್ಲಿ ಒಂದು ದಿನ ಅಲ್ಲಿ ಇರುತ್ತಾರೆ. ಉಳಿದ ದಿನ ಬೆಂಗಳೂರಿನಲ್ಲಿಯೇ ಇರುತ್ತಾರೆ. ಸ್ಥಳೀಯರನ್ನು ನೀವು Vice-Chancellor ಆಗಿ ನೇಮಕ ಮಾಡುವುದಿಲ್ಲ. ಬರಿ ಬೆಂಗಳೂರು–ಮೈಸೂರಿನವರನ್ನು ನೇಮಕ ಮಾಡುತ್ತೀರಿ. ಅವರು ಶುಕ್ರವಾರ ಅಲ್ಲಿಂದ ಬಂದು ಮತ್ತೆ ಬುಧುವಾರ ಅಲ್ಲಿಗೆ ಹೋಗುತ್ತಾರೆ. ಹೀಗೆ ಮಾಡಿದರೆ ವಿಶ್ವವಿದ್ಯಾನಿಲಯಗಳು ಹೇಗೆ ಉದ್ಧಾರವಾಗುತ್ತವೆ? Vice-Chancellor ಹುದ್ದೆಯನ್ನು ಹರಾಜು ಮಾಡಲಾಗುತ್ತಿದೆ. ಹಣ ಕೊಡದೆ ಯಾರು Vice-Chancellor ಆಗುವುದಿಲ್ಲ. 99% ಭ್ರಷ್ಟಾಚಾರ ನಡೆಯುತ್ತಿದೆ. ಇಂಥವರು ಇದ್ದ ಮೇಲೆ ವಿಶ್ವವಿದ್ಯಾನಿಲಯಗಳು ಹೇಗೆ ಸುಧಾರಣೆಯಾಗುತ್ತವೆ. ನಾನು ಈಗ ಹೇಳುತ್ತಿರುವುದು ಬಹಳ ಮುಖ್ಯವಾದ ವಿಚಾರ. ಸರ್ಕಾರ ವಿಶ್ವವಿದ್ಯಾನಿಲಯಗಳನ್ನು ರಚನೆ ಮಾಡುವುದಿದ್ದರೆ ಮೊದಲು ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಮಾಡಿ, Vice-Chancellor selection ಪದ್ದತಿಯನ್ನೇ ಬೇರೆ ಮಾಡಬೇಕು. ಇಲ್ಲದಿದ್ದರೆ ನೀವು ಏನು ಮಾಡಿದರು ಏನು ಆಗುವುದಿಲ್ಲ. ಇವು ಕೂಡಾ ಪ್ರಾಥಮಿಕ ಕನ್ನಡ ಶಾಲೆಗಳ ಸ್ಥಿತಿಗೆ ಬರುತ್ತವೆ. ಜಿಲ್ಲೆಗೊಂದು ವಿಶ್ವವಿದ್ಯಾನಿಲಯವನ್ನು ರಚನೆ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆ. ಅದು ಸರಿ. ಆದರೆ ಅದಕ್ಕೆ ಒಂದು standard ಇರಬೇಕು. ವಿಶ್ವವಿದ್ಯಾನಿಲಯ standard ಇರುವುದಿಲ್ಲ, lecturers ಇರುವುದಿಲ್ಲ, Vice-Chancellor ಇರುವುದಿಲ್ಲ, In-Charge Registrar ಇರುವುದಿಲ್ಲ. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ 10 ತಿಂಗಳಿಂದ Vice-Chancellor ಇಲ್ಲ. ಅಲ್ಲಿ ಇವತ್ತು ಒಬ್ಬರು Registrar ಇರುತ್ತಾರೆ, ನಾಳೆ ಇನ್ನೊಬ್ಬರು ಇರುತ್ತಾರೆ. ವಿಶ್ವವಿದ್ಯಾನಿಲಯವನ್ನು ರಚನೆ ಮಾಡಿದ ಮೇಲೆ ಮಕ್ಕಳು ಓದಲು ಅಲ್ಲಿ ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಬೇಕು. ನಾವು ಏನಾದರೂ ಹೇಳಿದರೆ, ಅದೇ ಒಂದು ದೊಡ್ಡ issue ಆಗುತ್ತದೆ. ರಾಜ್ಯದಲ್ಲಿ ವಿಶ್ವವಿದ್ಯಾನಿಲಯಗಳು ಉತ್ತಮ ಮಟ್ಟದವು ಆಗಬೇಕು ಎಂದರೆ, Vice-Chancellor selection ಪದ್ದತಿಯಲ್ಲಿ ಬದಲಾವಣೆಯಾಗಬೇಕು. Registrar ಅಯ್ಕೆ ಪದ್ಧತಿ ಬೇರೆಯಾಗಬೇಕು. ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಒಬ್ಬರನ್ನು Vice-Chancellor ಮಾಡಲು ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಲಾಗಿದೆ. ಅದರ ಹೆಸರನ್ನು

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳಬೇಕು ಎಂದರೆ ಹೇಳುತ್ತೇನೆ. ದಯಮಾಡಿ ಇದರ ಬಗ್ಗೆ ಚರ್ಚೆ ಮಾಡಿ, ನಮ್ಮನ್ನು ಕರೆಯಿರಿ ನಾವು ಸಲಹೆಗಳನ್ನು ಕೊಡುತ್ತೇವೆ. ಏನಾದರೂ ಒಳ್ಳೆಯದಾಗುವಂತೆ ಮಾಡಿ. ಇಲ್ಲದಿದ್ದರೆ ಎಲ್ಲಾ ವಿಶ್ವವಿದ್ಯಾನಿಲಯಗಳ Vice-Chancellor ಹುದ್ದೆ ಹರಾಜು ಆಗುತ್ತಿದೆ. ಇದು ಮಕ್ಕಳಿಗೆ ಶಿಕ್ಷಣ ಕೊಡುವಂತಹ ವಿಚಾರ. ಮಕ್ಕಳಿಗೆ ಒಳ್ಳೆಯ ಶಿಕ್ಷಣವನ್ನು ಒದಗಿಸಬೇಕು ಎಂದರೆ, ಏನೇನು ಇರಬೇಕು ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ. ವಿಶ್ವವಿದ್ಯಾನಿಲಯಗಳ ಪರಿಸ್ಥಿತಿಯನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ಒಂದೊಂದು ವಿಶ್ವವಿದ್ಯಾನಿಲಯದಲ್ಲಿ 10 ತಿಂಗಳಾದರೂ Vice-Chancellor, Registrar ಇಲ್ಲ. ಏನು ಸುಧಾರಣೆ ಮಾಡಲು ಸಾಧ್ಯ. ಆದುದರಿಂದ ಅಲ್ಲಿರುವಂತಹ ಸ್ಥಳೀಯರನ್ನು Vice-Chancellor ಮಾಡಬೇಕು. ಇಲ್ಲಿಯವರನ್ನು Vice-Chancellor ಮಾಡಿ ಅಲ್ಲಿಗೆ ಹಾಕುತ್ತಾರೆ. ಆದರೆ ಅವರು ಅಲ್ಲಿ ಇರುವುದೇ ಇಲ್ಲ. ಯಾವಾಗಲೂ ಬೆಂಗಳೂರಿನಲ್ಲಿಯೇ ಇರುತ್ತಾರೆ. ಬೀದರ್ ಜಿಲ್ಲೆಯಲ್ಲಿರುವ ವಿಶ್ವವಿದ್ಯಾನಿಲಯದ Vice-Chancellor ಇರುವುದೇ ಇಲ್ಲ. Vice-Chancellor selection ಪದ್ಧತಿಯನ್ನು ಮೊದಲು ಬದಲಾವಣೆ ಮಾಡಿ.

(ಮುಂದು)

**(679)23–03–2020(05–20)ಬಿಎಸ್‌ಡಿ–ಆರ್‌ಎನ್**
**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಮುಂದು)**

ಯಾವ ಸಮಿತಿ ಹಾಕಿಸಿಕೊಂಡು ಬರಬೇಕು, ಏನು ಮಾಡಬೇಕು ಎಂಬುದನ್ನು ಮೊದಲೇ ಮಾಡುತ್ತಾರೆ. ಈ ಪದ್ಧತಿ change ಮಾಡದೇ university ಗಳನ್ನು standard ಮಾಡುವುದಕ್ಕೆ ಸಾಧ್ಯವೇ ಇಲ್ಲ ಎಂಬುದು ನನ್ನ ಅಭಿಪ್ರಾಯ.

**ಸಭಾಪತಿಯವರು:–** ವಿತ್ತೀಯ ಕಾರ್ಯಕಲಾಪ ಪ್ರಾರಂಭ ಆಗಬೇಕಾಗಿದೆ, ಇದರ ಬಗ್ಗೆ ಇನ್ನೂ 20 ಜನ ಮಾತನಾಡಲು ಪ್ರಾರಂಭ ಮಾಡುತ್ತಾರೆ.

**ಶ್ರೀ ಎನ್.ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೇ, ಹಿರಿಯರಾದ ಮಾನ್ಯ ಹೊರಟ್ಟಿಯವರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದು, ರಾಯಚೂರಿನಲ್ಲಿ ಸ್ಪೆಷಲ್ ಆಫೀಸರ್ ಅನ್ನು ಹಾಕಿ ಎರಡು ವರ್ಷಗಳು ಕಳೆದಿದೆ. ಅವರು ಎಲ್ಲಾ exercise ಮಾಡಿದ್ದಾರೆ. ಮೊನ್ನೆ ಹೋದಾಗ ಅಲ್ಲಿ ಬಹುಶಃ ಮಾನ್ಯ ಸದಸ್ಯರಿಗೆ ಸಿಕ್ಕಿರಬಹುದು. ಕುಲಪತಿಗಳನ್ನು ಹಾಕುವವರೆಗೆ ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

establishment ಆಗುವವರೆಗೂ ದಯವಿಟ್ಟು ಮುಂದುವರೆಸಬೇಕೆಂದು ಮಾನ್ಯ ಸಭಾಪತಿಯವರ ಮೂಲಕ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್ (ಪ್ರತಿಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಹೊರಟ್ಟಿಯವರು ಹೇಳಿದಂತೆ Vice Chancellor ಗಳಿಗೆguts ಇರಬೇಕು. ನಮ್ಮ ವಿದ್ಯಾಸಂಸ್ಥೆಯ Annual Day ಗೆ ಒಬ್ಬ Vice Chancellor ಅನ್ನು ಕರೆಸಿದ್ದೆನು. ಅವರು ನಮ್ಮ ಶಾಲೆಯ atmosphere ಅನ್ನು ನೋಡಿ, ಅವರ university ಗಿಂತ ಹತ್ತು ಪಟ್ಟು ಚೆನ್ನಾಗಿದೆ ಎಂದು ಹೇಳಿದರು. Women University Vice Chancellor ಅನ್ನು ಕರೆಸಿದ್ದೆನು. ಹಿಂದಿನ ಕರ್ನಾಟಕ University Vice-Chancellor, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದವರು ನನ್ನನ್ನು ಗೆಸ್ಟ್ ಆಗಿ ಕರೆದಿದ್ದ ಸಂದರ್ಭದಲ್ಲಿ *D. C. Pavate*ರವರು ಅವರ ಕುರ್ಚಿಯಲ್ಲಿಯೇ ಕುಳಿತುಕೊಳ್ಳಿ ಎಂದು ತೋರಿಸಿದರು. ಆಗ ನಾನು ಬೇರೆ ಯಾರ ಕುರ್ಚಿಯಲ್ಲಿಯೂ ಕೂರುವುದಿಲ್ಲ. Primary School ಗೆ ಹೋದರೂ teacher ಕುರ್ಚಿಯಲ್ಲಿ ನಾನು ಕೂರುವುದಿಲ್ಲ. I will maintain that dignity and decorum of a teacher. Vice-Chancellor ಆದ ನೀವು ಈ ರೀತಿ ಯಾರಿಗೋoffer ಮಾಡುವುದೆ, ಕುರ್ಚಿಯಲ್ಲಿ ಕೂರಲು ಹೇಳುತ್ತಿದ್ದೀರಿ ಎಂದು ಹೇಳಿದೆ. ಆಗ ಅವರು ಇಲ್ಲ,

**(ಈ ಹಂತದಲ್ಲಿ ಮಾನ್ಯ ಉಪಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ನಮ್ಮ ಕಾರ್ಯದರ್ಶಿಗಳು ಬಂದು ನಮ್ಮ ಕುರ್ಚಿಯಲ್ಲಿಯೇ ಕುಳಿತುಕೊಳ್ಳುತ್ತಾರೆ ಎಂದು ಹೇಳಿದರು. ಆಗ ನಾನು ಇನ್ನೊಮ್ಮೆ ಕುಳಿತುಕೊಂಡಾಗ ಎಬ್ಬಿಸಿರಿ ಎಂದು ಹೇಳಿದೆ. ಒಂದು ಘಟನೆ ಹೇಳಬೇಕೆಂದರೆ ಆಗಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ನಿಜಲಿಂಗಪ್ಪನವರು ಧಾರವಾಡಕ್ಕೆ ಬರುವ ಕಾರ್ಯಕ್ರಮ ಇತ್ತು. ಅವರು ಶ್ರೀ ಡಿ.ಸಿ.ಪವಟೆ ರವರ ಕೊಠಡಿಯಲ್ಲಿ ಒಂದು ಸಭೆ ತೆಗೆದುಕೊಳ್ಳುವ ಬಗ್ಗೆ ನಿರ್ಧಾರವಾಗಿತ್ತು. ರಾಜ್ಯದ ಮುಖ್ಯಮಂತ್ರಿಗಳು ಬರುವುದರಿಂದ Syndicate Hall ನಲ್ಲಿ ಒಂದು ಸಭೆ ನಡೆಸುತ್ತಾರೆ ಎಂದು ಡಿ.ಸಿ. ರವರು ಹೇಳಿದಾಗ ಪವಟೆರವರು 'Ok, Welcome' ಎಂದು ಹೇಳಿದರಂತೆ. ಆದರೆ ಶ್ರೀ ಪವಟೆ ರವರು ಮುಖ್ಯಮಂತ್ರಿಯವರು ನನ್ನ ಕುಳಿತುಕೊಳ್ಳಲು ಕೊಡುವುದಿಲ್ಲ ಎಂದು ಹೇಳಿದರಂತೆ. ಆಗ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರು ನನ್ನ ಕುರ್ಚಿಯ ಪಕ್ಕದಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗೆ ಕುಳಿತುಕೊಳ್ಳಲು ರತ್ನಖಚಿತ ಸಿಂಹಾಸನವನ್ನು ತಯಾರು ಮಾಡಿಕೊಡಲಿ, ಆದರೆ ನನ್ನ ಕುರ್ಚಿ ಕೊಡುವುದಿಲ್ಲ. District Commissioner, you bear it in mind, I will not allow the Chief Minister to sit on my chair. ಈ ಉದಾಹರಣೆಯನ್ನು ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ವಿ.ಸಿ.ಗೆ ಹೇಳಿ ಬಂದೆನು. ಆ ರೀತಿ guts ಹಾಗೂ capable ಇರುವಂತಹ, ಶೈಕ್ಷಣಿಕ ಮಟ್ಟವನ್ನು ಹೆಚ್ಚಿಸುವಂತಹ ಸಮರ್ಥರನ್ನು ನೇಮಿಸಬೇಕು. ಎಲ್ಲೋ quota system ನಲ್ಲಿ Vice-Chancellor ಅನ್ನು ನೇಮಿಸುವುದು ಆಗಬಾರದು. ಅವರು ಬಂದಾಗ ಅವರು ನೇಮಿಸುವುದು, ನಾವು ಬಂದಾಗ ನಾವು ನೇಮಿಸುವುದು ಆಗಬಾರದು. ಮತ್ತೆ ಯಾರು ಬರುತ್ತಾರೋ, ಅವರುಗಳು ಅವರಿಗೆ ಬೇಕಾದಂತೆ ಮಾಡಿದರೆ ವಿಶ್ವವಿದ್ಯಾಲಯದ ಮಟ್ಟವು ಕಡಿಮೆಯಾಗಿ ಶೈಕ್ಷಣಿಕ ಮಟ್ಟ ಹಾಳಾಗಿ ಹೋಗುತ್ತದೆ. ಆದ್ದರಿಂದ ವಿಶ್ವದ ಸರ್ವಶ್ರೇಷ್ಠ 200 ವಿಶ್ವವಿದ್ಯಾಲಯಗಳಲ್ಲಿ ನಮ್ಮ ರಾಜ್ಯದ ವಿಶ್ವವಿದ್ಯಾಲಯವು ಬರುವಂತೆ ಪ್ರಯತ್ನ ಮಾಡಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಸರ್ಕಾರವು ಮಹಿಳಾ ವಿಶ್ವವಿದ್ಯಾಲಯದ ಬಗ್ಗೆ ಉತ್ತರವನ್ನು ಕೊಟ್ಟಿದ್ದು, 17 ಪ್ರಾಧ್ಯಾಪಕರ ಹುದ್ದೆಗಳಲ್ಲಿ 9 ಹುದ್ದೆಗಳು ಖಾಲಿ ಇವೆ, ಇವು 10 ವರ್ಷಗಳಿಂದ ಖಾಲಿ ಇವೆ. 36 ಸಹ ಪ್ರಾಧ್ಯಾಪಕರ ಹುದ್ದೆಗಳಲ್ಲಿ 15 ಹುದ್ದೆಗಳು ಖಾಲಿ ಇವೆ, 50 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಲ್ಲಿ 11 ಖಾಲಿ ಇವೆ. 103 ಹುದ್ದೆಗಳಲ್ಲಿ 35 ಹುದ್ದೆಗಳು 10 ವರ್ಷಗಳಿಂದ ಖಾಲಿ ಇವೆ. ನಾನು ನಾಲ್ಕು ಬಾರಿ syndicate member ಇದ್ದೇನೆ. ಅಲ್ಲಿ ಒಳಗೆ-ಹೊರಗೆ ನಡೆಯುವುದು ನನಗೆ ಗೊತ್ತಿದೆ. ದಯಮಾಡಿ ನನ್ನ ಕಳಕಳಿ ಅರ್ಥಮಾಡಿಕೊಳ್ಳಬೇಕು. Syndicate ಗೆ nomination ಮಾಡುವುದನ್ನು ತೆಗೆದುಬಿಡಬೇಕು. ಹಿಂದೆ election ಇದ್ದ ರೀತಿ ಮಾಡಬೇಕು. ಆಗ ಓಟು ತೆಗೆದುಕೊಂಡು ಹೋದವರಿಗೆ university ಬಗ್ಗೆ ಕಾಳಜಿ ಇರುತ್ತದೆ. ನಾವು election ಮಾಡಿ, ಓಟು ತೆಗೆದುಕೊಂಡು ಹೋದವರಾಗಿದ್ದು, ನಮಗೆ university ಬಗ್ಗೆ ಕಾಳಜಿ ಇರುತ್ತಿತ್ತು. ಈಗ retired ಆದವರನ್ನು nominate ಮಾಡುತ್ತಾರೆ. ಆತನನ್ನು ನೇಮಿಸಿದವರು ಯಾವ ಕಡೆ ಮುಖ ಮಾಡು ಎನ್ನುತ್ತಾರೋ, ಆ ಕಡೆ ಮುಖ ಮಾಡುತ್ತಾನೆ. ಇವರೆಲ್ಲರೂ Sunflower ಇದ್ದಹಾಗೆ. ಸೂರ್ಯ ಯಾವ ಕಡೆ ಇರುತ್ತಾನೋ, ಆ ಕಡೆ ವಾಲುತ್ತಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇವರಿಂದ ಏನೂ ಆಗುವುದಿಲ್ಲ. ಈ ಹುದ್ದೆಗಳು ಹೇಗೆ ನೇಮಕ ಆಗುತ್ತದೆ ಎಂದು ನನಗೆ ಗೊತ್ತಿದೆ. ಯಾರ್‍ಯಾರು ದುಡ್ಡು ಕೊಟ್ಟಿದ್ದಾರೆ ಎಂದು ಗೊತ್ತಿದೆ. ಅವರು ರೂ.2 ಕೋಟಿ, ರೂ. 3 ಕೋಟಿ ದುಡ್ಡು ಕೊಡುತ್ತಾರೆ. ಅವರು ಶೈಕ್ಷಣಿಕ ವ್ಯವಸ್ಥೆಯನ್ನು ಸುಧಾರಣೆ ಮಾಡದೇ building ಗಳನ್ನು ಕಟ್ಟಿಸುತ್ತಾರೆ. ಅವರು building ಕಟ್ಟಿಸಿ, ದುಡ್ಡು ಹೇಗೆ ತೆಗೆದುಕೊಳ್ಳಬೇಕು ಎಂದು ನೋಡುತ್ತಾರೆ. ಇದು naked truth, ಈ ವಿಚಾರವನ್ನು ಹೇಳುತ್ತಿದ್ದೇನೆ, ಇದನ್ನು ಹೇಳಬೇಕಾಗುತ್ತದೆ. ದಯಮಾಡಿ ಈ ಮಾಹಿತಿ ಇಡೀ ರಾಜ್ಯದ ಜನರಿಗೆ ಹೋಗಬೇಕು. University ಗಳಲ್ಲಿ ಏನು ನಡೆಯುತ್ತದೆ? University standard ಗಳೆಲ್ಲವೂ sub-standard ಆಗಿವೆ. ದಯಮಾಡಿ ಈ university ಗಳನ್ನು ಸರಿಮಾಡಿಬೇಕೆಂದು ನಾನು ವಿನಂತಿ ಮಾಡುತ್ತೇನೆ. University ಪ್ರಾರಂಭವಾದಾಗಿನಿಂದಲೂ ಇಲ್ಲಿಯವರೆಗೂ ಒಬ್ಬರು permanent staff ಇಲ್ಲ. Law University ಪ್ರಾರಂಭವಾಗಿದೆ. ಅಲ್ಲಿ ಒಬ್ಬರು permanent staff ಇಲ್ಲ. Including Registrar ಒಬ್ಬರೂ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಸುಧಾರಣೆ ಮಾಡದಿದ್ದರೆ ಬಹಳ ಕಷ್ಟವಾಗುತ್ತದೆ. ದಯಮಾಡಿ ಆ ಕೆಲಸವನ್ನು ಮಾಡಬೇಕೆಂದು ನನ್ನ ಕಳಕಳಿ.

**ಶ್ರೀ ನಸೀರ್ ಅಹಮದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಮಾತನಾಡಬಹುದೇ ಅಥವಾ ಇಲ್ಲವೇ ಎಂಬ ಅನುಮಾನ ಇತ್ತು. ನಮ್ಮ Opposition Leader ಮತ್ತು ಮಾನ್ಯ ಹೊರಟ್ಟಿಯವರು ಮಾತನಾಡಿದರು. ಈಗ ರಾಯಚೂರಿನಲ್ಲಿ ಒಬ್ಬರು ಶ್ರೀ ಅಸದಿ ಎಂಬ Special Officer ಇದ್ದಾರೆ. ಮೊನ್ನೆ ಅವರನ್ನು ಚೇಂಜ್ ಮಾಡಿದ್ದಾರೆ. ಇಡೀ State ನಲ್ಲಿರುವ University ಯಲ್ಲಿನ Special Officer ಆಗಿದ್ದಾರೆ. He is a renowned Professor. ಅವರು ಸುಮಾರು ಅಲ್ಲಿ ಎಲ್ಲಾ ಸುಧಾರಣೆ ಮಾಡಿದ ಮೇಲೆ sudden ಆಗಿ ಚೇಂಜ್ ಮಾಡಿದ್ದಾರೆ. ಒಂದು ತಿಂಗಳು ಸಹ ಆಗಿಲ್ಲ. ದಯವಿಟ್ಟು ಅದರ ಬಗ್ಗೆ ಗಮನಹರಿಸಬೇಕೆಂದು ಕೋರುತ್ತೇನೆ.

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಹೊರಟ್ಟಿಯವರು ಹೇಳಿದಂತೆ ಸರ್ಕಾರಗಳು ಬಂದಾಗ ಯಾರ ಮರ್ಜಿಗೆ ಮಾಡುತ್ತಾರೋ ಅಥವಾ ಗುಣಮಟ್ಟದ ಶಿಕ್ಷಣ ಕೊಡಬೇಕು ಎಂದು ಮಾಡುತ್ತಾರೋ, ಗೊತ್ತಿಲ್ಲ. ಆದರೆ universities ಮಾತ್ರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಾಸ್ತಿಯಾಗುತ್ತಿವೆ. ನಮ್ಮ ಬೆಂಗಳೂರು university ಯನ್ನು ಮೂರು university ಗಳಾಗಿ ಮಾಡಿ ಮೂರು ವರ್ಷ ಕಳೆದಿದೆ. ಕೋಲಾರದಲ್ಲಿ North University ಇದೆ. ಅಲ್ಲಿ ಒಬ್ಬ lady Finance Officer, 7 ಪೋಸ್ಟ್ ಇನ್‌ಚಾರ್ಜ್ ಇದ್ದಾರೆ. ಒಬ್ಬರು ಕೂಡ regular post ನಲ್ಲಿ ಇಲ್ಲ. ಅಲ್ಲಿ ಕಾಲೇಜಿಗೆ ಜಾಗವನ್ನು ಹುಡುಕಿ, ಮೊನ್ನೆ ಆ ಜಾಗವನ್ನು inspection ಮಾಡಿ, pending ನಲ್ಲಿಟ್ಟಿದ್ದಾರೆ. ಆಮೇಲೆ part-time ನವರನ್ನು ತೆಗೆದುಕೊಂಡು ಅವರಿಗೆ ಸಂಬಳವನ್ನು ಕೊಡುವುದಿಲ್ಲ. ಯಾರನ್ನು ಬೇಕೋ ಅವರನ್ನು ತೆಗೆದುಕೊಂಡು ರೂ.10 ರಿಂದ ರೂ.11 ಸಾವಿರ ಸಂಬಳ ಕೊಟ್ಟು university ನಡೆಸುತ್ತಿದ್ದಾರೆ. ಈ ರೀತಿಯಾದರೆ ಗುಣಮಟ್ಟದ ಶಿಕ್ಷಣ ಸಿಗುತ್ತದೆಯೇ? ಅಲ್ಲಿ ಸಿಬ್ಬಂದಿ ಯಾರೂ ಇಲ್ಲವೇ ಇಲ್ಲ. ನಾನು ಸಿಬ್ಬಂದಿಗೆ ಅನುಮತಿ ಪಡೆಯುವ ಬಗ್ಗೆ Finance Department ಗೆ ಓಡಾಡುತ್ತಿದ್ದೇನೆ, ಆ ಕಡತ ಎರಡು ವರ್ಷಗಳಿಂದ Finance Department ನಲ್ಲಿಯೇ ಇದೆ, ಇದುವರೆಗೂ ಈಚೆಗೆ ಬರಲಿಲ್ಲ. ನಿನ್ನೆ ಕೂಡ ಹೋಗಿ ಬಂದಿದ್ದೇನೆ, ಯಾವ response ಕೂಡ ಕೊಡುವುದಿಲ್ಲ. ಯಾರೂ staff ಇಲ್ಲದೇ university ಗಳನ್ನು ಮಾಡಿಕೊಂಡು ಹೇಗೆ ಉದ್ದಾರ ಮಾಡುವುದು ಎಂಬುದು ಮೊದಲನೆಯದಾಗಿದೆ.

ಇನ್ನು ಬಾಗಲಕೋಟೆಯ Horticulture University ಅವರಿಗೆ ಬರದೇ ಇರಬಹುದು, ಅಲ್ಲಿ ಒಂದೂವರೆ ವರ್ಷದಿಂದ 6 ತಿಂಗಳು Vice-Chancellor in-charge ಇದ್ದರು. 6 ತಿಂಗಳು ಆದಮೇಲೆ ಪ್ರತಿ ತಿಂಗಳು 30 ಅಥವಾ 31 ನೇ ತಾರೀಖು ಆದರೆ ಹೊಸ ಆದೇಶ ಬರುತ್ತದೆ. ಕಾನೂನಿನಲ್ಲಿ ಒಂದೊಂದು ತಿಂಗಳಿಗೆ ಅವಕಾಶ ಇದೆ. ಒಂದು ತಿಂಗಳಿಗೆ ಒಬ್ಬರಂತೆ ಆದೇಶ ಬರುತ್ತದೆ. ಒಂದೂವರೆ ವರ್ಷದಿಂದ ಒಂದೊಂದು ತಿಂಗಳಿಗೆ ಒಬ್ಬೊಬ್ಬರು Vice-Chancellor ಗಳು in-charge ಇರುತ್ತಾರೆ. ಈ University ಕೆಳಗೆ ಹಾವೇರಿಯಲ್ಲಿ Horticulture College ಇದೆ. Horticulture College ಎಂದು ಇದೆ, ಆದರೆ ಹಾವೇರಿಯಲ್ಲಿ ಕಾಲೇಜು ಇಲ್ಲ. ಏಕೆಂದರೆ ಅಲ್ಲಿ Building ಇಲ್ಲ, infrastructure ಇಲ್ಲ, hostel ಇಲ್ಲ, ಏನೇನೂ ಇಲ್ಲ. ಈ ಮಟ್ಟಕ್ಕೆ ಇದೆ. ದಯವಿಟ್ಟು ಇದನ್ನು ಸುಧಾರಣೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವಿಶ್ವವಿದ್ಯಾಲಯದ ವಿಧೇಯಕಕ್ಕೆ ನನ್ನ ಸಹಮತ ಇದೆ, ಆದರೆ ಇದುವರೆಗೂ ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಬಸವರಾಜ ಹೊರಟ್ಟಿಯವರು ಸೇರಿದಂತೆ ಎಲ್ಲರೂ ಹೇಳಿದಂತೆ university ಗಳ ಗುಣಮಟ್ಟದ ಶಿಕ್ಷಣದ ಬಗ್ಗೆ ಮೂರು ದಿವಸ ಈ ಸದನದಲ್ಲಿ ಮಾತನಾಡಬಹುದು. ಅಷ್ಟು ಕೆಟ್ಟು ಹೋಗಿದೆ. ಇದೆಲ್ಲ damage ಸರ್ಕಾರ ಮತ್ತು ಇಲಾಖಾಧಿಕಾರಿಗಳಿಂದ ಆಗಿದೆ. ದಯಮಾಡಿ ಇದರ ಬಗ್ಗೆ ಏನಾದರೂ ಮಾಡಿ ವಿಶ್ವವಿದ್ಯಾಲಯದ ಕಾಯ್ದೆಗೆ ಸಮಗ್ರವಾದ ತಿದ್ದುಪಡಿ ತರಬೇಕು. ಮಾನ್ಯ ಸಚಿವರಿಗೆ ಕಾಳಜಿ ಇದೆ ಎಂಬುದನ್ನು ಒಪ್ಪುತ್ತೇನೆ. ಈ ವಿಶ್ವವಿದ್ಯಾಲಯಗಳಿಗೆ ಒಂದು ಕಾಯಕಲ್ಪ ಮಾಡಬೇಕು.

**ಡಾ|| ಸಿ.ಎನ್. ಅಶ್ವಥನಾರಾಯಣ:-** ಮಾನ್ಯ ಸಭಾಪತಿಯವರೇ, ಎಲ್ಲಾ ಗೌರವಾನ್ವಿತ ಸದಸ್ಯರಲ್ಲಿ ಹೆಚ್ಚಿನ ಸದಸ್ಯರು Teachers' and Graduates' Constituency ಗಳನ್ನು represent ಮಾಡುವವರಾಗಿದ್ದಾರೆ. Upper House ನಲ್ಲಿ ಶಿಕ್ಷಣದ ಬಗ್ಗೆ ಯಾವಾಗಲೂ ವ್ಯಾಪಕವಾಗಿ ಚರ್ಚೆಯಾಗುತ್ತದೆ. ಇವತ್ತು ನಮ್ಮ ಸಮಾಜದಲ್ಲಿ ಯಾವುದೇ ಕ್ಷೇತ್ರ ಇರಬಹುದು, ಒಟ್ಟಾರೆ ಸಮಾಜವು ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕವಾಗಿ ಅಲ್ಲದೇ ಯಾವುದೇ ರೀತಿಯಾದ ಎಲ್ಲಾ ಸಮಸ್ಯೆಗಳಿಗೆ ಏನಾದರೂ ಒಂದು ಪರಿಹಾರ ಕಂಡುಹಿಡಿಯಲು ಶಿಕ್ಷಣ ಕ್ಷೇತ್ರದ ಮೂಲಕ ಮಾತ್ರ ಸಾಧ್ಯವಿರುತ್ತದೆ. ಎಲ್ಲಿಯವರೆಗೂ ಗುಣಮಟ್ಟದ ಶಿಕ್ಷಣವನ್ನು ನಾವು ಸಮಾಜಕ್ಕೆ ಕೊಡುವುದಿಲ್ಲವೋ, ಅಲ್ಲಿಯವರೆಗೂ ಎಷ್ಟೇ ಪ್ರಯತ್ನ ಮಾಡಿ, ಏನೇ ಬಜೆಟ್ ಕೊಟ್ಟು, ಯಾವುದೇ ಕಾರ್ಯಕ್ರಮಗಳನ್ನು ತಂದು ಏನೇಲ್ಲಾ ಕೊಟ್ಟರೂ ಅದು sustain ಆಗಲು ಸಾಧ್ಯವಿಲ್ಲ.

(ಮುಂದು)

(680)/23.03.2020/5.30/ಹೆಚ್‌ವಿ-ಆರ್‌ಎನ್ (ಉಪಸಭಾಪತಿಯವರ ಉಪಸ್ಥಿತಿ)

**ಡಾ||ಸಿ.ಎನ್.ಅಶ್ವಥ್ ನಾರಾಯಣ(ಮುಂದುವರೆದದ್ದು):-**
ಸನ್ಮಾನ್ಯ ಸಭಾಪತಿಯವರೇ, ಸಮಾಜದಲ್ಲಿ ನಿಜವಾಗಿರುವ ಸುಧಾರಣೆಗಳನ್ನು ತರುವುದಕ್ಕೆ ಬೇರೆ ಯಾವುದೇ ಕಾರ್ಯಕ್ರಮಗಳಿಂದ ಸಾಧ್ಯವಾಗುವುದಿಲ್ಲ. ಈ ಕಾರ್ಯಕ್ರಮಗಳು ಕೇವಲ ತಾತ್ಕಾಲಿಕವಾಗಿರುತ್ತವೆ. ಸೂಕ್ತವಾದ, ಅರ್ಥಪೂರ್ಣವಾದ ಮತ್ತು ಉತ್ತಮವಾಗಿರುವ ಶಿಕ್ಷಣವನ್ನು ಕೊಟ್ಟಾಗ ಮಾತ್ರ ಒಂದು ಸದೃಢವಾಗಿರುವ ಸಮಾಜವನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಹಿರಿಯ ಸದಸ್ಯರುಗಳು ನೀಡಿರುವ ಸಲಹೆ ಸೂಚನೆಗಳಂತೆ ಈಗಾಗಲೇ ಪ್ರಾರಂಭಗೊಂಡಿರುವ ವಿಶ್ವವಿದ್ಯಾನಿಲಯಗಳಲ್ಲಿ ಗುಣಮಟ್ಟವನ್ನು ಉತ್ತಮಪಡಿಸಿ, ಗುಣಮಟ್ಟವನ್ನು ಕಾಪಾಡಿ, ವಿಶ್ವವಿದ್ಯಾನಿಲಯಗಳ ಗೌರವನ್ನು ಹೆಚ್ಚಿಸುವಂತಹ ಪ್ರಯತ್ನಗಳನ್ನು ಮಾಡಲಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ, ಮೊದಲು ಉಪ ಕುಲಪತಿಗಳೆಂದರೆ, ಇಡೀ ಜಗತ್ತಿಗೆ ಪ್ರಸಿದ್ಧರಾಗಿರುತ್ತಿದ್ದರು ಒಂದು ರೀತಿ ಲೆಜೆಂಡ್‌ಗಳಂತೆ ಇರುತ್ತಿದ್ದರು. ಸರಸ್ವತಿ ಮಾತೆಯನ್ನೇ ಅವರ ಮೂಲಕ ನೋಡುತ್ತಿದ್ದಂತಹ ಸನ್ನಿವೇಶಗಳು ಇರುತ್ತಿತ್ತು. ಈಗ ಆ ರೀತಿಯ ಯಾವುದೇ ಉದಾಹರಣೆಗಳನ್ನು ನಾವು ಎಲ್ಲಿಯೂ ನೋಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಯಾರನ್ನು ದೂಷಿಸುವುದು, ಏನೆಂದು ದೂಷಿಸುವುದೆಂದು ನನಗೆ ಗೊತ್ತಾಗುತ್ತಿಲ್ಲ. ಮಾನ್ಯ ಹಿರಿಯ ಸದಸ್ಯರುಗಳು ನೀಡಿದಂತಹ ಸಲಹೆಗಳನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ತಂದು ಸುಮಾರು 20 ವರ್ಷಗಳಾಗಿವೆ. ಇದನ್ನು ಸಂಪೂರ್ಣವಾಗಿ ಪುನರ್‌ರಚಿಸಿ, ಉತ್ತಮವಾಗಿರುವ ಕಾಯಿದೆಯನ್ನು ತಂದು ಆ ಮೂಲಕ ಇತ್ತೀಚಿನ ದಿನಗಳಲ್ಲಿ ಉನ್ನತ ಶಿಕ್ಷಣದಲ್ಲಿ ಕಂಡು ಬರುತ್ತಿರುವಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿದುಕೊಳ್ಳುವಂತಹ ಪ್ರಯತ್ನವನ್ನು ಮಾಡಲಾಗುತ್ತದೆ. ಮಾನ್ಯ ಬಸವರಾಜ ಹೊರಟ್ಟಿಯವರು ಹೇಳಿದಂತೆ ಒಂದೊಂದು ವಿಶ್ವವಿದ್ಯಾನಿಲಯಕ್ಕೆ ಒಂದೊಂದು ಸಮಿತಿಯನ್ನು ರಚನೆ ಮಾಡಿ ಉಪ ಕುಲಪತಿಯನ್ನು ನೇಮಕ ಮಾಡುವುದಕ್ಕೆ ಎರಡು ವರ್ಷಗಳ ಕಾಲಾವಧಿಯನ್ನು ತೆಗೆದುಕೊಳ್ಳುವುದರ ಜೊತೆಗೆ ಒಂದು ವರ್ಷ ಗ್ಯಾಪ್ ಕೊಡಲಾಗುತ್ತದೆ. ಇದರಿಂದಾಗಿ ಉಪ ಕುಲಪತಿಗಳ ನೇಮಕಾತಿ ಪ್ರಕ್ರಿಯೆ ವಿಳಂಬಗೊಳುತ್ತಿದೆ. ಇಷ್ಟೊಂದು ವಿಳಂಬ ನೀತಿಯನ್ನು ಅನುಸರಿಸಿ ಉತ್ತಮ ವ್ಯಕ್ತಿಯನ್ನು ಆಯ್ಕೆ ಮಾಡಿಕೊಂಡರೆ ಒಳ್ಳೆಯದಾಗುತ್ತದೆ. ಆದರೆ, ಆ ರೀತಿ ಆಗುತ್ತಿಲ್ಲ. ಇಂತಹ ಸಮಸ್ಯೆಗಳನ್ನು ಪರಿಹರಿಸುವುದಕ್ಕಾಗಿ ಇನ್ನು ಮುಂದೆ ಒಂದು ಪ್ಯಾನಲ್ ಅನ್ನು ರಚನೆ ಮಾಡಿ, ಆ ಮೂಲಕ ಅರ್ಹ ಉಪ ಕುಲಪತಿಗಳನ್ನು ಆಯ್ಕೆ ಮಾಡುವಂತಹ ವಿಧಾನವನ್ನು ಅನುಸರಿಸಲಾಗುತ್ತದೆ. ಪ್ರತಿ ಬಾರಿ ಒಂದೊಂದು ವಿಶ್ವವಿದ್ಯಾನಿಲಯಕ್ಕೆ ಉಪ ಕುಲಪತಿಗಳನ್ನು ನೇಮಕ ಮಾಡಬೇಕಾದರೆ, ಯು.ಜಿ.ಸಿ.ಯಿಂದ ಒಬ್ಬರನ್ನು ಕರೆಸುವುದು, ರಾಜ್ಯ ಸರ್ಕಾರದಿಂದ ಒಬ್ಬ ಪ್ರತಿನಿಧಿಯನ್ನು ಮತ್ತು ವಿಶ್ವವಿದ್ಯಾನಿಲಯದಿಂದ ಒಬ್ಬ ಪ್ರತಿನಿಧಿಯನ್ನು ಕರೆಸುವುದು ಹೀಗೆ ಎಲ್ಲ ಕಡೆಗಳಿಮದ ಪ್ರತಿನಿಧಿಗಳನ್ನು ಕರೆಸಿ, ಸಮಿತಿ ರಚನೆ ಮಾಡಿ ಉಪ ಕುಲಪತಿಗಳ ಆಯ್ಕೆ ಮಾಡುವುದು ಒಂದು ದೊಡ್ಡ ಕೆಲಸವಾಗಿದೆ. ಈ ಪದ್ಧತಿಯನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬದಲಾಯಿಸಿ ಉತ್ತಮವಾಗಿರುವಂತಹ ವ್ಯವಸ್ಥೆಯನ್ನು ತರುವಂತಹ ಪ್ರಯತ್ನವನ್ನು ಈ ತಿದ್ದುಪಡಿ ವಿಧೇಯಕದ ಮೂಲಕ ಮಾಡಲಾಗುತ್ತಿದೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

**ಶ್ರೀ ತಿಪ್ಪಣ್ಣ ಕಮಕನೂರಃ–** ಸನ್ಮಾನ್ಯ ಸಭಾಪತಿಯವರೇ, ಕಳೆದ ಎರಡು ವರ್ಷಗಳಿಂದ ಗುಲ್ಬರ್ಗಾ ವಿಶ್ವವಿದ್ಯಾನಿಲಯಕ್ಕೆ ಉಪ ಕುಲಪತಿಗಳಿಲ್ಲ, ಶೇಕಡಾ 50ರಷ್ಟು ಸಿಬ್ಬಂದಿಗಳಿಲ್ಲ ಮತ್ತು ಲೆಕ್ಚರರ್‌ಗಳು ಇಲ್ಲ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಆದಷ್ಟು ಬೇಗ ಗುಲ್ಬರ್ಗಾ ವಿಶ್ವವಿದ್ಯಾನಿಲಯಕ್ಕೆ ಉಪ ಕುಲಪತಿಗಳನ್ನು ನೇಮಕ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಡಾ||ಸಿ.ಎನ್.ಅಶ್ವಥ್ ನಾರಾಯಣಃ–** ಸನ್ಮಾನ್ಯ ಸಭಾಪತಿಯವರೇ, ಈ ವಿಶ್ವವಿದ್ಯಾನಿಲಯದಲ್ಲಿ ಕಳೆದ 10–12 ತಿಂಗಳುಗಳಿಂದ ಉಪ ಕುಲಪತಿಗಳು ಇಲ್ಲದೇ ಇರುವ ಕಾರಣ ಬಹಳಷ್ಟು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅದನ್ನು ಬೇಗನೆ ಭರ್ತಿ ಮಾಡುವಂತಹ ಕೆಲಸವನ್ನು ಸರ್ಕಾರ ಮಾಡುತ್ತದೆ. ಇದರ ಜೊತೆಗೆ ಗುಣಮಟ್ಟವನ್ನು ಹೆಚ್ಚಿಸುವಂತಹ ಪ್ರಯತ್ನವನ್ನು ಮಾಡಲಾಗುತ್ತದೆ. ಮೊದಲು ಸಾರ್ವಜನಿಕ ವಿಶ್ವವಿದ್ಯಾನಿಲಯಗಳು ಮತ್ತು ಖಾಸಗಿ ವಿಶ್ವವಿದ್ಯಾನಿಲಯಗಳ ನಡುವೆ ಹೋಲಿಕೆ ಮಾಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಆದರೆ, ಇವತ್ತು ಸಾರ್ವಜನಿಕ ವಿಶ್ವವಿದ್ಯಾನಿಲಯಗಳು ಮತ್ತು ಖಾಸಗಿ ವಿಶ್ವವಿದ್ಯಾನಿಲಯಗಳ ಪ್ರಸ್ತುತ ಮತ್ತು ಅಪ್ರಸ್ತುತಗಳ ಬಗ್ಗೆ ಹೋಲಿಕೆ ಮಾಡುವಂತಹ ಒಂದು ಸ್ಪರ್ಧಾತ್ಮಕ ವಾತಾವರಣ ನಿರ್ಮಾಣವಾಗಿದೆ. ಆ ಹಿನ್ನೆಲೆಯಲ್ಲಿ ಕೆಲವೊಂದು ವ್ಯತ್ಯಾಸಗಳು ಎದ್ದು ಕಾಣುತ್ತಿವೆ. ತೆರಿಗೆದಾರರ ಹಣವನ್ನು ಉತ್ತಮವಾದ ರೀತಿಯಲ್ಲಿ ವೆಚ್ಚ ಮಾಡುವುದು ಮತ್ತು ಕೆಲವೊಂದು ಸುಧಾರಣೆಗಳನ್ನು ತರುವಂತಹ ಪ್ರಯತ್ನಗಳು ನಡೆಯುತ್ತಿವೆ. ತೆರಿಗೆದಾರರ ಹಣವನ್ನು ವ್ಯರ್ಥ ಖರ್ಚು ಮಾಡುವುದನ್ನು ನಿಲ್ಲಿಸುತ್ತೇವೆ. ಉತ್ತರ ಕರ್ನಾಟಕ ಭಾಗದಲ್ಲಿ ಕಟ್ಟಡಗಳಿಲ್ಲ ಎಂದು ಹೇಳಿದ್ದಾರೆ. ಸೆಂಟ್ರಲ್ ಕಾಲೇಜಿನಲ್ಲಿಯೂ ಇದೇ ಸಮಸ್ಯೆ ಇದೆ. ಅಕ್ಕಮಹಾದೇವಿ ವಿಶ್ವವಿದ್ಯಾನಿಲಯದಲ್ಲಿಯೂ ಇದೇ ಸಮಸ್ಯೆ ಇದೆ. ಈ ವಿಶ್ವವಿದ್ಯಾನಿಲಯದವರು ಇಡೀ ರಾಜ್ಯದಲ್ಲಿರುವ ಕಾಲೇಜುಗಳಿಗೆ ಹೋಗಿ ಸಂಯೋಜನೆಯನ್ನು ಪಡೆದುಕೊಳ್ಳುವಂತೆ ಕೇಳಿಕೊಂಡರೂ ಸಹ ಯಾರೂ ಅವರ ಸಂಯೋಜನೆಯನ್ನು ಪಡೆದುಕೊಂಡಿಲ್ಲ. ಹೆಣ್ಣು ಮಕ್ಕಳಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಈ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಲಾಗಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಅಕ್ಕಮಹಾದೇವಿ ಹೆಸರಿನಲ್ಲಿ ಸ್ಥಾಪನೆಯಾದಂತಹ ಮಹಿಳಾ ವಿಶ್ವವಿದ್ಯಾನಿಲಯಕ್ಕೆ ಬಿಜಾಪುರ ಮತ್ತು ಬಾಗಲಕೋಟೆ ಭಾಗದ ಕಾಲೇಜುಗಳು ಮಾತ್ರ ಸಂಯೋಜನೆಗೊಂಡಿವೆಯೇ ಹೊರತು ಇಡೀ ರಾಜ್ಯದಲ್ಲಿರುವಂತಹ ಬೇರೆ ಯಾವ ಮಹಿಳಾ ಕಾಲೇಜುಗಳು ಈ ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡಿಲ್ಲ. ಇದು ಬಹಳ ದುರ್ದೈವದ ಸಂಗತಿಯಾಗಿದೆ. ನಾವು ಅಖಂಡ ಕರ್ನಾಟಕದ ಬಗ್ಗೆ ಮಾತನಾಡುತ್ತೇವೆ. ಆದರೆ, ಉತ್ತರ ಕರ್ನಾಟಕ ಭಾಗದಲ್ಲಿ ಸ್ಥಾಪನೆಯಾದಂತಹ ಮಹಿಳಾ ವಿಶ್ವವಿದ್ಯಾನಿಲಯಕ್ಕೆ ದಕ್ಷಿಣ ಕರ್ನಾಟಕದ ಯಾವ ಕಾಲೇಜುಗಳು ಸಂಯೋಜನೆಗೊಂಡಿಲ್ಲ. ಇದು ನಮ್ಮ ರಾಜ್ಯದ ದುರ್ದೈವವಾಗಿದೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕವಟಗಿಮಠ್‌ರವರು ಹೇಳಿರುವ ವಿಚಾರಕ್ಕೆ ಪೂರಕವಾಗಿ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಗ್ರಾಮಾಂತರ ಪ್ರದೇಶದಲ್ಲಿರುವ ಕಾಲೇಜುಗಳನ್ನು ತಂದು ಬೆಂಗಳೂರಿನಲ್ಲಿರುವ ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಳಿಸುತ್ತಾರೆ, ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳನ್ನು ಕೋಲಾರಕ್ಕೆ ತೆಗೆದುಕೊಂಡು ಹೋಗಿ ಹಾಕುತ್ತಾರೆ. ಸರ್ಕಾರ ತನ್ನ ಅನುಕೂಲಕ್ಕೆ ತಕ್ಕಂತೆ ಮಾಡಿಕೊಳ್ಳುತ್ತದೆ.

**ಡಾ||ಸಿ.ಎನ್.ಅಶ್ವಥ್ ನಾರಾಯಣ:–** ಸನ್ಮಾನ್ಯ ಸಭಾಪತಿಯವರೇ, ಸದರಿ ವಿಧೇಯಕಕ್ಕೆ ಸದನವು ತನ್ನ ಒಪ್ಪಿಗೆಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ 'ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ರಿಂದ 9**

**ಸಭಾಪತಿಯವರು:–** "ಖಂಡ 2 ರಿಂದ 9 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2ರಿಂದ 9ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)

**ಪ್ರಸ್ತಾವದ ಅಂಗೀಕಾರ**

**ಡಾ॥ಸಿ.ಎನ್.ಅಶ್ವಥ್ ನಾರಾಯಣ(ಉಪ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಮಂತ್ರಿಗಳು):–** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**8. ನಿಯಮ 143ರ ಅಡಿಯಲ್ಲಿ ಸಿ.ಎ.ಎ. ಬಗ್ಗೆ ಚರ್ಚಿಸಲು ಅನುಮತಿ ಕೋರಿಕೆ**

**ಶ್ರೀ ಎಸ್.ಆರ್.ಪಾಟೀಲ್(ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಸಿ.ಎ.ಎ ಮೇಲೆ ಚರ್ಚೆ ನಡೆಸುವುದಕ್ಕೆ ತಮಗೆ ಒಂದು ನೋಟೀಸ್ ಕೊಟ್ಟಿದ್ದೆವು, ಅದರ ಮೇಲಿನ ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಐವನ್ ಡಿ'ಸೋಜಾ:–** ಸನ್ಮಾನ್ಯ ಸಭಾಪತಿಯವರೇ, ಸಿ.ಎ.ಎ. ಮೇಲೆ ಚರ್ಚೆ ಮಾಡುವುದಕ್ಕೆ ನೋಟೀಸ್ ಕೊಟ್ಟು ಸುಮಾರು 15 ದಿನಗಳಾಗಿವೆ. ತಾವು ಅದಕ್ಕೆ ಅವಕಾಶವನ್ನು ಮಾಡಿಕೊಟ್ಟಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ನಮಗೆ ಬಂದಿರುವ ಮಾಹಿತಿ ಪ್ರಕಾರ ನಾಳೆ ಸದನ ಮುಕ್ತಾಯವಾಗುತ್ತದೆ. ಕೊರೊನಾ ಮಹಮಾರಿ ಇಡೀ ವಿಶ್ವದಲ್ಲಿ ಭಯಾನಕವಾದ ವಾತಾವರಣವನ್ನು ನಿರ್ಮಾಣ ಮಾಡಿದೆ. ಈ ಕೊರೊನಾ ಮಹಾಮಾರಿಯನ್ನು ತಡೆಗಟ್ಟುವುದಕ್ಕೆ ರಾಜ್ಯ ಸರ್ಕಾರ ಏನೇನು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಅದಕ್ಕೆ ವಿರೋಧ ಪಕ್ಷದವರಾದ ನಾವೆಲ್ಲರೂ ಸಹಕಾರವನ್ನು ನೀಡುತ್ತಿದ್ದೇವೆ. ನಾಳೆ ಸದನ ಮುಕ್ತಾಯವಾಗುತ್ತಿರುವ ಹಿನ್ನೆಲೆಯಲ್ಲಿ ವಿತ್ತೀಯ ಕಾರ್ಯಕಲಾಪಗಳ ಮೇಲೆ ಚರ್ಚೆ ಮಾಡುವುದಕ್ಕೆ ನಮಗೆ ಅವಕಾಶ ದೊರೆಯುತ್ತಿಲ್ಲ. ಇವತ್ತು ಸದನದ ಮುಂದೆ ಮಂಡನೆಯಾಗುತ್ತಿರುವ ವಿಧೇಯಕಗಳ ಮೇಲೆ ಸುದೀರ್ಘವಾದ ಚರ್ಚೆಯನ್ನು ಸಹ ಮಾಡದೇ ವಿಧೇಯಕಗಳಿಗೆ ನಾವು ಅನುಮತಿಯನ್ನು ನೀಡಿದ್ದೇವೆ. ನಾಳೆ ಹಣಕಾಸಿನ ವಿಧೇಯಕ ಬರಬಹುದು. ಅದಕ್ಕೂ ಸಹ ನಾವು ಒಪ್ಪಿಗೆಯನ್ನು ನೀಡುತ್ತೇವೆ. ಸಿ.ಎ.ಎ. ಸಹ ಬಹಳ ಗಂಭೀರವಾಗಿರುವ ವಿಚಾರವಾಗಿದೆ. ನಿಯಮ 143ರ ನಿಲುವಳಿ ಸೂಚನೆಯಡಿಯಲ್ಲಿ ಈ ವಿಚಾರವನ್ನು ತೆಗೆದುಕೊಳ್ಳಬೇಕೆನ್ನುವ ನೋಟೀಸ್ ಅನ್ನು ತಮಗೆ ಕೊಟ್ಟಿದ್ದೇವೆ. ದಯಮಾಡಿ ಅದರ ಮೇಲೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕಲ್ಪಿಸಿಕೊಡಬೇಕೆನ್ನುವುದು ನಮ್ಮ ಮನವಿಯಾಗಿದೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದುವರೆದಿದೆ)

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(681) 23.3.2020 5.40 ಪಿಕೆ:ವಿಕೆ (ಸಭಾಪತಿಗಳ ಉಪಸ್ಥಿತಿ)

(ಗೊಂದಲ)

**ಶ್ರೀ ಕೆ.ಅಬ್ದುಲ್ ಜಬ್ಬಾರ್:–** ಇನ್ನು ಸಿಎಎ, ಎನ್‌ಆರ್‌ಸಿ ಮತ್ತು ಎನ್‌ಪಿಆರ್ ಬಗ್ಗೆ ಚರ್ಚೆ ಮಾಡಬೇಕಿದೆ.

(ಗೊಂದಲ)

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ಕುರಿತು ಮಾತನಾಡಲು ನಾವು ನೋಟಿಸ್ ಕೊಟ್ಟಿದ್ದೇವೆ. ದಯವಿಟ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಬಜೆಟ್ ಅಧಿವೇಶನದಲ್ಲಿ ಬಜೆಟ್ ಬಗ್ಗೆ ಮಾತನಾಡದೇ ಹೋದರೆ ಹೇಗೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬಜೆಟ್ ಮೇಲೆ ಚರ್ಚೆ ಮಾಡಲಿ. ಸರ್ಕಾರ ಕೇಳುವುದಕ್ಕೆ ಆಸಕ್ತಿಯಿಂದ ಇದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಇವತ್ತು ಸಂಸತ್ತಿನ ಅಧಿವೇಶನ ಮುಕ್ತಾಯವಾಗುತ್ತಿದೆ. ಇಡೀ ದೇಶದಲ್ಲಿ 75 ಜಿಲ್ಲೆಗಳು ಲಾಕ್‌ಔಟ್ ಆಗಿವೆ. ಜನ ಒಂದು ಕಡೆ ಸೇರಬಾರದು ಎನ್ನುವ ಸಂದೇಶವನ್ನು ಪ್ರಧಾನ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ನಾವು ಅತ್ಯಂತ ಆತಂಕದಲ್ಲಿದ್ದೇವೆ. ಈಗತಾನೇ ನಮ್ಮ ಸ್ನೇಹಿತರು ಫ್ಲೈಟ್‌ನಿಂದ ಬಂದಿದ್ದಾರೆ, ಫ್ಲೈಟ್‌ನಲ್ಲಿ ಜಗಳ ಆಗಿದೆ. ಬೆಳಗ್ಗೆ 8.30 ಫ್ಲೈಟ್ ಕ್ಯಾನ್ಸಲ್ ಆಗಿ 10.30 ಫ್ಲೈಟ್‌ಗೆ ಬಂದಿದ್ದಾರೆ. ಈಗ ನಾನು ಮಾಸ್ಕ್ ಹಾಕಿಕೊಂಡೇ ಮಾತನಾಡಬೇಕಾದ ಪರಿಸ್ಥಿತಿ ಇದೆ. ನೀವು, ಯಾವಾಗ ಅಧಿವೇಶನವನ್ನು ಮುಗಿಸುತ್ತೀರಿ ಎನ್ನುವುದನ್ನು ಹೇಳಿಲ್ಲ. ಸಂಸತ್ತು ಮುಗಿಯುತ್ತಿದೆ, ನಾವು ಇಲ್ಲಿ ಅಧಿವೇಶನ ಮಾಡುತ್ತಿದ್ದೇವೆ. ಇದರಿಂದ ರಾಜ್ಯದ ಜನರಿಗೆ ಏನು ಸಂದೇಶ ಹೋಗುತ್ತದೆ? ನೀವು, ಬೆಂಗಳೂರಿಗೆ ಬರಬೇಡಿ ಎಂದು ಹೇಳುತ್ತೀರಿ, ಬೆಂಗಳೂರಿನಲ್ಲಿ ವಾಸ ಮಾಡುವವರಿಗೆ ಮನೆಯಿಂದ ಹೊರಗೆ ಬರಬೇಡಿ ಎಂದು ಹೇಳುತ್ತೀರಿ. ನಮ್ಮನ್ನು ಮಾತ್ರ ಒಂದು ಕಡೆ ಕೂಡಿ ಹಾಕುತ್ತಿದ್ದೀರಿ. ಪರಸ್ಪರ ಕನಿಷ್ಠ 6–10 ಅಡಿ ದೂರದಲ್ಲಿರಬೇಕು ಎಂದು ಹೇಳುತ್ತೀರಿ, ಆದರೆ ನಮ್ಮಲ್ಲಿ ಅರ್ಧ ಅಡಿ ವ್ಯತ್ಯಾಸವೂ ಇಲ್ಲ. ಇದು ನನಗೆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅರ್ಥವಾಗುತ್ತಿಲ್ಲ. ಅಧಿವೇಶನ ಇವತ್ತು ಮುಗಿಯುತ್ತದೆಯೇ, ನಾಳೆ ಮುಗಿಯುತ್ತದೆಯೋ, ಬಿಎಸಿ ಸಭೆಯಲ್ಲಿ ಏನಾಯಿತು ಎಂದು ತಾವು ಹೇಳಬೇಕು ಅಲ್ಲವೇ? ರಾಜ್ಯದ ಜನ ಆತಂಕದಲ್ಲಿದ್ದಾರೆ. ದಿನೇ ದಿನೇ ಕ್ಷಣ ಕ್ಷಣ ಆತಂಕ ಹೆಚ್ಚಾಗುತ್ತಿದೆ. ತಾವು ದಯಮಾಡಿ ನಮ್ಮೆಲ್ಲರಿಗೂ, ಅಧಿವೇಶನವನ್ನು ಯಾವಾಗ ಮುಗಿಸುತ್ತೀರಿ, ಮುಂದಿನ ಕಾರ್ಯಕ್ರಮಗಳು ಏನು ಎಂಬುದನ್ನು ತಿಳಿಸಬೇಕು.

**ಶ್ರೀ ಕೆ. ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೇ, ನಾವು ಎನ್‌ಆರ್‌ಸಿ, ಎನ್‌ಪಿಆರ್, ಸಿಎಎ ವಿಚಾರದ ಬಗ್ಗೆ ಚರ್ಚೆ ಮಾಡಲು ತಮಗೆ ನೋಟಿಸ್ ಕೊಟ್ಟು 10–15 ದಿನಗಳಾಗಿವೆ. ಅದಕ್ಕೆ ತಾವು ಮಾತನಾಡುವುದಕ್ಕೆ ಅವಕಾಶ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಿಯಮ 143ರ ಅಡಿಯಲ್ಲಿ ಇದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ವಿವಾದ ಮಾಡುವುದಕ್ಕೆ ಈ ಕುರಿತು ಪ್ರಸ್ತಾಪ ಮಾಡಲು ಅವಕಾಶ ಕೊಡಬೇಕೇ ಹೊರತು ನಿಯಮ 143ರ ಅಡಿಯಲ್ಲಿ ಬರುವುದಕ್ಕೆ ಸಾಧ್ಯವೇ ಇಲ್ಲ. ಆದರೂ ಒಂದು ಪ್ರಸ್ತಾವ ಕೊಟ್ಟು ವಾದ ಮಾಡುತ್ತಿದ್ದಾರೆ. ಮಾನ್ಯ ಸಭಾಪತಿಯವರೇ, ಇಂದು ಸಂದಿಗ್ಧವಾದ ಪರಿಸ್ಥಿತಿ ಇದೆ. ಇಡೀ ರಾಜ್ಯದಲ್ಲಿ, ದೇಶದಲ್ಲಿ ಕೊರೊನ ಬಗ್ಗೆ ಗೊಂದಲಮಯ ವಾತಾವರಣ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರು ಬಜೆಟ್‌ನ ಮೇಲೆ ಚರ್ಚೆ ಆರಂಭ ಮಾಡಲಿ. ಅದುಬಿಟ್ಟು, ನಾವು ಸಿಎಎ ಬಗ್ಗೆ ಮಾತನಾಡುತ್ತೇವೆ ಎಂದು ಹೇಳಿದರೆ ಹೇಗೆ? ಯಾವ ನಿಯಮದ ಅಡಿ ಇದನ್ನು ತರುತ್ತೀರಿ? ಕೇಂದ್ರ ಸರ್ಕಾರ ಸಂಸತ್ತಿನಲ್ಲಿ ತಂದಿರುವ ಕಾಯಿದೆಯ ಮೇಲೆ ಇಲ್ಲಿ ನಿರ್ಣಯ ಮಾಡುತ್ತೇವೆ ಎಂದು ಹೇಗೆ ಹೇಳುವುದಕ್ಕೆ ಆಗುತ್ತದೆ? ಇದು ಸರಿಯಲ್ಲ.

(ಗೊಂದಲ)

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಇಡೀ ದೇಶದಲ್ಲಿ 13 ರಾಜ್ಯದವರು ರೆಸಲ್ಯೂಷನ್ ಪಾಸ್ ಮಾಡಿದ್ದಾರೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸಂಸತ್ತಿನಲ್ಲಿ ವಿರೋಧ ಪಕ್ಷದ ನಾಯಕರು ನಿಮ್ಮ ಪಕ್ಷದವರೇ ಆಗಿದ್ದಾರೆ. ಆ ಕುರಿತು ಚರ್ಚೆ ಮಾಡಿ ಅನುಮೋದನೆ ಆಗಿರುವ ಕಾಯಿದೆಯ ವಿರುದ್ಧ, ಈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮನೆಯಲ್ಲಿ ನಿಮಗೆ ಬಹುಮತ ಇದೆ ಎಂದು ಪ್ರಸ್ತಾವ ತರುವುದು ಎಷ್ಟು ಸರಿ? ಇದರಿಂದ ನಿಮಗೆ ಏನು ಅನುಕೂಲವಾಗುತ್ತದೆ?

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಇಡೀ ದೇಶದಲ್ಲಿ 13 ರಾಜ್ಯದವರು ರೆಸಲ್ಯೂಷನ್ ಪಾಸ್ ಮಾಡಿದ್ದಾರೆ. ಇಲ್ಲಿ ನಾವು ಹೊಸದಾಗಿ ತರುತ್ತಿಲ್ಲ. ನಾವು ನೋಟಿಸ್ ಕೊಟ್ಟು 13 ದಿವಸಗಳಾಗಿವೆ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಕಾನೂನಿನ್ನ ಅಡಿಯಲ್ಲೇ ನಾವು ನೋಟಿಸ್ ಕೊಟ್ಟಿದ್ದೇವೆ.

(ಗೊಂದಲ)

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಇದು ಪಾರ್ಲಿಮೆಂಟ್‌ಗಿಂತ್ ಸುಪ್ರೀಮ್ ಆಗಿದೆಯೇ? ಸಂಸತ್ತಿನಲ್ಲಿ ಇದು ಈಗಾಗಲೇ ಪಾಸ್ ಆಗಿದೆ. ಅಲ್ಲಿ ಪಾಸ್ ಆಗಿರುವುದನ್ನು ಇಲ್ಲಿ ಮರುಪರಿಶೀಲನೆ ಮಾಡುವುದಕ್ಕೆ ಸಾಧ್ಯವಿದೆಯೇ? Anti-social elements ನಿಂದ ದೂರ ಇರಬೇಕು ಎನ್ನುವುದು ಸಿಎಎ ಉದ್ದೇಶವಾಗಿದೆ. ನಾವಿಲ್ಲಿ ಕೆಟ್ಟ ಪರಂಪರೆಗೆ ನಾಂದಿ ಹಾಡುವುದು ಬೇಡ.

(ಗೊಂದಲ)

**ಶ್ರೀ ಕೆ.ಸಿ.ಕೊಂಡಯ್ಯ:–** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ನಾಳೆ ಅಜೆಂಡಾದಲ್ಲಿ ತರುತ್ತೀರಾ?

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ನಾಳೆ ಅಜೆಂಡಾದಲ್ಲಿ ತನ್ನಿ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನೀವು ಹೇಳುತ್ತಿರುವುದು ನಿಯಮ 143 ಅಡಿಯಲ್ಲಿ ಬರುವುದಕ್ಕೆ ಸಾಧ್ಯವೇ ಇಲ್ಲ.

(ಗೊಂದಲ)

**ಶ್ರೀ ಎನ್. ಅಪ್ಪಾಜಿಗೌಡ:–** ಈಗ ಕೋವಿಡ್–19 ಬಗ್ಗೆ ಮಾತನಾಡೋಣ. ಸಿಎಎ ಬಗ್ಗೆ ಆಮೇಲೆ ಬೇಕಾದರೆ ಮಾತನಾಡಬಹುದು.

**ಸಭಾಪತಿಯವರು:–** ನಾವು ಯಾವುದೇ ವಿಚಾರಗಳನ್ನು ಚರ್ಚೆ ಮಾಡಬೇಕಾದರೆ ಸಂಬಂಧಪಟ್ಟ ಸಚಿವರು ಸದನದಲ್ಲಿ ಇರಬೇಕಾಗುತ್ತದೆ. ಸಚಿವರಿಲ್ಲದೇ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಇವತ್ತು ಎಷ್ಟೇ ಹೊತ್ತಾದರೂ ಕುಳಿತುಕೊಳ್ಳುತ್ತೇವೆ. ಕೆಲವು ವಿಚಾರಗಳನ್ನು ಕೇಳಲಿಕ್ಕೆ ಇದೆ, ಅದನ್ನು ಕ್ಲಿಯರ್ ಮಾಡಿಕೊಳ್ಳೋಣ. ಆದ್ದರಿಂದ ಈಗ ಗಡಿಬಿಡಿ ಮಾಡುವುದು ಬೇಡ. ಈಗ ವಿತ್ತೀಯ ಕಲಾಪ ಶುರು ಮಾಡಿ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಇವತ್ತು ನಮ್ಮ ಇಡೀ ಸದನದ ಮೂಡ್ ಕೋವಿಡ್ ಕಡೆ ಇದೆ. ಕೊರೊನಾದಿಂದ ಇವತ್ತು ಸಾಕಷ್ಟು ತೊಂದರೆಗಳಾಗಿವೆ. ಲೋಕಸಭೆಯ ಅಧಿವೇಶನವು ಮುಕ್ತಾಯವಾಗುತ್ತಿದೆ. ಹಾಗಾಗಿ ಇಲ್ಲಿ ಇನ್ನೂ ಎಷ್ಟು ಭಾಷಣ ಮಾಡಿಸುತ್ತೀರಿ? ನಾವು ಅದನ್ನು ಕೇಳುವ ಪರಿಸ್ಥಿತಿಯಲ್ಲಿ ಇರಬೇಕು ಅಲ್ಲವೇ?

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನೀವು ಅನುಮತಿ ಕೊಟ್ಟರೆ ಮಾತನಾಡುತ್ತೇನೆ.

**ಸಭಾಪತಿಯವರು:–** ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**9. ವಿತ್ತೀಯ ಕಾರ್ಯಕಲಾಪಗಳು**

## 2020–2021ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಸಾಮಾನ್ಯ ಚರ್ಚೆ

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, 2020–2021ನೇ ಸಾಲಿನ ಆಯವ್ಯಯದ ಮೇಲೆ ಚರ್ಚೆ ಮಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ನಿಮಗೆ ವಂದನೆ ಸಲ್ಲಿಸುತ್ತೇನೆ. ಈ ರಾಜ್ಯದ ಗೌರವಾನ್ವಿತ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪನವರು, ಹಣಕಾಸಿನ ಸಚಿವರೂ ಆಗಿದ್ದು, ಮಾರ್ಚ್ 5 ನೇ ದಿನಾಂಕದಂದು 2020–2021 ಸಾಲಿನ ಮುಂಗಡ ಪತ್ರವನ್ನು ಮಂಡಿಸಿದ್ದಾರೆ. ಬಜೆಟ್ ಅಂದರೆ, ಎಣ ೨ ಚಿಟಿ ಚಿಟಿಟಿಣಚಿಟ ್ಣಚಿಣಜಟಜಟಿಣ ಠಜಿ ಡಿಜಛಿಜುಣಠಿ ಚಿಟಿಜ ಜಥಠಿಜಟಿಜುಣಣಡಿಜ. ಬಜೆಟ್‌ನಲ್ಲಿರುವ ಹಣ ಏನಿದೆ ಅದು ತೆರಿಗೆದಾರರ ಹಣ. ಬಹಳ ಕಷ್ಟಪಟ್ಟು, ಶ್ರಮವಹಿಸಿ, ಬೆವರು ಸುರಿಸಿ ದುಡಿದು ಗಳಿಸಿದಂತಹ ಹಣ ಇವತ್ತು ಬಜೆಟ್‌ನ ಭಾಗವಾಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆ ದೃಷ್ಟಿಯಿಂದ, ತೆರಿಗೆದಾರರ ಹಣದ ಬಗ್ಗೆ ಕಾಳಜಿ ಇರಬೇಕು ಎಂದು ಹೇಳಬಯಸುತ್ತೇನೆ. ಈ ಬಜೆಟ್ ಸಂವಿಧಾನದ ಆಶಯಗಳಿಗೆ ಅನುಗುಣವಾಗಿರಬೇಕು. ನಾವು 8 ದಿವಸ ಸಂವಿಧಾನದ ಆಶಯಗಳ ಮೇಲೆ, ಮೂಲ ತತ್ವಗಳ ಮೇಲೆ, ಸಿದ್ಧಾಂತಗಳ ಮೇಲೆ ಮತ್ತು ಸಂವಿಧಾನದಲ್ಲಿರುವ ಅನೇಕ ಪರಿಚ್ಛೇದಗಳ ಬಗ್ಗೆ ಮಾತನಾಡಿದ್ದೇವೆ. ಬಜೆಟ್ ಎಂದರೆ, ಸಂವಿಧಾನದ ಆಶಯಕ್ಕೆ ಒಳಪಟ್ಟಿರಬೇಕು. ಅಂದರೆ, ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು, ಸಮಸಮಾಜ ನಿರ್ಮಾಣ ಮಾಡುವಂತಹ ವಿಚಾರ ಇಟ್ಟುಕೊಂಡು, ಸಾಮಾಜಿಕ ನ್ಯಾಯವನ್ನು ಲಕ್ಷ್ಯದಲ್ಲಿಟ್ಟುಕೊಂಡು ಆಯವ್ಯಯವನ್ನು ಮಂಡಿಸಬೇಕು, ಅದು ಆದ್ಯಕರ್ತವ್ಯ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಜೆಟ್ ಎನ್ನುವುದು ಅಭಿವೃದ್ಧಿಗೆ ಪೂರಕವಾಗಿರಬೇಕು. ಆದರೆ ಇದು ಅಭಿವೃದ್ಧಿಗೆ ಪೂರಕವಾಗಿರಲಾರದಂಥ ಬಜೆಟ್ ಎಂದು ನನಗನಿಸುತ್ತಿದೆ. ಸಂವಿಧಾನದ ಆಶಯಗಳನ್ನು ಇದರಲ್ಲಿ ಸೇರಿಸುವುದಕ್ಕೆ ವಿಫಲರಾಗಿದ್ದಾರೆ ಮತ್ತು ಇದು ಅಭಿವೃದ್ಧಿಗೆ ಪೂರಕವಾದ ಬಜೆಟ್ ಅಲ್ಲ.

(ಮುಂದು . . .)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(682) 23–03–2020 5.50 ಡಿಎಸ್–ವಿಕೆ

**ಶ್ರೀ ಎಸ್.ಆರ್.ಪಾಟೀಲ್(ಮುಂದು):–**

ಈ ಬಜೆಟ್ ಹೇಗಿದೆ ಎಂದರೆ, 5ನೇ ತಾರೀಖು ಬಜೆಟ್ ಮಂಡಿಸಿದ ಕೂಡಲೇ 6ನೇ ತಾರೀಖು ವಿಜಯಕರ್ನಾಟಕ ದಿನ ಪತ್ರಿಕೆಯ ಸಂಪದಾಕೀಯದಲ್ಲಿ ಬರೆದಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. **'ಚದುರಿದ ಆಯವ್ಯಯ' –ರಾಜ್ಯಕ್ಕಾದ ಅನ್ಯಾಯ ಕಾಣಿಸಿದ ಬಜೆಟ್:** ಮುಖ್ಯಮಂತ್ರಿ ಯಡಿಯೂರಪ್ಪನವರು ಮಂಡಿಸಿದ 2020–21ರ ಆಯವ್ಯಯ ಸಂಪೂರ್ಣವಾಗಿ ಹಗ್ಗದ ಮೇಲಿನ ನಡಿಗೆಯಂತಿದೆ. ಎಲ್ಲಾ ವಲಯಗಳಿಗೂ ಹಣ ಹೊಂದಿಸಲು ಹೋಗಿ, ಯಾವ ವಲಯಕ್ಕೂ ಪೂರ್ತಿಯಾಗಿ ಗಮನ ಕೊಡಲು ಸಾಧ್ಯವಾಗದೆ ಅನುದಾನವನ್ನು ಹರಿದು ಹಂಚಲಾಗಿದೆ. 32,259 ಕೋಟಿ ರೂ.ಗಳಷ್ಟು ದೊಡ್ಡ ಮೊತ್ತದ ಅನುದಾನವನ್ನು ಕೃಷಿ ಸೇರಿದಂತೆ ಹತ್ತು ಹಲವು ಕೃಷಿ ಸಂಬಂಧಿ ವಲಯಗಳಿಗೆ ಹಂಚಲಾಗಿದೆ; ಆದರೆ ನಿರ್ದಿಷ್ಟವಾಗಿ ಯಾವ ವಲಯಕ್ಕೆ ಎಷ್ಟು ಎಂಬುದು ಗೊತ್ತಾಗದಂತೆ ಜಾಣತನ ತೋರಿಸಲಾಗಿದೆ. ಯಾವುದೇ ಸುಸ್ಥಿರ ಯೋಜನೆಗಳಾಗಲೀ, ಗಮನ ಸೆಳೆಯುವ ಹೊಸ ಯೋಜನೆಗಳಾಗಲಿ ಈ ಬಜೆಟ್‌ನಲ್ಲಿ ಇಲ್ಲ.

ಕೇಂದ್ರದಲ್ಲೂ ರಾಜ್ಯದಲ್ಲೂ ಒಂದೇ ಪಕ್ಷದ ಸರ್ಕಾರ ಇರಲಿ ಎಂದು ರಾಜ್ಯದ ಜನತೆ ಬಯಸಿದ್ದರೆ ಅದಕ್ಕೆ ಕಾರಣ, ಎರಡೂ ಸರ್ಕಾರಗಳು ಉತ್ತಮ ಸಹಯೋಗದಿಂದ ಪರಿಣಾಮಕಾರಿ ಆಡಳಿತ ಹಾಗೂ ಅಭಿವೃದ್ಧಿ ಸಾಧ್ಯವಾಗಲಿ ಎಂಬ ಆಶಯ. ಆದರೆ ಅದು ವಿಫಲವಾಗಿರುವುದು ಈ ಬಜೆಟ್‌ನಿಂದ ಗೊತ್ತಾಗುತ್ತದೆ. ನಮ್ಮ ರಾಜ್ಯ ಜಿಎಸ್‌ಟಿ ಸಂಗ್ರಹದಲ್ಲಿ ದೇಶದಲ್ಲಿ ಎರಡನೇ ಸ್ಥಾನದಲ್ಲಿದೆ. ಆದರೆ ಈ ಬಾರಿ ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಕರ್ನಾಟಕದ ಪಾಲು ಗಣನೀಯವಾಗಿ ಕಡಿಮೆಯಾಗಿದೆ. 14ನೇ ಹಣಕಾಸು ಆಯೋಗದಲ್ಲಿ ರಾಜ್ಯದ ಪಾಲು ಶೇ 4.71 ಇದ್ದರೆ, 15ನೇ ಹಣಕಾಸು ಆಯೋಗವು ಇದನ್ನು ಶೇ. 3.64ಕ್ಕೆ ಇಳಿಸಿದೆ. ಇದರಿಂದ ಒಟ್ಟಾರೆ ಅನುದಾನದಲ್ಲಿ 11,215 ಕೋಟಿ ರೂ.ಗಳಷ್ಟು ಇಳಿಕೆಯಾಗಿದೆ ಎಂಬುದನ್ನು ಮುಖ್ಯಮಂತ್ರಿಗಳೇ ಉಲ್ಲೇಖಿಸಿದ್ದಾರೆ. ಜಿಎಸ್‌ಟಿ ಪರಿಹಾರವೂ 3000 ಕೋಟಿ ರೂ.ಗಳಷ್ಟು ಕಡಿಮೆಯಾಗಿದೆ. ಮಾಹಿತಿ ತಂತ್ರಜ್ಞಾನ ಸೇವಾ ವಲಯದಲ್ಲಿ ನಮ್ಮ ರಾಜ್ಯದ ಉತ್ಪನ್ನದ ಕೊಡುಗೆ ಶೇ.25ರಷ್ಟಿದ್ದರೂ, ಇದಕ್ಕೆ ತೆರಿಗೆ ವಿನಾಯಿತಿ ಇರುವುದರಿಂದ ಅನುದಾನ ಹಂಚಿಕೆಯಲ್ಲಿ ಇದನ್ನು ಪರಿಗಣಿಸಿಲ್ಲ. ನಮ್ಮಲ್ಲಿಂದ ಸಂಗ್ರಹಿತವಾದ ಅನುದಾನದಲ್ಲಿ ದೊಡ್ಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೊತ್ತದ ಹಣ ಬಿಮಾರು ರಾಜ್ಯಗಳೆಂದು ಕರೆಸಿಕೊಂಡ ಬಿಹಾರ, ಉತ್ತರಪ್ರದೇಶ, ಮಧ್ಯಪ್ರದೇಶಗಳ ಪಾಲಾಗುತ್ತಿದೆ. ಇದು ಇನ್ನೊಂದು ರೀತಿಯಲ್ಲಿ ಅಸಮತೋಲನ ಸೃಷ್ಟಿಸುತ್ತಿದೆ.

ತೆರಿಗೆಯಲ್ಲಿ ನಮ್ಮ ಪಾಲು ಹೆಚ್ಚಿನದು, ಆದರೆ ಅನುದಾನದಲ್ಲಿ ಅತಿ ಕಡಿಮೆ ಎಂಬ ಸನ್ನಿವೇಶ ಯಾವ ಪ್ರಜೆಗಾದರೂ ವಂಚಿತನಾದೆ ಎಂಬ ಭಾವನೆ ಮೂಡಿಸುವಂಥಾದ್ದು. ಕೇಂದ್ರದ ಬಗ್ಗೆ ಮೂಡುವ ಅಸಹನೆ ಒಂದು; ಯಾವುದೇ ಸುಸ್ಥಿರ ಯೋಜನೆಗೆ ಸಂಪೂರ್ಣ ಅನುದಾನ ಕಲ್ಪಿಸಲಾಗದ ಅಸಹಾಯಕ ಸ್ಥಿತಿ ಇನ್ನೊಂದು. ಇರುವ ಕೊರತೆ ಹಣಕಾಸಿನಲ್ಲೇ ಎಲ್ಲಾ ವಲಯಗಳಿಗೆ ಹಂಚಬೇಕಾದ ಸನ್ನಿವೇಶದಲ್ಲಿ, ಯಾವುದೇ ವಲಯಕ್ಕೂ ಪೂರ್ತಿ ನ್ಯಾಯ ಸಲ್ಲಿಸಲು ಸಾಧ್ಯವಾಗದ ಸ್ಥಿತಿಯಾಗಿದೆ. ಇದು ದೀರ್ಘಾವಧಿಯಲ್ಲಿ ರಾಜ್ಯದ ಅಭಿವೃದ್ಧಿಯನ್ನು ಕುಂಠಿತಗೊಳಿಸಲಿದೆ. ಈ ಪರಿಸ್ಥಿತಿ ಮುಂದುವರಿದರೆ, ನಿಧಾನವಾಗಿ ಕರ್ನಾಟಕವು ಇನ್ನೊಂದು ಬಿಮಾರು ರಾಜ್ಯವಾಗಬಹುದು. ವಿಶೇಷವೆಂದರೆ, ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲೇ ಈ ಆರ್ಥಿಕ ಕೊರತೆ ಹಾಗೂ ಅಸಮಾಧಾನವನ್ನು ದಾಖಲಿಸಿದ್ದಾರೆ. ಇದು ಕೇಂದ್ರ ಮಾಡಿದ ಅನ್ಯಾಯಕ್ಕೆ ಹಿಡಿದ ಕೈಗನ್ನಡಿಯೇ ಹೌದು. ಇದನ್ನು ಅರ್ಥ ಮಾಡಿಕೊಂಡು, ಹೆಚ್ಚಿನ ಅನುದಾನವನ್ನು ಕೇಂದ್ರ ನೀಡಬೇಕು ಹಾಗೂ ಅದನ್ನು ಪಡೆಯಲು ರಾಜ್ಯ ಸರ್ಕಾರವೂ ಹೆಚ್ಚಿನ ಪ್ರಯತ್ನ ಮಾಡಬೇಕಿದೆ. 6ನೇ ತಾರೀಖಿನಂದು ವಿಜಯ ಕರ್ನಾಟಕ ದಿನಪತ್ರಿಕೆಯ ಸಂಪಾದಕೀಯದಲ್ಲಿ ಬರೆದಿರುವುದನ್ನು ಓದಿದ್ದರೆ ಇಡೀ ಬಜೆಟ್‌ನ ಮೇಲೆ ಭಾಷಣ ಆದಹಾಗೆ ಆಗುತ್ತದೆ. ಇದನ್ನು ಚದುರಿದ ಆಯವ್ಯಯ ಎಂದು ಹೇಳಿದ್ದಾರೆ. ಚದುರಿದ ಆಯವ್ಯಯ ಎಂದರೆ ನಮ್ಮ ಹಳ್ಳಿ ಭಾಷೆಯಲ್ಲಿ 'ಎಲ್ಲಾ ಬಲ್ಲಪ್ಪ, ಕೇಳಿದರೆ ಕಲ್ಲಪ್ಪ' ಎಂದು ಹೇಳುತ್ತಾರೆ. ನನಗೆ ಎಲ್ಲಾ ಗೊತ್ತಿದೆ ಎಂದು ಹೇಳುತ್ತಾನೆ, ಕೇಳಿದರೆ ಏನು ಹೇಳುವುದಿಲ್ಲ. ಎಲ್ಲರಿಗೂ ಹಣ ಕೊಡಬೇಕೆಂದು ಪ್ರಯತ್ನ ಮಾಡಿದ್ದಾರೆ. ಆ ದೃಷ್ಟಿಯಿಂದ ರಾಜ್ಯ ಎಲ್ಲಾ ಸರ್ವಾಂಗೀಣಾ ಅಭಿವೃದ್ಧಿಗೆ ಬಹಳಷ್ಟು ಅನುಕೂಲಕರವಾದಂತಹ ವಾತಾವರಣ ಈ ಬಜೆಟ್‌ನಲ್ಲಿ ಇಲ್ಲ ಎನ್ನುವುದನ್ನು ನಾನು ಹೇಳಬೇಕಾಗುತ್ತದೆ. ಇದರ ಜೊತೆಗೆ ಮುಂಗಡ ಪತ್ರ, ಪ್ರತಿ ಐದು ವರ್ಷಕ್ಕೊಮ್ಮೆ ನಮ್ಮ ಕೇಂದ್ರ ಸರ್ಕಾರದ Finance Commissionವರದಿ ಕೊಡುತ್ತಾರೆ. ಪ್ರತಿ ವರ್ಷ ನಾವು ಕೇಂದ್ರ ಸರ್ಕಾರಕ್ಕೆ Income Tax, Corporation Tax and Excise Duty ಕೊಡುತ್ತೇವೆ. ಅದರಲ್ಲಿ ಅವರು ನಮ್ಮ ಪಾಲಿನ ಹಣವನ್ನು ಕೊಡಬೇಕು. ಐದು ವರ್ಷಕ್ಕೊಮ್ಮೆ ಮಾಡುವಂತಹ Finance Commission ನಲ್ಲಿ ಅದನ್ನು ಸುದೀರ್ಘವಾಗಿ mention ಮಾಡಿರುತ್ತಾರೆ. ಅದರಂತೆ ನಮ್ಮ ರಾಜ್ಯದಲ್ಲೂ ಕೂಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

State Finance Commission ಎಂದು ಮಾಡಿರುತ್ತೇವೆ. ಏಕೆಂದರೆ, ಸ್ಥಳೀಯ ಸಂಸ್ಥೆಗಳು, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ, ನಗರದಲ್ಲಿ ಬರತಕ್ಕಂಥ ಸ್ಥಳೀಯ ಸಂಸ್ಥೆಗಳಿಗಾಗಿ ಹಣ devolve ಮಾಡುವ ಸಲುವಾಗಿ ನಾವು State Finance Commission ಕೂಡ ರಚನೆ ಮಾಡುತ್ತೇವೆ. ಈಗಾಗಲೇ 14thFinance Commission ಆಗಿದೆ. 15ನೇ ವರದಿ ಕೊಟ್ಟಿದ್ದಾರೆ. ಅವರು ಹೇಳಿರುವ ಪ್ರಕಾರ ಈ ವರ್ಷ 2019-2020 ರಲ್ಲಿ estimate ಮಾಡಿರುವುದಕ್ಕಿಂತ 8,887 ಕೋಟಿ ರೂಪಾಯಿಗಳು devolution ನಲ್ಲಿ ನಮಗೆ ಕಡಿಮೆ ಬಂದಿದೆ ಎಂದು ಹೇಳುತ್ತಾರೆ. ಈ ವರ್ಷ ನಾನು ಈಗಾಗಲೇ ಹೇಳಿದ ಹಾಗೆ ವಿಜಯ ಕರ್ನಾಟಕ ಪತ್ರಿಕೆಯ ಸಂಪಾದಕೀಯದಲ್ಲಿ ಹೇಳಿದ ಹಾಗೆ GST ಪರಿಹಾರದಲ್ಲೂ ಮೂರು ಸಾವಿರ ಕೋಟಿ ರೂಪಾಯಿಯಷ್ಟು ಕಡಿಮೆಯಾಗಿದೆ. ಈ ಬಜೆಟ್‌ನಲ್ಲಿ 11,887 ಕೋಟಿ ರೂಪಾಯಿಗಳಷ್ಟು ನಾವೇನು ನಿರೀಕ್ಷೆ ಮಾಡಿದ್ದೆವು ಅಷ್ಟು ಹಣ ಬಂದಿಲ್ಲ. ಆ ಹಣ ನಮಗೆ ಬರುತ್ತದೆಂದು ಲೆಕ್ಕ ಹಾಕಿದ್ದೆವು. ಆದರೆ ಆ ಹಣ ನಮಗೆ ಬರುತ್ತಿಲ್ಲ. ಇದು ಸಣ್ಣ ಹಣ ಅಲ್ಲ, 11,887 ಕೋಟಿ. ಈ ವರ್ಷ ಬಜೆಟ್ 2,37,895 ಕೋಟಿ ರೂಪಾಯಿಗಳು. ಅದರಲ್ಲಿ 11,887 ಕೋಟಿ ರೂಪಾಯಿಗಳು ಕಡಿಮೆಯಾದರೆ budget size ಕಡಿಮೆಯಾಗಬೇಕಲ್ಲವೇ? Revised Budget ನಲ್ಲಿ ಕಡಿಮೆ ತೋರಿಸಲೇಬೇಕು. Revised Budget ಬೇರೆ, Estimated Budget ಬೇರೆ, ನಮ್ಮ ರಾಜ್ಯದ ತೆರಿಗೆ ಪ್ರಕಾರ State Owned Tax ಕನಿಷ್ಠ 4-5 ಸಾವಿರ ಕೋಟಿ ರೂಪಾಯಿಯಷ್ಟು ಕಡಿಮೆಯಾಗುತ್ತದೆ. ಈಗಾಗಲೇ 11,887 ಕೋಟಿ GST ದು ಇದೆ. State Owned Tax ನಲ್ಲಿ 4-5 ಸಾವಿರ ಕೋಟಿ ರೂಪಾಯಿ ಕಡಿಮೆಯಾದರೆ ಅಂದಾಜು 16,000 ಕೋಟಿಗಿಂತ ಹೆಚ್ಚಿನ ಹಣ ಕಡಿಮೆಯಾಗುತ್ತದೆ. This is not a small amount; it's a very big amount. ಇನ್ನು ನಮ್ಮ ರಾಜ್ಯ ಬೆಳವಣಿಗೆಯಾಗಬೇಕು, ಆರ್ಥಿಕವಾಗಿ ಬೆಳೆಯಬೇಕು, asset create ಆಗಬೇಕೆಂದರೆ ಎಲ್ಲಿ createಆಗಬೇಕು? 16,000 ಕೋಟಿ ರೂಪಾಯಿಯಷ್ಟು 2020-21ರ ಬಜೆಟ್‌ನಲ್ಲಿ ಕಡಿಮೆಯಾದರೆ ಯಾವ ರೀತಿ ಬೆಳೆಯುವುದಕ್ಕೆ ಸಾಧ್ಯವಿದೆ? Committed Expenditure ಎಂದರೆ Salary, Pension, Interest Payment ಅದರ ಜೊತೆಗೆ devolution of funds to the Local Bodies ಇವೆಲ್ಲಾ ಸೇರಿಕೊಂಡರೆ Committed Budget ಎನ್ನುತ್ತಾರೆ. ಮೊದಲು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ಕಾಲದಲ್ಲಿ Committed Expenditure ಶೇಕಡ 80 ರಷ್ಟು ಒಳಗೆ ಇತ್ತು. ಈಗ ಶೇಕಡ 90 ರಷ್ಟು ಸಮೀಪ ಹೋಗಿದೆ. ಶೇಕಡ 88 ರಷ್ಟು ಎಂದು ಸನ್ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಇಷ್ಟು ಹಣ ಬಾರದೆ ಹೋದರೆ ಕಾರ್ಯಕ್ರಮ ಮಾಡುವುದಕ್ಕೆ ಹೇಗೆ ಸಾಧ್ಯ? Where is the money to develop the state? ನಮಗೆ ಹಣ ಎಲ್ಲಿಂದ ಬರುತ್ತದೆ? ದೊಡ್ಡ ಪ್ರಮಾಣದಲ್ಲಿ ಈ ಬಜೆಟ್‌ನಲ್ಲಿ ಈ ಖೋತಾ ಆದಾಗ ಮತ್ತು Committed Budget ಶೇಕಡ 90 ರಷ್ಟು ಹೋದಾಗ ಈ ರಾಜ್ಯ ಸರ್ವಾಂಗೀಣಾಭಿವೃದ್ಧಿಯಾಗಬೇಕು. ಸಮಾಜದ ಎಲ್ಲಾ ವರ್ಗದ ಜನ ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎನ್ನುವಂತಹ ಸಮಸಮಾಜ ನಿರ್ಮಾಣ ಮಾಡುವುದಕ್ಕೆ ಯಾವ ರೀತಿ ಪ್ರಯತ್ನ ಮಾಡುವುದಕ್ಕೆ ಸಾಧ್ಯವಿದೆ? ಹೊಸ ಕೆಲಸ ಯಾವ ರೀತಿ ತೆಗೆದುಕೊಳ್ಳಬೇಕು? ಹೊಸ ಪ್ರಾಜೆಕ್ಟ್ ತೆಗೆದುಕೊಳ್ಳುವುದಕ್ಕೆ ಹಣವಿಲ್ಲ. 14ನೇ ಹಣಕಾಸಿನ ಶಿಫಾರಸ್ಸಿನ ಪ್ರಕಾರ ಏನಿತ್ತು, ಹಂಚಿಕೆಯಲ್ಲಿ 14ನೇ ಹಣಕಾಸು ಆಯೋಗದವರು ರಾಜ್ಯದ ಪಾಲು ಶೇ. 4.7 ಕೊಡುತ್ತಿದ್ದರು. ಈಗ 15ನೇ ಹಣಕಾಸಿನ ಆಯೋಗದವರು ಅದನ್ನು ಶೇ. 3.64 ಮಾಡಿದ್ದಾರೆ.

(ಮುಂದು)

**(683) 23.03.2020 06.00 ಎಸ್‌ವಿ-ಬಿಎನ್‌ಎಸ್**

**ಶ್ರೀ ಎಸ್.ಆರ್.ಪಾಟೀಲ್ (ಮುಂದು):-**

ಸಂಗ್ರಹಿಸಲಾಗುವ ತೆರಿಗೆ ಹಣದಲ್ಲಿ ಎಲ್ಲಾ ರಾಜ್ಯಗಳಿಗೆ ಶೇ.42 ರಷ್ಟನ್ನು ಕೊಡುತ್ತಿದ್ದರು. ಈ ಬಾರಿ ಅದರಲ್ಲಿಯೂ ಶೇ.1 ಅನ್ನು ಕಡಿತಗೊಳಿಸಿ ಅವರು ಇಟ್ಟುಕೊಂಡು ಶೇ.41 ಮಾಡಿದ್ದಾರೆ. ಹೊಸದಾಗಿ ರಚನೆಯಾದ ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್ ಅಭಿವೃದ್ಧಿಗಾಗಿ ಅದನ್ನು ಇಟ್ಟುಕೊಂಡಿದ್ದೇವೆಂದು ಹೇಳಿದ್ದಾರೆ. ಶೇ.42 ಹೋದರೆ ಇನ್ನೂ ಶೇ.58 ಉಳಿದಿತ್ತಲ್ಲವೆ? ಆ ಉಳಿದ ಶೇ.58ರಲ್ಲಿ ಶೇ.1 ಅನ್ನು ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್‌ನ ಅಭಿವೃದ್ಧಿಗಾಗಿ ಕೊಡಬಹುದಿತ್ತಲ್ಲವೆ? ರಾಜ್ಯಗಳ ಭಾಗವಾದ ಶೇ.42 ಅನ್ನು ಶೇ.41 ಮಾಡಿ ಅದರಿಂದ ಶೇ.1 ಕಡಿಮೆಯಾಯಿತು. ಶೇ.4.7ರಿಂದ ಶೇ.3.6 ಮಾಡಿರುವುದರಿಂದ ಶೇ.1 devolution ನಲ್ಲಿ ಕಡಿಮೆಯಾಯಿತು. ಬಿಹಾರ್ ರಾಜ್ಯಕ್ಕೆ ಶೇ.10, ಉತ್ತರ ಪ್ರದೇಶಕ್ಕೆ ಶೇ.17 ನೀಡಿದ್ದಾರೆ. ತೆರಿಗೆ ಸಂಗ್ರಹಣೆಯಲ್ಲಿ ನಮ್ಮ ರಾಜ್ಯ ಇಡೀ ದೇಶದಲ್ಲಿಯೇ ಎರಡನೆಯ ಸ್ಥಾನದಲ್ಲಿದೆ. ಜಿ.ಎಸ್.ಟಿ. ಸಂಗ್ರಹಣೆಯಲ್ಲಿ ಭಾರತ ದೇಶದ 29

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯಗಳ ಪೈಕಿ ನಮ್ಮ ರಾಜ್ಯವು ಎರಡನೆಯ ಸ್ಥಾನದಲ್ಲಿದೆ. ಶೇ.4.7 ಹೋಗಿ ಶೇ.3.64 ಆಗಿದ್ದು, ಶೇ.1 ರಷ್ಟು ಕಡಿಮೆಯಾಗಿದೆ. ಇದರ ಪರಿಣಾಮವಾಗಿ ಯಾವ ರಾಜ್ಯವು ಆರ್ಥಿಕ ನಿರ್ವಹಣೆಯನ್ನು ಚೆನ್ನಾಗಿ ಮಾಡುತ್ತಿಲ್ಲವೋ ಅವರಿಗೆ ಲಾಭ, ಯಾವ ರಾಜ್ಯವು ಆರ್ಥಿಕ ನಿರ್ವಹಣೆಯನ್ನು ಚೆನ್ನಾಗಿ ಮಾಡುತ್ತಾರೆಯೋ ಅವರಿಗೆ ನಷ್ಟ ಎನ್ನುವಂತಾಗಿದೆ.

ಚುನಾವಣೆಯ ಸಂದರ್ಭದಲ್ಲಿ ಗುಜರಾತ್ ಮಹಾಘಡಿ ಎಂದು ಹೇಳಲಾಗುತ್ತಿತ್ತು. ಅವರಿಗೆ ಹೆಚ್ಚು ಏಕೆ ಕೊಡಲಾಯಿತು ಎಂದು ಕೇಳಿದ್ದಕ್ಕೆ ಅದು ಹಿಂದುಳಿದ ರಾಜ್ಯ ಎಂದು ಹೇಳಿದರು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಅದಕ್ಕೆ ಅಮೆರಿಕಾದ ಅಧ್ಯಕ್ಷರು ಗುಜರಾತ್‌ಗೆ ಭೇಟಿ ನೀಡಿದ್ದರು.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಹಾಗಾದರೆ ಅಲ್ಲಿದ್ದ ಕೊಳಗೇರಿಗೆ ಗೋಡೆಯನ್ನೇಕೆ ಕಟ್ಟಲಾಯಿತು?

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅಮೆರಿಕಾದ ಅಧ್ಯಕ್ಷರು ಗುಜರಾತ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿದ್ದಂತಹ ಕೊಳಗೇರಿಯನ್ನು ಮುಚ್ಚಲು ಗೋಡೆಯನ್ನು ಕಟ್ಟಲಾಯಿತು. ಇಂದಿನ ಪ್ರಧಾನಿಯವರು 15 ವರ್ಷಗಳ ಕಾಲ ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದರು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನೈಜ ಭಾರತದ ದರ್ಶನ ಅಮೆರಿಕಾದ ಅಧ್ಯಕ್ಷರಿಗೆ ಆಗಬಾರದೆಂದು ಗೋಡೆಯನ್ನು ಕಟ್ಟಿದರು. ಅದರ ಬದಲು ಕೊಳಗೇರಿಯನ್ನು ಸುಧಾರಣೆ ಮಾಡಬೇಕು. ಕೊಳಗೇರಿಯ ಜನರೂ ಕೂಡ ಮುಂದುವರೆದ ಜನಾಂಗದವರ ಜೊತೆಯಲ್ಲಿ ಹೆಗಲಿಗೆ ಹೆಗಲು ಕೊಟ್ಟು ಕೈಗೆ ಕೈ ಜೋಡಿಸಿ ಸ್ವಾಭಿಮಾನದಿಂದ ಬದುಕುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕು. ಡೊನಾಲ್ಡ್ ಟ್ರಂಪ್ ಅವರು ಬಂದರು. ಗೋಡೆಯನ್ನು ನೋಡಿದರು, ಹೋದರು. ಆ ಕಡೆ ಏನಿದೆಯೆಂಬುದು ನಮಗೆ ಗೊತ್ತು. ಇದಕ್ಕೆ ನಮ್ಮ ಭಾಗದಲ್ಲಿ "ಹೆಗ್ಗಣ ಇಟ್ಟು ಗುದ್ದು ಮುಚ್ಚುವುದು" ಎಂದು ಹೇಳುತ್ತೇವೆ.

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವಿತ್ತೀಯ ಕಾರ್ಯಕಲಾಪಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಆದರೆ ಆರ್ಥಿಕ ಇಲಾಖೆಯ ಒಬ್ಬರೂ ಅಧಿಕಾರಿಗಳಿಲ್ಲ. ಈ ಸಮಯದಲ್ಲಿ ಇಲ್ಲಿ ಇರಬೇಕಾದಂತಹ ಅಧಿಕಾರಿಗಳ ಪಟ್ಟಿಯ ಪ್ರಕಾರ ಶ್ರೀ ಜಾವೇದ್ ಅಖ್ತರ್,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶ್ರೀ ವಿಜಯಕುಮಾರ್ ಗೋಗೆ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರು ಇರಬೇಕು. ಇದರಲ್ಲಿ ಶ್ರೀ ವಿಜಯಕುಮಾರ್ ಗೋಗೆ ಅವರು ಇಲ್ಲಿ ಇದ್ದಾರೆ.

**ಸಭಾಪತಿಯವರು:-** ಮಾನ್ಯ ಪ್ರತಿಪಕ್ಷನಾಯಕರೇ, ಈಗ ವಿತ್ತೀಯ ಕಾರ್ಯಕಲಾಪವನ್ನು ಪ್ರಾರಂಭ ಮಾಡಲಾಗಿದೆ. ನಂತರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿಷಯವೊಂದು ಚರ್ಚೆಯಾಗಬೇಕಿದೆ. ಗಮನ ಸೆಳೆಯುವ ಸೂಚನೆಗಳಿವೆ, ನಿಯಮ 330ರ ಮೇರೆಗೆ ಪ್ರಸ್ತಾಪಿಸುವ ವಿಷಯಗಳಿವೆ, ಅರ್ಧಗಂಟೆ ಕಾಲಾವಧಿಯ ಚರ್ಚೆಯು ಇದೆ. ಈ ವಿತ್ತೀಯ ಕಲಾಪವನ್ನು ಪೂರ್ಣ ಮಾಡದೆ ಇದ್ಯಾವುದನ್ನೂ ಕೈಗೆತ್ತಿಕೊಳ್ಳುವುದಕ್ಕಾಗುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಹಾಗಾದರೆ ನನ್ನ ಹೆಸರನ್ನು ಏಕೆ ಕರೆದಿರಿ?

**ಸಭಾಪತಿಯವರು:-** ತಮ್ಮಿಂದಲೇ ಚರ್ಚೆಯನ್ನು ಮೊದಲು ಮಾಡಬೇಕು. ಪ್ರಾರಂಭವನ್ನೇ ಮಾಡದೆ ಮುಗಿಸಲು ಆಗುತ್ತದೆಯೇ? ಆದಕಾರಣ ವಿತ್ತೀಯ ಕಲಾಪವನ್ನು ಪ್ರಾರಂಭ ಮಾಡಲು ತಮ್ಮನ್ನು ಕರೆದಿದ್ದೇವೆ. ಇಂದು ನೀವೇ ಮಾತನಾಡುತ್ತೀರೆಂದರೆ ನನ್ನದೇನೂ ಆಕ್ಷೇಪವಿಲ್ಲ. ಏಕೆಂದರೆ ತಮ್ಮ ಹೆಸರನ್ನು ಕರೆದಾಗಿದೆ. ಅದನ್ನು ಪೂರ್ಣ ಮಾಡುವವರೆವಿಗೂ ತಮಗೆ ತಮ್ಮದೇ ಆದ ಹಕ್ಕಿದೆ. ಈಗಿನ ಪರಿಸ್ಥಿತಿಯಲ್ಲಿ ನಮ್ಮೆಲ್ಲರ ಮುಂದೆ ಇಷ್ಟು ಕಾರ್ಯಕಲಾಪಗಳಿವೆ. ಇದನ್ನು ಯಾವ ರೀತಿ ನಿಭಾಯಿಸಬೇಕೆಂದು ಸಭಾನಾಯಕರು...

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಈಗ ಅವರು ಮಾತನಾಡಿದ್ದಾರೆ. ಅವರು ಪುನಃ ತಮ್ಮ ಮಾತನ್ನು ನಾಳೆ ಮುಂದುವರೆಸಲಿ. ಈಗ ಉಳಿದ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಿ. ಮಾನ್ಯ ಪಾಟೀಲರೇ, ತಾವು ತಮ್ಮ ಮಾತನ್ನು ನಾಳೆ ಮುಂದುವರೆಸಿ.

**ಸಭಾಪತಿಯವರು:-** ಮಾನ್ಯ ವಿಪಕ್ಷನಾಯಕರೇ, ಅದು ತಮ್ಮ ತೀರ್ಮಾನ. ಮೊದಲ ಅವಕಾಶ ತಮಗೆ, ಬೇರೆಯವರಿಗೆ ಕೊಡುವಂತೆ ಇಲ್ಲ. ಇರುವುದು ಒಂದು ದಿನ ಅವಕಾಶ. ಮೂರು ಪಕ್ಷದವರಿಗೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನಾಡಲು ಅವಕಾಶ ಕೊಡಬೇಕು. ತಾವು ಮಾತನಾಡಬೇಕು, ಜೆ.ಡಿ.(ಎಸ್) ನವರೂ ಮಾತನಾಡಬೇಕು, ಸರ್ಕಾರದ ಕಡೆಯಿಂದಲೂ ಮಾತನಾಡಬೇಕು. ಇದಾದ ನಂತರ ಉತ್ತರ ಹೇಳಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ರೇವಣ್ಣನವರು ಅಧಿಕಾರಿಗಳ ಗೈರುಹಾಜರಾತಿಯ ಬಗ್ಗೆ ಪ್ರಸ್ತಾಪಿಸಿದರು. ನಾವು ಎಷ್ಟು ಬಾರಿ ಅದನ್ನು ಹೇಳುವುದು?

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳಿಗೆ ಏಕೆ ಆ ಅಸಹಾಯಕತೆ? ಇಲ್ಲಿ ಮಾನ್ಯ ಉಪಮುಖ್ಯಮಂತ್ರಿಯವರು ಕುಳಿತಿದ್ದಾರೆ. ಒಳ್ಳೆಯ ನಾಯಕರು ಅವರು. ಹಿರಿಯ ನಾಯಕರಾದ ಶ್ರೀ ಕೆ.ಎಸ್.ಈಶ್ವರಪ್ಪನವರು ಕುಳಿತಿದ್ದಾರೆ. ನಮ್ಮನ್ನು 'ಟಗರು' ಎಂದು ರೇಗಿಸುತ್ತಿರುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈಗ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಇನ್ನೂ ಮೂರು ನಾಲ್ಕು ಜನ ಮಾತನಾಡಬಹುದು. ಇದನ್ನೊಂದು ಮುಗಿಸಿ, ನಾಳೆ ಉತ್ತರವನ್ನು ಕೊಡುವಂತಹ ಸ್ಥಿತಿಯನ್ನು ತಾವು ನಿರ್ಮಾಣ ಮಾಡಿಬಿಡಿ. ಉಳಿದ ಎಲ್ಲಾ ಅಜೆಂಡಾವನ್ನು ನಾಳೆ ತೆಗೆದುಕೊಳ್ಳೋಣ. ಇದರ ಮಧ್ಯೆ ಮಾನ್ಯ ಈಶ್ವರಪ್ಪನವರು ಶೂನ್ಯವೇಳೆಯ ಪ್ರಶ್ನೆಯೊಂದಕ್ಕೆ ಉತ್ತರವನ್ನು ಕೊಡಬೇಕಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾನಾಯಕರೇ, ಇಲ್ಲಿ ಯಾರೂ ಅಧಿಕಾರಿಗಳಿಲ್ಲವೆಂದು ನಾವು ಶಂಖ ಊದುತ್ತಿದ್ದೇವೆ. ನೀವು ಪುನಃ ಅದನ್ನೇ ಹೇಳುತ್ತಿದ್ದೀರಲ್ಲ. ನಿಮಗೂ ನಾಚಿಕೆಯಿಲ್ಲ. ನಮಗೂ ನಾಚಿಕೆಯಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮುಖ್ಯ ಸಚೇತಕರು ಎಲ್ಲರನ್ನೂ ಕರೆಸುತ್ತಿದ್ದಾರೆ. ನಾಳೆ ಯಾರು ಮಾತನಾಡುತ್ತಾರೆಯೋ ಮಾತನಾಡಲಿ. ನಾಳೆ ಬೆಳಿಗ್ಗೆ ಪ್ರಶ್ನೋತ್ತರವನ್ನು ತೆಗೆದುಕೊಂಡು ನಂತರ ವಿತ್ತೀಯ ಕಾರ್ಯಕಲಾಪವನ್ನು ಮುಂದುವರೆಸೋಣ.

**ಶ್ರೀ ಕೆ.ಎಸ್.ಈಶ್ವರಪ್ಪ:-**ಮಾನ್ಯ ಹೊರಟ್ಟಿಯವರೇ, ಒಂದು ನಿಮಿಷ ನನ್ನ ಮಾತನ್ನು ಕೇಳಿ. ಇಂದು ವಿಧಾನ ಸಭೆಯಲ್ಲಿಯೂ ಕೂಡ ಆಯವ್ಯಯದ ಬಗ್ಗೆ ಚರ್ಚೆ ನಡೆಯುತ್ತಿದೆ. ಹಾಗಾಗಿ ಆರ್ಥಿಕ ಇಲಾಖೆಯ ಪ್ರಮುಖ ಅಧಿಕಾರಿಗಳು ಅಲ್ಲಿದ್ದಾರೆ. ಅದಕ್ಕಾಗಿ ಅವರು ಕೆಲವರನ್ನು ಇಲ್ಲಿಗೆ ಕಳುಹಿಸಿದ್ದಾರೆ.

**ಶ್ರೀ ಹೆಚ್.ಎಂ.ರೇವಣ್ಣ:-** ಯಾರೂ ಇಲ್ಲವೇ ಇಲ್ಲವಲ್ಲ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:–** 'ಇಲ್ಲ' ಎಂದು ಒಂದೇ ಮಾತಿನಲ್ಲಿ ಹೇಗೆ ಹೇಳುತ್ತೀರಿ? ಇದ್ದಾರೆ. ವಿರೋಧ ಪಕ್ಷದಲ್ಲಿದ್ದೇವೆ ಎಂಬ ಕಾರಣಕ್ಕಾಗಿ ವಿರೋಧಿಸಬಾರದೆಂಬುದು ನನ್ನ ಪ್ರಾರ್ಥನೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಈಶ್ವರಪ್ಪನವರೇ, ನೀವು ವಿರೋಧಪಕ್ಷದ ನಾಯಕರಾಗಿ ಇಲ್ಲಿ ಮಾಡುತ್ತಿದ್ದ ಹಾವಳಿಯಲ್ಲಿ ಶೇ.10ರಷ್ಟು ಕೂಡ ನಾವು ಮಾಡುತ್ತಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಹಾಗಾದರೆ ನೀವು ವಿಫಲರಾಗಿದ್ದೀರಿ ಎಂಬುದನ್ನು ಒಪ್ಪಿಕೊಂಡಂತಾಯಿತಲ್ಲವೆ?

**ಶ್ರೀ ಹೆಚ್.ಎಂ.ರೇವಣ್ಣ:–** ಕೇವಲ ಕೂಗಾಡುತ್ತಲೇ ಇರುವುದು, ಸದನವನ್ನು ನಡೆಸುವುದಕ್ಕೆ ಬಿಡುತ್ತಿರಲಿಲ್ಲ. ನಾವು ವಿರೋಧ ಪಕ್ಷದಲ್ಲಿದ್ದೇವೆಂದು ವಿರೋಧವನ್ನು ಮಾಡುತ್ತಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯಸಚೇತಕರು):–** ಮಾನ್ಯ ಸಭಾಪತಿಯವರೇ, ನಾವು unnecessary ಆಗಿ ಕೂಗಾಡುತ್ತಿಲ್ಲ. ಇಲ್ಲಿ ಅಧಿಕಾರಿಗಳು ಹಾಜರಿಲ್ಲದಿರುವುದನ್ನು ಕೇಳುತ್ತಿದ್ದೇವೆ.

**(...ಮುಂದು)**

(684) 23–03–2020 (6–10) ಕೆಜಿ / ಬಿಎನ್ಎಸ್

**10. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಚಿವರಿಂದ ಉತ್ತರ**

**ವಿಷಯ:–** **"ದಿನಾಂಕ 21.3.2020ರ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿಯಾಗಿರುವಂತೆ ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕು ಸುರಗಜಕ್ಕನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಬರುವ ಗೌರೇನ ಹಳ್ಳಿಯಲ್ಲಿ 'ನಲ್ಲಿ(ಕೊಳಾಯಿ) ನೀರಿನಲ್ಲಿ ಇಲಿ ಚರ್ಮ, ಜಿರಳೆಗಳಿಂದ ಕೂಡಿದ ನೀರು' ಸರಬರಾಜು" ಬಗ್ಗೆ**

– – –

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಂ.ರೇವಣ್ಣನವರು ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕು, ಸುರಗಜಕ್ಕನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಗೌರೇನಹಳ್ಳಿಯಲ್ಲಿ ಕುಡಿಯಲು ಸರಬರಾಜು ಮಾಡುತ್ತಿದ್ದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಲ್ಲಿ ನೀರಿನಲ್ಲಿ ಇಲಿ ಚರ್ಮ, ಜಿರಳೆ ಹಾಗೂ ಕಂಬಳಿ ಹುಳಗಳು ಸೇರಿ ಕಲುಷಿತ ನೀರು ಬರುತ್ತಿದೆ ಎಂಬ ದೂರಿನ ಬಗ್ಗೆ ಪರಿಶೀಲನಾ ವರದಿ ಸಲ್ಲಿಸುವ ಕುರಿತು.

ಮಾನ್ಯ ಸಭಾಪತಿಯವರೇ, ಏಕೆಂದರೆ, ಬೆಳಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಾಗ ನಾನು ಉನ್ನತ ಮಟ್ಟದ ಅಧಿಕಾರಿಗಳನ್ನು ಆ ಗ್ರಾಮಕ್ಕೆ ಕಳುಹಿಸಿದ್ದೆ. ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಂ.ರೇವಣ್ಣನವರು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅದಕ್ಕೆ ನಾನು ಅವರನ್ನು appreciate ಮಾಡುತ್ತೇನೆ. ಆದಾಗ್ಯೂ ಮಾನ್ಯ ಸದಸ್ಯರು ನನಗೆ ಬೈದರೆ ಏನು ಹೇಳಲಿ? ಮಾನ್ಯ ಸದಸ್ಯರು ಬೆಳಗ್ಗೆ ಪ್ರಸ್ತಾಪ ಮಾಡಿದ್ದಾರೆ, ತಕ್ಷಣ ಉತ್ತರ ಕೊಡುತ್ತಿದ್ದೇನೆಂದರೆ, ಅವರು ನಮ್ಮನ್ನು appreciate ಮಾಡಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ರೇವಣ್ಣನವರ ಮೇಲೆ ಮಾನ್ಯ ಸಚಿವರಿಗೆ ಎಷ್ಟು ಪ್ರೀತಿ ಇದೆ ನೋಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:-**ಮಾನ್ಯ ಸಭಾಪತಿಯವರೇ, ಮಾನ್ಯ ಹೊರಟ್ಟಿಯವರಿಗೆ ಬೇರೆ ಪ್ರಾಣಿಗಳ ಬಗ್ಗೆ ಆಸ್ತಕಿ ಇಲ್ಲ. ನಾನು ಸಂತೋಷ ಪಡುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ:-**ಮಾನ್ಯ ಸಭಾಪತಿಯವರೇ, ನಾನು ಆ ಗ್ರಾಮದ ನಲ್ಲಿ ನೀರಿನಲ್ಲಿ ಇಲಿ ಚರ್ಮ, ಜಿರಲೆ ಹಾಗೂ ಕಂಬಳಿ ಹುಳಗಳು ಸೇರಿ ಕಲುಷಿತಗೊಂಡು ಆ ನೀರು ಕುಡಿದು ಅಲ್ಲಿನ ಜನರು ಸಾಯುತ್ತಿದ್ದಾರೆಂದು ಹೇಳಿದರೆ, ಮಾನ್ಯ ಸಚಿವರು ಏನೇನೂ ಮಾತನಾಡುತ್ತಾರೆ. ಮಾನ್ಯ ಸಚಿವರ ಘನತೆಗೆ ತಕ್ಕ ಮಾತಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-**ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಬಸವರಾಜ ಹೊರಟ್ಟಿಯವರು 7 ಬಾರಿ ಆಯ್ಕೆಯಾಗಿ ಬಂದಿದ್ದಾರೆ. ಸದನದಲ್ಲಿ ಬೆಳಗ್ಗೆ ಪ್ರಸ್ತಾಪ ಮಾಡಿದ್ದ ವಿಷಯಕ್ಕೆ ಅದೇ ದಿವಸ ಸಂಜೆ ಯಾವುದಾದರು ಸರ್ಕಾರ ಉತ್ತರ ಕೊಟ್ಟಿದೆಯೇ? ನಾವು ಕೊಟ್ಟಿದ್ದೇವೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದಕ್ಕೆ ಮಾನ್ಯ ಸಚಿವರಿಗೆ ಧನ್ಯವಾದಗಳು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-**ಮಾನ್ಯ ಸಭಾಪತಿಯವರೇ, ನಾನು ಬೆಳಗ್ಗೆ ತಮಗೆ ಸಂಜೆಯೊಳಗೆ ವರದಿ ಕೊಡುತ್ತೇನೆಂದು ಹೇಳಿದ್ದೆ. ಈಗ ಅಧಿಕಾರಿಗಳು ಆ ಗ್ರಾಮಕ್ಕೆ ಹೋಗಿ ಬಂದಿದ್ದಾರೆ. ಅಧಿಕಾರಿಗಳು ಕೊಟ್ಟಂತಹ ವರದಿ ಇಲ್ಲಿದೆ. ವಿಷಯಕ್ಕೆ ಸಂಬಂಧಪಟ್ಟಂತೆ, ದಿನಾಂಕ 23.03.2020 ರಂದು ಉಪ ಕಾರ್ಯದರ್ಶಿಗಳು, ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ಮತ್ತು ಕಾರ್ಯನಿರ್ವಹಣಾಧಿಕಾರಿಗಳು ಆನೇಕಲ್, ಇವರು ಗೌರೇನಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಸ್ಥಳಪರಿಶೀಲನೆ ನಡೆಸಿ ವರದಿಯನ್ನು ಸಲ್ಲಿಸಿರುತ್ತಾರೆ. ಆ ಗ್ರಾಮದ ಕೆಲವು ಬೀದಿಗಳಲ್ಲಿ ಭೂ-ಮಟ್ಟಕ್ಕೆ ನಲ್ಲಿಯ ಟ್ಯಾಪ್ ಪೈಪ್‌ಗಳನ್ನು ಅನಧಿಕೃತವಾಗಿ ಮುರಿದು ಹಾಕಿದ್ದು, ಈ ರೀತಿ ಮುರಿದು ಹೋಗಿರುವಂತಹ ನಲ್ಲಿಯೊಳಗೆ ಇಲಿಗಳು ಮತ್ತು ಜಿರಳೆಗಳು ರಾತ್ರಿ ವೇಳೆ ಹೋಗಿರುವಂತಹ ಸಂಭವವಿರುವುದರಿಂದ ನೀರು ಬಿಟ್ಟಾಗ ನೀರಿನ ಜೊತೆಗೆ ಇಲಿ ಚರ್ಮ ಮತ್ತು ಜಿರಳೆ ಬಂದಿರುವಂತಹ ಸಂಭವ ಇರುತ್ತದೆ. OHP ಅನ್ನು ಸ್ವಚ್ಛಗೊಳಿಸಿರುವುದು ಕಂಡುಬರುತ್ತದೆ. ಅಲ್ಲದೇ ಸದರಿ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಇರುತ್ತದೆ. ಈ ಘಟಕದ ನೀರನ್ನು ಸಹ ಆ ಗ್ರಾಮಸ್ಥರು ಕುಡಿಯುವ ನೀರಿಗಾಗಿಯೇ ಬಳಕೆ ಮಾಡುತ್ತಿದ್ದಾರೆ. ನಲ್ಲಿಯ ನೀರನ್ನು ಸ್ನಾನ ಮಾಡಲು, ಬಟ್ಟೆ, ಒಗೆಯಲು ಮತ್ತು ಪಾತ್ರೆಗಳನ್ನು ತೊಳೆಯಲು ಬಳಸುತ್ತಿದ್ದಾರೆಂದು ಉಪ ಕಾರ್ಯದರ್ಶಿಗಳು, ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ಮತ್ತು ಕಾರ್ಯನಿರ್ವಹಣಾಧಿಕಾರಿಗಳು ಆನೇಕಲ್, ಇವರು ತಮ್ಮ ಜಂಟಿ ಸ್ಥಳ ತನಿಖಾ ವರದಿಯನ್ನು ಸಲ್ಲಿಸುತ್ತಿರುತ್ತಾರೆ. ವರದಿಯ ಪ್ರತಿ ಮತ್ತು ಸ್ಥಳತನಿಖಾ ವರದಿಯನ್ನು ಮತ್ತು click ಮಾಡಲಾದ ಛಾಯಾ ಚಿತ್ರಗಳನ್ನು ಸಹ ಇದರ ಜೊತೆಗೆ ತಮಗೆ ಕಳುಹಿಸುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ಸದರಿ ಸಮಸ್ಯೆಯನ್ನು ಬಗೆಹರಿಸಲು ನಲ್ಲಿಗಳನ್ನು ಎತ್ತರಕ್ಕೆ ಅಳವಡಿಸುವಂತೆ ಸೂಚಿಸಲಾಗಿದೆ. ಅನಧಿಕೃತವಾಗಿ ಮತ್ತು ನಲ್ಲಿಗಳನ್ನು ಮುರಿದು ಹಾಕಿರುವವರ ವಿರುದ್ಧ ಕಾನೂನು ರೀತಿ ಕ್ರಮಕೈಗೊಳ್ಳುವಂತೆ ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಲಾಗಿದೆ. ಮುಂದುವರಿದು ಮೇಲ್ಕಂಡ ಅಧಿಕಾರಿಗಳು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ. ಇನ್ನು ಮುಂದೆ ಈ ರೀತಿಯ ತೊಂದರೆಗಳು ಮರುಕಳುಹಿಸದಂತೆ ಎಚ್ಚರವಹಿಸುವಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಿ ಹೇಳಲಾಗಿದೆ ಎಂದು ವರದಿಯನ್ನು ಕಳುಹಿಸಿರುತ್ತಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಹೆಚ್.ಎಂ.ರೇವಣ್ಣ:-**ಮಾನ್ಯ ಸಭಾಪತಿಯವರೇ, ಈ ರೀತಿಯ ಸಮಸ್ಯೆಗಳು ಆಗಿರುವುದರಿಂದ, ಇಂತಹ ಸಂದರ್ಭದಲ್ಲಿ ಅಲ್ಲಿನ ಅಧಿಕಾರಿಗಳನ್ನು suspend ಮಾಡುವುದು ಬೇಡವೇ?

**ಶ್ರೀ ಕೆ.ಎಸ್.ಈಶ್ವರಪ್ಪ:-**ಮಾನ್ಯ ಸಭಾಪತಿಯವರೇ, ಇದರಲ್ಲಿ ಎರಡೂ ಇದೆ. ಪೈಪ್‌ನ್ನು ತುಳಿದು ಹಾಳು ಮಾಡಿರುತ್ತದೆ. ಅದರಲ್ಲಿ ಇವೆಲ್ಲಾ ಬಂದಿರುತ್ತವೆ.

**ಸಭಾಪತಿಯವರು:-** ರೇವಣ್ಣನವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ನಿಮ್ಮ ಅಭಿಪ್ರಾಯ ಕೇಳುವುದು ಏನೆಂದರೆ, conclude ಮಾಡಬೇಕಾದರೆ ತಾವು ಮಾತನಾಡಬೇಕು. ಆನಂತರ ಜೆಡಿ(ಎಸ್)ನವರು ಮಾತನಾಡಬೇಕು. ಆದಕಾರಣ, ನೀವು ಈಗ 45 ನಿಮಿಷಗಳ ಕಾಲ ಮಾತನಾಡಿ. ನಂತರ ಜೆಡಿ(ಎಸ್) ನವರು 45 ನಿಮಿಷಗಳ ಕಾಲ ಮಾತನಾಡಲಿ. ಆನಂತರ ನಿಯಮ 330ರ ಮೇರೆಗೆ ಮತ್ತು ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ. ನಂತರ ಸಚಿವರು ಬರುತ್ತಾರೆ, ಕೊರೊನಾ ವೈರಸ್ ಮೇಲಿನ ಚರ್ಚೆಯನ್ನು ತೆಗೆದುಕೊಳ್ಳೋಣ. ಈಗ ತಾವು 45 ನಿಮಿಷಗಳ ಕಾಲ ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗ ನಾನು ಮಾತನಾಡುವುದಿಲ್ಲ. ನಾನು ನಾಳೆ ಬೆಳಗ್ಗೆ ಮಾತನಾಡುತ್ತೇನೆ.

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ನೀವು ಪ್ರಾರಂಭ ಮಾಡಿದ್ದೀರಿ, ಅದಕ್ಕೆ ನಿಮಗೆ ಹೇಳುತ್ತಿದ್ದೇನೆ. ಹಾಗಾದರೆ, ಈಗ ಜೆಡಿ(ಎಸ್)ನವರು ಮಾತನಾಡಬಹುದೇ;

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ನಾಳೆ ಬೆಳಿಗ್ಗೆ ಮಾತನಾಡುತ್ತೇನೆ. ಅವರು ಮಾತನಾಡಬಹುದು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಬಗ್ಗೆ ಈಗ ಚರ್ಚೆಗೆ ತೆಗೆದುಕೊಳ್ಳುತ್ತೀರೋ ಅಥವಾ ಇಲ್ಲವೋ, ಈ ವಿಷಯ ಇವತ್ತಿನ agenda ದಲ್ಲಿ ಇದೆ. ಈಗ ವಿರೋಧ ಪಕ್ಷದ ನಾಯಕರು ಮತ್ತು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜೆಡಿ(ಎಸ್)ನವರು ಮಾತನಾಡುವಷ್ಟರಲ್ಲಿ ಸಮಯ ಮುಗಿಯುತ್ತದೆ. ಹಾಗಾಗಿ, ಇದರ ಬಗ್ಗೆ ಚರ್ಚೆಗೆ ಸಮಯ ಸಿಗುವುದಿಲ್ಲ. ಈಗ ಸಾಧ್ಯವಾದರೆ ಈಗಲೇ ತೆಗೆದುಕೊಳ್ಳಿ. ಇಲ್ಲವೆಂದರೆ ನಾಳೆ ತೆಗೆದುಕೊಳ್ಳಿ.

**ಶ್ರೀ ಶ್ರೀನಿವಾಸ ಕೋಟ ಪೂಜಾರಿ (ಸಭಾನಾಯಕರು)–** ಮಾನ್ಯ ಸಭಾಪತಿಯವರೇ, ನಾಳೆಗೆ ತೆಗೆದುಕೊಳ್ಳಿ.

**ಸಭಾಪತಿಯವರು:–** ಮಾನ್ಯ ಸಚಿವರೇ, ನಾಳೆ ತೆಗೆದುಕೊಳ್ಳುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, agenda ದಲ್ಲಿ ಜಾಸ್ತಿ ವಿಷಯಗಳು ಇರುವುದರಿಂದ, ಈಗ ಆ ವಿಷಯಗಳನ್ನು ತೆಗೆದುಕೊಳ್ಳಿ. ನಮ್ಮ ವಿರೋಧ ಪಕ್ಷದ ನಾಯಕರು ನಾಳೆ ಬೆಳಗ್ಗೆ ಮಾತನಾಡುತ್ತಾರೆ. ಆನಂತರ ಉಳಿದ ಸದಸ್ಯರು ಮಾತನಾಡಲಿ.

**ಸಭಾಪತಿಯವರು:–** ಸದಸ್ಯರೇ, ಆಯಿತು ಬಿಡಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಈಗ ನಿಯಮ 72 ರಡಿ ತೆಗೆದುಕೊಳ್ಳುತ್ತೀರಾ;

**ಸಭಾಪತಿಯವರು:–** ಸದಸ್ಯರೇ, ಈಗ ಜೆಡಿ(ಎಸ್) ಸದಸ್ಯರು ಮಾತನಾಡಲಿ. ನಂತರ ಹೇಳುತ್ತೇನೆ. ತಿಪ್ಪೇಸ್ವಾಮಿಯವರೇ, ತಾವೀಗ ಮಾತನಾಡಿ.

**11. ವಿತ್ತೀಯ ಕಾರ್ಯಕಲಾಪಗಳು**

**2020–2021ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ**

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯ ಮಂತ್ರಿಯವರು ಮಂಡಿಸಿರುವಂತಹ ರಾಜ್ಯದ ಆಯವ್ಯಯದ ಮೇಲೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಯಾವುದೇ ರಾಜ್ಯದ ಅಥವಾ ದೇಶದ ಆರ್ಥಿಕ ವ್ಯವಸ್ಥೆಯನ್ನು ವಿಮರ್ಶಿಸುವಾಗ ಜಾಗತಿಕ, ಆರ್ಥಿಕ ವ್ಯವಸ್ಥೆಯನ್ನೂ ಸಹ ನಾವು ಅವಲೋಕಿಸಬೇಕಾಗುತ್ತದೆ. ಏಕೆಂದರೆ, ಇಂದಿನ ನಾವೆಲ್ಲರೂ ಇರುವ ಪ್ರಪಂಚದಲ್ಲಿ ಹಲವಾರು ರಾಷ್ಟ್ರಗಳು ಒಂದಲ್ಲ ಒಂದು ವಿಧದಲ್ಲಿ ಪರಸ್ಪರ ಆರ್ಥಿಕ ವ್ಯವಸ್ಥೆಯಲ್ಲಿ ಒಂದಕ್ಕೊಂದು ಅವಲಂಬಿತವಾಗಿವೆ. ಇದಕ್ಕೆ ಅರ್ಥಗರ್ಭಿತವಾದ ಮಾತನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಮೆರಿಕಾದ 33ನೇ ಅಧ್ಯಕ್ಷರಾದ Harry S. Truman ರವರು ಈ ಹೇಳಿದ್ದಾರೆ;"It's a recession when your neighbour loses his job; it's a depression when you lose yours." ಈ ಹಿಂದೆ ಜಗತ್ತಿನ ಆರ್ಥಿಕ ವ್ಯವಸ್ಥೆ 1980, 1990, 2001 ಮತ್ತು 2007 ರಲ್ಲಿ ಒಟ್ಟು 4 ಬಾರಿ ಕುಸಿದಿದೆ. ಅದೇರೀತಿಯಲ್ಲಿ ಅಮೆರಿಕಾದಲ್ಲಿ 1929 ರಲ್ಲಿ ಉಂಟಾದ Economic Great Depression ಸುಮಾರು ಒಂದು ದಶಕಗಳ ಕಾಲ ಇತ್ತು. ಆ Great Depression ನಿಂದ ಸುಮಾರು 15 ಲಕ್ಷ ಜನರು ತಮ್ಮ ಉದ್ಯೋಗಗಳನ್ನು ಕಳೆದುಕೊಂಡರು. ಬಹುತೇಕ ಬ್ಯಾಂಕ್‌ಗಳು ದಿವಾಳಿಯಾದವು. ಅದೇ ರೀತಿ ಕಾರ್ಖಾನೆಗಳು ಮುಚ್ಚಿಕೊಂಡು ಹೋದವು. ಡಾಲರ್ ಬೆಲೆ ಕುಸಿದು ಹೋಯಿತು. ಅಂದು ಮುಖ್ಯವಾಗಿ ನೀಡುತ್ತಿದ್ದಂತಹ ಬ್ರೆಡ್‌ಗೆ ಬಡವ ಶ್ರೀಮಂತ ಎನ್ನುವಂತಹ ಯಾವುದೇ ಬೇದಭಾವ ಇಲ್ಲದೇ ಜನರು ಸರದಿಯಲ್ಲಿ ನಿಂತರು. ಮುಚ್ಚಿಹೋದ ಕಾರ್ಖಾನೆಗಳು ಅಥವಾ ಬ್ಯಾಂಕುಗಳು ಮತ್ತೊಮ್ಮೆ reopen ಆಗಲಿಲ್ಲ. ಅಂದರೆ, ಅವತ್ತಿನ Great Depression ನ ನಿಖರತೆ ಎಷ್ಟು ಇತ್ತು ಎಂದರೆ ಸುಮಾರು ಎರಡು ದಶಕಗಳ ಕಾಲವಾದರೂ ಸಹ ಅದು ವಾಪಸ್ಸು ಪುನಶ್ಚೇತನಗೊಳ್ಳಲಿಲ್ಲ. ಅಮೆರಿಕಾದಲ್ಲಿ 2008 ರಲ್ಲಿ ಉಂಟಾದ ಆರ್ಥಿಕ ವ್ಯವಸ್ಥೆಯಲ್ಲಿ ಮುಗ್ಗಟ್ಟು ಪ್ರತಿಯೊಬ್ಬರ ಜೀವನವನ್ನು ಸಂಕಷ್ಟಕ್ಕೆ ಈಡುಮಾಡಿತ್ತು. ಏಕೆಂದರೆ, American economy is a consumption based economy. ಆ ದೇಶದ GDP ಯ ಮೂರನೆ ಎಡರಷ್ಟು ಭಾಗ ಗ್ರಾಹಕರಿಂದ ಬರುತ್ತದೆ. ಆ ದೇಶದ ಜನರ ಬದುಕು credit card ಚಲಾವಣೆ, ಬ್ಯಾಂಕ್‌ಗಳಿಂದ ಮನೆ ಮತ್ತು ವಾಹನಗಳನ್ನು ಖರೀದಿಸಲು ಮತ್ತು personal consumption ಗೆ ಪಡೆದ ಸಾಲಗಳ ಮೇಲೆ ಅವಲಂಬಿತವಾಗಿರುತ್ತದೆ. ಈ ಗ್ರಾಹಕರು ಯಾವಾಗ ಅಡೆತಡೆ ಇಲ್ಲದೆ credit card ಗಳನ್ನು ಮತ್ತು ಬ್ಯಾಂಕ್ ಸಾಲಗಳನ್ನು ಉಪಯೋಗಿಸಿಕೊಂಡರೊ ಬ್ಯಾಂಕ್‌ಗಳು ಸರಳವಾಗಿ ನೀಡುತ್ತಿದ್ದಂತಹ ಸಾಲಗಳನ್ನು ಬಿಗಿಗೊಳಿಸಿ ತಮ್ಮ ಸಂಪನ್ಮೂಲಗಳನ್ನು ಭದ್ರಮಾಡಿಕೊಂಡವು. ಇಂತಹ ಕ್ರಮದಿಂದ ದಿಢೀರನೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಡಾಲರ್ ಬೆಲೆ ಕುಸಿಯಿತು. ಕಚ್ಚಾ ತೈಲದ ಬೆಲೆಗಳು ಗಗನಕ್ಕೆ ಏರಿದವು. ಅಮೇರಿಕಾದ GDP ಯ ವೃದ್ಧಿ ಶೇಕಡಾ 2% ಕೆಳಗೆ ಇಳಿಯಿತು. Lehman Brothers Bank, Merrill Lynch, ಮುಂತಾದ ಪ್ರಖ್ಯಾತ ಬ್ಯಾಂಕ್‌ಗಳು ದಿವಾಳಿ ಆದವು. ಭಾರತವು ಒಳಗೊಂಡಂತೆ ಯಾವುದೇ ರಾಷ್ಟ್ರವಾಗಲಿ ಈ ಬಗ್ಗೆ ಮುನ್ನಚ್ಚರಿಕೆ ಅಗತ್ಯ ಕ್ರಮವನ್ನು ವಹಿಸಬೇಕು. ಏಕೆಂದರೆ, ಯಾವುದೇ ಆರ್ಥಿಕ ತಜ್ಞ ಅಂದರೆ,

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Economic Pandith, ಜಗತ್ತಿನ ಯಾವುದೇ ದೇಶಗಳಲ್ಲಿ, ಯಾವ ಸಮಯದಲ್ಲಿ ಆರ್ಥಿಕ ಮುಗ್ಗಟ್ಟು ಉಂಟಾಗುತ್ತದೆ ಎಂದು ಭವಿಷ್ಯವನ್ನು ನುಡಿಯಲಾರ.

ಮಾನ್ಯ ಸಭಾಪತಿಯವರೇ, ಇಂದು ನಮ್ಮ ಪಕ್ಕದ ರಾಷ್ಟ್ರವಾದ ಚೀನಾದ ಆರ್ಥಿಕ ಸ್ಥಿತಿಯ ಸಂಕಷ್ಟದ ಬಗ್ಗೆ ಮಾತನಾಡುವುದಾದರೆ, there is a famous say about American economy; 'even if America sneezes, the World gets flu or pneumonia', ಆದರೆ ಈಗ ಪರಿಸ್ಥಿತಿ ಬದಲಾಗಿದೆ; 'when China sneezes, the entire World gets infected with Corona virus'. ಚೀನಾ ದೇಶದ ಅತಿದೊಡ್ಡ ಕೈಗಾರಿಕೆಯ ಕೇಂದ್ರವಾದ Wuhan city ಅನ್ನು ದಿಗ್ಬಂಧನದಲ್ಲಿ ಇಡಲಾಗಿದೆ. ಈ ನಗರದಿಂದ ಇಡೀ ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿ ಬೇಡಿಕೆಯ ಶೇಕಡಾ 50% ರಷ್ಟು ಭಾಗ ಇಲ್ಲಿಂದ export ಆಗುತ್ತದೆ. ಈ ನಗರವನ್ನು 'Tier-1 City' ಎಂದು ಗುರುತಿಸಲಾಗಿದೆ. ಅದೇ ರೀತಿ ಈ ನಗರದ ಅಕ್ಕಪಕ್ಕ ಇರುವಂತಹ 'Tier-2 City' ಎಂದು ಗುರುತಿಸಲಾಗಿರುವ ನಗರಗಳಾದ,Guangzhou, Guangdong province ಮತ್ತು ಇತರೆ ಪ್ರದೇಶಗಳು ಶೇಕಡಾ 50% ರಷ್ಟು export ಬೇಡಿಕೆಗಳನ್ನು ಪೂರೈಸಿರುತ್ತವೆ. Corona virus ನಿಂದ ಚೀನಾ ದೇಶದ Industrial Sector ನಲ್ಲಿ ಉಂಟಾಗಿರುವಂತಹ ಅಲ್ಲೋಲ ಕಲ್ಲೋಲ ಇಡೀ ಜಗತ್ತಿನ ಆರ್ಥಿಕ ವ್ಯವಸ್ಥೆಯನ್ನು ತಳಬುಡ ಮಾಡಿದೆ. 2008 ರಲ್ಲಿ ಅಮೇರಿಕಾದಲ್ಲಿ ಉಂಟಾದ economic recession ಗಿಂತ ಹೆಚ್ಚು ಗಂಭೀರವಾಗಿ ಜಗತ್ತಿನಲ್ಲಿರುವ ದೇಶಗಳ ಆರ್ಥಿಕ ವ್ಯವಸ್ಥೆಯನ್ನು ತಲ್ಲಣಗೊಳಿಸಿರುತ್ತದೆ. ಈ ಆರ್ಥಿಕ ಹಿನ್ನಡೆಯಿಂದ ಜಗತ್ತಿನ ರಾಷ್ಟ್ರಗಳಿಗೆ ಹೊರಗಡೆ ಬರಲು ಸುಮಾರು ದಶಕಗಳೆ ಬೇಕಾಗಬಹುದು. ಇತ್ತೀಚಿನ ಅಧ್ಯಯನದ ಪ್ರಕಾರ ಚೀನಾದಲ್ಲಿ ಉತ್ಪಾದಿಸಲಾಗುತ್ತಿರುವ ಉತ್ಪನ್ನಗಳ ಮೇಲೆ ಅವಲಂಬಿತವಾಗಿರುವ ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿನ 55 ಲಕ್ಷ ಕಂಪನಿಗಳು ಭಾದಿತವಾಗಿವೆ. ಮುಂಬರುವ ಎರಡು ಮೂರು ತಿಂಗಳಿನಲ್ಲಿ ಅಂದರೆ, ಮೇ ತಿಂಗಳೊಳಗೆ Wuhan, Guangdong province ನಲ್ಲಿ ಕೈಗಾರಿಕೆ ಉತ್ಪನ್ನಗಳನ್ನು ತಯಾರಿಸಲು ಆಗದಿದ್ದಲ್ಲಿ ಜಗತ್ತಿನ ಆರ್ಥಿಕ ಪರಿಸ್ಥಿತಿ ತುಂಬಾ ಗಂಭೀರ ಮತ್ತು ಭೀಕರತೆ ಕಡೆಗೆ ಮುನ್ನುಗ್ಗಬಹುದು. ಇವತ್ತಿನ Bloomberg economists ಅವರ prediction ಪ್ರಕಾರ.,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು.,)

(685) 23–03–2020(6–20)ಎಂವಿ–ಎಂಡಿ(ವಿಕೆ)

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ಮುಂದು...):–**

ಬಹುಶಃ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಬರದೇ ಇದ್ದರೆ, 1929ರಲ್ಲಿ ಅಮೆರಿಕ ಕಂಡಂತಹ great depression ಗಿಂತ ಮುಂದೆ ಹೋರಾಡತಕ್ಕಂತಹ ಒಂದು ಆರ್ಥಿಕ ಕುಸಿತ ಜಗತ್ತಿನ ಮೇಲೆ ಆಗಬಹುದು ಎಂಬ ಒಂದು ಮುನ್ಸೂಚನೆಯನ್ನು ಕೊಟ್ಟಿದ್ದಾರೆ. ಇನ್ನು ಭಾರತ ದೇಶದ ಕೈಗಾರಿಕೆಗಳು ಚೀನಾದ ಮೇಲೆ ಅವಲಂಬಿತವಾಗಿರುವ ಬಗ್ಗೆ ಹೇಳುವುದಾದರೆ, ಭಾರತ ದೇಶ ಪ್ರತಿ ವರ್ಷ ಸುಮಾರು 70 ಬಿಲಿಯನ್ ಡಾಲರ್‌ನಷ್ಟು ಸಾಮಾಗ್ರಿಗಳನ್ನು ಚೀನಾ ದೇಶದಿಂದ ಆಮದು ಮಾಡಿಕೊಳ್ಳುತ್ತಿದೆ. ಭಾರತ ಚೀನಾ ದೇಶದಿಂದ ಔಷಧಿಗಳ ತಯಾರಿಕೆಗೆ ಅಗತ್ಯವಿರುವ ಉತ್ಪನ್ನಗಳು ಮತ್ತು 30 ಬಿಲಿಯನ್ ಸ್ಮಾರ್ಟ್‌ಫೋನ್‌ಗೆ ಬೇಕಾಗುವಂತಹ ಎಲೆಕ್ಟ್ರಾನಿಕ್ ಸಾಮಾಗ್ರಿಗಳು, ಸೋಲಾರ್ ಪಾರ್ಕ್ ನಿರ್ಮಿಸಲು ಅಗತ್ಯವಿರುವ Chinese Gear, Toys Manufacturing,Computers, Computer Peripherals, Car's, Air Conditioners ಗಳನ್ನು ಉತ್ಪಾದಿಸುವ ಕೈಗಾರಿಕಾ ಕ್ಷೇತ್ರಗಳು ಸಂಪೂರ್ಣ ಚೀನಾ ದೇಶದಿಂದ ಅಮದು ಮಾಡಿಕೊಳ್ಳುವ ಉತ್ಪನ್ನಗಳ ಮೇಲೆ ಅವಲಂಬಿತವಾಗಿವೆ. ಭಾರತ ದೇಶದಿಂದ ರಫ್ತು ಮಾಡುವ ಉತ್ಪನ್ನಗಳೆಂದರೆ, Organic Chemicals,ಹತ್ತಿ, ಕಬ್ಬಿಣದ ಅದಿರು, Plastic Items ಮತ್ತು ಉಪ್ಪು ಹಾಗೂ ಮುಂತಾದವುಗಳು. ಆದುದರಿಂದ ನೂತನ ಜಿ.ಎಸ್.ಟಿ. ಯೋಜನೆಯಿಂದ ಅಡಕವಾಗಿರುವ ಮತ್ತು GST components ಮೇಲೆ ಅವಲಂಬಿತವಾಗಿರುವ ಕರ್ನಾಟಕ ರಾಜ್ಯವೂ ಸೇರಿದಂತೆ ಇತರ ರಾಜ್ಯಗಳು ಕೂಡ ತಮ್ಮ ಆರ್ಥಿಕ ವ್ಯವಸ್ಥೆಯ ಮೇಲೆ ಸದಾ ನಿಗಾ ಇಡಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯ ಭಾಷಣದಲ್ಲಿ ರೈತರ ಬದುಕನ್ನು ಹಸನುಗೊಳಿಸಲು ಮತ್ತು ರೈತರ ಕಲ್ಯಾಣ ಹಾಗೂ ಅವರ ಆಧಾಯ ದ್ವಿಗುಣಗೊಳಿಸುವ ಕೃಷಿ ಮತ್ತು ಪೂರಕ ಚಟುವಟಿಕೆಗಳಾದ ನೀರಿನ ಭದ್ರತೆ, ಭೂ ಸಂಚಯ, ಸೂಕ್ಷ್ಮ ನೀರಾವರಿ, ಕೃಷಿಕರ ಉತ್ತೇಜನ, ತೋಟಗಾರಿಕೆ ಅಭಿವೃದ್ಧಿ ಮತ್ತು ತೋಟಗಾರಿಕೆ ಬೆಳೆಗಳ ಅಸಮರ್ಪಕ ಕೋಯ್ಲೋತ್ತರ ನಿರ್ವಹಣೆ, ಅಂತರ್ಜಲ ಕಾಪಾಡುವುದು, Flood Irrigation,ಪಶುಸಂಗೋಪನೆ ಮತ್ತು ಆರ್ಥಿಕ

ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಚಟುವಟಿಕೆಗಳಾದ ಹೈನುಗಾರಿಕೆ, ಕುರಿ ಮತ್ತು ಮೇಕೆ ಸಾಕಾಣಿಕೆ, ಹಂದಿ ಸಾಕಾಣಿಕೆ, ಕೋಳಿ ಸಾಕಾಣಿಕೆ ಇನ್ನು ಮುಂತಾದ ಯೋಜನೆಗಳನ್ನು ಜಾರಿಗೊಳಿಸುವ ಬಗ್ಗೆ ಹೇಳಿದ್ದಾರೆ.

ಅದೇ ರೀತಿ ಮೀನುಗಾರರು ಮತ್ತು ಮೀನುಗಾರಿಕೆಗೆ ಆಧುನಿಕ ತಾಂತ್ರಿಕತೆಗಳನ್ನು ಅಳವಡಿಸಿಕೊಳ್ಳುವಂತೆ ಪ್ರೋತ್ಸಾಹಿಸಲು 'ಕರ್ನಾಟಕ ಮತ್ಸ್ಯ ವಿಕಾಸ ಯೋಜನೆ'. ಮೀನುಗಾರರಿಗೆ ಬಂದರುಗಳ ನಿರ್ಮಾಣ. ಅಡಿಕೆ ಬೆಳೆಗಾರರ ಅಭಿವೃದ್ಧಿಗೆ ಗರಿಷ್ಠ 20 ಲಕ್ಷ ರೂಪಾಯಿಗಳ ಒಳಗಿನ ಸಾಲಕ್ಕೆ ಶೇಕಡಾ 5ರಷ್ಟು ಬಡ್ಡಿ ಮತ್ತು ವಿನಾಯಿತಿ ಮುಂತಾದ ಯೋಜನೆಗಳಿಗೆ ಒಟ್ಟಾರೆ 32,259/- ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ ಎಂದು ಘೋಷಿಸಿದ್ದಾರೆ. ಆದರೆ, ಪ್ರಸ್ತುತ ಆಯವ್ಯಯದಲ್ಲಿ sector wise expenditure and allocation ನೋಡಿದರೆ, ಕೃಷಿ ವಲಯಕ್ಕೆ ನಿಗದಿಪಡಿಸಿರುವ ಅನುದಾನ ಕೇವಲ 19,603/- ಕೋಟಿ ರೂಪಾಯಿಗಳು. ಇದಲ್ಲದೆ, 2019-2020ನೇ ಸಾಲಿನ ಕೃಷಿ ವಲಯಕ್ಕೆ 22,309/- ಕೋಟಿ ರೂಪಾಯಿಗಳನ್ನು ನೀಡಲಾಗಿತ್ತು. ಅಂದರೆ, 2019-2020ನೇ ಸಾಲಿನ revised estimate ನಲ್ಲಿ ಈ ಅನುದಾನವನ್ನು 21,805/- ಕೋಟಿ ರೂಪಾಯಿಗಳಿಗೆ ಕಡಿತಗೊಳಿಸಲಾಗಿದೆ. ಅಂದರೆ, 2020-2021ನೇ ಸಾಲಿನಲ್ಲಿ 2,202/- ಕೋಟಿ ರೂಪಾಯಿಗಳನ್ನು ಕೃಷಿ ವಲಯಕ್ಕೆ ಕಡಿಮೆ ಮಾಡಿದ್ದಾರೆ. ಬಹುಶಃ ಮಾನ್ಯ ಮುಖ್ಯಮಂತ್ರಿಗಳು Irrigation and Flood Control Sector ಗೆ ಒದಗಿಸಿರುವ ಅನುದಾನವನ್ನು ಕೃಷಿ ಮತ್ತು ಪೂರಕ ಚಟುವಟಿಕೆಗಳಿಗೆ ಸೇರಿಸಿದ್ದಾರೆಂದು ನಾನು ಭಾವಿಸಿದ್ದೇನೆ.

**(ಈ ಹಂತದಲ್ಲಿ ವೈಸ್ ಛೇರ್ಮನ್ ಶ್ರೀ ಕೆ.ಸಿ.ಕೊಂಡಯ್ಯನವರು ಸಭಾ ಪೀಠವನ್ನು ಅಲಂಕರಿಸಿದರು.)**

ಮಾನ್ಯ ಸಭಾಪತಿಯವರೇ, ಅದೇ ರೀತಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಪೌಷ್ಠಿಕ ಅಂಶ ನೀಡುವ ಯೋಜನೆಗಳಿಗೆ 2020-2021ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನ ಕೇವಲ 13,395/- ಕೋಟಿ ರೂಪಾಯಿಗಳು ಮಾತ್ರ. 2019-2020ನೇ ಸಾಲಿನಲ್ಲಿ ಅಂದಾಜಿನಲ್ಲಿ ಈ ವಲಯಕ್ಕೆ 19,718/- ಕೋಟಿ ರೂಪಾಯಿಗಳನ್ನು ನೀಡಲಾಗಿತ್ತು. ತದನಂತರ ಸರ್ಕಾರ revised estimate ನಲ್ಲಿ ಈ ಅನುದಾನವನ್ನು 17,124/- ಕೋಟಿ ರೂಪಾಯಿಗಳಿಗೆ ಇಳಿಸಲಾಗಿತ್ತು. ಅಂದರೆ, 2,544/- ಕೋಟಿ ರೂಪಾಯಿಗಳಷ್ಟನ್ನು ಈ ವಲಯಕ್ಕೆ ಖೋತಾ ಮಾಡಲಾಗಿದೆ. ಅಂದರೆ, ಶೇಕಡಾ 23ರಷ್ಟನ್ನು ಕಡಿಗೊಳಿಸಲಾಗಿದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವಿವರಣೆ ನೀಡಬೇಕೆಂದು ಕೋರುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನು SCP-TSP (Special Component Plan and Tribal Sub-Plan) ಯೋಜನೆಯ ಅನುದಾನದಲ್ಲಿ ಸುಮಾರು 26,930/- ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿದೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದ ಪುಸ್ತಕದ ಪ್ಯಾರಾ-7.2ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಾಂಗದವರ ಕಲ್ಯಾಣಕ್ಕೆ SCP-TSP ಯೋಜನೆಯಡಿಯಲ್ಲಿ Karnataka SC-ST Act, ಪ್ರಕಾರ ರಾಜ್ಯದ ಬಜೆಟ್‌ನಲ್ಲಿ ಶೇಕಡಾ 24.1ರಷ್ಟು ಅನುದಾನವನ್ನು ಮೀಸಲಿರಿಸಬೇಕಾಗಿದ್ದು, ಅಂದರೆ 26,131/- ಕೋಟಿ ರೂಪಾಯಿಗಳನ್ನು ನೀಡಬೇಕಾಗಿದ್ದು, ಆದರೆ ಸರ್ಕಾರ 26,930/- ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿದೆ ಎಂದು ತಿಳಿಸಿದ್ದಾರೆ. ಆದರೆ, ಸರ್ಕಾರದ sectorial allocation ಗಳನ್ನು ಪರಿಶೀಲಿಸಿದರೆ SC-ST, OBC and Minorities ಅಭಿವೃದ್ಧಿಗೆ ನಿಗದಿಪಡಿಸಿರುವ ಮೊತ್ತ ಕೇವಲ 9,402/- ಕೋಟಿ ರೂಪಾಯಿಗಳು. ಈ ಮೇಲಿನ ಅಂಕಿ-ಅಂಶಗಳನ್ನು ಅವಲೋಕಿಸಿದರೆ, ಸರ್ಕಾರ SCP-TSP ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಿರಿಸಿದ ಅನುದಾನವನ್ನು ಬೇರೆ ಸಮುದಾಯಗಳಿಗೆ ಉಪಯೋಗಿಸಿದಂತೆ ಕಾಣುತ್ತದೆ. ಇದರ ಬಗ್ಗೆ ಸರ್ಕಾರದ ಸ್ಪಷ್ಟೀಕರಣ ಅಗತ್ಯ.

ಮಾನ್ಯ ಸಭಾಪತಿಯವರೇ, ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ರಚಿಸಲಾಗಿದ್ದ, 'ವಿತ್ತೀಯ ನಿರ್ವಹಣಾ ಮತ್ತು ಪರಿಶೀಲನಾ ಸಮಿತಿ' ಎಂದರೆ, 'Fiscal Management Review Committee' 2019-2020ನೇ ಸಾಲಿನ ತೆರಿಗೆ ಸಂಗ್ರಹದ ಬಗ್ಗೆ ಪರಿಶೀಲನೆ ನಡೆಸಿದೆ. ಈ ಸಮಿತಿ ಕೂಡ, ಮೋಟಾರು ವಾಹನ ತೆರಿಗೆ ಸಂಗ್ರಹಣೆಯಲ್ಲಿ ಮತ್ತು ರಿಯಲ್ ಎಸ್ಟೇಟ್ ಕುಸಿತದಿಂದ ನೋಂದಣಿ ಮತ್ತು ಮುದ್ರಾಂಕ ಶುಲ್ಕ ಸಂಗ್ರಹಣೆಯಲ್ಲಿ ಕೊರತೆ ಬೀಳುತ್ತದೆ. ರಾಜ್ಯಕ್ಕೆ ಜಿ.ಎಸ್.ಟಿ. ಪರಿಹಾರದ ಮೂಲಕ ನೀಡುವ ಅನುದಾನ ಕಡಿಮೆ ಆಗುವುದನ್ನು ಸಹ ಗಮನಿಸಿದೆ. ಅದರಂತೆ ಜಿ.ಎಸ್.ಟಿ ಕೌನ್ಸಿಲ್ ದರಗಳನ್ನು ಅಥವಾ ಉಪಕರಣಗಳನ್ನು ಹೆಚ್ಚಿಸುವಂತೆ ಮನವಿ ಮಾಡಲಾಗಿದೆ. ಅಲ್ಲದೇ ಕೇಂದ್ರ ಸರ್ಕಾರ ನವೆಂಬರ್, ಡಿಸೆಂಬರ್ ಮತ್ತು ಜನವರಿ ತಿಂಗಳಿನಲ್ಲಿ ಬಾಕಿ ಇರತಕ್ಕಂತಹ ಜಿ.ಎಸ್.ಟಿ. ಪರಿಹಾರಗಳನ್ನು ಆದಷ್ಟು ಬೇಗ ಪಡೆಯಲು ಕೂಡ ಆರ್ಥಿಕ ಇಲಾಖೆ ಸಹಾಯ ಮಾಡಿದೆ. ಇದಲ್ಲದೇ 15ನೇ ಹಣಕಾಸು ಆಯೋಗದ ಶಿಫಾರಸ್ಸಿನ ಅನ್ವಯ, 2020-2021ನೇ ಸಾಲಿನ ಕೇಂದ್ರ ತೆರಿಗೆಯಲ್ಲಿ ರಾಜ್ಯದ ಪಾಲು ಗಣನೀಯವಾಗಿ ಕಡಿತವಾಗಿರುವ ಬಗ್ಗೆ, 15ನೇ ಹಣಕಾಸು ಆಯೋಗವು ರಾಜ್ಯ ಸರ್ಕಾರಕ್ಕೆ ನೀಡಲು ಶಿಫಾರಸ್ಸು ಮಾಡಿರುವ 5,009/- ಕೋಟಿ ರೂಪಾಯಿಗಳ ವಿಶೇಷ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುದಾನವನ್ನು ಕೇಂದ್ರ ಸರ್ಕಾರ ಒಪ್ಪದೇ ಇದ್ದು, ಈ ವಿಷಯವನ್ನು 15ನೇ ಹಣಕಾಸು ಆಯೋಗವು ಮತ್ತು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಬೇಕೆಂದು ತಿಳಿಸಿದೆ.

ಮಾನ್ಯ ಸಭಾಪತಿಯವರೇ, 5,945/- ಕೋಟಿ ರೂಪಾಯಿಗಳ ಹಣವನ್ನು ಕೂಡ 15ನೇ ಹಣಕಾಸು ಆಯೋಗ ಕೊಡಬೇಕೆಂದು ಶಿಫಾರಸ್ಸು ಮಾಡಿದೆ. ಈ ಹಣವನ್ನು ಬಿಡುಗಡೆ ಮಾಡುವಂಥದ್ದು ಕೇಂದ್ರ ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಈಗಾಗಲೇ ಇದರ ಬಗ್ಗೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದೊಂದಿಗೆ ಪತ್ರ ವ್ಯವಹಾರವನ್ನು ನಡೆಸಿದೆ. ಆದರೆ, ಕೇಂದ್ರ ಸರ್ಕಾರ ಇದನ್ನು ನೀಡುವುದಕ್ಕೆ ಆಗುವುದಿಲ್ಲವೆಂದು ಹೇಳಿದೆ. ಇದರಿಂದ ಸುಮಾರು 5,995/- ಕೋಟಿ ರೂಪಾಯಿಗಳ ಹಣ ಕೂಡ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತದೆ. ಆದರೆ, ದಿನಾಂಕ: 06.03.2020ರಂದು ಪಾರ್ಲಿಮೆಂಟಿನ ಉಭಯ ಸದನಗಳಲ್ಲಿ ಇದರ ಬಗ್ಗೆ ಚರ್ಚೆಯಾಗಿ ಇದು ಏಕೆ ಬರುವುದಿಲ್ಲವೆಂದು ಖಚಿತವಾಗಿದೆ ಎಂದರೆ, ದಿನಾಂಕ 16.03.2020ರಂದು ಕೇಂದ್ರದ ಅರ್ಥ ಸಚಿವರು, ಕೇಂದ್ರದಲ್ಲಿ 'Appropriation Bill' ಅನ್ನು ಮಂಡನೆ ಮಾಡಿದರು. ಅದರಲ್ಲಿ ಜಿ.ಎಸ್.ಟಿ. ಪರಿಹಾರವಾಗಿ ಏನಾದರೂ ಕೂಡ ರಾಜ್ಯ ಸರ್ಕಾರಗಳಿಗೆ ಕರ್ನಾಟಕ ಸರ್ಕಾರವು ಸೇರಿದಂತೆ ಪರಿಹಾರ ನೀಡುತ್ತಾರೆಂದರೆ, ಇದರ ಬಗ್ಗೆ ಯಾವುದೇ ರೀತಿಯ ಪ್ರಸ್ತಾವನೆ ಇಲ್ಲ. ಆದುದರಿಂದ 5,995/- ಕೋಟಿ ರೂಪಾಯಿಗಳು ರಾಜ್ಯ ಸರ್ಕಾರಕ್ಕೆ ಬರಬೇಕಾಗಿದ್ದು, ಅದನ್ನು ಕೇಂದ್ರ ಸರ್ಕಾರ ನೀಡುವುದಕ್ಕೆ ಒಪ್ಪಿಲ್ಲ.

ಮಾನ್ಯ ಸಭಾಪತಿಯವರೇ, ಇನ್ನು ದೊಡ್ಡ ಆಘಾತವೆಂದರೆ, ರಾಜ್ಯ ಸರ್ಕಾರ ತನ್ನ ಆಯವ್ಯಯದಲ್ಲಿ 2020-2021ನೇ ಸಾಲಿನಲ್ಲಿ ಜಿ.ಎಸ್.ಟಿ. ಪರಿಹಾರವಾಗಿ 16,116/- ಕೋಟಿ ರೂಪಾಯಿಗಳು ಲಭ್ಯವಾಗುವುದಾಗಿ ಕಾಣಿಸಿದ್ದಾರೆ. ಅಂದರೆ, 2019-2020ನೇ ಸಾಲಿನ ಪರಿಷ್ಕೃತ ಅಂದಾಜಿನಲ್ಲಿ ಶೇಕಡಾ 6ರಷ್ಟು ಕಡಿಮೆ ಇರುತ್ತದೆ ಎಂದು ಅರ್ಥ. ಈ ರೀತಿಯಾಗಿ ಹೆಚ್ಚುವರಿ ಜಿ.ಎಸ್.ಟಿ. ಪರಿಹಾರವನ್ನು ಕೇಂದ್ರ ಸರ್ಕಾರದಿಂದ ನಿರೀಕ್ಷಿಸುವ ರಾಜ್ಯ ಸರ್ಕಾರದ ಕ್ರಮ ರಾಜ್ಯದಲ್ಲಿ ಜಿ.ಎಸ್.ಟಿ. ತೆರಿಗೆ ಸಂಗ್ರಹಣದಲ್ಲಿ ಪ್ರಸ್ತಾಪಿಸಿರುವ ಶೇಕಡಾ 14ಕ್ಕಿಂತ ಕಡಿಮೆ ಎಂದು ಭಾವಿಸಲಾಗಿದೆ. ಈಗ ಏನಾಗಿದೆ ಎಂದರೆ, 14ನೇ ಹಣಕಾಸು ಆಯೋಗದಲ್ಲಿ ಯಾವಾಗ ಜಿ.ಎಸ್.ಟಿ. ತೆರಿಗೆಯಲ್ಲಿ ಶೇಕಡಾ 14ರಷ್ಟು ಕಡಿಮೆ ಇದೆಯೋ ಮತ್ತು ಏನು ಖೋತಾ ಬೀಳುತ್ತದೆಯೋ ಅದನ್ನು ಕೂಡ ಜಿ.ಎಸ್.ಟಿ. ಪರಿಹಾರವಾಗಿ ಕೊಡುತ್ತೇವೆಂದು ಹೇಳಿದ್ದರು. ಈಗ ರಾಜ್ಯ ಸರ್ಕಾರ ಏನು ಹೇಳುತ್ತಿದೆ ಎಂದರೆ, ಮುಂಬರುವ ವರ್ಷಗಳಲ್ಲಿ 16,116/- ಕೋಟಿ ರೂಪಾಯಿಗಳಷ್ಟು ಹಣ ಪರಿಹಾರ ರೂಪದಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುತ್ತದೆ ಎಂದು ಹೇಳಿದ್ದಾರೆ. ಆದರೆ, ಈ ರೀತಿಯಾದಂತಹ ಏನು expectations ಅನ್ನು ರಾಜ್ಯ ಸರ್ಕಾರ ಇಟ್ಟುಕೊಂಡಿದೆ. ಬಹುಶಃ ಇವತ್ತಿನ ಮಟ್ಟಿಗೆ ಅದು ಕೂಡ ಬರಲಾರದು. ಇನ್ನು ಕೊರೊನಾ ವೈರಸ್ ಆರ್ಥಿಕ ವ್ಯವಸ್ಥೆ ಜಗತ್ತಿನ depression ಅನ್ನು ಆಮೇಲೆ ಮಾತನಾಡುವುದಾದರೂ ಕೂಡ, ಈ ರೀತಿಯಾಗಿ ಜಿ.ಎಸ್.ಟಿ. ಪರಿಹಾರವನ್ನು ಕೇಂದ್ರ ಸರ್ಕಾರ ಇಚ್ಛಿಸುವ ರಾಜ್ಯ ಸರ್ಕಾರದ ಕ್ರಮದಲ್ಲಿ ಜಿ.ಎಸ್.ಟಿ. ತೆರಿಗೆಯ GST Act ನಲ್ಲಿ ಪ್ರಸ್ತಾಪಿಸಿದ ಶೇಕಡಾ 40ಕ್ಕಿಂತ ಕಡಿಮೆ ಎಂದು ಭಾವಿಸಲಾಗಿದೆ. ಅಂದರೆ ಕೇಂದ್ರ ಸರ್ಕಾರ ತನ್ನ 2020-2021ನೇ ಸಾಲಿನಲ್ಲಿ 2016-17 ಮತ್ತು 2017-18ನೇ ಸಾಲಿನಲ್ಲಿ ನೀಡಬೇಕಾದ ಜಿ.ಎಸ್.ಟಿ. ಪರಿಹಾರವನ್ನು ಎರಡು ಕಂತುಗಳಲ್ಲಿ ನೀಡುವುದಾಗಿ ಮತ್ತು ಇನ್ನು ಮುಂದೆ, ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳಿಗೆ ನೀಡುವ ಜಿ.ಎಸ್.ಟಿ. ಪರಿಹಾರವನ್ನು ಕೇಂದ್ರ ಸರ್ಕಾರ Cess Act ನಲ್ಲಿ ವಿಧಿಸಬಹುದಾದ, cess ನಿಂದ ಬರಬಹುದು ಅದರಲ್ಲಿ ನೀಡಲಾಗಿದೆ. ಇನ್ನೊಂದು ಆಘಾತದ ಸಂಗತಿ ಏನೆಂದರೆ, 2016-17 ಮತ್ತು 2017-18ನೇ ಸಾಲಿನಲ್ಲಿ ರಾಜ್ಯ ಸರ್ಕಾರಕ್ಕೆ ಸುಮಾರು 8,000/- ಕೋಟಿ ರೂಪಾಯಿಗಳು ಜಿ.ಎಸ್.ಟಿ. ಪರಿಹಾರವಾಗಿ ಬರಬೇಕು. ಕೇಂದ್ರ ಸರ್ಕಾರದವರು ಇದನ್ನು ಯಾವ ರೀತಿಯಾಗಿ ಕೊಡುತ್ತಾರೆಂದರೆ, Goods and Services Tax (Compensation to States) Act,ಎಂದು ಮಾಡಿದ್ದಾರೆ. ಅದರಲ್ಲಿ Automobiles, Aerated Water (Cool Drinks)ಇವುಗಳ ಮೇಲೆ ಹಾಕಿ ವಸೂಲಿ ಮಾಡುತ್ತಿದ್ದಾರೆ, ಅದರಿಂದ ಪರಿಹಾರ ಕೊಡತಕ್ಕಂಥದ್ದು. ಆದರೆ, ಈಗ ಏನು ಹೇಳುತ್ತಾರೆಂದರೆ, ಆ cess ನಲ್ಲಿ collect ಆದರೆ ಮಾತ್ರ ಕೊಡುತ್ತೇವೆಂದು ಹೇಳುತ್ತಾರೆ. ಆ cess ನಲ್ಲಿ collect ಆಗದೇ ಇದ್ದರೆ ಅದನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಆದುದರಿಂದ ಕೇಂದ್ರದಿಂದ ಬೇರೆ Centrally Sponsored Scheme ನಿಂದ ಬರತಕ್ಕಂಥದ್ದು ಅಥವಾ ಶೇಕಡಾ 41ರಷ್ಟು ಬರತಕ್ಕಂಥ devolution of funds ಏನಿದೆ ಅದನ್ನು ಬಿಟ್ಟರೆ ಬೇರೆ ಯಾವುದೇ ರೀತಿಯಾದಂತಹ ಆರ್ಥಿಕ ನೆರವು ರಾಜ್ಯ ಸರ್ಕಾರಕ್ಕೆ ಮುಂಬರುವ ವರ್ಷಗಳಲ್ಲಿ ಬರುವುದಿಲ್ಲ.

**(ಮುಂದು...)**

“ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(686) 23.03.2020 06.30 LL-MD(VK)

**ಶ್ರೀ ಕೆ.ಎ. ತಿಪ್ಪೇಸ್ವಾಮಿ:– ಮುಂದುವರೆದಿದ್ದು...**

ಇದಲ್ಲದೇ, ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಶ್ರೀ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಖಾತ್ರಿ ಯೋಜನೆ(ನರೇಗಾ)ಯಡಿಯಲ್ಲಿ 2020–21ನೇ ಸಾಲಿನಲ್ಲಿ 61,500 ಕೋಟಿ ರೂಪಾಯಿಗಳಷ್ಟು ಹಣ ಒದಗಿಸಿದ್ದು, ಇದು ಕಳೆದ ವರ್ಷ ಅಂದರೆ, 2019–20ನೇ ಸಾಲಿನ ಪರಿಷ್ಕೃತ ಅಂದಾಜಿನಲ್ಲಿ ಒದಗಿಸಿದ್ದ 71,007 ಕೋಟಿ ರೂಪಾಯಿಗಿಂತಲೂ ಕಡಿಮೆಯಾಗಿದೆ. ಅಂದರೆ, 9502 ಕೋಟಿ ರೂಪಾಯಿಯಷ್ಟು ಅನುದಾನವನ್ನು ನರೇಗಾ ಯೋಜನೆಯಲ್ಲಿ ಕಡಿಮೆ ಮಾಡಿದ್ದಾರೆ. ಇವೊತ್ತಿನ ದಿವಸ ಆರ್ಥಿಕ ವ್ಯವಸ್ಥೆ ಏನು ಕುಸಿದು ಹೋಗಿದೆ, ಎಲ್ಲೆಲ್ಲಿ ನಾವು ಗ್ರಾಮಾಂತರ ಪ್ರದೇಶದಲ್ಲಿ ನರೇಗಾ ಯೋಜನೆಯಲ್ಲಿ ಕೆಲಸ ತೆಗೆದುಕೊಳ್ಳಬೇಕು ಎಂದು ತಿಳಿದುಕೊಂಡಿದ್ದೇವೋ, ಅಲ್ಲಿಯೂ ಕೂಡ ನಿರೀಕ್ಷಿತ ಮಟ್ಟದಲ್ಲಿ ನಮಗೆ ಸಹಾಯ ಬರಲಾರದು. ಜಗತ್ತಿನಾದ್ಯಂತ ಹರಡಿ ಪ್ರಪಂಚದ ಆರ್ಥಿಕ ವ್ಯವಸ್ಥೆಯನ್ನು ಮತ್ತು ಜನತೆಯ ಜನಜೀವನವನ್ನು ಅಲ್ಲೋಲ–ಕಲ್ಲೋಲಗೊಳಿಸಿರುವ ಕೊರೊನಾ ವೈರಸ್‌ನಿಂದ ದೇಶದ ಆರ್ಥಿಕ ವ್ಯವಸ್ಥೆ ಕುಸಿದು ಹೋಗಿದೆ. ಇದರ ಪರಿಣಾಮವಾಗಿ ನಮ್ಮ ಆರ್ಥಿಕ ವ್ಯವಸ್ಥೆಯ ಮೇಲೆ ಊಹಿಸಿಕೊಳ್ಳಲಾರದಷ್ಟು ನಷ್ಟವಾಗಿದೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಕೆಳಕಂಡ ಸಲಹೆಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಕೇಂದ್ರ ಸರ್ಕಾರದ ಭಾರೀ ಕೈಗಾರಿಕೆ ಮತ್ತು ಸಚಿವಾಲಯ ಒಂದನೇ ಮತ್ತು ಎರಡನೇ ಹಂತದಲ್ಲಿ ನೀಡಬೇಕಾಗಿರುವ 18.68 ಕೋಟಿ ರೂಪಾಯಿಗಳ ಸಹಾಯಧನವನ್ನು ರಾಜ್ಯ ಸರ್ಕಾರ ಬಳಸಿಕೊಳ್ಳಬೇಕು. ಏಕೆಂದರೆ, ಮೊನ್ನೆಯ ದಿವಸ ಈ ಸದನದಲ್ಲಿ ಕೊಟ್ಟಂತಹ ಉತ್ತರವನ್ನು ನಾನು ಗಮನಿಸಿದ್ದೇನೆ. ಅಲ್ಲದೇ, ಈ ಯೋಜನೆ ದಿನಾಂಕ:20.02.2020ಕ್ಕೆ ಮುಕ್ತಾಯವಾಗಿರುತ್ತದೆ. ಮಾನ್ಯ ಉಪ ಮುಖ್ಯಮಂತ್ರಿಗಳು ಈ ಸದನದಲ್ಲಿ ಹಾಜರಿರುವುದರಿಂದ, ದಯಮಾಡಿ ಈ ವಿಚಾರವನ್ನು ಗಮನಿಸಬೇಕು. ಬಹುಶಃ ಸರ್ಕಾರ ಪ್ರಯತ್ನ ಮಾಡಿದರೆ ನಮಗೆ ಸುಮಾರು 20 ಕೋಟಿ ರೂಪಾಯಿಗಳ ಸಹಾಯಧನ ಬರುತ್ತದೆ. ಇಲ್ಲವಾದರೆ, ಅದು ಬರುವುದಿಲ್ಲ. **(ಗೊಂದಲ)**‘FAME India Phase-II’ ನಲ್ಲಿ ಸಹಾಯಧನ ಬರಬೇಕಾಗಿರುತ್ತದೆ.

“ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

15ನೇ ಹಣಕಾಸು ಆಯೋಗ ಸಲ್ಲಿಸಿದ 2020-21 ನೇ ಸಾಲಿನ ವರದಿಯನ್ನು ಪಾರ್ಲಿಮೆಂಟ್‌ನಲ್ಲಿ ಮಂಡಿಸಲಾಗಿದೆ. 15ನೇ ಹಣಕಾಸು ಆಯೋಗ ಈಗಾಗಲೇ ತನ್ನ ವಾರ್ಷಿಕ ವರದಿಯನ್ನು ಮಂಡನೆ ಮಾಡಿದೆ. ಅಂದರೆ, 2020-21ನೇ ಸಾಲಿಗೆ ಮಧ್ಯಂತರ ವರದಿಯನ್ನು ಕೊಟ್ಟಿದೆ. ಇನ್ನುಳಿದ ಅಂತಿಮ ವರದಿಯನ್ನು ಅಕ್ಟೋಬರ್ ತಿಂಗಳಿನಲ್ಲಿ ಮಂಡನೆ ಮಾಡುತ್ತದೆ. ಈ ಮಧ್ಯಂತರ ವರದಿಯನ್ನು ನಮ್ಮ ವಿತ್ತ ಸಚಿವರು ಮಂಡನೆ ಮಾಡಿದ್ದಾರೆ, ಅದನ್ನು in toto, ತತ್ವಶಃ ಪಾರ್ಲಿಮೆಂಟ್‌ನಲ್ಲಿ ಅರ್ಥ ಸಚಿವರು ನಾವು ಶಿಫಾರಸ್ಸುಗಳನ್ನು ಒಪ್ಪಿಕೊಂಡಿದ್ದೇವೆಂದು ಹೇಳಿದ್ದಾರೆ. ಅಂದರೆ, ಇದರಲ್ಲಿ ಯಾವುದೇ ರೀತಿಯ ಬದಲಾವಣೆಗಳು ಇರುವುದಿಲ್ಲ. ಅಂದರೆ, 17ನೇ ಹಣಕಾಸು ಆಯೋಗವು ರೂಪಿಸಿರುವ terms of reference, ಅಳವಡಿಸಿರುವ Performance criteria, weightage ಗಳು, ಪ್ಯಾರಾಮೀಟರ್‌ಗಳು ದಕ್ಷಿಣ ರಾಜ್ಯಗಳಿಗೆ ಅದರಲ್ಲಿಯೂ ಕರ್ನಾಟಕ ರಾಜ್ಯಕ್ಕೆ ಸಹಿಸಲಾರದಷ್ಟು ಆರ್ಥಿಕ ನಷ್ಟ ಉಂಟಾಗಿದೆ. 2-3 ವಿಷಯಗಳಲ್ಲಿ ನಾವು ರಾಜ್ಯ ಸರ್ಕಾರವನ್ನು ಅಭಿನಂದಿಸಬೇಕು. ಅದು ಯಾವುದೇ ಸರ್ಕಾರ ಇರಬಹುದು, ಈಗಿನ ಸರ್ಕಾರ ಶ್ರೀ ಬಿ.ಎಸ್. ಯಡಿಯೂರಪ್ಪನವರ ಸರ್ಕಾರ ಇರಬಹುದು, ಹಿಂದಿನ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರ ಸರ್ಕಾರ ಇರಬಹುದು ಅಥವಾ ಶ್ರೀ ಸಿದ್ದರಾಮಯ್ಯನವರ ಸರ್ಕಾರ ಇರಬಹುದು, ಕೆಲವೊಂದು ವಿಷಯಗಳಲ್ಲಿ ನಾವು ಮಂಚೂಣಿಯಲ್ಲಿದ್ದೇವೆ. VAT ಇದ್ದಾಗ, ಏನೇನು commodities ಮೇಲೆ ತೆರಿಗೆ ಹಾಕಿದ್ದೇವೆ, ಅದರಿಂದ ನಮ್ಮಲ್ಲಿ ಸಾಕಷ್ಟು tax growth ಆಯಿತು. ಈ ವ್ಯಾಟ್ ಬಂದಾಗ, ಅಷ್ಟೊಂದು ವ್ಯಾಪಕವಾಗಿ ನಮ್ಮ ತೆರಿಗೆ ಸಂಗ್ರಹಣೆ ಆಗಿರುವುದಿಲ್ಲ. ಇದನ್ನು ನೋಡಿ ಶೇಕಡ 14 ರಷ್ಟು ನಮ್ಮ ರಾಜ್ಯಕ್ಕೆ ಪರಿಹಾರ ಕೊಡುವುದಕ್ಕೆ ಹಾಗೂ ಮಹಾರಾಷ್ಟ್ರ ರಾಜ್ಯಕ್ಕೆ, ಗುಜರಾತ್ ರಾಜ್ಯಕ್ಕೆ, ತಮಿಳುನಾಡು ರಾಜ್ಯಕ್ಕೆ, ಆಂಧ್ರಪ್ರದೇಶ ರಾಜ್ಯ ಮತ್ತು ತೆಲಂಗಾಣ ರಾಜ್ಯಕ್ಕೆ ಪರಿಹಾರ ಸಿಗುತ್ತಿದೆ. ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಿಗೆ ಪರಿಹಾರ ಏತಕ್ಕೆ ಸಿಗುತ್ತಿತ್ತು ಎಂದರೆ, ಎಷ್ಟೋ ಕಂಪನಿಗಳು ನಮ್ಮ ರಾಜ್ಯದಲ್ಲಿ ಕೆಲಸ ಮಾಡುತ್ತಿದ್ದರೂ ಸಹ, ಆ ಕಂಪನಿಗಳ ಕಾರ್ಪೋರೇಟ್ ಆಫೀಸ್‌ಗಳು ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಲ್ಲಿವೆ. ಅಲ್ಲಿ ಬರತಕ್ಕಂತಹ ಕಾರ್ಪೋರೇಟ್ ಟ್ಯಾಕ್ಸ್ ಮತ್ತು ಇತರೆ ಟ್ಯಾಕ್ಸ್‌ಗಳಲ್ಲಿ ಆ ರಾಜ್ಯಗಳಿಗೆ ಸಾಕಷ್ಟು ಹಣ ಹೋಗುತ್ತಿತ್ತು. ಅದರಿಂದ, ಆ ರಾಜ್ಯಗಳಿಗೆ ಸಹಾಯ ಆಯಿತು. ನಮ್ಮ ದಕ್ಷಿಣ ರಾಜ್ಯಗಳಲ್ಲಿ ಅದರಲ್ಲಿಯೂ ಕರ್ನಾಟಕ ರಾಜ್ಯದ ಬೆಳವಣಿಗೆ ಏನಿತ್ತು ಅದಕ್ಕೆ ತಕ್ಕಂತಹ ಪರಿಪಾಲನೆ ನಮ್ಮ 15ನೇ ಹಣಕಾಸು ಆಯೋಗದಲ್ಲಿ ಸಿಕ್ಕಿರುವುದಿಲ್ಲ. ನಾವು ಜನಸಂಖ್ಯೆ ನಿಯಂತ್ರಣದಲ್ಲಿರಬಹುದು, fertility

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

rate ಇರಬಹುದು, distance income, ಯಾವುದೋ ಒಂದು ಬಿಹಾರದಂತಹ ರಾಜ್ಯಕ್ಕೆ ಹೋಲಿಕೆ ಮಾಡಿದಂತಹ ಸಂದರ್ಭದಲ್ಲಿ ನಮ್ಮ ರಾಜ್ಯ ತುಂಬಾ ಅಡ್ವಾನ್ಸ್ ಇದೆ. ನಮ್ಮ ರಾಜ್ಯವನ್ನು ಇತರೆ ರಾಜ್ಯಗಳಿಗಿಂತ ಕಡಿಮೆ ಇದ್ದೀರಿ, ಆದುದರಿಂದ ಇತರೆ ರಾಜ್ಯಕ್ಕೆ ಕೊಟ್ಟಷ್ಟು ನಮ್ಮ ರಾಜ್ಯಕ್ಕೆ weightage or reference ಪ್ರಕಾರ ಕೊಡುತ್ತೇವೆ ಎನ್ನುವ ಭಾವನೆ ಸರಿಯಾದುದಲ್ಲ. ಇದರಿಂದಾಗಿ, ಒಟ್ಟಾರೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ ರೀತಿ, 9,000 ಕೋಟಿ ರೂಪಾಯಿಯಿಂದ 11,300 ಕೋಟಿ ರೂಪಾಯಿಗಳಷ್ಟು ಕೇಂದ್ರ ಸರ್ಕಾರದಿಂದ division pool ನಿಂದ ಬರಬೇಕಾಗಿದ್ದು ಕಡಿಮೆಯಾಗಿರುತ್ತದೆ. ಏಕೆಂದರೆ, ಇವೊತ್ತಿನ ದಿವಸ ಈ ಆರ್ಥಿಕ ವ್ಯವಸ್ಥೆ ಕುಸಿಯುತ್ತಾ ಹೋಗುತ್ತಿದೆ. ಏಕೆಂದರೆ, ರಾಜ್ಯದಲ್ಲಿ ಹಲವಾರು ಬಂದ್‌ಗಳು ನಡೆಯುತ್ತಿವೆ, ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಇರುವುದಿಲ್ಲ ಹಾಗೂ ಲಕ್ಷುರಿ ಟ್ಯಾಕ್ಸ್ ಸೇರಿದಂತೆ ಯಾವುದೇ ಟ್ಯಾಕ್ಸ್‌ಗಳು ಬರುತ್ತಿರುವುದಿಲ್ಲ. ಅದರಲ್ಲಿಯೂ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಕೊಡತಕ್ಕಂತಹ ಹಣವನ್ನು ಕೂಡ ಕಡಿಮೆ ಮಾಡುತ್ತಾ ಹೋದರೆ ಕೇವಲ ಸರ್ಕಾರದ ಆದಾಯ, ಅಧಿಕಾರಿ/ನೌಕರರ/ಸಿಬ್ಬಂದಿಗಳ ವೇತನ, ಪಿಂಚಣಿ ಅಥವಾ ಬಡ್ಡಿ ಕೊಡುವುದಕ್ಕೆ ಅಷ್ಟಕ್ಕೆ ಸೀಮಿತವಾಗುತ್ತದೆ. ಪ್ರಸ್ತುತ ಪಂಜಾಬ್ ರಾಜ್ಯದಲ್ಲಿ ಆ ಪರಿಸ್ಥಿತಿ ಆಗಿದೆ. ಆದುದರಿಂದ, ನನ್ನ ಕಳಕಳಿಯ ಮನವಿ ಏನೆಂದರೆ, ದಯಮಾಡಿ, ವಿಧಾನಮಂಡಲದ ಉಭಯ ಸದನಗಳ ವಿರೋಧ ಪಕ್ಷದವರು ಮತ್ತು ಸಂಸತ್ತಿನ ಸದಸ್ಯರನ್ನು ಒಳಗೊಂಡಂತೆ ಒಂದು ಸರ್ವ ಪಕ್ಷ ನಿಯೋಗವನ್ನು ದೆಹಲಿಗೆ ಕೊಂಡೊಯ್ದು ಕೇಂದ್ರ ಸರ್ಕಾರಕ್ಕೆ ಮೆಮೊರಂಡಮ್ ಕೊಟ್ಟು ಈ ರೀತಿಯಾಗಿ ನಮ್ಮ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ. ದಯಮಾಡಿ, ಈ ಅನ್ಯಾಯವನ್ನು 15ನೇ ಹಣಕಾಸು ಆಯೋಗ ಅಂತಿಮ ವರದಿಯಲ್ಲಿ ಸರಿಪಡಿಸಿ ನಮಗೆ ಏನು loss ಆಗುತ್ತಿದೆ ಅದನ್ನು ಸರಿದೂಗಿಸಿ ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಸರ್ವ ಪಕ್ಷ ನಿಯೋಗ ಕೇಂದ್ರ ಸರ್ಕಾರಕ್ಕೆ ಕೊಂಡೊಯ್ಯಬೇಕೆಂದು ಈ ಮೂಲಕ ಕೋರುತ್ತೇನೆ.

ಇತ್ತೀಚೆಗೆ, Davos ನಲ್ಲಿ ನಡೆದ World Economic Forum ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಕೈಗಾರಿಕಾ ಸಚಿವರ ಒಂದು ತಂಡ ಹೋಗಿತ್ತು. ಅಲ್ಲಿ ಸುಮಾರು 40-42 ಕಂಪನಿಗಳು ಒಟ್ಟಿಗೆ MoU ಗೆ ಸಹಿ ಮಾಡಿದ್ದಾರೆಂದು ಹೇಳಿದರು. ಇದರಲ್ಲಿ ನಾನು ಸಲಹೆ ಕೊಡುವುದೇನೆಂದರೆ, ನಮ್ಮ ರಾಜ್ಯಕ್ಕೆ ವಿದೇಶಿ ಪ್ರತಿನಿಧಿಗಳು ಯಾರು ಬರುತ್ತಾರೆ, ಅವರು ಪ್ರತಿಯೊಂದು ಇಲಾಖೆಗೆ ಹೋಗಿ ತಮ್ಮ ವಿಸಿಟಿಂಗ್ ಕಾರ್ಡ್ ಕೊಟ್ಟು, ಗಂಟೆಗಟ್ಟಲೆ ಕಾಯುವ ಬದಲಾಗಿ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಖ್ಯಮಂತ್ರಿಗಳ ಕಛೇರಿಯಲ್ಲಿ ಒಂದು 'Foreign Investment Cell" ಎಂದು ಒಂದು ಇಲಾಖೆ ಸ್ಥಾಪನೆ ಮಾಡಿ, ಅಲ್ಲಿ ಒಬ್ಬ ಹಿರಿಯ ಐ.ಎ.ಎಸ್. ಅಧಿಕಾರಿ ಅಂದರೆ, ಸಹಾಯಕ ಮುಖ್ಯ ಕಾರ್ಯದರ್ಶಿ ಅಧಿಕಾರಿಯನ್ನು ನೇಮಕ ಮಾಡಬೇಕು. ವಿದೇಶಿ ಪ್ರತಿನಿಧಿಗಳು ಆ ಕಛೇರಿಗೆ ಹೋಗಬೇಕು. ಜೊತೆಗೆ, ಆ ಅಧಿಕಾರಿಗೆ ಎಲ್ಲಾ ರೀತಿಯಾದಂತಹ ಅಧಿಕಾರ ಎಂದರೆ, ಮಂಜೂರಾತಿ ನೀಡುವುದು, ನೋಟಿಫಿಕೇಷನ್ ತೆಗೆಯುವುದು ಅಥವಾ ಒಂದು ಆದೇಶ ನೀಡುವಂಥದ್ದು ಇರಬಹುದು, ಅಂತಹ ಅಧಿಕಾರಗಳನ್ನು ಕೊಟ್ಟರೆ ಅನುಕೂಲವಾಗುತ್ತದೆ. 109 ವಿನಾಯಿತಿ ನೀಡುವ ವಿಷಯದ ಬಗ್ಗೆ ಬೆಳಗ್ಗೆ ಕೂಡ ಚರ್ಚೆಯಾಯಿತು. ಬಹುಶಃ ಈ ವಿನಾಯಿತಿಯನ್ನು ಯಾವುದೇ ರೀತಿಯಲ್ಲಿ ಕೃಷಿಕರಿಗೆ ಅನ್ಯಾಯವಾಗದ ರೀತಿಯಲ್ಲಿ 109 ವಿನಾಯಿತಿಯಾಗಲಿ ಅಥವಾ ನಿಯಮ 63 land holdings ಕೂಡ ಅನ್ಯಾಯವಾಗದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಪುನಃ ಹೊಸದಾಗಿ, ಕರ್ನಾಟಕ ಇಂಡಸ್ಟ್ರಿಯಲ್ ಪಾಲಿಸಿ ತರುತ್ತೇವೆಂದು ಹೇಳಿದ್ದಾರೆ. ಈ ಬಗ್ಗೆ ನನ್ನ ಸಲಹೆ ಏನೆಂದರೆ, Karnataka Industrial, Commercial and E-Bis Policy ಎಂದು ತನ್ನಿ. ಏಕೆಂದರೆ, ಅದರಲ್ಲಿ ಎಲ್ಲವೂ ಅಡಕವಾಗಿರಬೇಕು. Karnataka Industrial, Commercial and E-Bis Policy ಎಂದು ಮಾಡಬೇಕೆಂದು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಇನ್ನೂ ಸುಮಾರು 86 Central Sector Schemes ಇವೆ, ಆ ಯೋಜನೆಯಲ್ಲಿ ಕೇಂದ್ರ ಸರ್ಕಾರ ಎಲ್ಲಾ ರಾಜ್ಯ ಸರ್ಕಾರಗಳಿಗೆ ಕೂಡ ಸುಮಾರು 2.78 ಲಕ್ಷ ಕೋಟಿ ರೂಪಾಯಿಗಳನ್ನು ನೀಡುತ್ತಿದೆ. ಈ ಸೆಂಟ್ರಲ್ ಸೆಕ್ಟರ್ ಸ್ಕೀಮ್ಸ್‌ನಲ್ಲಿ ಬರುವಂತಹ ಯೋಜನೆಗಳಲ್ಲಿ ಕೆಲವು ಶೇಕಡ 90 ರಷ್ಟು ಸಹಾಯ ಬರುತ್ತದೆ. ಇನ್ನೂ ಕೆಲವು ಶೇಕಡ 75 ರಷ್ಟು, ಶೇಕಡ 70 ರಷ್ಟು, ಶೇಕಡ 50 ರಷ್ಟು ಬರುವಂತಹ ಯೋಜನೆಗಳನ್ನು ದಯಮಾಡಿ ನೋಡಬೇಕು. ಇಂತಹ ಕಷ್ಟದ ದಿನಗಳಲ್ಲಿ ಇಂತಹ ಆರ್ಥಿಕ ನೆರವನ್ನು ಕೇಂದ್ರ ಸರ್ಕಾರದಿಂದ ತರುವುದಕ್ಕೆ ಪ್ರಯತ್ನ ಮಾಡಬೇಕು. ಇನ್ನು ಗ್ರಾಮಾಂತರ ಪ್ರದೇಶದಲ್ಲಿ ರೈತರಿಗೆ ದುಡಿಯುತ್ತಿರುವ ಕೈಗಳಿಗೆ ಉದ್ಯೋಗ ಒದಗಿಸುವಂತಹ ನರೇಗಾ ಕಾರ್ಯಕ್ರಮವನ್ನು ಸರಿಯಾದ ರೀತಿಯಲ್ಲಿ ರೂಪಿಸಿ, ಉದ್ಯೋಗ ಒದಗಿಸಬೇಕೆಂದು ವಿನಂತಿ ಮಾಡುತ್ತೇನೆ. Micro and small industries are backbone of Indian Industrial and Economic growth. ಕೇಂದ್ರ ಸರ್ಕಾರ Micro, Small and Medium Enterprises Development Actಎಂದು 2006ರಲ್ಲಿ ಜಾರಿಗೆ ತಂದಿದೆ. ಈ ಆಕ್ಟ್‌ನಲ್ಲಿ ಸಾಕಷ್ಟು ರೀತಿಯಲ್ಲಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೈಕ್ರೋ ಮತ್ತು ಸಣ್ಣ ಕೈಗಾರಿಕೆಗಳಿಗೆ ಸಹಾಯವನ್ನು ನೀಡತಕ್ಕಂತಹ, benefit ನೀಡತಕ್ಕಂತಹ ಮತ್ತು ತೆರಿಗೆ ವಿನಾಯಿತಿ ಕೊಡತಕ್ಕಂತಹ ಅವಕಾಶಗಳು ಇವೆ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಕರ್ನಾಟಕದಲ್ಲಿ ಈಗಾಗಲೇ ಪೀಣ್ಯ ಇರಬಹುದು, ಬಿಡದಿ ಇರಬಹುದು, ಹುಬ್ಬಳ್ಳಿ ಕೈಗಾರಿಕಾ ಪ್ರದೇಶ ಇರಬಹುದು, ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶಲ್ಲಿರತಕ್ಕಂಥ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳು ಮುಚ್ಚಿ ಹೋಗಿರುತ್ತವೆ.

(ಮುಂದುವರೆದಿದೆ...)

(687)23.03.2020/6.40/ವೈಎಲ್-ಎಕೆ

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ಮುಂದು):-**

ಅವುಗಳನ್ನು ಪುನಶ್ಚೇತನಗೊಳಿಸುವ ಅವಶ್ಯಕತೆ ಇರುವುದರಿಂದಾಗಿ ರಾಜ್ಯ ಸರ್ಕಾರ ಹೊಸ ನೀತಿಯನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಮುಂದಿನ ದಿನಗಳಲ್ಲಿ ಬಹುಶಃ ರಾಜ್ಯದ ಆರ್ಥಿಕ ಪರಿಸ್ಥಿತಿ ಅಷ್ಟೊಂದು ಆಶಾದಾಯಕವಾಗಿ ಇರುವುದಿಲ್ಲ. ರಾಜ್ಯ ಸರ್ಕಾರ ಹೆಚ್ಚಿನ ಖರ್ಚಿನ ಮೇಲೆ ಕಡಿವಾಣ ಹಾಕಬೇಕು. ಸರ್ಕಾರ ಯಾವುದೇ ಹಣವನ್ನು ಅನಗತ್ಯವಾಗಿ ಖರ್ಚು ಮಾಡಬಾರದು. ಈ ಕೊರೊನಾ ವೈರಸ್‌ನಿಂದಾಗಿ ಇಡೀ ಜಗತ್ತಿನಲ್ಲಿ ಆರ್ಥಿಕ ವ್ಯವಸ್ಥೆ ಕುಸಿಯುತ್ತಿದ್ದು, ಜಗತ್ತಿನಲ್ಲಿರುವ ಪ್ರತಿಯೊಬ್ಬ ಮನುಷ್ಯನ ಮೇಲೆಯು ಅದರ ಭಾರ ಬೀಳುತ್ತಿದೆ. ಅದೇ ರೀತಿ ಕರ್ನಾಟಕ ರಾಜ್ಯದ ಜನತೆಯ ಮೇಲೆಯು ಬೀಳಬಹುದು. ಇದನ್ನು ಸುಧಾರಿಸುವುದಕ್ಕೆ ಎಲ್ಲರೂ ಸಹಕರಿಸಬೇಕೆಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ನೀಡಿರುವುದಕ್ಕೆ ಧನ್ಯವಾದಗಳನ್ನರ್ಪಿಸುತ್ತೇನೆ.

**ಶ್ರೀ ಎಸ್.ರುದ್ರೇಗೌಡ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, 2020-21ನೇ ಸಾಲಿನ ಬಜೆಟ್ ಮೇಲೆ ಚರ್ಚೆ ಮಾಡಲು ಅವಕಾಶ ನೀಡಿರುವುದಕ್ಕಾಗಿ ಧನ್ಯವಾದಗಳನ್ನು ತಿಳಿಸುತ್ತಾ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಮಂಡಿಸಿರುವಂತಹ 7ನೇ ಬಜೆಟ್ ಇದಾಗಿದೆ. 2006-07ನೇ ಸಾಲಿನಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಇದ್ದಂತಹ ಸಂದರ್ಭದಲ್ಲಿ ಅವರೇ ಉಪ ಮುಖ್ಯಮಂತ್ರಿಯಾಗಿ ಹಣಕಾಸಿನ ಜವಾಬ್ದಾರಿಯನ್ನು ವಹಿಸಿಕೊಂಡು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೊದಲ ಬಾರಿಗೆ ಕರ್ನಾಟಕ ರಾಜ್ಯಕ್ಕೆ ಸುಮಾರು 35 ಸಾವಿರದ 875 ಸಾವಿರ ಕೋಟಿ ರೂಪಾಯಿಗಳ ಬಜೆಟ್ ಮಂಡಿಸಿರುತ್ತಾರೆ. ಆವೊತ್ತಿನ ದಿವಸ 'ನಮ್ಮಲ್ಲಿರುವಂಥ ಮಾನವ ಸಂಪನ್ಮೂಲವೆಲ್ಲವನ್ನೂ ಗಮನಿಸಿ, ಒಂದು ಲಕ್ಷ ಕೋಟಿ ರೂಪಾಯಿಗಳ ಬಜೆಟನ್ನು ಈ ರಾಜ್ಯದಲ್ಲಿ ಮಂಡಿಸಬೇಕೆಂಬ ಆಶಯವನ್ನು ವ್ಯಕ್ತಪಡಿಸಿ ತಿಳಿಸಿರುವುದು' ತುಂಬಾ ಸಂತೋಷದ ವಿಷಯ.

ಈಗಾಗಲೇ ಮಾನ್ಯ ಸದಸ್ಯರು ಎಲ್ಲಾ ಕಡೆ ಆರ್ಥಿಕ ಹಿಂಜರಿತವಾಗುತ್ತಿರುವುದನ್ನು ಕುರಿತು ಹೇಳಿದ್ದಾರೆ. ಎಲ್ಲಾ ಕಡೆ ಬಹಳಷ್ಟು ಆರ್ಥಿಕ ಹಿನ್ನಡೆ ಇದೆ. ಇದರ ಮಧ್ಯೆದಲ್ಲಿಯು ಕೂಡಾ ಇರುವಂಥ ಎಲ್ಲಾ ಸಮಸ್ಯೆಗಳನ್ನು ಎದುರಿಸಿ, ವಿಶೇಷವಾಗಿ ಅವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭವನ್ನು ಅವಲೋಕಿಸಿದಾಗ 100 ತಾಲ್ಲೂಕುಗಳಲ್ಲಿ ಉಂಟಾದ ಬರಗಾಲ ಸ್ಥಿತಿಯ ಕುರಿತು ಮೊದಲು ಚರ್ಚೆ ಮಾಡಿದ ವಿಚಾರವನ್ನು ಕೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ರಾಜ್ಯದ ಜನತೆಗೆ ಕುಡಿಯುವ ನೀರಿನ ಯೋಜನೆಯನ್ನು ಹೇಗೆ ಒದಗಿಸಬೇಕೆಂಬುದರ ಕುರಿತು ಮಾನ್ಯ ಸಚಿವರ ಹತ್ತಿರ ಮೊದಲು ಚರ್ಚೆ ಮಾಡುತ್ತಿದ್ದರು. ಯೋಗಾ–ಯೋಗಾ ರಾಜ್ಯದ ಜನರ ಅದೃಷ್ಟವೆಂದು ಹೇಳಬಹುದು. ಒಂದು ಕಡೆ ಅದೃಷ್ಟವಾದರೆ, ಇನ್ನೊಂದು ಕಡೆ ದುರಾದೃಷ್ಟವೆಂದು ಹೇಳಬಹುದು. ಏಕೆಂದರೆ, ಸುಮಾರು ಅರ್ಧ ಭಾಗಕ್ಕಿಂತಲೂ ಹೆಚ್ಚು ಭಾಗ ಪ್ರವಾಹದಿಂದ ತತ್ತರಿಸಿ ಹೋಗಿದ್ದೆ. ಆದರೆ, ಮನುಷ್ಯನಿಗೆ ನೀರು ಇಲ್ಲವೆಂದರೆ, ಏನು ಮಾಡುವುದಕ್ಕಾಗುತ್ತಿರಲಿಲ್ಲ. ಪ್ರವಾಹ ಬಂದಾಗ ಅದನ್ನು ನಿರ್ವಹಣೆ ಮಾಡುವಂಥ ಶಕ್ತಿ ಮನುಷ್ಯನಿಗೆ ಇದೆ.

ಶ್ರೀ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿ ಅಧಿಕಾರವಹಿಸಿಕೊಂಡ ನಂತರ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳ ಮಧ್ಯೆ ಆದ್ದಂತಹ ದೊಡ್ಡ ಭೀಕರ ಪ್ರವಾಹದಿಂದಾಗಿ ಲಕ್ಷಾಂತರ ಜನರು ಮನೆಗಳನ್ನು ಕಳೆದುಕೊಂಡು, ರಸ್ತೆಗಳೇ ಇಲ್ಲದಂಥ ಪರಿಸ್ಥಿತಿ ರಾಜ್ಯದಲ್ಲಿ ನಿರ್ಮಾಣವಾಗಿದ್ದು, ಈಗಾಗಲೇ ಅದರ ಬಗ್ಗೆ ಘನತೆವೆತ್ತ ರಾಜ್ಯಪಾಲರ ವಂದನಾ ನಿರ್ಣಯದ ಭಾಷಣದ ಮೇಲೆ ಸಾಕಷ್ಟು ಚರ್ಚೆಯಾಗಿದೆ. ಅವರು ತೆಗೆದುಕೊಂಡ ನಿರ್ಣಯವನ್ನು ಈ ರಾಜ್ಯದ ಜನರು ಅವರ ಕೆಲಸವನ್ನು ಮೆಚ್ಚಿ ಒಪ್ಪಿಕೊಂಡಿದ್ದಾರೆ. ಆಗ ಅವರು ಮಂತ್ರಿಮಂಡಲದಲ್ಲಿ ಇರಲಿಲ್ಲ. ಇಡೀ ರಾಜ್ಯದಲ್ಲಿ ಹಲವಾರು ಬಾರಿ ಪ್ರವಾಸ ಮಾಡುತ್ತಾ, ರಾಷ್ಟ್ರೀಯ ವಿಪತ್ತು ಎಂದು ಘೋಷಣೆ ಮಾಡಿದ ಸಂದರ್ಭದಲ್ಲಿ ಹಾನಿ ಉಂಟಾದರೆ ಏನೇನು ಸವಲತ್ತು ನೀಡಬೇಕೆಂಬುದನ್ನು ಬಹಳಷ್ಟು ಆಲೋಚನೆ ಮಾಡಿ, ಮೊದಲು ರಾಜ್ಯದ ಜನರು ನೆಮ್ಮದಿ ಜೀವನ ಸಾಗಿಸಲು ಸಹಕಾರ ನೀಡಬೇಕೆನ್ನುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರಣದಿಂದಾಗಿ, ಸರ್ಕಾರವು ಸಂಪೂರ್ಣವಾಗಿ ನಾಶವಾದ ಮನೆಗಳಿಗೆ ರೂ.5.00 ಲಕ್ಷ, ಹಾನಿಗೊಳಗಾದ ಮನೆಗಳ ರಿಪೇರಿ ಮಾಡುವುದಕ್ಕೆ ರೂ.3 ಲಕ್ಷ, ನಂತರ ಭಾಗಶಃ ಹಾನಿಗೊಳಗಾದ ಮನೆಗಳಿಗೆ ರೂ.50 ಸಾವಿರ, ಜೊತೆಗೆ ಯಾರ್‍ಯಾರು ಕಾಳಜಿ ಕೇಂದ್ರಗಳಲ್ಲಿ ವಾಸವಿದ್ದು, ನಂತರ ವಾಪಸ್ಸು ಹೋದಂಥವರಿಗೆ ತಕ್ಷಣಕ್ಕೆ ಅವರ ಅಗತ್ಯಗಳನ್ನು ಪೂರೈಸಿಕೊಳ್ಳಲು ರೂ.10,000.00 ನೀಡಿರುವುದನ್ನು ಇವತ್ತಿಗೂ ಬಹಳಷ್ಟು ಜನ ನೆನಪಿಸಿಕೊಳ್ಳುತ್ತಿದ್ದಾರೆ. ಇಂತಹ ಒಂದು ಪರಿಸ್ಥಿತಿ ಉಂಟಾದಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರ ಹೋರಾಟಗಳು ಈ ರಾಜ್ಯದಲ್ಲಿ ಚಿರಪರಿಚಿತವಾಗಿದೆ.

ಬಹುಶಃ ಈ ಮೊದಲು ರಾಜ್ಯಕ್ಕೆ ಏಕವ್ಯಕ್ತಿಯಾಗಿ ಪರಿಚಯವಾಗಿದ್ದ ಮಾಜಿ ಸಚಿವರಾದ ಶ್ರೀ ಬಿ.ರಾಚ್ಚಯ್ಯ, ಕಂದಾಯ ಇಲಾಖೆಯ ಸಚಿವರಾಗಿದಂಥ ಸಂದರ್ಭದಲ್ಲಿ, ಮಲೆನಾಡು ಭಾಗದ ಜನರು ರಾತ್ರೋರಾತ್ರಿ ಜಮೀನುಗಳನ್ನು ಕಳೆದುಕೊಳ್ಳುವಂಥ ಪರಿಸ್ಥಿತಿ ನಿರ್ಮಾಣವಾದಾಗ ಆವೊತ್ತಿನ ದಿವಸ ವಿಧೇಯಕಕ್ಕೆ ಅನುಮೋದನೆ ದೊರಕಬೇಕೆನ್ನುವುದರೊಳಗೆ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಸದನದಲ್ಲಿ ಹೋರಾಟವನ್ನು ಮಾಡಿದರು. ಅವರ ಕಳಕಳಿಯನ್ನು ನೋಡಿ, ಮತ್ತೊಮ್ಮೆ ಪರಾಮರ್ಶಿಸಿ ಆ ಬಡ ಜನರಿಗೆ ಜಮೀನು ನೀಡಿರುವುದು ಇವತ್ತಿಗೂ ವಿಧಾನಸಭೆಯ ನಡವಳಿಯಲ್ಲಿಯು ದಾಖಲಾಗಿದೆ. ಈ ರೀತಿ ಪರಿಚಯವಾದಂಥ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ನಿರಂತರವಾಗಿ ಹಲವಾರು ಹೋರಾಟಗಳನ್ನು ಮಾಡುತ್ತಾ, ಸದಾಕಾಲ ರಾಜ್ಯದ ಜನರ ಅಭಿವೃದ್ಧಿಯನ್ನು ತಮ್ಮ ಗುರಿಯಾಗಿಟ್ಟುಕೊಂಡು, ಸುಮಾರು 40-42 ವರ್ಷಗಳ ಪ್ರವಾಸ ಹೋರಾಟದ ಅನುಭವದಿಂದ ಸರ್ವಸ್ಪರ್ಶಿ ಬಜೆಟ್ ನೀಡಿದ್ದಾರೆ ಎಂದು ಭಾವಿಸುತ್ತೇನೆ. ಸಾಕಷ್ಟು ಅಂಕಿ-ಅಂಶಗಳ ವಿವರದ ಬಗ್ಗೆ ಚರ್ಚೆ ಮಾಡದೇ ಪ್ರತಿಭಾರಿಯು ಅವರಿಗೆ ಸಂಬಂಧಿಸಿದಂತೆ ಏನಾದರೂ ವಿಶೇಷತೆ ಇರುತ್ತದೆ ಎನ್ನುವಂಥ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಒಟ್ಟಾರೆ ಬಜೆಟ್‌ನಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿಯವರು ಹಲವಾರು ವಿಷಯಗಳನ್ನು ಚರ್ಚೆ ಮಾಡಿದ್ದಾರೆ. ಒಟ್ಟು ಆದಾಯದಲ್ಲಿ ರಾಜ್ಯ ತೆರಿಗೆ ಶೇಕಡಾ 54 ರಷ್ಟಿದ್ದರೆ ಸಾಲದಿಂದ ಶೇಕಡಾ 22 ರಷ್ಟು ಪೂರೈಸುತ್ತೇವೆ. ಕೇಂದ್ರ ಸರ್ಕಾರದ ತೆರಿಗೆ ಪಾಲು ಶೇಕಡಾ 100 ರಷ್ಟಿರುತ್ತದೆ. ಬೇರೆ-ಬೇರೆ ಯೋಜನೆಗಳ ಸಹಾಯಧನ ಸುಮಾರು ಶೇಕಡಾ 7 ರಷ್ಟು, ತೆರಿಗೆಯೇತರ ಶೇಕಡಾ 3 ರಷ್ಟು, ಸಾರ್ವಜನಿಕ ಲೆಕ್ಕ ಶೇಕಡಾ 2 ರಷ್ಟು, ಈ ರೀತಿ ಬಂದಂಥ ಆದಾಯವನ್ನು ವೇತನ ಭತ್ಯೆಗಾಗಿ ಶೇಕಡಾ 21 ರಷ್ಟು, ಸಾಮಾಜಿಕ ಭದ್ರತಾ ಪಿಂಚಣಿಗೆ ಶೇಕಡಾ 3 ರಷ್ಟು, ಪಿಂಚಣಿ ಸೌಲಭ್ಯಕ್ಕೆ ಶೇಕಡಾ 9 ರಷ್ಟು,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಹಾಯಧನ ಮತ್ತು ಇತರೆ ಖರ್ಚಿಗಾಗಿ ಶೇಕಡಾ 4 ರಷ್ಟು, ಬಂಡವಾಳಕ್ಕೆ ಶೇಕಡಾ 20 ರಷ್ಟು, ರಾಜಸ್ವಕ್ಕೆ ಶೇಕಡಾ 16 ರಷ್ಟು, ಋಣ ಮೇಲುಸ್ತುವಾರಿ ಅಂದರೆ ಬಂದಂಥ ಸಾಲವನ್ನು ಕಟ್ಟುವಂಥ ಶೇಕಡಾ 15 ರಷ್ಟು, ಆಡಳಿತ ವೆಚ್ಚ ಶೇಕಡಾ 2 ರಷ್ಟು, ಸಹಾಯಧನ ಶೇಕಡಾ 10 ರಷ್ಟು, ಈ ರೀತಿಯಾಗಿ ಹಣದ ವಿನಿಯೋಗವಾಗುತ್ತದೆ. ಇವೆಲ್ಲದರ ಮಧ್ಯೆ ಸಾಮಾಜಿಕ ಕಳಕಳಿಯಿಂದ ಈ ರಾಜ್ಯಕ್ಕೆ ನೀಡಿರುವಂಥ ಹಲವಾರು ಯೋಜನೆಗಳಲ್ಲಿ ವಿಶೇಷವಾಗಿ 'ಮಕ್ಕಳಿಗೆ ಮತ್ತು ಮಹಿಳೆಯರಿಗೆ' ನೀಡಿರುವಂಥ ಭಾಗ್ಯಲಕ್ಷ್ಮೀ ಯೋಜನೆ, ಸೈಕಲ್ ವಿತರಣೆ, ಸಾಲಮನ್ನಾ, ರೈತರಿಗೆ ಬಡ್ಡಿರಹಿತ ಸಾಲ ನೀಡಿರುವುದು, ನಿರುದ್ಯೋಗ ನಿವಾರಣೆಗೆ "ಸೌರನ ಕಾಯಕ ಯೋಜನೆ", ಹಿರಿಯ ನಾಗರೀಕರಿಗೆ ಸಾಮಾಜಿಕ ಭದ್ರತೆ, "ಸಂಧ್ಯಾ ಸುರಕ್ಷಾ ಯೋಜನೆ", ಕೈಗಾರಿಕೆಯ ಮೂಲಭೂತ ಸೌಲಭ್ಯಗಳನ್ನು ಹೆಚ್ಚು ಮಾಡುವಂಥದ್ದು, ಈ ರೀತಿಯಾಗಿ ಹಲವಾರು ಹೊಸ-ಹೊಸ ಯೋಜನೆಗಳನ್ನು ನೀಡುತ್ತಾ, ಇದ್ದಂತಹ ಆದಾಯವನ್ನೇ ಹೇಗೆ ಜಾಸ್ತಿ ಮಾಡುವುದು ಎಂಬುದರ ಬಗ್ಗೆ ಆಲೋಚನೆ ಮಾಡಿ, ಆ ಕ್ಷೇತ್ರದಿಂದ ಅತೀ ಹೆಚ್ಚು ಆದಾಯವನ್ನು ಪಡೆದುಕೊಂಡು ರಾಜ್ಯದ ಜನತೆಗೆ ಅತ್ಯಂತ ಉತ್ತಮವಾದ ಬಜೆಟ್ ನೀಡುತ್ತಾ ಬಂದಿದ್ದಾರೆ.

ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರ ಅವಧಿಯಲ್ಲಿ ಮಂಡಿಸಿದಂಥ 7 ಬಜೆಟ್‌ಗಳಲ್ಲಿ ಮೊದಲನೆ ಬಜೆಟ್ ಕಂತು ಸುಮಾರು ಮೂವತ್ತೈದು ಸಾವಿರ ಕೋಟಿಗಳಿಗೆ ಪ್ರಾರಂಭವಾಗಿ 2007-08ನೇ ಸಾಲಿಗೆ ನಲವತ್ತು ಸಾವಿರ ಕೋಟಿಗಳಷ್ಟು ಹೆಚ್ಚಾಗಿದೆ.

(ಮುಂದು) . . .

(688)/23.03.2020/6.50/ಎಸ್‌ಕೆ-ಎಕೆ

**ಶ್ರೀ ಎಸ್. ರುದ್ರೇಗೌಡ (ಮುಂದು):-**

2008-09 ರಲ್ಲಿ ಸುಮಾರು ಐವತ್ತೈದು ಕೋಟಿ ರೂಪಾಯಿಗಳಾಗುತ್ತದೆ. 2009-10ರಲ್ಲಿ ಸುಮಾರು ಐವತ್ತೆಂಟು ಕೋಟಿ ರೂಪಾಯಿಗಳಾಗುತ್ತದೆ.

**ಉಪ ಸಭಾಪತಿಯವರು:-** ಮಾನ್ಯ ರುದ್ರೇಗೌಡರೇ ತಮ್ಮ ಮಾತನ್ನು ಐದು ನಿಮಿಷದಲ್ಲಿ ಮುಗಿಸುತ್ತೀರಾ.

**ಶ್ರೀ ಎಸ್. ರುದ್ರೇಗೌಡ:-** ಪ್ರಸಕ್ತ 2020-21 ರಲ್ಲಿ ಎರಡು ಲಕ್ಷದ ಮೂವತ್ತೇಳು ಸಾವಿರ ಕೋಟಿ ರೂಪಾಯಿಗಳ ಬಜೆಟ್‌ನ್ನು ನೀಡಿದ್ದಾರೆ. ಬಿ.ಜೆ.ಪಿ. ಸರ್ಕಾರವು 2006-07, 2007-08, 2008-09,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2009-10, 2010-11, 2011-12, 2012-13, 2017-18 ಮತ್ತು 2018-19 ನೇ ಇಸವಿಗಳಲ್ಲಿ ಬಜೆಟ್‌ಗಳನ್ನು ನೀಡಿದೆ. ಮಾನ್ಯ ಯಡಿಯೂರಪ್ಪನವರು 2006-07, 2007-08, 2008-09, 2009-10, 2010-11, 2017-18 ಮತ್ತು 2018-19ನೇ ಸಾಲುಗಳಲ್ಲಿ ಬಜೆಟ್ ಮಂಡಿಸಿದ್ದಾರೆ. ಈ ಸಾಲಿನ ಬಜೆಟ್‌ನಲ್ಲಿ ಹೇಳಿದಂತೆ, ಕೃಷಿ ಇಲ್ಲದಿದ್ದರೆ ಯಾವುದೂ ಉಳಿಯುವುದಿಲ್ಲ. ಕೃಷಿಯನ್ನು ಉಳಿಸಬೇಕು. ಅದೇ ನಿಟ್ಟಿನಲ್ಲಿ ಆಲೋಚನೆ ಮಾಡಿ, ಅವರು ರೈತರಿಗೆ ಕೊಟ್ಟಂತಹ ರೈತ ಸಮ್ಮಾನ್ ಯೋಜನೆ, ಕೇಂದ್ರ ಸರ್ಕಾರದ ಆರು ಸಾವಿರದ ಜೊತೆಗೆ ಇಲ್ಲಿ ಕೊಟ್ಟಿರುವಂತಹದ್ದು, ಮತ್ತೆ ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮಂಡಿಸಿದ ನಂತರ ಬಹುಶಃ ಸಮಾಧಾನವಾಗಿಲ್ಲ. ಮಾರನೇ ದಿವಸದಲ್ಲಿ ವಿಧಾನಸಭೆಗೆ ಬಂದು ನಾನು ಕೃಷ್ಣಾ ಮೇಲ್ದಂಡೆ ಯೋಜನೆಯ ಅಣೆಕಟ್ಟನ್ನು ಎತ್ತರಿಸುವುದಕ್ಕೆ ಸುಮಾರು ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತೇನೆಂದು ಘೋಷಣೆ ಮಾಡಿದರು. ಇದರ ಜೊತೆಗೆ ಅಂತರ್ಜಲ ಅಭಿವೃದ್ಧಿಗೆ ವಿಶೇಷವಾದ ಕಾರ್ಯಕ್ರಮಗಳನ್ನು ಇದರಲ್ಲಿ ಘೋಷಣೆಯನ್ನು ಮಾಡಿರುವುದು. ಇವೆಲ್ಲವೂ ಕೂಡ ರೈತರ ಬಗ್ಗೆ ಇರುತಕ್ಕಂತಹ ವಿಶೇಷವಾದ ಕಾಳಜಿ ಮತ್ತು ಅದು ರೈತ ಸದೃಢವಾಗಿದ್ದರೆ, ಅವನ ಆದಾಯ ಮತ್ತು ಅವನ ಕುಟುಂಬ ಚೆನ್ನಾಗಿದ್ದರೆ, ಇಡೀ ರಾಷ್ಟ್ರ ಚೆನಾಗಿರುತ್ತದೆಂಬುದು ಅವರ ದೃಢವಾದ ನಂಬಿಕೆ. ಇವೆಲ್ಲದರ ಮಧ್ಯೆದಲ್ಲಿ ಈ ಬಾರಿಯ ಒಂದು ಹೊಸ ಪ್ರಯೋಗ. ಇವತ್ತು ಮಕ್ಕಳ ಮತ್ತು ಹೆಣ್ಣು ಮಕ್ಕಳಿಗೆ ವಿಶೇಷವಾಗಿ ಬಜೆಟ್‌ನಲ್ಲಿ ಅವರು ಘೋಷಣೆ ಮಾಡಿದ್ದಾರೆ. ಅದಲ್ಲದೇ ಈ ಬಜೆಟ್‌ನಲ್ಲಿ ಆರು ಭಾಗಗಳಾಗಿ ವಿಂಗಡಣೆ ಮಾಡಿದ್ದಾರೆ. ಕಾರಣ ಬಹುಶಃ ವಿವರಗಳು ಹೆಚ್ಚಿಗೆ ದೊರೆಯದೇ ಇರುವ ಕಾರಣಕ್ಕಾಗಿ, ನಾನು ಅಂದುಕೊಂಡಿರುವುದು ಆಯಾಯ ಕ್ಷೇತ್ರಗಳಲ್ಲಿರುವಂತಹ ಆ ಭಾಗದ ಪರಿಣಿತರ ಚರ್ಚೆಯೊಂದಿಗೆ flexibility ಅಂದರೆ ಯಾವ ಕ್ಷೇತ್ರಕ್ಕೆ ಹೆಚ್ಚು ಕೊಡಬೇಕು ಅದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುವುದು ಎನ್ನುವ ಕಾರಣಕ್ಕಾಗಿ, ಆ ರೀತಿ ಮಾಡಿದ್ದಾರೆಂದು ನಾನು ಭಾವಿಸುತ್ತೇನೆ. ಕೃಷಿ ಮತ್ತು ಪೂರಕ ಚಟುವಟಿಕೆಗಳು ಹೇಳಿ ಮೊದಲನೇಯದಾಗಿ ತೆಗೆದುಕೊಂಡಿದ್ದಾರೆ. ಸರ್ವೋದಯ ಕ್ಷೇಮಾಭಿವೃದ್ಧಿ, ಆರ್ಥಿಕ ಅಭಿವೃದ್ಧಿ ಮತ್ತು ಆರ್ಥಿಕ ಅಭಿವೃದ್ಧಿಗೆ ಪ್ರಚೋದನೆಗಳು. ಅದರಲ್ಲಿ ವಿಶೇಷವಾಗಿ ಕೈಗಾರಿಕೆ ಈ ರೀತಿಯ ಮತ್ತು ಬೆಂಗಳೂರಿನ ಸಮಗ್ರ ಅಭಿವೃದ್ಧಿ, ಸಂಸ್ಕೃತಿ ಮತ್ತು ಪರಂಪರೆ, ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆ ಮತ್ತು ಆಡಳಿತ ಸುಧಾರಣೆ ಮತ್ತು ಸಾಮಾಜಿಕ ಸೇವೆಗಳು. ಇವೆಲ್ಲದರ ಬಹುಶಃ ಉದ್ದೇಶ ಒಂದು ಕೆಲವು ಯೋಜನೆಗಳನ್ನು ಮಾತ್ರ ತೆಗೆದುಕೊಂಡು ಬಜೆಟ್‌ನಲ್ಲಿ ಘೋಷಣೆ ಮಾಡುವುದು. ಒಂದು ಸಾರಿ ಘೋಷಣೆಯಾದ ನಂತರ ಅದು ಅನುಷ್ಠಾನವಾಗಬೇಕಾಗುತ್ತದೆ. ಆದರೆ ಈ ರೀತಿ ಮಾಡಿದಾಗ,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಂದಿನ ದಿನಗಳಲ್ಲಿ ಆರ್ಥಿಕ ಸ್ಥಿತಿ–ಗತಿಗೆ ಹೊಂದಿಕೊಳ್ಳುವ ರೀತಿಯಲ್ಲಿ ಚರ್ಚೆಯನ್ನು ಮಾಡಿ ನಂತರದಲ್ಲಿ ಅದನ್ನು ಅನುಷ್ಠಾನಕ್ಕೆ ತರುವಂತಹ ಪ್ರಯತ್ನವಿದೆ ಎಂದು ಹೇಳಿ ನಾನು ಭಾವಿಸುತ್ತೇನೆ. ನಾನು ಈಗಾಗಲೇ ಹೇಳಿದ ಹಾಗೆ ಮಕ್ಕಳಿಗೆ ಮತ್ತು ಹೆಣ್ಣುಮಕ್ಕಳಿಗೆ ವಿಶೇಷವಾಗಿ ಸುಮಾರು ಮೂವತ್ತಾರು ಸಾವಿರದ ಮುನ್ನೂರ ನಲವತ್ತು ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಕೊಟ್ಟಿದ್ದಾರೆ. ಇದು ಒಟ್ಟು ಬಜೆಟ್‌ನ 15.2 ರಷ್ಟು ದೊಡ್ಡ ಬಜೆಟ್. ಅಂದರೆ ಇಲ್ಲಿ ಮಕ್ಕಳ ಕಲ್ಯಾಣ ಜೊತೆ ಜೊತೆಗೆ ಆರೋಗ್ಯ ಮತ್ತು ಹೆಣ್ಣು ಮಕ್ಕಳಿಗೆ ಕೊಡಬಹುದಾದಂತಹ ವಿಶೇಷ ಸವಲತ್ತುಗಳೇನೇನು ಎನ್ನುವ ಚಿಂತನೆಗಳು ಬಹುಶಃ ಇದರಲ್ಲಿ ಬರುತ್ತದೆ ಎಂದು ನಾನು ಭಾವಿಸುತ್ತೇನೆ. ಅದೇ ರೀತಿ ಕೃಷಿಯಲ್ಲಿ ರೇಷ್ಮೆ ಬೆಳೆಗಾರರಿಗೆ ಇ–ಟೆಂಡರ್ ಮೂಲಕ ಪಾರದರ್ಶಕತೆಯನ್ನು ವ್ಯಕ್ತಪಡಿಸಿರತಕ್ಕಂತಹದ್ದು. ಆರ್ಥಿಕ ಅಭಿವೃದ್ಧಿ ಪ್ರಚೋದನೆಯಲ್ಲಿ ಅವರು ತೆಗೆದುಕೊಂಡಂತಹ ಹಲವಾರು ಯೋಜನೆಗಳು ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ 2020–21ನೇ ಸಾಲಿಗೆ ಸುಮಾರು ಸಾವಿರದ ಐದನೂರು ಕೋಟಿ ರೂಪಾಯಿಗಳನ್ನು ಅವರು ಇಟ್ಟಿರುವಂತಹದ್ದು. ನಮ್ಮ ರಾಜ್ಯದಲ್ಲಿ ಚಾಲ್ತಿಯಲ್ಲಿರುವಂತಹ 'ನಮ್ಮ ಗ್ರಾಮ–ನಮ್ಮ ರಸ್ತೆ' ಸುಮಾರು ಇಪ್ಪತ್ತು ಸಾವಿರ ಕಿಲೋ ಮೀಟರ್ ರಸ್ತೆಗಳಿಗೆ ಸುಮಾರು ಏಳನೂರ ಎಂಭತ್ತು ಕೋಟಿ ರೂಪಾಯಿಗಳನ್ನು ಇಟ್ಟಿರುವಂತಹದ್ದು. ಜಲಜೀವನ್ ಮಿಷನ್ ಈ ರೀತಿ ಸುಮಾರು ಹತ್ತು ಹಲವು ಯೋಜನೆಗಳನ್ನು ಇಂತಹ ಆರ್ಥಿಕ ಸಂಕಟದ ಮಧ್ಯೆಯೂ ಕೂಡ ಅವರು ಚಿಂತನೆಯನ್ನು ಮಾಡಿದ್ದಾರೆ. ಅದನ್ನು ಬಜೆಟ್‌ನಲ್ಲಿ provision ಕೂಡ ಮಾಡಿದ್ದಾರೆ. ಇನ್ನು ವಿಶೇಷವಾಗಿ ನಮ್ಮ ಒಟ್ಟಾರೆ GDP ನಲ್ಲಿ ಸುಮಾರು ನಲವತ್ತು ಭಾಗ ಕೈಗಾರಿಕೆಗಳಿಂದ ಬಂದರೆ ಇನ್ನು ಮೂವತ್ತು ಭಾಗ ನಮ್ಮ ಕೃಷಿಯಿಂದ ಬರುತ್ತದೆ. ಕೃಷಿ ಕ್ಷೇತ್ರದಲ್ಲಿ ಪ್ರತಿ ಬಾರಿ ಕೂಡ ನಿರ್ದಿಷ್ಟ ಆದಾಯ ಬಾರದ ಕಾರಣಕ್ಕೆ ಕೈಗಾರಿಕೆಗಳಿಗೆ ಹೆಚ್ಚು ಒತ್ತನ್ನು ಕೊಟ್ಟು ಕೈಗಾರಿಕೆಯ ಪ್ರಮಾಣವನ್ನು ಹೆಚ್ಚು ಮಾಡುವಂತಹ ಒಂದು ಪ್ರಯತ್ನವನ್ನು ಸಾಮಾನ್ಯವಾಗಿ ಯಾರೇ ಒಬ್ಬ ಆರ್ಥಿಕ ಚಿಂತಕರು ಹೇಳುವಂತಹದ್ದು. ಇತ್ತೀಚಿನ ದಿನಗಳಲ್ಲಿ ಅವರ ಈ ಬಜೆಟ್‌ನ ಇನ್ನೊಂದು ಬಹಳ ದೊಡ್ಡ ಚಿಂತನೆಯ ಎಂದು ಹೇಳಿದರೆ, Tier-2 and Tier-3 cities ಅಂದರೆ ಎರಡು ಮತ್ತು ಮೂರನೇ ಹಂತದ ನಗರಗಳಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡತಕ್ಕಂತಹದ್ದು. ಇಲ್ಲಿ ನಮಗೆ ಎರಡು–ಮೂರು ಅನುಕೂಲಗಳಿವೆ. ದೊಡ್ಡ ದೊಡ್ಡ ನಗರಗಳಾದ ಬೆಂಗಳೂರು, ಮೈಸೂರು ಈ ತರಹ ನಗರಗಳಿಂದ ದೂರ ಹೋಗುವುದರಿಂದ ಈ ನಗರಗಳ ಮೇಲೆ ಇರತಕ್ಕಂತಹ ಒತ್ತಡ ಕಡಿಮೆಯಾಗುವಂತಹದ್ದು. ಎರಡನೆಯದು ಎರಡು–ಮೂರನೇ ಹಂತದ ನಗರಗಳಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿಯಾಗುವುದರಿಂದ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗ್ರಾಮೀಣ ಮಕ್ಕಳಿಗೆ ಉದ್ಯೋಗಗಳ ಅವಕಾಶಗಳ ಜೊತೆ ಜೊತೆಗೆ ಕೃಷಿ ಚಟುವಟಿಕೆಗಳಲ್ಲಿ ಕೂಡ ಅವರು ಭಾಗವಹಿಸಬಹುದು. ಇದೇ ರೀತಿಯ ವಾತಾವರಣವನ್ನು ನಾವು ಶಿವಮೊಗ್ಗದಲ್ಲಿ ನೋಡುತ್ತೇವೆ. ಹುಬ್ಬಳ್ಳಿ-ಧಾರವಾಡ, ಬೆಳಗಾವಿಯಲ್ಲಿ ನೋಡುತ್ತೇವೆ. ಅಲ್ಲಿ ಬಹುಶಃ ಆ ಕೈಗಾರಿಕೆಗಳಲ್ಲಿ ಕೆಲಸ ಮಾಡುವಂತಹ ಯುವಕರೆಲ್ಲರೂ ಕೂಡ ಅಕ್ಕ-ಪಕ್ಕದ ಗ್ರಾಮಗಳಿಂದ ಬಂದಂತಹವರು. ಒಂದು ಕಡೆ ಕೌಶಲ್ಯ ತರಬೇತಿಯೂ ಕೂಡ ಆಗುತ್ತದೆ. ಅದರಿಂದ ಆದಾಯವೂ ಬರುತ್ತದೆ. ಕೃಷಿ ಚಟುವಟಿಕೆಗಳು ನಿರಂತರವಾಗಿ ಮುಂದುವರೆಯುತ್ತದೆ. ಈ ರೀತಿಯ ಹೊಸ ಹೊಸ ಚಿಂತನೆಗಳು ಈ ಬಜೆಟ್‌ನಲ್ಲಿ ಅಡಕವಾಗಿದೆ ಎಂದು ಹೇಳುವುದಕ್ಕೆ ತುಂಬಾ ಸಂತೋಷವಾಗುತ್ತದೆ. ಕೃಷಿ ಮತ್ತು ಕೈಗಾರಿಕೆಗೆ ಸಂಬಂಧಪಟ್ಟಂತೆ ನಾವು ಬಜೆಟ್ provisions ಅಷ್ಟನ್ನೇ ನೋಡದೇ ಈಗ ಮಾಡಿರತಕ್ಕಂತಹ ಬಜೆಟ್‌ನ ಹೊರ ಭಾಗದಲ್ಲಿ ಏನೇನೂ ನಡೆಯುತ್ತಿದೆ ಎಂದು ನಾವು ನೋಡಿದರೆ, 'Invest Karnataka' ಅಂಥ ಹೇಳಿ ಪ್ರತಿ ಅವರು ಮುಖ್ಯಮಂತ್ರಿಗಳಾದ ಮೇಲೆ ಪ್ರಾರಂಭ ಮಾಡಿರುವಂತಹದ್ದು. Global Investors Meet ಅನ್ನು ಮಾಡುವಂತಹದ್ದು. ಈ ಬಾರಿ ಅದನ್ನು ಹೊಸದಾಗಿ ಹುಬ್ಬಳ್ಳಿಯಲ್ಲಿ ಮಾಡಿರುವುದರಿಂದ ಒಳ್ಳೆಯ ಪ್ರತಿಕ್ರಿಯೆ ಬಂದಿದೆ. ಬಹಳಷ್ಟು ಜನ ಹೊರದೇಶದವರು ಮತ್ತು ಇಲ್ಲಿರತಕ್ಕಂತಹ ಕೆಲವು ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಪ್ರಾರಂಭ ಮಾಡುವುದಕ್ಕೆ ತಮ್ಮ ಆಸಕ್ತಿಯನ್ನು ವ್ಯಕ್ತಪಡಿಸಿದ್ದಾರೆ. ಅದಲ್ಲದೇ 2016-17 ರಿಂದ ಈಗಾಗಲೇ ಇರುವಂತಹ ಕೈಗಾರಿಕೆಗಳು ಬೇರೆ ಕ್ಷೇತ್ರಗಳಾದ Aerospace ಇರಬಹುದು, Agro and Food Processing ಇರಬಹುದು, Automobile ಇರಬಹುದು. ಈ ರೀತಿ ಬೇರೆ ಬೇರೆ ಸುಮಾರು 881 ಕೈಗಾರಿಕೆಗಳು ಒಂದು ಲಕ್ಷ ಕೋಟಿ ರೂಪಾಯಿಗಳಷ್ಟು ಹೆಚ್ಚಿಗೆ investment ಕರ್ನಾಟಕ ರಾಜ್ಯದಲ್ಲಿ ಆಗುತ್ತಿದ್ದು, ಸುಮಾರು ಆರವತ್ತು ಸಾವಿರಕ್ಕಿಂತ ಹೆಚ್ಚು ಯುವಕರಿಗೆ ಉದ್ಯೋಗವನ್ನು ಕೊಡುವಂತಹ ಒಂದು ಅವಕಾಶವಿದೆ.

ಮಾನ್ಯ ಸಭಾಪತಿಯವರೇ, ಈಗ ಕೈಗಾರಿಕೆಗೆ ಇಷ್ಟು ಬಜೆಟ್ ಈ ರೀತಿ ಮಾಡಿದರೆ ಸಾಕಾ ಎನ್ನುವಂತಹ ಒಂದು ಪ್ರಶ್ನೆಯನ್ನು ಹಾಕಿಕೊಂಡರೆ, ಕೈಗಾರಿಕೆಗಳು ಬೆಳೆಯುವುದಕ್ಕೆ ಸರ್ಕಾರದಿಂದ ಸಾಕಷ್ಟು ಸ್ಪಂದನೆ ಬೇಕಾಗುತ್ತದೆ. ನಾನು ಒಬ್ಬ ಕೈಗಾರಿಕೋದ್ಯಮಿ. ನಾನು 1984ರಲ್ಲಿ ಕೈಗಾರಿಕೆಯನ್ನು ಸ್ಥಾಪನೆ ಮಾಡಿದ್ದೇವೆ. ಆಗ ಸನ್ಮಾನ್ಯ ರಾಮಕೃಷ್ಣಾ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದರು. ನಂತರ ಮಾನ್ಯ ಎಸ್.ಆರ್. ಬೊಮ್ಮಾಯಿಯವರು ಕೈಗಾರಿಕಾ ಸಚಿವರಾಗಿದ್ದರು. ಆ ಸಂದರ್ಭದಲ್ಲಿ ಅವರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ಒಳ್ಳೆಯ ಘೋಷಣೆ ಮಾಡಿದರು. ಪ್ರತಿ ತಿಂಗಳು ಕರ್ನಾಟಕದಲ್ಲಿ ಒಂದು ಸಾವಿರ ಕೈಗಾರಿಕೆಗಳು ಪ್ರಾರಂಭವಾಗಬೇಕು. ಅದು ವಿಶೇಷವಾಗಿ ಅನುಭವಿಗಳು ಬಂದು ಪ್ರಾರಂಭ ಮಾಡಿದರೆ, ಅವರಿಗೆ ವಿಶೇಷವಾದ ಪ್ರೋತ್ಸಾಹವನ್ನು ನಾವು ಕೊಡುತ್ತೇವೆ. ಅದರ ಪರಿಣಾಮವಾಗಿ ಆ ಅವಧಿಯಲ್ಲಿ ಬಹಳ ದೊಡ್ಡ ಕ್ರಾಂತಿಯಾಯಿತು. ಅಂತರಾಷ್ಟ್ರೀಯ ಮಟ್ಟದಲ್ಲಿ ಸಹ ಬದಲಾವಣೆಗಳಾಗುತ್ತಿತ್ತು.

**ಉಪ ಸಭಾಪತಿಯವರು:–** ಮಾನ್ಯ ರುದ್ರೇಗೌಡರೇ ತಮ್ಮ ಮಾತನ್ನು ಮುಗಿಸುವುದಕ್ಕೆ ಎಷ್ಟು ಸಮಯ ಬೇಕಾಗುತ್ತದೆ? ತಮ್ಮ ಮಾತನ್ನು ಮುಗಿಸಬೇಕಲ್ಲ. ತಾವು ಮಾತನಾಡುವುದಕ್ಕೆ ಐದು ನಿಮಿಷ ಎಂದು ಸಮಯ ತೆಗೆದುಕೊಂಡಿರಿ. ಮತ್ತೆ ತಾವು ಸಮಯವನ್ನು ತೆಗೆದುಕೊಂಡಿರಿ. ಸಮಯವಾಯಿತು. ಮುಂದಿನ ಪ್ರಶ್ನೆಗೆ ಹೋಗೋಣ.

**ಶ್ರೀ ಎಸ್. ರುದ್ರೇಗೌಡ:–** ನಾನು ನನ್ನ ಮಾತನ್ನು ಮುಗಿಸುತ್ತೇನೆ. ಈ ಕೈಗಾರಿಕಾ ಕ್ಷೇತ್ರ ಸದೃಢವಾಗಬೇಕೆಂದರೆ, ಈಗಾಗಲೇ ನಾನು ಹೇಳಿದ ಹಾಗೆ ಇಲ್ಲಿ ಎರಡು ರೀತಿಯ ಅನುಕೂಲಗಳಿವೆ. ಒಂದು ಗ್ರಾಮೀಣ ಪ್ರದೇಶದ ಯುವಕರಿಗೆ ಕೆಲಸವನ್ನು ಕೊಡುವಂತಹದ್ದು. ಎರಡನೇಯದಾಗಿ, ಆರ್ಥಿಕ ಸ್ಥಿತಿ–ಗತಿಯನ್ನು ಕೂಡ ಗಟ್ಟಿ ಮಾಡುವಂತಹದ್ದು. ಇಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳಿವೆ. ಜಿಲ್ಲಾ ಕೈಗಾರಿಕಾ ಕೇಂದ್ರಗಳು ಏನು ಮಾಡುತ್ತೇವೆಂದರೆ, ಆಗಿನ ಸಂದರ್ಭದಲ್ಲಿ ಮಾಡುವಂತಹದ್ದನ್ನು ಇವತ್ತು ಹೋಲಿಸಿದರೆ, ಬರಿ Post Master ಕೆಲಸ ಮಾಡುತ್ತಿವೆ. ಅವುಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಉಪಯೋಗಿಸಿಕೊಂಡರೆ, ಬಹುಶಃ ಇವತ್ತು Skill India, Start-up India Scheme ಗಳು ಏನಿವೆ, ಅದಕ್ಕೆ ಸಾಕಷ್ಟು ಅನುಕೂಲಗಳಾಗುತ್ತವೆ. ಅದೇ ರೀತಿ ಕರ್ನಾಟಕ ಹಣಕಾಸು ನಿಗಮ ಇಡೀ ರಾಷ್ಟ್ರದಲ್ಲಿ ನಾವು ಮೊದಲನೇ ಸ್ಥಾನದಲ್ಲಿದ್ದೇವೆ.

(ಮುಂದು)

(689) 23.03.2020, 7.00, TCH-RN

**ಶ್ರೀ ಎಸ್.ರುದ್ರೇಗೌಡ(ಮುಂದು):–**

ಬಹುಶಃ ಶ್ರೀ ಬಿ.ಎಸ್.ಪಾಟೀಲ್‌ರವರು ಕೂಡ ಅದರ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದರು. ರಾಜ್ಯ ಸರ್ಕಾರದಿಂದ ಅದಕ್ಕೆ ಹಣಕಾಸಿನ ಬೆಂಬಲವಿತ್ತು. ಇದರ ಜೊತೆಗೆ ಅವರು ಆ ಕ್ಷೇತ್ರದಲ್ಲಿ ಮುನ್ನುಗ್ಗಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಬೆಂಬಲ ಕೊಟ್ಟರು. ತಾಂತ್ರಿಕವಾಗಿ ಹಾಗೂ ಹಣಕಾಸಿನಿಂದ ಎರಡೂ ಕಡೆಯಿಂದ ಒಳ್ಳೆಯ ಸ್ಪಂದನೆ ಮತ್ತು ಉತ್ತಮ ಬೆಂಬಲ ಕೂಡ ಸಿಕ್ಕಿತ್ತು. ಹಾಗಾಗಿ, ಆಗ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಕಷ್ಟು ಇಂಡಸ್ಟ್ರಿಗಳು ಬಂದವು. ಅವು ಬಹಳ ಚೆನ್ನಾಗಿವೆ. ಬಹುಶಃ ನಾವು ನೆನಸಿಕೊಳ್ಳುವುದಾದರೆ, ಇನ್ಫೋಸಿಸ್ ಕಂಪನಿ ಕೂಡ KSFCಯಿಂದ ಲೋನ್ ತೆಗೆದುಕೊಂಡಿತ್ತು. ಇವತ್ತು KSFC ಒಂದು ರೀತಿಯ ನಗಣ್ಯವಾಗಿದೆ. ಅದು ಏಕೆ ಆಗಿದೆಯೆಂದರೆ, ಅಲ್ಲಿ ಒಂದು ರೀತಿ fixed rate of interest ಇದೆ. ಈಗಿನ ಮಾರುಕಟ್ಟೆಗೆ ಸ್ಪಂದಿಸುತ್ತಿರುವುದು ಅಂತರಾಷ್ಟ್ರೀಯ ಮಟ್ಟದಲ್ಲಿ ಆಗುತ್ತಿರತಕ್ಕಂಥ ಬದಲಾವಣೆಯನ್ನು ಇಡೀರಾಷ್ಟ್ರ ಗಮನಿಸುತ್ತಿದೆ. ಬರೀ ನಾವು ಅಂತರಿಕ್ಷೆಯಾವ ಈ ರೀತಿಯ ಸೇವೆಗಳಾದ Software Industries ಇಷ್ಟರಲ್ಲಿ ನೋಡಿದರೆ ಸಾಲದು. ಉತ್ಪಾದಕತೆಯಲ್ಲಿ ಗೃಹಕೈಗಾರಿಕೆಗಳಲ್ಲೂ ಕೂಡ ನಮಗೆ ಸಾಕಷ್ಟು ಅವಕಾಶಗಳಿವೆ. ಇದನ್ನು ಸರಿಯಾಗಿ ಉಪಯೋಗಿಸಿಕೊಳ್ಳತಕ್ಕಂಥ ನಿಟ್ಟಿನಲ್ಲಿ ಸರ್ಕಾರ ಆಲೋಚನೆ ಮಾಡಬೇಕೆಂದು ಹೇಳುತ್ತಿದ್ದೇನೆ. ನಾನು ಚರ್ಚೆ ಮಾಡಬೇಕಾಗಿರುವಂತಹ ಇನ್ನೂ ಹಲವಾರು ವಿಷಯಗಳಿವೆ, ಆದರೆ, ಸಮಯದ 'ಅಭಾವ ಇರುವುದರಿಂದ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತಿದ್ದೇನೆ.

**12. ಗಮನ ಸೆಳೆಯುವ ಸೂಚನೆ**

**ವಿಷಯ:–** ವಿದ್ಯಾರ್ಥಿಗಳಿಗೆ ವಿತರಿಸುವ ಲ್ಯಾಪ್‌ಟಾಪ್‌ಗಳ
ಖರೀದಿಯಲ್ಲಿ ಆಗಿರುವ ಅವ್ಯವಹಾರದ ಬಗ್ಗೆ.

---

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ವಿದ್ಯಾರ್ಥಿಗಳಿಗೆ ವಿತರಿಸುವ ಲ್ಯಾಪ್‌ಟಾಪ್‌ಗಳ ಖರೀದಿಯಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

**ಡಾ.ಸಿ.ಎನ್. ಅಶ್ವಥ್ ನಾರಾಯಣ (ಉಪ ಮುಖ್ಯ ಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಐಟಿ, ಬಿಟಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):–** ಮಾನ್ಯ ಸಭಾಪತಿಯವರೇ,. . .

**(ಸಚಿವರ ಲಿಖಿತ ಹೇಳಿಕೆ ಲಗತ್ತಿಸಿದೆ)**

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿದ್ಯಾರ್ಥಿಗಳಿಗೆ ವಿತರಿಸುವ ಲ್ಯಾಪ್‌ಟಾಪ್‌ಗಳ ಖರೀದಿಯಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಕೆ.ಸಿ.ಕೊಂಡಯ್ಯ ಮತ್ತು ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಗಮನ ಸೆಳೆದಿದ್ದಾರೆ. 2017–18ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 110 ರಲ್ಲಿ ಇಂಜಿನಿಯರಿಂಗ್, ವೈದ್ಯಕೀಯ, ಪಾಲಿಟೆಕ್ನಿಕ್ ಮತ್ತು ಪ್ರಥಮದರ್ಜೆ ಕಾಲೇಜುಗಳಲ್ಲಿ 2017–18ನೇ ಸಾಲಿನಲ್ಲಿ ಪ್ರವೇಶ ಪಡೆಯುವ ಮತ್ತು ವಾರ್ಷಿಕ ಕೌಟುಂಬಿಕ ವರಮಾನ ರೂ.2.5 ಲಕ್ಷಕ್ಕಿಂತ ಕಡಿಮೆ ಇರುವ ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್‌ಟಾಪ್‌ಗಳನ್ನು ವಿತರಿಸಲಾಗುವುದು. ಸುಮಾರು 1.5 ಲಕ್ಷ ವಿದ್ಯಾರ್ಥಿಗಳಿಗೆ ಇದರಿಂದ ಅನುಕೂಲವಾಗಲಿದೆ ಎಂದು ತಿಳಿಸಲಾಗಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, read and record ಎಂದು ಮಾಡಿಕೊಳ್ಳಲಿ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠದಲ್ಲಿ ಆಸೀನರಾದರು)**

**ಶ್ರೀ ಕೆ.ಸಿ.ಕೊಂಡಯ್ಯ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಉತ್ತರವನ್ನು ನೋಡಿದ್ದೇವೆ. ಹಿಂದೆ 2017–18ರಲ್ಲಿ ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್‌ಟಾಪ್ ನೀಡಲು ಖರೀದಿ ಮಾಡಲಾಗಿದೆ. ಅವುಗಳನ್ನು finalize ಮಾಡಿ ಅವುಗಳನ್ನು ವಿತರಣೆ ಕೂಡ ಮಾಡಿದರು. ಈ ವಿಷಯದಲ್ಲಿ ಉಳಿದ ಒ.ಬಿ.ಸಿ.,ಗಳಿಗೆ ಮತ್ತು ಜನರಲ್ ಕ್ಯಾಟಗರಿ ವಿದ್ಯಾರ್ಥಿಗಳಿಗೂ ಕೂಡ ಉಚಿತವಾಗಿ ಲ್ಯಾಪ್‌ಟಾಪ್ ಕೊಡಬೇಕೆಂದು ಒಂದು ಪ್ರಸ್ತಾಪವು ಸರ್ಕಾರದ ಮುಂದೆ ಬಂತು. ಅದಕ್ಕೆ 233 ಕೋಟಿ ರೂಪಾಯಿಗಳ ಅನುದಾನವನ್ನು ಒದಗಿಸಲಾಗಿತ್ತು. ಈ ವಿಷಯದಲ್ಲಿ ಇನ್ನೂ 'ಟೆಂಡರ್ ಕೂಡ ಕರೆದಿರಲಿಲ್ಲ. ಮಾನ್ಯ ಬಸವರಾಜರಾಯರೆಡ್ಡಿಯವರು ಮಂತ್ರಿಗಳಿದ್ದಾಗ, ಮಾನ್ಯ ಮುಖ್ಯಮಂತ್ರಿಗಳೇ ಈ ಲ್ಯಾಪ್‌ಟಾಪ್ ಖರೀದಿಯಲ್ಲಿ 300 ಕೋಟಿ ರೂಪಾಯಿಗಳ ಅವ್ಯವಹಾರ ಆಗಿದೆಯೆಂದು ತುಂಬಾ ಗಲಾಟೆಯಾಗಿ ಬೆಳಗಾವಿ ಅಧಿವೇಶನದಲ್ಲಿ ಅದರ ಬಗ್ಗೆ ದೀರ್ಘವಾಗಿ ಚರ್ಚೆಯಾಗಿ ಇದಕ್ಕೆ ಸದನ ಸಮಿತಿ ಮಾಡಲೇಬೇಕೆಂದು ಪಟ್ಟು ಹಿಡಿದು ಈಗ ಇರತಕ್ಕಂಥವರು ಸದನ ಸಮಿತಿಯನ್ನು ಮಾಡಿಸಿದ್ದರು. ಆ ಸಮಯದಲ್ಲಿ TAP Committee recommendation ಮಾಡಿದಂತಹ specification ಇರುವುದನ್ನು ಮಾಡಿ, ಅದಕ್ಕೆ ಏನೂ ಟೆಂಡರ್ ಕೂಡ 'ಕರೆದಿರಲಿಲ್ಲ. ಆದರೆ, ಶ್ರೀ ಅಜಯ್ ನಾಗಭೂಷಣ್ ಎನ್ನತಕ್ಕಂಥ ಒಬ್ಬರು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಧಿಕಾರಿ technical specification ಅದು ಸರಿಯಿಲ್ಲವೆಂದು ಹೇಳಿದರು. ಆದರೂ ಕೂಡ ಅಂದಿನ ಮುಖ್ಯಮಂತ್ರಿಗಳು ಲ್ಯಾಪ್‌ಟಾಪ್ ಖರೀದಿಯಲ್ಲಿ 300 ಕೋಟಿ ರೂಪಾಯಿಗಳು ಅವ್ಯವಹಾರವಾಗಿದೆಯೆಂದು ಹೇಳಿದರು ಆ ಸದನಸಮಿತಿಗೆ ನಾನೇ ಅಧ್ಯಕ್ಷನಾಗಿದ್ದೆನು. ಆಡಳಿತ ಪಕ್ಷದ ಕಡೆಯಿಂದ ಶ್ರೀ ಅರುಣ ಶಹಾಪುರರವರು ಮತ್ತು ಶ್ರೀ ರಮೇಶ್ ಬಾಬುರವರು ಹಾಗೂ ಶ್ರೀ ರಘುನಾಥ್‌ರಾವ್ ಮಲ್ಕಾಪೂರೆಯವರು ಸದಸ್ಯರಾಗಿದ್ದರು. ಆ ಸಮಿತಿಯಲ್ಲಿ ಅದರ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಿ ನಾವು ಅದರ ಬಗ್ಗೆ report submit ಮಾಡಿದೆವು. ಆದರೆ ಇನ್ನೂ ಟೆಂಡರ್ ಕೂಡ ಕರೆದಿಲ್ಲ. ಆ ಟೆಂಡರ್‌ಗಳಿಗೆ ಯಾವ specification ಇರಬೇಕೆಂಬುದು freeze ಆಯಿತು. ಆದರೆ, ಟೆಂಡರ್ ಕರೆಯಲು ಸಮಿತಿಯಿಂದ clearance ಕೊಟ್ಟೆವು. ಅದಾದ ನಂತರ, ಸರ್ಕಾರ ಟೆಂಡರ್ ಕರೆದರು. ಅದರಲ್ಲಿ ಯಾರೂ quote ಮಾಡಲಿಲ್ಲವೆಂದು ಹೇಳಿತು. ಅಷ್ಟರಲ್ಲಿ ಚುನಾವಣೆ ಬಂತು, ಚುನಾವಣೆಯಾದ ನಂತರ ಪುನಃ ಸಮ್ಮಿಶ್ರ ಸರ್ಕಾರದಲ್ಲಿ ಚರ್ಚೆ ಮಾಡಿ ಇದನ್ನು ಕೊಡಬೇಕೆಂದು ಆಯಿತು. ಆದರೆ, ಇಲ್ಲಿ ಆಗಿದ್ದೇನೆಂದರೆ, ಹಿಂದೆ 2017-18ರಲ್ಲಿ ದರ ನಿಗದಿ ಮಾಡಿ ಸುಮಾರು ಮೂವತ್ತೆರಡು ಸಾವಿರ ರೂಪಾಯಿಗಳು ಎಸ್.ಸಿ./ಎಸ್.ಟಿ.,ಗಳಿಗೆ supply ಮಾಡಿದಾಗ, ಒಂದು ಲ್ಯಾಪ್‌ಟಾಪ್‌ಗೆ 14,400/- ರೂಪಾಯಿಗಳ ದರದಂತೆ approve ಮಾಡಿದರು. ಆದರೆ, ತಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ, ಸಮ್ಮಿಶ್ರ ಸರ್ಕಾರದಲ್ಲಿ ಇದು approve ಆಗಿದೆ ಎಂದು ತಾವು same specification ಏನು ತಾವು 2017-18 ರಲ್ಲಿ 30000 ಕಂಪ್ಯೂಟರ್‌ಗಳನ್ನು ಖರೀದಿ ಮಾಡಿದ್ದರೋ ಅದೇ specification. ಮತ್ತೆ ತಾವು 24,800 ರೂಪಾಯಿಗಳಿಗೆ ಕೊಟ್ಟಂತ specification ಇದರ ಜೊತೆಗೆ ಇದೆ. 10ನೇ ಮಾರ್ಚ್ 2020ರಲ್ಲಿ same specification ನಿಂದ quotation ಅನ್ನು ತರಿಸಿದ್ದೇವೆ. ಅದು 14,700/-ರೂಪಾಯಿಗಳು ಇದೆ. ಅಂದರೆ, ಒಂದು ಲ್ಯಾಪ್‌ಟಾಪ್‌ಗೆ 14,700/- ರೂಪಾಯಿಗಳು ಇದೆ.ಆದರೆ, ಒಂದು ಲ್ಯಾಪ್‌ಟಾಪ್‌ಗೆ 28,000 ರೂಪಾಯಿಗಳು ಕೊಟ್ಟಿದ್ದಾರೆ. ಇದರಲ್ಲಿ ಹೇಗೆ ಹಗರಣವಾಗಿದೆ? ಇದನ್ನು ಯಾವರೀತಿ finalize ಮಾಡಿದರು. ಆ Specification ನಲ್ಲಿ ಅಲ್ಪವಿರಾಮ ಮತ್ತು ಪೂರ್ಣವಿರಾಮ ಕೂಡ ಬದಲಾವಣೆಯಿಲ್ಲ. ಏನು ಟ್ಯಾಪ್‌ಕಮಿಟಿಯಲ್ಲಿ ಮಾಡಿದ್ದರೊ, 2017-18ರಲ್ಲಿ ಯಾವರೀತಿ ಆದೇಶ ಮಾಡಿದ್ದರು; ಈಗ ತಾವು 14ನೇ ಜೂನ್‌ರಲ್ಲಿ ಕ್ಯಾಬಿನೆಟ್ ಅಪ್ರೂವಲ್ ಆದ ನಂತರ ಟೆಂಡರ್

ಕರೆದಿರುವುದರಲ್ಲೂ ಇದೇ specification 28,000 ರೂಪಾಯಿಗಳು ಇದೆ. ಇದು ಹೇಗೆ ಆಯಿತು. ಇದರ ಬಗ್ಗೆ ಮಾನ್ಯ ಸಚಿವರು ಗಮನ ಸೆಳೆಯಬೇಕು. ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡುವುದಕ್ಕೆ ಒಂದು ಸದನ ಸಮಿತಿ ರಚನೆ ಮಾಡುವುದು ಉತ್ತಮ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಇದರ ಬಗ್ಗೆ ನಮ್ಮ ಹಿರಿಯ ಸದಸ್ಯರುಗಳು ಮಾತನಾಡುತ್ತಾರೆ. ಏಕೆಂದರೆ, 2017–18ರಲ್ಲಿ ಟೆಂಡರ್ ಕರೆದಿಲ್ಲ. ಇಂತಹ ವಿಷಯದಲ್ಲಿ ಆಡಳಿತ ಪಕ್ಷದಲ್ಲಿರುವ ಸದಸ್ಯರೆಲ್ಲಾ ಗಲಾಟೆ ಮಾಡಿ, ಸದನಸಮಿತಿ ರಚನೆ ಮಾಡುವಂತೆ ಮಾಡಿದ್ದರು...

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸದನ ಸಮಿತಿ ರಚನೆಯಾಗಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿ ಮಾಡಿಕೊಟ್ಟಿದ್ದಾರೆ.

**ಶ್ರೀ ಕೆ.ಸಿ.ಕೊಂಡಯ್ಯ:–** ಮಾನ್ಯ ಸಭಾಪತಿಯವರೇ, ಮಾಡಿ ಕೊಡಲಿ. ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರೇ, ನಾನು ಹೇಳುವುದನ್ನು ಸ್ವಲ್ಪ ಕೇಳಿ.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–**ಈ ಬಾರಿಯೂ ನಿಲ್ಲಿಸಿದ್ದಾರೆ, ಲ್ಯಾಪ್‌ಟಾಪ್ ಕೊಡುತ್ತಿಲ್ಲ. ಕೇಳಿದರೆ ಜೋರು ಮಾಡುತ್ತಿದ್ದಾರೆ.

**ಶ್ರೀ ಕೆ.ಸಿ.ಕೊಂಡಯ್ಯ:–** ಮಾನ್ಯ ಸಭಾಪತಿಯವರೇ, ಸದನ ಸಮಿತಿಯಲ್ಲಿ Terms of Reference. ಅದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ, ಟ್ಯಾಪ್‌ಕಮಿಟಿ ಮತ್ತು approve ಮಾಡುವುದನ್ನು ಮಾಡಿ ಅವುಗಳನ್ನೆಲ್ಲಾ ವಿವರವಾಗಿ ಮಾಡಿದ್ದೇವೆ. ಅದಾದ ನಂತರ ನಾವು ಏನು ಮಾಡಿದ್ದೇವೆಂದರೆ, ಆಡಳಿತ ಪಕ್ಷದದಿಂದ ಇಬ್ಬರು ಸದಸ್ಯರು ಇದರ ಬಗ್ಗೆ ನಮ್ಮ ಒಮ್ಮತ ಇಲ್ಲವೆಂದು dissent note ಅನ್ನು ಕೊಟ್ಟರು. ಅದನ್ನು overrule ಮಾಡಿ ನಾವೇನು ಮಾಡಿದ್ದೇವೆಂದರೆ, ಅಂದರೆ, ಇನ್ನೂ ಸದನ ಸಮಿತಿ ಚಾಲನೆಯಲ್ಲಿರುವಾಗಲೇ ಸದನ ಸಮಿತಿ ಒಪ್ಪಿ, ತುರ್ತಾಗಿ ಸರ್ಕಾರ ಟೆಂಡರ್ ಕರೆಯುವಂತೆ ನಾವು ಆದೇಶ ಮಾಡಿದೆವು. ಅಂದರೆ ನಮ್ಮ ಉದ್ದೇಶ ಏನಿತ್ತು ಎಂದರೆ, ಬಡ ವಿದ್ಯಾರ್ಥಿಗಳಿಗೆ ಎಲ್ಲರಿಗೂ ಸಮಾನವಾಗಿ ವಿತರಣೆ ಆಗಬೇಕು. ಎಸ್.ಸಿ/ಎಸ್.ಟಿಗೆ ಮಾತ್ರ ಮಾಡಿದ್ದೀರಿ. ಒಬಿಸಿ ಮತ್ತು ಜನರಲ್‌ರವರಿಗೆ ಎಲ್ಲರಿಗೂ ಕೊಡಬೇಕೆಂಬ ಉದ್ದೇಶದಿಂದ ಮಾಡಿದ್ದರು. ಆದರೆ ಟೆಂಡರ್

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕರೆಯುವಾಗ ಇಷ್ಟು ರೇಟ್ ಆಯಿತು. ಎರಡೇ ತಿಂಗಳಿನಲ್ಲಿ ಇಷ್ಟು ರೇಟ್ ಹೇಗೆ ಆಯಿತು. ಬೇಕಾದರೆ ನನ್ನ ಬಳಿ ಇರುವ ಲಿಸ್ಟ್‌ನ್ನು ತಮಗೆ ಕೊಡುತ್ತೇನೆ. ಎರಡು ಸ್ಪೆಸಿಫಿಕೇಷನ್ ಇವೆ. ಈ ಸ್ಪೆಸಿಫಿಕೇಷನ್‌ನಲ್ಲಿ ಅಲ್ಪ ವಿರಾಮ ಮತ್ತು ಫುಲ್‌ಸ್ಟಾಪ್ ಏನೂ ಬದಲಾವಣೆ ಇಲ್ಲ. ಆಗ 14,700/- ರೂಪಾಯಿಗಳು ಎಂದು ಏನು ಕೊಟ್ಟೆವು. ತಾವು ಏನು 28,000/- ರೂಪಾಯಿಗಳು ಎಂದು ಕೊಟ್ಟಿದ್ದೀರಿ, ಆದರೆ Same specification ಇದೆ. ಅದೇ specification ಗೆ ನಾವು quotation ತರಿಸಿದ್ದೇವೆ. ಇವತ್ತಿಗೂ ಸಹ ಒಂದು ಲ್ಯಾಪ್‌ಟಾಪ್ 14,700/- ರೂಪಾಯಿಗಳಿಗೆ ಸಿಗುತ್ತವೆ. ಇದರಲ್ಲಿ ಏನು ಅವ್ಯವಹಾರವಾಗಿದೆ ಎಂದು ನಮ್ಮ ಹಿರಿಯ ನಾಯಕರು ಇದ್ದಾರೆ, ಅವರು ಇದರ ಮೇಲೆ ಬೆಳಕು ಚೆಲ್ಲುತ್ತಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಸಾಕಷ್ಟು ಚರ್ಚೆ ಆಗಿತ್ತು. ಶ್ರೀ ಬಸವರಾಜರಾಯರೆಡ್ಡಿಯವರು ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳಾಗಿದ್ದಾಗ, ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಕೊಡಬೇಕು ಎನ್ನತಕ್ಕಂಥ ತೀರ್ಮಾನಕ್ಕೆ ಸರ್ಕಾರ ಬಂದಿತ್ತು. ಆಗ ಅವರು ಕೊಟ್ಟಿರತಕ್ಕಂಥ ರೇಟ್ ಏನಿತ್ತು ಎಂದು ಓದುತ್ತೇನೆ; ACER One14: AMD A6 7350B, 4GB DDR RAM, ಇದೆಲ್ಲಾ ಇವೆ. ಇದು ಆಗ ಇದ್ದಿದ್ದು. ಆಗ ಒಂದು ಲ್ಯಾಪ್‌ಟಾಪ್‌ಗೆ ರೂ.14,700+ ಜಿಎಸ್‌ಟಿ ಇತ್ತು. ಅದೇ ACER 14": AMD A4 Processor, 4GB DDR RAM, ಇದೆಲ್ಲಾ ಇದೆ. ಅದಕ್ಕೆ ಈಗ 24,960 ರೂಪಾಯಿಗಳು ಇದೆ.

**(ಮುಂದು...)**

(690)23.3.2020/7.10/ಎಂ.ಎಂ-ಆರ್.ಎನ್

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಮುಂದು):-**

ಅದಕ್ಕೆ ಈಗ ರೂ. 24,960/- ಅದೇ ಕಂಪನಿ ಇದ್ದಾಗ ಒಮ್ಮಿಂದೊಮ್ಮೆಲೇ ಹೇಗೆ ದುಪ್ಪಟ್ಟು ದರವಾಗುತ್ತದೆ? ಆ ಸಮಯದಲ್ಲಿ ಮಾನ್ಯ ಬಿ.ಎಸ್. ಯಡಿಯೂರಪ್ಪನವರು ವಿರೋಧಪಕ್ಷದ ನಾಯಕರಾಗಿದ್ದರು. ಆಗ ಲ್ಯಾಪ್ ಟಾಪ್ ವಿತರಣೆಯಲ್ಲಿ 300 ಕೋಟಿ ಹಗರಣ ಆಗಿದೆ ಎಂದು ಹೇಳಿದರು. ಆದರೆ, ಈಗ ನೀವು 600 ಕೋಟಿ ರೂಪಾಯಿ ಹಗರಣ ಮಾಡಿದ್ದೀರಿ, ಅವರು 300 ಕೋಟಿ ರೂಪಾಯಿ ಹಗರಣ ಮಾಡಿದ್ದರು. ಇದು ಹೇಗಾಯಿತು ಹೇಳಿ. ಇದರಲ್ಲಿ ಏನಾದರೂ ಒಂದು ವಾಕ್ಯ ಬದಲಾಗಿದ್ದರೆ ಹೇಳಿ. ಆಗ ತೆಗೆದುಕೊಂಡಿದ್ದಾಗ ಇದ್ದ ಲ್ಯಾಪ್ ಟಾಪ್ ಬೆಲೆ 2-3 ತಿಂಗಳ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಂತರ ದುಪ್ಪಟ್ಟು ದರ ಹೇಗಾಯಿತು? ಇದಕ್ಕೊಂದು ಮಿತಿ ಬೇಕಲ್ಲವೇ? ದುಡ್ಡು ತಿನ್ನುವುದಕ್ಕೆ ಒಂದು ಲಿಮಿಟ್ ಬೇಕಲ್ಲವೇ? ಆ ಸಮಯದಲ್ಲಿ ಇದರ ಬಗ್ಗೆ ಪರಿಶೀಲಿಸಬೇಕೆಂದು ಒಂದು ಸದನ ಸಮಿತಿಯನ್ನು ರಚನೆ ಮಾಡಲಾಯಿತು. ಆ ಸದನ ಸಮಿತಿ ವರದಿಯನ್ನು ಕೊಟ್ಟಿದೆ. ಇದರಲ್ಲಿ ತಪ್ಪಿತಸ್ಥರು ಯಾರು? ಅವರ ಮೇಲೆ ಯಾವ ರೀತಿಯಾದಂತಹ ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಈ ರೀತಿ ಹಗಲುದರೋಡೆ ಕೆಲಸ ಮಾಡಿದರೆ ಹೇಗಾಗುತ್ತದೆ? ಲ್ಯಾಪ್ ಟಾಪ್ ಅನ್ನು ಯಾರಿಗಾದರೂ ಕೊಡಲಿ, ಬೇಡ ಎನ್ನುವುದಿಲ್ಲ. ಇಲ್ಲಿ ಏನಾದರೂ ಒಂದು 'Comma(,)' ಬದಲಾಗಿದ್ದರೆ ಹೇಳಿ; ನಿಮ್ಮ ಸರ್ಕಾರದಲ್ಲಿ ಎಷ್ಟು ಭ್ರಷ್ಟಾಚಾರ ಎಂದು ನಡೆದಿದೆ ಎಂದು ಲೆಕ್ಕ ಹಾಕಿ. ಭ್ರಷ್ಟಾಚಾರದ ಬಗ್ಗೆ ನೀವು ಮಾತನಾಡುತ್ತೀರಿ, 10% ಸರ್ಕಾರ ಎಂದು ಹೇಳುತ್ತೀರಿ. ಇನ್ನು 20% ಸರ್ಕಾರ ಆದರೆ, ನೀವು 20% ತೆಗೆದುಕೊಳ್ಳುವುದಕ್ಕೆ ನಿಂತಿದ್ದೀರಿ, ನಿಮಗೆ ಯಾರೂ ಹೇಳುವವರು, ಕೇಳುವವರು ಇಲ್ಲವೇ? ನೀವು ಬಂದು ಇನ್ನು ನಾಲ್ಕು ತಿಂಗಳಾಗಿಲ್ಲ. ಈ ರೀತಿ ಆದರೆ ಹೇಗೆ? ಇದರ ಬಗ್ಗೆ ತನಿಖೆ ನಡೆಸಲು ಒಂದು ಸದನ ಸಮಿತಿಯನ್ನು ರಚಿಸಲಾಯಿತು. ಆ ಸದನ ಸಮಿತಿಯು ತನ್ನ ವರದಿಯನ್ನು ಕೊಟ್ಟಿದೆ. ಮಕ್ಕಳ ವಿಷಯದಲ್ಲಿಯೂ ನೀವು ಹೀಗೆ ಮಾಡಿದರೆ ಮುಂದೆ ಹೇಗೆ? ನಿಮಗೆ ಹೇಳುವವರು, ಕೇಳುವವರು ಯಾರೂ ಇಲ್ಲವೇ? ಮಾನ್ಯ ಸಭಾಪತಿಯವರೇ, ಸದನ ಸಮಿತಿಯಲ್ಲಿ ಕೊಟ್ಟಿರುವ ವರದಿಯಂತೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಸಿ. ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆ ಸದನ ಸಮಿತಿಯಲ್ಲಿ ಮಾನ್ಯ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು 300 ಕೋಟಿ ರೂಪಾಯಿಗಳ ಹಗರಣವಾಗಿದೆ ಎಂದು ಆರೋಪ ಮಾಡಿದರು. ಆ ಸದನ ಸಮಿತಿಯಲ್ಲಿ ನಿಮ್ಮ ಇಬ್ಬರು ಸದಸ್ಯರು, ಜೆ.ಡಿ(ಎಸ್)ನವರು ಇಬ್ಬರು ಸದಸ್ಯರು ಮತ್ತು ನಾವು ಮೂವರು ಸದಸ್ಯರಿದ್ದೆವು. ಅಧಿಕಾರಿಗಳನ್ನು ಕರೆದು ಕೂಲಂಕುಷವಾಗಿ ಪರಿಶೀಲನೆ ಮಾಡಿ ಸುಮಾರು ಒಂಭತ್ತು ಸಭೆಗಳನ್ನು ಮಾಡಿದ ಮೇಲೆ outcome ಬಂತು. outcome ನಲ್ಲಿ ಒಂದು ಟೆಂಡರ್ ಅನ್ನೂ ಕರೆದಿಲ್ಲ; ಇಲ್ಲಿ ಸ್ಪಷ್ಟೀಕರಣ ಹೇಳಬೇಕಾಗಿದೆ. ಬೆಳಗಾವಿ ಅಧಿವೇಶನದಲ್ಲಿ ನೀವೇ ಗಲಾಟೆ ಮಾಡಿದ್ದಿರಿ. ಬೆಳಗಾವಿ ಅಧಿವೇಶನದಲ್ಲಿ ಸದನ ಸಮಿತಿ ಆಗುವವರೆಗೆ ಬಿಡಲಿಲ್ಲ. ಶ್ರೀ ಎಂ.ಆರ್. ಸೀತಾರಾಂರವರು ಸಭಾನಾಯಕರಾಗಿದ್ದರು. ಅಂದು ಸಚಿವರಾಗಿದ್ದಶ್ರೀ ಬಸವರಾಜ ರಾಯರೆಡ್ಡಿಯವರನ್ನು ಕೂರಿಸಿಕೊಂಡು ಸದನ ಸಮಿತಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮಾಡುವುದಕ್ಕೆ ಒಪ್ಪಿಸಿಕೊಂಡಿದ್ದರು. ಸದನ ಸಮಿತಿ ಆಯಿತು, outcome ಏನು ಬಂತು? ನಾವು ಸುಮಾರು 1000 ಪುಟಗಳ ವರದಿಯನ್ನು ಕೊಟ್ಟಿದ್ದೆವು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಅವತ್ತು ಶ್ರೀ ಬಸವರಾಜ ರಾಯರೆಡ್ಡಿಯವರ ನೇತೃತ್ವದಲ್ಲಿ ಸದನ ಸಮಿತಿ ಮಾಡಲಾಯಿತು, ಸದನ ಸಮಿತಿ ವರದಿ ಕೊಟ್ಟಿದೆ. ಆಗ ಇದ್ದ specification ಈಗಲೂ ಅದೇ ಇದೆ, ಒಂದು 'Comma(,)' ಕೂಡ ಬದಲಾಗಿಲ್ಲ, ಈಗ ಇದನ್ನು 28,320 ರೂಪಾಯಿಗಳಿಗೆ ಖರೀದಿ ಮಾಡಿದರು. ಆಗ ಅದರ ಬೆಲೆ 14,000 ರೂಪಾಯಿಗಳಿತ್ತು. ಒಮ್ಮೆಲೇ ಬೆಲೆ ಹೇಗೆ ಹೆಚ್ಚು ಕಡಿಮೆಯಾಗುತ್ತದೆ? Quotation ನನ್ನ ಕಡೆ ಇದೆ. ಇದು ಹೇಗಾಯಿತು ಎಂಬುದನ್ನು ಹೇಳಿ ನೋಡೋಣ. ಇದಕ್ಕೆ ಮಾತನಾಡುವುದಕ್ಕೆ ನಿಮಗೆ ಏನೂ ಇಲ್ಲ. ಉತ್ತರ ಕೊಡುತ್ತೇವೆ ಎಂದರು, ಮಾನ್ಯ ವೈ.ಎ. ನಾರಾಯಣಸ್ವಾಮಿಯವರು ಕುಳಿತುಕೊಂಡು ಬಹಳ ಜಿಗಿದಾಡುತ್ತಿದ್ದರು ಇದರಲ್ಲಿ ಉತ್ತರ ಕೊಡುವುದಕ್ಕೆ ಬರುವುದೇ ಇಲ್ಲ. "ಅಂಗೈ ಹುಣ್ಣಿಗೆ ಕನ್ನಡಿ ಏಕೆ ಬೇಕು"? ಇದನ್ನು ಹೇಗೆ ಮಾಡಿದಿರಿ? ಮೂರು ತಿಂಗಳಿನಲ್ಲಿ ಡಬಲ್ ಬೆಲೆ ಹೇಗಾಗುತ್ತದೆ? ಇದರಲ್ಲಿ ಬಹಳಷ್ಟು ಅನ್ಯಾಯವಾಗಿದೆ ಎಂದು ನಾನು ಹೇಳುತ್ತೇನೆ. ಸಿಕ್ಕಾಪಟ್ಟೆ ಭ್ರಷ್ಟಾಚಾರ ಆಗಿದೆ, ಯಾರ್‍ಯಾರು ದುಡ್ಡು ತಿಂದಿದ್ದಾರೆ, ಅದನ್ನು ವಾಪಸ್ ಪಡೆಯಲು ಏನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡಬೇಕು. ಈ ರೀತಿ ಆಗುವುದು ಸರಿಯಲ್ಲ. ಯಾರಾದರೂ ಒಬ್ಬರು ಎದ್ದೇಳಿ ಇದಕ್ಕೇನಾದರೂ moral right ಇದ್ದರೆ ಹೇಳಿ ನೋಡೋಣ. ನಿಮಗೇನು moral right ಇದೆ ಹೇಳುವುದಕ್ಕೆ? ಕೇವಲ ಎಲ್ಲರೂ ವ್ಯವಹಾರ ಮಾಡಿಕೊಳ್ಳುತ್ತಾರೆ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ಸುಮ್ಮನೆ ಕುಳಿತುಕೊಳ್ಳಿ. ಇದಕ್ಕೇನು ಉತ್ತರ ಹೇಳುತ್ತೀರಿ?

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾಹಿತಿ ಇಲ್ಲ. ಮಂತ್ರಿಗಳು ಅಲ್ಲಿಯೇ ಇದ್ದಾರೆ, ಅದೇ ಕಂಪನಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಕಂಪ್ಯೂಟರ್ ಪ್ರಕರಣದಲ್ಲಿ ದುರುಪಯೋಗವಾಗಿದೆಯೆಂದು ಹೇಳುತ್ತಿದ್ದಾರೆ ಅವರೆಲ್ಲಾ ಹೇಳಿದ ನಂತರ ಸರ್ಕಾರ ಉತ್ತರ ಕೊಡುತ್ತದೆ. ಆನಂತರ ಮಾನ್ಯ ಬಸವರಾಜ ಹೊರಟ್ಟಿಯವರು ಹೇಳಲಿ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನೀವು ಇಲ್ಲಿ ಕುಳಿತಿದ್ದವರು ಈಗ ಅಲ್ಲಿ ಹೋಗಿ ಕುಳಿತಿದ್ದೀರಿ ಅಷ್ಟೇ. ಇಲ್ಲಿ ಕುಳಿತಾಗ ಏನು ಮಾತನಾಡಿದರು ಅದರ ಎಲ್ಲಾ ದಾಖಲೆಗಳಿವೆ. ಇಲ್ಲಿ ಕುಳಿತು ಮಾತನಾಡಿರುವುದು ರೆಕಾರ್ಡ್ ಇದೆ, ಅಲ್ಲಿ ಕುಳಿತು ಮಾತನಾಡಿರುವುದರ ರೆಕಾರ್ಡ್ ಕೂಡ ಇದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, . . . ಮಾನ್ಯ ಬಸವರಾಜ ಹೊರಟ್ಟಿಯವರು ಮಾತ್ರ ಅಲ್ಲಿಯೇ ಇರುತ್ತಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಇರಲಿ, ನನಗೆ ಅದು ಸಂತೋಷವೇ, ನೀವು ಏನು ಮಾತನಾಡಿದ್ದಿರಿ ಅದು ಪ್ರೊಸೀಡಿಂಗ್ಸ್‌ನಲ್ಲಿದೆ ಎಂದು ಹೇಳುತ್ತಿದ್ದೇನೆ. ನೀವು ಉತ್ತರ ಕೊಡುವಾಗ ಬಹಳ ವಿಚಾರ ಮಾಡಿ ಉತ್ತರ ಕೊಡಿ. ಇದರಲ್ಲಿ ಸಾಕಷ್ಟು ಭ್ರಷ್ಟಾಚಾರವಾಗಿದೆ, ತಕ್ಷಣವೇ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

**ಶ್ರೀ ಹೆಚ್.ಎಂ. ರೇವಣ್ಣ(ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಕಳೆದ 2016–17, 2017–18 ಎಸ್.ಸಿ., ಎಸ್.ಟಿ., ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್ ಕೊಡಬೇಕೆನ್ನುವ ಹಿಂದಿನ ಸರ್ಕಾರದ ತೀರ್ಮಾನದಂತೆ ಆ ಸಮುದಾಯಕ್ಕೆ ಮಕ್ಕಳ ವಿದ್ಯಾಭ್ಯಾಸಕ್ಕೆ ಲ್ಯಾಪ್ ಟಾಪ್ ಕೊಡಬೇಕೆಂಬುದು ಸರ್ಕಾರದ ಚಿಂತನೆಯಾಗಿತ್ತು. ಅಂದು ಲ್ಯಾಪ್ ಟಾಪ್‌ಗಳನ್ನು ಖರೀದಿ ಮಾಡಿದಂತಹ ಸಂದರ್ಭದಲ್ಲಿ ನಡೆದಂತಹ ವಿದ್ಯಮಾನಗಳನ್ನು ನೋಡಿದರೆ, ಆಗ ನಾನು ಕೂಡ ವಿಧಾನ ಪರಿಷತ್ತಿನಲ್ಲಿ ಇದ್ದೆ. ಅಂದು ಮಾನ್ಯ ಈಶ್ವರಪ್ಪನವರು, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು, ಮಾನ್ಯ ನಾರಾಯಣಸ್ವಾಮಿಯವರು, ಮಾನ್ಯ ಅರುಣ್ ಶಹಾಪುರ್‌ರವರು ಇವರುಗಳು ಇದ್ದರು, ಮಾನ್ಯ ನಾರಾಯಣಸ್ವಾಮಿಯವರು ಉಪನಾಯಕರಾಗಿದ್ದರು. ಅವತ್ತು ನಡೆದಂತಹ ಗಲಾಟೆಯಲ್ಲಿ ಲ್ಯಾಪ್ ಟಾಪ್‌ನ ಬೆಲೆ ರೂ. 14,490/–, ಕಂಪನಿ M/s. NINERICH INFOTECH. ಈ ಕಂಪನಿಯವರು ಲ್ಯಾಪ್ ಟಾಪ್‌ಗಳನ್ನು ಸಪ್ಲೈ ಮಾಡಿದಂತಹ ಸಂದರ್ಭದಲ್ಲಿ ಮಾನ್ಯ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರಿಗೆ ಲ್ಯಾಪ್ ಟಾಪ್‌ಗಳನ್ನು ಹಂಚುವುದಕ್ಕೆ ಬಿಟ್ಟಿದ್ದರು. ಲ್ಯಾಪ್ ಟಾಪ್‌ಗಳನ್ನು ಹಂಚಿಬಿಟ್ಟಿದ್ದಾರೆ, ಅವುಗಳು ಉಳಿದಿಲ್ಲ. ಆದರೆ ನಡೆದಿರುವ ವಿದ್ಯಮಾನಗಳನ್ನು ಈಗ ನೋಡಬೇಕು. ನಾನೇಕೆ ಈ ಮಾತುಗಳನ್ನು ಹೇಳುತ್ತಿದ್ದೇನೆ ಎಂದರೆ, ಅದೇ ಕಂಪನಿ ಆದರೆ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ; ಉತ್ತರ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ ಅದು ನನಗೂ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗೊತ್ತಿದೆ. ಕಳೆದ ಸರ್ಕಾರದ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿತ್ತು. ನೀವು ಸತ್ಯವಂತರು, ಬಹಳ ಒಳ್ಳೆಯ ಸರ್ಕಾರ ಕೊಡಬೇಕು, ನೀವೇ ಗಲಾಟೆ ಮಾಡಿದ್ದವರು, 14,490/- ರೂಪಾಯಿಗಳೇ ಜಾಸ್ತಿ ಎಂದವರು ದಿಢೀರನೆ ಇಷ್ಟು ಸಮಯದಲ್ಲಿ 4-5 ತಿಂಗಳೊಳಗೆ; ಇದಾಗಿ ಬಹಳ ದಿವಸಗಳಾಯಿತು, ಮೂರನೇ ತಿಂಗಳಲ್ಲಿ ಆಗಿದೆ; ರೂ. 28,320/- ಎಂದರೆ ಒಂದು ಲ್ಯಾಪ್ ಟಾಪ್‌ಗೆ ಎಷ್ಟು ಬೆಲೆ ಜಾಸ್ತಿಯಾಯಿತು? ಕಂಪನಿ ಬೇರೆಯದ್ದೇ? ಅಥವಾ ಲ್ಯಾಪ್ ಟಾಪ್ ಬೇರೆಯದ್ದೇ? ಅದೇ ಲ್ಯಾಪ್ ಟಾಪ್ 'ಅದೇ ತಾಳ ಅದೇ ರಾಗ'. ಆದರೆ ಬೆಲೆ ಏಕೆ ಇಷ್ಟು ಜಾಸ್ತಿಯಾಯಿತು? ಇದರಲ್ಲಿ ಯಾರ್‍ಯಾರು ಇದ್ದಾರೆ? ಹೇಗೆ ಜಾಸ್ತಿಯಾಯಿತು? ಉತ್ತರ ಹೇಳುತ್ತೀರಿ, ಆದರೆ ಮಾತನಾಡುವುದಕ್ಕೆ ಒಳಗಡೆ ನಿಮಗೆ ಮಾನಸಿಕ ಸ್ಥೈರ್ಯ ಇರಬೇಕು. ನಮ್ಮ ಸರ್ಕಾರವನ್ನು 10% ಸರ್ಕಾರ ಎಂದು ಹೇಳಿದಂತಹ ಮಹಾನ್ ನಾಯಕರಿದ್ದಾರೆ. ಈಗ ಇದನ್ನು ನಾವು ಎಷ್ಟು ಪರ್ಸೆಂಟ್ ಸರ್ಕಾರ ಎನ್ನಬೇಕು? ಇದು 100% ಸರ್ಕಾರವೇ? ಇದನ್ನು ಯಾವ ರೀತಿ ನಾವು ತೆಗೆದುಕೊಳ್ಳಬೇಕು? ಕಂಪನಿ ಅದೇ, ಲ್ಯಾಪ್ ಟಾಪ್ ಅದೇ. ಇಲ್ಲಿ ಎಷ್ಟು ಮಾತನಾಡಿದರೂ ಅಷ್ಟೇ, ಉತ್ತರ ಕೊಡುತ್ತೇವೆ ಎಂದು ಹೇಳುತ್ತಾರೆ. ಈ ಸರ್ಕಾರ ಬಂದ ಮೇಲೆ ಬಹಳಷ್ಟು ಯೋಜನೆಯನ್ನು ನಿಲ್ಲಿಸಿಬಿಟ್ಟರು. ಕೊಡುವ ಅಕ್ಕಿಯಲ್ಲಿ ಎರಡು ಕೆ.ಜಿ., ಕಡಿಮೆ ಮಾಡಿದರು, ಎಲ್ಲದರಲ್ಲಿಯೂ ಕಿತ್ತು ಹಾಕುತ್ತಿದ್ದಾರೆ. ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳನ್ನು ಕಿತ್ತು ಹಾಕುತ್ತಿದ್ದಾರೆ. ಕಡಿಮೆ ಮಾಡುವುದೇ ಇವರ ಕೆಲಸವಾಗಿದೆ. ಇದೊಂದರಲ್ಲಿ ಮಾತ್ರ ಕಮಿಷನ್‌ನಲ್ಲಿ ಮಾತ್ರ ಏಕೆ ಜಾಸ್ತಿಯಾಗುತ್ತದೆ? ಇದರ ಹಿಂದೆ ಯಾರಿದ್ದಾರೆ? ಉಪ ಮುಖ್ಯಮಂತ್ರಿಯವರಾದ ಮಾನ್ಯ ಅಶ್ವಥ್ ನಾರಾಯಣ್‌ರವರು ಬಹಳ ಒಳ್ಳೆಯವರು. ಅವರು ನಮ್ಮ ಊರಿನವರು, ಮಾಗಡಿ ಕೆಂಪೇಗೌಡರ ಊರಿನಿಂದ ಬಂದಂತಹವರು ಅವರು. ಬೆಂಗಳೂರನ್ನು ಕಟ್ಟಿದವರು ನಾವು, ಇಂತಹ ಅಪವಾದಕ್ಕೆ ತಾವು ತಗ್ಗುಲಿ ಹಾಕಿಕೊಳ್ಳಬೇಡಿ. ಇದರ ಹಿಂದೆ ಯಾರಿದ್ದಾರೆ ಅವರನ್ನು ಹೊರಗೆ ತನ್ನಿ. ಏಕೆಂದರೆ, ತಾವು ಹಿಂದೆ ಇದೇ ಹೋರಾಟ ಮಾಡಿ, ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಕೊಟ್ಟಂತಹ ಹೇಳಿಕೆಯನ್ನು ನೋಡಿ. 'ಲ್ಯಾಪ್ ಟಾಪ್ ವಿತರಣೆಯಲ್ಲಿ 300 ಕೋಟಿ ಅವ್ಯವಹಾರ' ಈಗ ಇದು 600 ಕೋಟಿ ಆಗಿದೆ. ಏಕೆ ಸ್ವಾಮಿ ಇಂತಹ ಆಡಳಿತ? ನನಗಂತೂ ಒಂದೇ term ನಲ್ಲಿ ಎರಡೂ ನೋಡುವ ಹಾಗಾಯಿತು. ಆಡಳಿತ ಪಕ್ಷದಲ್ಲಿಯೂ ನೋಡಿದೆ, ಈ ಕಡೆಯೂ ನೋಡಿದೆ. ಆದರೆ ಇಂತಹ ಭ್ರಷ್ಟಾಚಾರವನ್ನು ನಾನು ನೋಡಿರಲಿಲ್ಲ. ನಾನು ಕೂಡ ಶ್ರೀ ದೇವರಾಜ ಅರಸುರವರ ಕಾಲದಿಂದ ರಾಜಕೀಯ ಮಾಡಿಕೊಂಡು ಬಂದಿದ್ದೇನೆ. ಮೂರೇ ತಿಂಗಳಿಗೆ ಇಷ್ಟೊಂದು ಪರ್ಸೆಂಟ್ ರಾಮ! ರಾಮ! ಅದಕ್ಕಾಗಿಯೇ ಹಿಂದೆ ಅವರು ಗಲಾಟೆ ಮಾಡಿ ಸದನ ಸಮಿತಿ ರಚನೆ ಮಾಡಿಸಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದನ್ನು ಹೊರಗೆ ಹಾಕುವ ಪ್ರಯತ್ನ ಮಾಡಿದರು. ಈಗಲೂ ಕೂಡ ನಾನು ಒತ್ತಾಯ ಮಾಡುತ್ತೇನೆ, ಸದನ ಸಮಿತಿ ರಚನೆ ಮಾಡಿಸಿ. ಇದರಲ್ಲಿ ಯಾರು culprit ಇದ್ದಾರೋ ಅವರನ್ನು ಹೊರಗೆ ತನ್ನಿ. ನಾನು ಸಚಿವರು ಇದರಲ್ಲಿ ಇದ್ದಾರೆ ಎಂದು ಹೇಳುವುದಿಲ್ಲ. ಆದರೆ ಆ ಇಲಾಖೆ ನಡೆಸುವಂತಹ ಸಚಿವರಿಗೆ ಜವಾಬ್ದಾರಿ ಇದೆ. ಯಾರು ಈ ಟೆಂಡರನ್ನು ಪಾಸ್ ಮಾಡಿದ್ದಾರೆ ಅದು ಈಚೆಗೆ ಬರಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

(ಮುಂದು)

(691) 23–03–2020/ 07–20/ ಕೆಹೆಚ್–ವಿಕೆ

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಈಗಾಗಲೇ ಮಾನ್ಯ ಕೆ.ಸಿ.ಕೊಂಡಯ್ಯನವರು ಮತ್ತು ಮಾನ್ಯ ಹೆಚ್.ಎಂ.ರೇವಣ್ಣನವರು ತಮ್ಮ ವಿಚಾರವನ್ನು ಮಂಡಿಸಿದ್ದಾರೆ. 2016–17ರಲ್ಲಿ ಉನ್ನತ ಶಿಕ್ಷಣ ಇಲಾಖೆಯಿಂದ ಎಸ್.ಸಿ., ಎಸ್.ಟಿ., ಪಂಗಡಗಳ 39 ಸಾವಿರ technical and non-technical ವಿದ್ಯಾರ್ಥಿಗಳನ್ನು ಸೇರಿಸಿ ಕಂಪ್ಯೂಟರ್ ಅನ್ನು ಹಂಚಲಾಗಿದೆ. 2017–18ನೇ ಸಾಲಿನಲ್ಲಿ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ ಎನ್ನುವ ಉದ್ದೇಶವನ್ನಿಟ್ಟುಕೊಂಡು ಕಂಪ್ಯೂಟರ್ ಅನ್ನು ಕೊಡುವ ವಿಚಾರದಲ್ಲಿ ಬಜೆಟ್‌ನಲ್ಲಿ ಘೋಷಣೆ ಮಾಡಿದ ನಂತರ ಇದರ ಬಗ್ಗೆ ದೀರ್ಘವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಟೆಂಡರ್ ಅನ್ನು ಕರೆಯುವುದಕ್ಕಿಂತ ಮುಂಚೆ ಬೆಳಗಾವಿ ಅಧಿವೇಶನದಲ್ಲಿ ಈಗಿನ ಆಡಳಿತ ಪಕ್ಷದ ಮಾನ್ಯ ಸದಸ್ಯರಾದ ರಘುನಾಥ್ ರಾವ್ ಮಲ್ಕಾಪೂರೆಯವರು . . . ನಾನು 3 ಟೆಂಡರ್‌ಗಳನ್ನು ಓದುವುದಕ್ಕೆ ಬಯಸುತ್ತೇನೆ. ಇನ್ನು ಟೆಂಡರ್ ಆಗಿರಲಿಲ್ಲ. ಕೇವಲ ಮಾಹಿತಿಗಳನ್ನು ತೆಗೆದುಕೊಂಡಿದ್ದೀರಿ. Ninerich Infotech Pvt Ltd, L1 has quoted Rs.14,490, Origin Infosys Pvt Ltd, Rs.15,687, HP India Sales Pvt Ltd Rs. 16,250 ಗೆ ಲ್ಯಾಪ್‌ಟಾಪ್ ಖರೀದಿ ಮಾಡುವುದಕ್ಕೆ ಅಲ್ಲಿನ ಟೆಂಡರ್ ಇನ್ನೂ ಆಗಿರಲಿಲ್ಲ. ಟೆಂಡರ್‌ನ್ನು ಕರೆಯುವುದಕ್ಕಿಂತ ಮುಂಚೆ ಇಂತಹ ಆರೋಪವನ್ನು ಮಾಡಿ, ಒಂದು ಲ್ಯಾಪ್‌ಟಾಪ್‌ಗೆ 14,490 ರೂಪಾಯಿಗಳು ನಿಗದಿಯಾದಾಗ ಅಂದಿನ ಮಂತ್ರಿಯಾದ ಮಾನ್ಯ ಬಸವರಾಜ ರಾಯರೆಡ್ಡಿಯವರು ಒಂದು ಕಂಪ್ಯೂಟರ್‌ಗೆ 10,000 ರೂಪಾಯಿಗಳು kickback ಪಡೆದಿದ್ದಾರೆ ಎನ್ನುವಂತಹ ನೇರವಾದ ಆರೋಪವನ್ನು ಸನ್ಮಾನ್ಯ ಆಡಳಿತ ಪಕ್ಷದವರು ಮಾಡಿದ್ದರು. ಇದರ ಬಗ್ಗೆ ದಾಖಲೆಗಳಲ್ಲಿ ಇರುವಂತಹದ್ದು. ತದನಂತರ ಸದನ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಿತಿಯನ್ನು ಮಾಡಿದರು, ಅದರಲ್ಲಿ ಸನ್ಮಾನ್ಯ ಕೆ.ಸಿ.ಕೊಂಡಯ್ಯನವರು ಅಧ್ಯಕ್ಷರಾಗಿದ್ದರು. ಇದರ ಬಗ್ಗೆ ವರದಿಯನ್ನು ಸಹ ಕೊಟ್ಟಿದ್ದೇವೆ. ಆ ಕಮಿಟಿಯಲ್ಲಿ ಸನ್ಮಾನ್ಯ ಐವನ್ ಡಿ'ಸೋಜಾರವರು ಕೂಡ ಸದಸ್ಯರಾಗಿದ್ದರು. ಬಹಳ ಮುಖ್ಯವಾದ ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. 14,490 ರೂಪಾಯಿಗಳ ಒಂದು ಲ್ಯಾಪ್‌ಟಾಪ್‌ಗೆ 10,000 ರೂಪಾಯಿಗಳ kickback ಎಂದು ಆರೋಪ ಮಾಡಿದವರು, ಇವರು ಸಮ್ಮಿಶ್ರ ಸರ್ಕಾರದಲ್ಲಿರುವಂತಹ ಪ್ರೋಸೆಸ್ ಅನ್ನು ತೆಗೆದುಕೊಂಡು ಒಟ್ಟಾರೆಯಾಗಿ ಟೆಂಡರ್ . . . ಇದು ಬಹಳ ಗಂಭೀರವಾದಂತಹ ವಿಚಾರವಾಗಿದೆ. ಟೆಂಡರ್ ಕರೆದಿರುವಂತಹದ್ದು, same configuration ಎಂದು ಅವರು ಹೇಳಿದರು. ಆದರೆ, little variation ಇದೆ. ಇಲ್ಲ ಎಂದು ಹೇಳುವುದಿಲ್ಲ. ಆದರೆ, 14,490 ರೂಪಾಯಿಗಳು ಇರುವುದನ್ನು 28,500 ರೂಪಾಯಿಗೆ ವಿಶೇಷವಾಗಿ ಇದನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಮಾನ್ಯ ಉಪಮುಖ್ಯಮಂತ್ರಿಯವರೇ ನಾನು ಹೇಳುವ ವಿಚಾರದ ಬಗ್ಗೆ ಸ್ವಲ್ಪ ಗಮನವನ್ನು ಹರಿಸಿ. ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ ನೀವು ನಮ್ಮ ಸ್ನೇಹಿತರು ನಿಮ್ಮ ಗಮನಕ್ಕೂ ಸಹ ಈ ವಿಚಾರ ಬರಲಿ. ಇದರಲ್ಲಿ Acer India ದವರು ಕೂಡ M/s Intellect Systems and M/s Ninerich Infotech Acer India Pvt Ltd ನವರೇ ಇದರಲ್ಲಿ ಇದ್ದಾರೆ. ಅಂದು ನಮ್ಮ ಟೆಂಡರ್‌ನಲ್ಲಿ ಭಾಗವಹಿಸಿ 14,490 ರೂಪಾಯಿಗಳಿಗೆ ಟೆಂಡರ್ ಅನ್ನು ಒಪ್ಪಿಕೊಂಡಿರುವಂತಹವರೇ, ಈಗ ತೆಗೆದುಕೊಂಡಿರುವಂತಹ ಟೆಂಡರ್‌ನಲ್ಲಿ ಭಾಗವಹಿಸಿ 28,500 ರೂಪಾಯಿಗಳಿಗೆ ಒಂದು ಲ್ಯಾಪ್‌ಟಾಪ್ ಅನ್ನು ಕೊಟ್ಟಿದ್ದಾರೆ ಎಂದರೆ, ಇದನ್ನು ವಿರೋಧಪಡಿಸಿದವರು ಇವರೇ ಹಣವನ್ನು ಬಿಡುಗಡೆ ಮಾಡಿದ್ದಾರೆ. ಆದರೆ process ಆಗಿರುವಂತಹ ಸಮ್ಮಿಶ್ರ ಸರ್ಕಾರದಲ್ಲಿ ಇದ್ದರೆ, ಹಣ ಬಿಡುಗಡೆ ಮಾಡಿದವರು 14,500 ರೂಪಾಯಿಗಳಿಗೆ ಆರೋಪ ಮಾಡಿ kickback ಅನ್ನು ತೆಗೆದುಕೊಂಡಿದ್ದಾರೆ ಎನ್ನುವುದಾಗಿದ್ದರೆ, 28,500 ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಿದ ಒಂದು ಲ್ಯಾಪ್‌ಟಾಪ್‌ಗೆ ಶೇಕಡಾ 50 ರಷ್ಟು ಕಮಿಷನ್ ಅನ್ನು ಯಾರು ತೆಗೆದುಕೊಂಡಿದ್ದಾರೆ ಎನ್ನುವ ಪ್ರಶ್ನೆಯನ್ನು ಸರ್ಕಾರಕ್ಕೆ ಮಾಡುವುದಕ್ಕೆ ಬಯಸುತ್ತೇನೆ. ಈಗ ಶೇಕಡಾ 50 ರಷ್ಟು ಕಮಿಷನ್ ಅನ್ನು ತೆಗೆದುಕೊಂಡಿರುವಂತಹವರು ಯಾರು? ಇದರಲ್ಲಿ ಸಂಪೂರ್ಣವಾಗಿ ಅವ್ಯವಹಾರವಾಗಿದೆ. ಇದರ ಬಗ್ಗೆ investigationಮಾಡಬೇಕಾಗುತ್ತದೆ. ಇದಕ್ಕೆ ಸದನ ಸಮಿತಿಯನ್ನು ಮಾಡಿ, ಇದು spill over programme, ಇದನ್ನು ನಾವು ಮಾಡಿರುವಂತಹದ್ದು, ಈಗಾಗಲೇ 1800 ವಿದ್ಯಾರ್ಥಿಗಳಿಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಲ್ಯಾಪ್‌ಟಾಪ್‌ಗಳನ್ನು ಕೊಟ್ಟಿದ್ದು, ಇದು continuation programme ಆಗಿದ್ದು, ಇದೇನು ಹೊಸದೇನಲ್ಲ. ಆದರೆ, 28,500 ರೂಪಾಯಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ಖರೀದಿ ಮಾಡಿದಾಗ ಶೇಕಡಾ 50 ರಷ್ಟು ಕಮಿಷನ್ ಯಾರಿಗೆ ಹೋಗಿದೆ ಎನ್ನುವುದರ ಬಗ್ಗೆ ಸತ್ಯ ಶೋಧನೆ ಆಗಬೇಕಾಗಿದೆ. ದಯಮಾಡಿ, ಇದರ ಬಗ್ಗೆ ಸದನ ಸಮಿತಿ ಇಲ್ಲವೇ, judicial enquiry ಆಗಬೇಕೆಂದು ನಾನು ಅಗ್ರಹ ಮಾಡುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, 2017–18 ನೇ ಸಾಲಿನಲ್ಲಿ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಒಂದು ಐತಿಹಾಸಿಕವಾದಂತಹ ತೀರ್ಮಾನವನ್ನು ತೆಗೆದುಕೊಂಡಿತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಇದ್ದಾರೋ, ಅದರಲ್ಲಿ ಇಂಜಿನಿಯರಿಂಗ್, ಡಿಪ್ಲೋಮಾ, ಡಿಗ್ರಿ ವಿದ್ಯಾರ್ಥಿಗಳಲ್ಲಿ ಯಾರು ಎರಡೂವರೆ ಲಕ್ಷಕ್ಕಿಂತ ಕಡಿಮೆ ಆದಾಯ ಇದೆಯೋ, ಅವರಿಗೆ ಉಚಿತವಾಗಿ ಲ್ಯಾಪ್‌ಟಾಪ್‌ಗಳನ್ನು ಕೊಡಬೇಕೆಂದು ನಮ್ಮ ಸರ್ಕಾರ ತೀರ್ಮಾನವನ್ನು ತೆಗೆದುಕೊಂಡಿತ್ತು. ಆಗ ನಮ್ಮ ಸಚಿವರಾದಂತಹ ಬಸವರಾಜ ರಾಯರೆಡ್ಡಿಯವರು ಆ ಇಲಾಖೆಯಿಂದ ಒಂದು ಟೆಂಡರ್ ಅನ್ನು ಕರೆಯುತ್ತಾರೆ. ಆವತ್ತಿನ ದಿವಸ 14,490 ರೂಪಾಯಿಗಳಲ್ಲಿ ಬೇರೆ ಬೇರೆ ಕೊಟ್ಟಿರುವಂತಹ quote ನಲ್ಲಿ negotiate–ಮಾಡಿ, ಒಂದು ಲ್ಯಾಪ್‌ಟಾಪ್‌ಗೆ 14,490 ರೂಪಾಯಿಗಳು ಎಂದು ನಿಗದಿ ಮಾಡುತ್ತಾರೆ. ಇವತ್ತು ಆಡಳಿತ ಪಕ್ಷದಲ್ಲಿ ಕುಳಿತಿರುವಂತಹ ಮಾನ್ಯ ಸಭಾನಾಯಕರಾದ ಕೋಟ ಶ್ರೀನಿವಾಸ ಪೂಜಾರಿಯವರು ಆವತ್ತು ಈ ಭಾಗದಲ್ಲಿ ಕುಳಿತಿದ್ದರು. ಎಲ್ಲಾ ಮಾನ್ಯ ಸದಸ್ಯರು ಕೂಡ ಯಾವ ರೀತಿಯಲ್ಲಿ ಹೋರಾಟವನ್ನು ಮಾಡಿದರು ಎಂದರೆ, ಒಂದು ಲ್ಯಾಪ್‌ಟಾಪ್‌ಗೆ 14,490 ರೂಪಾಯಿಗಳಲ್ಲಿ 10,000 ರೂಪಾಯಿಗಳಷ್ಟು ಲಂಚ ತೆಗೆದುಕೊಂಡಿದ್ದಾರೆ ಎನ್ನುವಂತಹ ನೇರವಾದ ಆರೋಪವನ್ನು ಮಾಡಿದರು. ನಾನು ಒಂದು ಮನವಿಯನ್ನು ಮಾಡುತ್ತೇನೆ. ಇವತ್ತು ತುಂಬಾ ದಿವಸ ಏನೂ ಆಗಲಿಲ್ಲ. ತಾವು ಇವತ್ತು ಏನು ಮಾಡಿದ್ದೀರಿ. ಸರ್ಕಾರ ಬಂದ ಮೇಲೆ ಕೇವಲ 3–4 ತಿಂಗಳಿನಲ್ಲಿ ಇದೇ ಲ್ಯಾಪ್‌ಟಾಪ್, ಇದೇ ಕಂಪನಿ, ಇದೇ configuration ಇದ್ದು, ಇದರಲ್ಲಿ ಏನೂ ಬದಲಾವಣೆ ಆಗಿಲ್ಲ. ಆವತ್ತು ಶಿಕ್ಷಕರ ಕ್ಷೇತ್ರ ಮತ್ತು ಪದವೀಧರರ ಕ್ಷೇತ್ರದಲ್ಲಿ ಗೆದ್ದಿರುವಂತಹ ನಿಮ್ಮ ಪಕ್ಷದ ಗೌರವಾನ್ವಿತ ಸದಸ್ಯರುಗಳು ಏನು ಆವತ್ತು ಅವರ ಹಾವಭಾವಗಳನ್ನು ಮತ್ತು ಧೀರಾವೇಷಗಳನ್ನು ನೋಡಿದ್ದೇವೆಯಲ್ಲವೇ, ಇವತ್ತಿನ ದಿವಸ ಅವೆಲ್ಲಾ ಏನಾಯಿತು? ನೋಡಿ, ನಾವು ವಿರೋಧ ಪಕ್ಷದಲ್ಲಿ ಕುಳಿತುಕೊಂಡಿದ್ದೇವೆ ಎಂದು ನಾವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿರೋಧ ಮಾಡುವುದೇ ನಮ್ಮ ಕಾರ್ಯಕಲ್ಪ ಅಲ್ಲ. ತಾವು ಆಡಳಿತ ಪಕ್ಷದಲ್ಲಿ ಕುಳಿತಿದ್ದೀರಿ ಎಂದು ಇದರ ಬಗ್ಗೆ ಸಮರ್ಥನೆ ಮಾಡಬೇಕೆಂಬುದು ಅಲ್ಲ. ಇದು ವಿದ್ಯಾರ್ಥಿಗಳಿಗೆ ತಲುಪಬೇಕಾಗಿರುವಂತಹ ಕಾರ್ಯಕ್ರಮದಲ್ಲಿ 14,490 ರೂಪಾಯಿಗಳಲ್ಲಿ 10,000 ರೂಪಾಯಿಗಳ ಕಮೀಷನ್ ಅನ್ನು ತೆಗೆದುಕೊಂಡಿದ್ದಾರೆ ಎಂದು ನೇರವಾಗಿ ಆರೋಪ ಮಾಡಿದಂತಹವರು, ಅದೇ ಲ್ಯಾಪ್‌ಟಾಪ್‌ಗೆ ಇವತ್ತು 28,320 ರೂಪಾಯಿಗಳನ್ನು ಕೊಟ್ಟಿದ್ದೀರಲ್ಲವೇ, ಇವತ್ತು ತಮ್ಮ ಬಾಯಿಗೆ ಏಕೆ ಬೀಗ ಹಾಕಿಕೊಂಡು ಕುಳಿತುಕೊಂಡಿದ್ದೀರಾ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಎಂ.ನಾರಾಯಣಸ್ವಾಮಿಯವರೇ, ತಾವು ಏನು ಬೀಗ ಹಾಕಿಕೊಂಡು ಕುಳಿತುಕೊಂಡಿಲ್ಲ. ತಾವು ಮಾತನಾಡಿ ಮುಗಿಸಿದ ಮೇಲೆ ಉತ್ತರವನ್ನು ಕೊಡುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ಆಯಿತು. ನಂತರ ಉತ್ತರವನ್ನು ಕೊಡಿ. ತಮ್ಮಲ್ಲಿ ನಾನು ಕಳಕಳಿಯ ಮನವಿಯೇನೆಂದರೆ, . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಎಂ.ನಾರಾಯಣಸ್ವಾಮಿಯವರೇ, . . .

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ದಯಮಾಡಿ, ಕುಳಿತುಕೊಳ್ಳಿ. ತಾವು ಉತ್ತರ ಕೊಡುವುದು ಸಮಂಜಸ ಅಲ್ಲವೆಂದು ನಾವು ಒಪ್ಪುತ್ತೇವೆ.

**ಡಾ:ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಎಂ.ನಾರಾಯಣಸ್ವಾಮಿಯವರೇ, 2016–17ನೇ ಸಾಲಿನ ಲ್ಯಾಪ್‌ಟಾಪ್‌ಗಳ ಬಗ್ಗೆ ಸದನ ಸಮಿತಿಯನ್ನು ಮಾಡಲಾಗಿದೆ. ಇಲ್ಲಿ ಪ್ರಶ್ನೆ ಇರುವುದೇನೆಂದರೆ, ಇಲ್ಲಿ 2019–20ನೇ ಸಾಲಿನ ಲ್ಯಾಪ್‌ಟಾಪ್‌ಗಳ ಬಗ್ಗೆ ಚರ್ಚೆ ಮಾಡಲಾಗುತ್ತಿದೆಯಲ್ಲವೇ, ತಾವು ಆಗಲೇ ಹೇಳಿರುವಂತೆ ನಮ್ಮ ಸಭಾನಾಯಕರು ಅಂದು ವಿರೋಧ ಪಕ್ಷದ ನಾಯಕರಾಗಿದ್ದರು. ಆಗ ನಾನು ಎಂ.ಎಲ್.ಎ., ಆಗಿದ್ದೆ. ಸದನ ಸಮಿತಿ ಮಾಡಿದಾಗ ನಾನು ಇಲ್ಲಿ ಇರಲಿಲ್ಲ. ನಾನು ನಿಮ್ಮ ಗಮನಕ್ಕಾಗಿ ಹೇಳುತ್ತಿದ್ದೇನೆ. ಆದರೆ, ಈಗ ಸರಬರಾಜು ಮಾಡಿರುವ ಲ್ಯಾಪ್‌ಟಾಪ್‌ಗಳಿಗೂ ಆಗ ಸರಬರಾಜು ಮಾಡಿರುವ ಲ್ಯಾಪ್‌ಟಾಪ್‌ಗಳಿಗೂ ಏನು ವ್ಯತ್ಯಾಸ ಇದೆ ಎಂಬುದನ್ನು ದಯಮಾಡಿ ನೋಡಿ. ನಂತರ ಚರ್ಚೆ ಮಾಡಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ, configuration ಪೂರ್ತಿಯಾಗಿ ನೋಡಿದ್ದೇವೆ. ಒಂದು comma and full stop ಸಹ ಬದಲಾವಣೆ ಇಲ್ಲ. ಆ configuration ಏನಿದೆಯೇ, ಅದೇ ಇದೆ. There are no changes at all.

**ಡಾ:ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಎಂ.ನಾರಾಯಣಸ್ವಾಮಿಯವರೇ, ನಾನು ಒಂದು ಮಾತು ಹೇಳುವುದೇನೆಂದರೆ, ಇದು ನಿಮ್ಮ ಸರ್ಕಾರದಲ್ಲಿ ಆಗಿದ್ದು, ಇದು ನಮ್ಮ ಸರ್ಕಾರದಲ್ಲಿ ಆಗಿಲ್ಲ. 14ನೇ ಜುಲೈನಲ್ಲಿ ನಿಮ್ಮ ಸರ್ಕಾರ ಇತ್ತು. ಆಗ ಇದು ಆಗಿದೆಯಪ್ಪಾ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ, ಒಂದು ನಿಮಿಷ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ವೈ.ಎ. ನಾರಾಯಣಸ್ವಾಮಿಯವರು ಎಲ್ಲದಕ್ಕೂ ನಿಂತು ಕೊಳ್ಳುತ್ತಾರೆ. ಈ ರೀತಿ ನಿಂತುಕೊಂಡರೆ ಹೇಗೆ, ಇವರನ್ನು ಮಂತ್ರಿಗಳಾಗಿ ಮಾಡಿ, ಈ ರೀತಿ ಏಕೆ ಮಾಡುತ್ತಿದ್ದೀರಾ, ಮೊದಲು ಇವರನ್ನು ಮಂತ್ರಿಗಳನ್ನಾಗಿ ಮಾಡಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದ ಪ್ರಶ್ನೆಯಾಗಿದೆ.

**ಶ್ರೀ** ಸಿ.ಟಿ.ರವಿ **(ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು):–** ಮಾನ್ಯ ಸಭಾಪತಿಯವರೇ, ಎಂ.ನಾರಾಯಣಸ್ವಾಮಿಯವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ತಾವು ಎಲ್ಲರನ್ನೂ ಉಗಿಯುತ್ತೀರಿ, ಉಗಿಯಿರಿ. ಮೇಲಕ್ಕೆ ಉಗಿಯುತ್ತೀರಿ, ಅದು ಎಲ್ಲಿಗೆ ಬೀಳುತ್ತದೋ ಎಂದು ಲೆಕ್ಕಚಾರ ಹಾಕಿಕೊಂಡು ಉಗಿಯಿರಿ.

**(ಗೊಂದಲ)**

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಸಿ.ಟಿ.ರವಿಯವರಿಗೆ ಚೆನ್ನಾಗಿ ಮಾತನಾಡುವುದಕ್ಕೆ ಬರುತ್ತದೆ ಎಂದು ಆ ರೀತಿ ಮಾತನಾಡುತ್ತಾರೆಯೇ?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಕ್ಯಾಬಿನೆಟ್ ಮೀಟಿಂಗ್ ಆಗಿರುವುದು, ಆಗ ಯಾವ ಸರ್ಕಾರ ಇತ್ತು. ಯಾರು ಮುಖ್ಯಮಂತ್ರಿಗಳಾಗಿದ್ದರು ಎಂದು ನೋಡಿಕೊಂಡು ಉಗಿಯಿರಿ. ಅದು ಈಚೆಗೆ ಬರಲಿ. ಚೆನ್ನಾಗಿ ಉಗಿಯಿರಿ. ನೀವು ಸಮ್ಮಿಶ್ರ ಸರ್ಕಾರಕ್ಕೆ ವರ್ಕ್ ಆರ್ಡರ್ ಇಷ್ಯೂ ಆಗಬೇಕಾದರೆ . . .

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಿ.ಟಿ.ರವಿಯವರು ಬಹಳ ಚೆನ್ನಾಗಿ ಮಾತನಾಡುತ್ತಾರೆ.

**ಶ್ರೀ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇವರ ಸರ್ಕಾರ ಇದ್ದಾಗ ಇದಕ್ಕೆ ಮಂಜೂರು ಮಾಡಿದ್ದಾರೆ. **(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ವರ್ಕ್ ಆರ್ಡರ್ ಇಷ್ಯೂ ಆದಾಗ ಒಬ್ಬರೂ ಕೂಡ ಬಿ.ಜೆ.ಪಿ. ಸದಸ್ಯರು ಇರಲಿಲ್ಲ. ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಬೇಕಾದರೂ ಕೂಡ ಇರಲಿಲ್ಲ. ಚೆನ್ನಾಗಿ ಉಗಿಯಿರಿ. **(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಚಿವರಾದ ಸಿ.ಟಿ.ರವಿಯವರೇ, ಇಲ್ಲಿ ಡ್ರಾಮ ಎಲ್ಲಾ ನಡೆಯುವುದಿಲ್ಲ. ಇದರಲ್ಲಿ ನಡೆದುಕೊಳ್ಳುವ ರೀತಿ ಬೇಕು.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಹೌದು.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದಂತಹ ಪ್ರಶ್ನೆಯಾಗಿರುವುದರಿಂದ, ಇದು ಇವತ್ತು . . .

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಿ.ಟಿ.ರವಿಯವರು ಬಹಳ ಚೆನ್ನಾಗಿ ಸಮರ್ಥನೆ ಮಾಡಿಕೊಳ್ಳುತ್ತಾರೆ. ಪರವಾಗಿಲ್ಲ ಸಿ.ಟಿ.ರವಿಯವರೇ, ನೀವು ಬಹಳ ಒಳ್ಳೆಯ ಭಾಷಣಕಾರರು.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇಲ್ಲಿ ಕುಳಿತುಕೊಂಡಾಗ ಒಂದು ಮಾತನಾಡುವುದು, ಅಲ್ಲಿ ಕುಳಿತುಕೊಂಡಾಗ ಒಂದು ಮಾತನಾಡುವುದು, ಇದು ಯಾವತ್ತಿಗೂ ಕೂಡ ಸಮಂಜಸ ಅಲ್ಲ. ದಯಮಾಡಿ ಇದಕ್ಕೆ ಉತ್ತರವನ್ನು ಕೊಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಟಿ.ರವಿ:–** ಮಾನ್ಯ ಎಂ.ನಾರಾಯಣಸ್ವಾಮಿಯವರೇ, ದಿನಾಂಕವನ್ನು ನೋಡಿಕೊಂಡು ನಂತರ ಉಗಿಯಿರಿ. ಒಂದು ಟವಲ್ ಅನ್ನು ಸಹ ತರಿಸಿ ಇಟ್ಟುಕೊಳ್ಳಿ. ದಯಮಾಡಿ, ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ಇವರು ಇದಕ್ಕೆ ಅಮೌಂಟ್ ಏಕೆ ಬಿಡುಗಡೆ ಮಾಡಿದ್ದಾರೆ?

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆವತ್ತು ಹಿಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರು ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದರು. ಆಗ 300 ಕೋಟಿ ರೂಪಾಯಿಗಳ ಹಗರಣ ಎಂದು ನೇರವಾದ ಆರೋಪವನ್ನು ಮಾಡಿದ್ದರು. ಇವತ್ತು ಶೇಕಡಾ 100 ರಷ್ಟು double ಮಾಡಿದ್ದಾರೆ. ಇವತ್ತು ಇದರಲ್ಲಿ ಯಾರನ್ನು ಹೊಣೆ ಮಾಡಬೇಕು. ಇವರು ಟೆಂಡರ್ ಕರೆದಿದ್ದಾರೆ. Same company, ಒಂದು ಕಂಪನಿ ಇರುತ್ತದೆ, ರೂ.31,205.10 ಪೈಸೆ ಎಂದು ಇದೆ.

**ಸಭಾಪತಿಯವರು:–** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ, . . .

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ದಯಮಾಡಿ ಒಂದು ನಿಮಿಷ ನಾನು ಮಾತನಾಡಿ ಮುಗಿಸುತ್ತೇನೆ. ಮತ್ತೊಂದು ರೂ.31,305.40 ಪೈಸೆ ಎಂದು ಇದೆ. ಇದರಲ್ಲಿ ಎಷ್ಟು ಪ್ಲ್ಯಾನ್ ಮಾಡಿದ್ದಾರೆ ಎಂದರೆ, ಒಂದು quotation ನಿಂದ ಇನ್ನೊಂದು quotation ಗೆ ಕೇವಲ ರೂ.100.30 ಪೈಸೆಯಷ್ಟು ಮಾತ್ರ ಹೆಚ್ಚು ಕಡಿಮೆ ಆಗಿರುವಂತಹದ್ದು. ಇದರ ಹಿಂದೆ ಯಾರಿದ್ದಾರೆ, ಯಾರ ಕೈವಾಡ ಇದೆ. ಆವತ್ತು ಚುನಾವಣಾ ಸಂದರ್ಭದಲ್ಲಿ ನಿಮ್ಮ ಅಮಿತ್ ಷಾರವರು ಮತ್ತು ಪ್ರಧಾನ ಮಂತ್ರಿಗಳು ಒಂದು ಕರ್ನಾಟಕ ಸರ್ಕಾರ ಹತ್ತು ಪರ್ಸೆಂಟ್ ಕಮಿಷನ್ ಸರ್ಕಾರ ಎಂದು ಹೇಳಿದರಲ್ಲವೇ, ಇವತ್ತು ಎಷ್ಟು ಪರ್ಸೆಂಟ್ ಕಮಿಷನ್ ಸರ್ಕಾರ ಎಂದು ಕೇಳಬೇಕು. .

(ಮುಂದು)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(692) 23/03/2020/7:30/ಎಸ್‌ಪಿಆರ್/ವಿಕೆ**

**(ಗೊಂದಲ)**

**ಡಾ॥ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಮಾತನಾಡುವುದು ಬೇಡ. ವಿರೋಧ ಪಕ್ಷದ ಸರ್ಕಾರದ ಅವಧಿಯಲ್ಲಿ ಇದನ್ನು ಮಾಡಿದ್ದಾರೆ. **(ಗೊಂದಲ)**ಅದು 2016–17 ನೇ ಸಾಲಿಗೆ ಸಂಬಂಧಪಟ್ಟಿದ್ದಾಗಿದೆ. ಹೀಗಾಗಿ ವಿರೋಧ ಪಕ್ಷದ ಸದಸ್ಯರು ಇದರ ಬಗ್ಗೆ ಏಕೆ ಮಾತನಾಡುತ್ತಾರೆ?

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಇದರಿಂದಾಗಿ ಆಡಳಿತ ಪಕ್ಷದವರು ಹಗಲು ದರೋಡೆ ಮಾಡಿದ್ದಾರೆ. ಈ ಬಗ್ಗೆ ಸರ್ಕಾರ ಜನರಿಗೆ ಉತ್ತರ ನೀಡಬೇಕು. ಹೀಗೆ ಮಾಡಿದ್ದರಿಂದ ಆಡಳಿತ ಪಕ್ಷಕ್ಕೆ ನಾಚಿಕೆಯಾಗಬೇಕು. ಯಾರೂ ದುಡ್ಡು ಮಾಡಿದ್ದಾರೋ ಅವರೇ ನೇರವಾಗಿ ಹೇಳಬೇಕು.

**ಸಭಾಪತಿಯವರು:–** ಶ್ರೀ ಪ್ರಕಾಶ್ ಕೆ.ರಾಥೋಡ್‌ರವರೇ ಮಾತನಾಡಿ. ನಾನು ನಿಮ್ಮ ಹೆಸರನ್ನು ಕರೆದಿದ್ದೇನೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಭಾಷಣ ಮಾಡುವಾಗ ಒಂದು ರೀತಿಯಾಗಿ ಮಾತನಾಡುತ್ತಾರೆ ಮತ್ತು ಸದನಕ್ಕೆ ಬಂದಾಗ ಒಂದು ರೀತಿಯಾಗಿ ಮಾತನಾಡುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಯಾರಿಗೆ ನಾಚಿಕೆಯಾಗಬೇಕು?

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈಗ ಆಗಿರುವ ಹಗರಣ ... **(ಗೊಂದಲ)** ಈ ವಿಚಾರದಲ್ಲಿ ಸದನ ಸಮಿತಿ ಆಗಲೇಬೇಕು. ಸದನ ಸಮಿತಿ ತೀರ್ಮಾನ ತೆಗೆದುಕೊಳ್ಳಲಿ. ಈ ಹಗರಣದ ಹಿಂದೆ ಯಾರಿದ್ದಾರೆ ಅವರು ಬೆಳಕಿಗೆ ಬರಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಪೇಮೆಂಟ್ ಆದೇಶವನ್ನು ಕೊಟ್ಟವರು ಯಾರು? ಇದನ್ನು ಯಾವ ಸರ್ಕಾರ ನೀಡಿದೆ? ಯಾರಿಗೆ ಪಾವತಿ ಮಾಡಲಾಗಿದೆ? ಇದರ ಬಗ್ಗೆಯೂ ಸಹ ಹೇಳಬೇಕು.

**ಸಭಾಪತಿಯವರು:-** ಮಾನ್ಯ ಸಚಿವರೇ ಉತ್ತರವನ್ನು ಕೊಡಿ.

**ಶ್ರೀ ಪ್ರಕಾಶ್ ಕೆ.ರಾಥೋಡ್(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಾನು ಇನ್ನೂ ಮಾತನಾಡಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ದಿನಾಂಕ 14/06/2019...

**ಸಭಾಪತಿಯವರು:-** ಮಾನ್ಯ ಪ್ರಕಾಶ್ ರಾಥೋಡ್ ರವರೇ, ನೀವು ಮಾತನಾಡುವುದು ಬೇಡ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಏಕೆ ಮಾತನಾಡಬಾರದು?

**ಸಭಾಪತಿಯವರು:-** ನಿಮ್ಮ ಇಚ್ಛೆ ಬಂದ ಹಾಗೆ ಮಾಡುವುದು ಬೇಡ. ಈಗಾಗಲೇ ನಾನು ನಿಮ್ಮ ಹೆಸರನ್ನು ಕರೆದಿದ್ದೇನು. ಎಷ್ಟು ಸಲ ನಿಮ್ಮ ಹೆಸರನ್ನು ಕರೆದಿದ್ದೇನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಆಗ ಬೇರೆ ಸದಸ್ಯರು ಮಾತನಾಡುತ್ತಿದ್ದರು. ನಾನು ಹೇಗೆ ಮಾತನಾಡುವುದಕ್ಕಾಗುತ್ತದೆ?

**ಸಭಾಪತಿಯವರು:-** ಅದಕ್ಕೆ ನಾನೇನೂ ಮಾಡುವುದಕ್ಕಾಗುವುದಿಲ್ಲ. ನಾನು ನಿಮ್ಮ ಹೆಸರನ್ನು ಕರೆದಾಗ, ನೀವು ಎದ್ದುನಿಂತು ಮಾತನಾಡಬೇಕು. ಬೇರೆ ಸದಸ್ಯರುಗಳು ಮಾತನಾಡುತ್ತಿದ್ದಾರೆಂದು ಹೇಳಿದರೆ ...

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಆಗ ನನಗೆ ಮಾತನಾಡುವುದಕ್ಕೆ ಬಿಡಲಿಲ್ಲ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಇಲ್ಲ ಈಗ ಮಾತನಾಡುವುದಕ್ಕೆ ಅವಕಾಶ ನೀಡುವುದಕ್ಕಾಗುವುದಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ದಿನಾಂಕ 14/06/2019 ರಂದು ಹಿಂದಿನ ಮುಖ್ಯಮಂತ್ರಿ ಮಾನ್ಯ ಕುಮಾರಸ್ವಾಮಿ ರವರ ಅಧ್ಯಕ್ಷತೆಯಲ್ಲಿ ಕೊನೆಯ ಸಚಿವ ಸಂಪುಟವು ನಡೆಯಿತು. ಅಲ್ಲಿ ಇದಕ್ಕೆ ಅನುಮೋದನೆ ದೊರೆಯಿತು. ಮುಂದಿನ ದಿನಗಳಲ್ಲಿ ಯಾರ ಪಕ್ಷದ ಸರ್ಕಾರವು ಅಸ್ತಿತ್ವಕ್ಕೆ ಬಂದಿತು? ಇದರಲ್ಲಿ ಯಾರು ಕಾರ್ಯಾದೇಶವನ್ನು ನೀಡಿದರು? ಈಗಿನ ಸರ್ಕಾರವೇ ಕಾರ್ಯಾದೇಶವನ್ನು ನೀಡಿದೆ. ಆದರೆ ಅವರೇ ಈಗ ಉಗಿಯಿರಿ ಎಂದು ಹೇಳುತ್ತಿದ್ದಾರೆ. ಮೇಲಿನಿಂದ ಉಗಿಯಬೇಕು. **(ಗೊಂದಲ)** ನನ್ನ ಬಳಿ ದಾಖಲೆಗಳಿವೆ, ಅವುಗಳನ್ನು ಆಡಳಿತ ಪಕ್ಷದವರು ನೋಡಬೇಕು. ಹಿಂದಿನ ಸರ್ಕಾರದ ನಂತರ ಆಡಳಿತ ಪಕ್ಷದ ಸರ್ಕಾರವು ಅಸ್ತಿತ್ವಕ್ಕೆ ಬಂದಿತು. ಆಗ ಅವರ ಸಚಿವ ಸಂಪುಟದಲ್ಲಿ ಈ ವಿಚಾರದಲ್ಲಿ ಅವ್ಯವಹಾರವಾಗಿದೆ ಎಂದು ಹೇಳಿ, ಅದನ್ನು ಸ್ಟಾಪ್ ಮಾಡಬೇಕಾಗಿತ್ತು. ಆದರೆ ಅವರು ಹೇಗೆ ಇದಕ್ಕೆ ಅನುಮೋದನೆ ನೀಡಿದ್ದಾರೆ?

**(ಗೊಂದಲ)**

**ಡಾ|| ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಆದರೆ ಈ ಹಿಂದೆ ಅಸ್ತಿತ್ವದಲ್ಲಿದ್ದ ಸರ್ಕಾರವು ಇದಕ್ಕೆ ಏಕೆ ಶಿಫಾರಸ್ಸು ಮಾಡಿತ್ತು?

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದ ಸದಸ್ಯರು ನನ್ನ ಮಾತುಗಳನ್ನು ಕೇಳಬೇಕು.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರು ಉತ್ತರ ನೀಡಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಹೊಸದಾಗಿ ಬಂದ ಸರ್ಕಾರ ಈ ಹಿಂದೆ ಮಾಡಿದ್ದ ಎಲ್ಲವನ್ನೂ ರದ್ದು ಮಾಡಿತ್ತು. ನಾನು ಹೇಳುವುದನ್ನು ಕೇಳಬೇಕು.

**ಸಭಾಪತಿಯವರು:–** ಈ ವಿಚಾರದಲ್ಲಿ ಎಷ್ಟು ಹೊತ್ತು ಚರ್ಚೆಯನ್ನು ಮಾಡಬೇಕು?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಈ ಹಿಂದಿನ ಸರ್ಕಾರ ಮಾಡಿದ್ದ ಎಲ್ಲಾ ಆದೇಶಗಳನ್ನು ರದ್ದುಗೊಳಿಸಿತು. ಆದರೆ ಈ ಆದೇಶವನ್ನು ಏಕೆ ರದ್ದು ಮಾಡಲಿಲ್ಲ? ಈ ಆದೇಶವನ್ನೂ ಸಹ ಸರ್ಕಾರ ರದ್ದು ಮಾಡಬೇಕಾಗಿತ್ತು. ಈ ಹಿಂದಿನ ಸರ್ಕಾರದ ಸಚಿವ ಸಂಪುಟದಲ್ಲಿ ಇದನ್ನು ಅನುಮೋದಿಸಲಾಗಿತ್ತು. ಅದನ್ನು ಭ್ರಷ್ಟಾಚಾರ ಎಂದು ಹೇಳಬಹುದಾಗಿತ್ತು. ಈ ಹಿಂದಿನ ಸರ್ಕಾರದ ನಂತರ ಅಸ್ತಿತ್ವಕ್ಕೆ ಬಂದ ಹೊಸ ಸರ್ಕಾರದ ಸಚಿವ ಸಂಪುಟವು ಹಿಂದಿನ ಎಲ್ಲಾ ಆದೇಶಗಳನ್ನು ರದ್ದುಗೊಳಿಸಿತು. ಈಗಿನ ಸರ್ಕಾರವು ಏಕೆ ಕಾರ್ಯಾದೇಶವನ್ನು ಕೊಟ್ಟಿತು? ಈ ಎಲ್ಲಾ ಕೆಲಸಗಳನ್ನು ಹಿಂದಿನ ಸರ್ಕಾರವು ಮಾಡಿದೆ. ಇದನ್ನು ನಾನು ಒಪ್ಪುತ್ತೇನೆ. 14/06/2019 ರಂದು ಕೊನೆಯ ಸಚಿವ ಸಂಪುಟದ ಸಭೆಯು ಶ್ರೀ ಕುಮಾರಸ್ವಾಮಿರವರ ನೇತೃತ್ವದಲ್ಲಿ ನಡೆದಿತ್ತು.

**(ಗೊಂದಲ)**

**ಶ್ರೀ ಕಟವಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಈ ಹಿಂದಿನ ಸರ್ಕಾರವು ಇದನ್ನು ಏಕೆ ಮಾಡಿದೆ ಎಂದು ಮಾನ್ಯ ಹೇಳಬೇಕು.

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಹಿಂದಿನ ಸರ್ಕಾರ ಇದನ್ನು ಏಕೆ ಮಾಡಿದೆ ಎಂದು ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಹೇಳಬೇಕು. **(ಗೊಂದಲ)**ಹಿಂದಿನ ಮುಖ್ಯಮಂತ್ರಿಶ್ರೀ ಕುಮಾರಸ್ವಾಮಿಯವರಿಗೆ ಬುದ್ಧಿ ಇರಲಿಲ್ಲವೇ?

**(ಗೊಂದಲ)**

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರಿಗೆ ನೇರವಾಗಿ ಕೇಳುವುದಕ್ಕಾಗುವುದಿಲ್ಲ. ಹೀಗಾಗಿ ಅವರುಗಳು ನಮ್ಮ ಮೂಲಕ ಕೇಳುತ್ತಿದ್ದಾರೆ. **(ಗೊಂದಲ)** ಆಗ ಉನ್ನತ ಶಿಕ್ಷಣ ಸಚಿವರು ಯಾರು ಇದ್ದರೋ ಅವರನ್ನೇ ಕೇಳಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಈಗಿನ ಸರ್ಕಾರವು ಏಕೆ ಆದೇಶವನ್ನು ನೀಡಿತು?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಅದಕ್ಕೆ ಈ ಹಿಂದಿನ ಸರ್ಕಾರವು ಅನುಮೋದನೆಯನ್ನು ನೀಡಿತ್ತು.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಅವ್ಯವಹಾರ ಮಾಡಿ ಹಣವನ್ನು ಈ ಸರ್ಕಾರ ಏಕೆ ತಿಂದಿದೆ? ಈ ಹಿಂದಿನ ಸರ್ಕಾರ ಮಾಡಿರುವ ಅವ್ಯವಹಾರದಲ್ಲಿ ಈಗಿನ ಸರ್ಕಾರವು ಹಣವನ್ನು ತಿಂದಿದೆ. ಹಿಂದಿನ ಸರ್ಕಾರ ಮಾಡಿದ್ದ ಎಂಜಲನ್ನು ಈಗಿನ ಸರ್ಕಾರ ಏಕೆ ತಿಂದಿದೆ? **(ಗೊಂದಲ)** ಇದನ್ನು ಈಗಿನ ಸರ್ಕಾರ ಏಕೆ ಮಾಡಿದೆ?

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಈ ಹಿಂದಿನ ಮುಖ್ಯಮಂತ್ರಿ ಶ್ರೀ ಕುಮಾರಸ್ವಾಮಿ ಅವರು ಏಕೆ ಇದನ್ನು ಮಾಡಿದರು?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈಗಿನ ಸರ್ಕಾರಕ್ಕೆ ನಾಚಿಕೆ, ಮರ್ಯಾದೆ ಇದೆಯೇ? ಅವರು ಏಕೆ ಹಣವನ್ನು ತಿಂದಿದೆ?

**(ಗೊಂದಲ)**

**ಡಾ॥ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ಹಿಂದಿ ಸರ್ಕಾರ ಮಾಡುವ ಕೆಟ್ಟ ಕೆಲಸಕ್ಕೆ ನಾವು . . . **(ಗೊಂದಲ)** ಅದೆಲ್ಲಾ ಆಗುವುದಿಲ್ಲ. ಈ ಹಿಂದಿನ ಮುಖ್ಯಮಂತ್ರಿ

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈಗಿನ ಸರ್ಕಾರಕ್ಕೆ ನಾವು ನಮ್ಮ ವಿಜಯಪುರ ಭಾಷೆಯಲ್ಲಿ ಹೇಳಬೇಕಾಗುತ್ತದೆ. ಈ ಹಿಂದಿನ ಸರ್ಕಾರ ಮಾಡಿದ ಕೆಲಸವನ್ನು ಈಗಿನ ಸರ್ಕಾರವು ಏಕೆ ಮಾಡುತ್ತದೆ? ಅವರು ಮಾಡಿದ್ದನ್ನೇ ಈಗಿನ ಸರ್ಕಾರ ಏಕೆ ಮಾಡಬೇಕಾಗಿತ್ತು? ಅದರ ಬಗ್ಗೆ ಸರ್ಕಾರ ಹೇಳಬೇಕು. **(ಗೊಂದಲ)** ತಿನ್ನುವವರಿಗಿಂತ ಈಗಿನ ಸರ್ಕಾರದ್ದು ಯಾವ ಜಾತಿ? (ಗೊಂದಲ) ಈಗಿನ ಸರ್ಕಾರ ಅದನ್ನು ರದ್ದುಗೊಳಿಸಿದ್ದರೆ ಸರಿಯಾಗಿತ್ತು.

**(ಗೊಂದಲ)**

ಶ್ರೀ ಸಿ.ಟಿ.ರವಿ**(ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು):–** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಬಸವರಾಜ ಹೊರಟ್ಟಿಯವರೇ ಒಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂಗತಿಯನ್ನು ಒಪ್ಪಿಕೊಳ್ಳುತ್ತಿದ್ದಾರೆ. Council of Minister ಇರುವಂಥ ಒಂದು ಕ್ಯಾಬಿನೆಟ್, headed by Chief Minister ಅವರಿಗೆ ಅವರ ಹಿಂದಿನ ಸರ್ಕಾರ 14 ಕೋಟಿ ರೂಪಾಯಿಗಳು ಇದ್ದದ್ದನ್ನು 28 ಸಾವಿರ ಕೋಟಿ ರೂಪಾಯಿಗಳಿಗೆ ಮಾಡಬೇಕಾದರೆ, Cabinet is headed by the Chief Minister and the Council of Ministers will be there.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಿನ ಸರ್ಕಾರ ಎಷ್ಟು ಆದೇಶಗಳನ್ನು ಹಿಂಪಡೆದಿದೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಿ.ಟಿ.ರವಿಯವರು ಹೇಳುವುದನ್ನು ಕೇಳಿದರೆ, this Government is not headed by Chief Minister ಎನ್ನುವ ಹಾಗೆ ಆಗಿದೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ ದಿನಾಂಕ 14/06/2019 ರಲ್ಲಿ ನಡೆದ ಸಚಿವ ಸಂಪುಟ..

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈಗಿನ ಸರ್ಕಾರದ ಚಾಲಾಕಿತನ ಮಾತು ಬೇಡ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈಗಿನ ಸರ್ಕಾರ ಸಮರ್ಥನೆ ಮಾಡುತ್ತಿದ್ದಾರೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ ದಿನಾಂಕ 14/06/2019 ರಂದು ನಡೆದ ಸಚಿವ ಸಂಪುಟವು ಭ್ರಷ್ಟಾಚಾರ ನಡೆಸಿದೆ ಎಂದು ವಿರೋಧ ಪಕ್ಷದ ಸದಸ್ಯರು ಆರೋಪ ಮಾಡುವುದಾದರೆ, ನಾನು ವಿರೋಧ ಪಕ್ಷದ ಸದಸ್ಯರು ಹೇಳುವುದನ್ನು ಒಪ್ಪುತ್ತೇನೆ.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಿನ ಸರ್ಕಾರದ್ದು ಬುದ್ಧಿವಂತಿಕೆ ಮಾತು ಬೇರೆಯಾಯಿತು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಹಿಂದಿನ ಸರ್ಕಾರದ ಸಚಿವ ಸಂಪುಟದಲ್ಲಿ ಅನುಮೋದನೆಯಾಗಿತು. ಆದರೆ ಅದನ್ನು ಕನ್‌ಫರ್ಮ್ ಮಾಡಲು ಈಗಿನ ಸರ್ಕಾರಕ್ಕೆ ಬಂದಿತ್ತು. ಆದರೆ ಈಗಿನ ಸರ್ಕಾರವು ಅದನ್ನು ಏಕೆ ಕನ್‌ಫರ್ಮ್ ಮಾಡಿತು?

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ನಾನು ಇನ್ನು ಐದು ನಿಮಿಷ ಮಾತನಾಡುತ್ತೇನೆ. ಸರ್ಕಾರಕ್ಕೆ ಏನು ಅವಸರವಿದೆ?

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ದಿನಾಂಕ 14/06/2019 ಕ್ಕೆ ತೀರ್ಮಾನವಾಗಿರುತ್ತದೆ. ಆಗ 14 ಸಾವಿರ ಕೋಟಿ ರೂಪಾಯಿಗಳಿಗೆ ಇದ್ದ ಮೊತ್ತವು 28 ಸಾವಿಕರ ಕೋಟಿ ರೂಪಾಯಿಗಳಿಗೆ ನಿಗದಿಯಾಗುತ್ತದೆ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಈಗಿನ ಸರ್ಕಾರವು ಕಾರ್ಯಾದೇಶವನ್ನು ನೀಡಿದೆ. **(ಗೊಂದಲ)** ಈಗಿನ ಸರ್ಕಾರವು ಅದನ್ನು ಕನ್‌ಫರ್ಮ್ ಮಾಡಿ ಏಕೆ ಆದೇಶವನ್ನು ಕೊಡಬೇಕಿತ್ತು?

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಶ್ರೀ ಕುಮಾರಸ್ವಾಮಿಯವರು ಅಧಿಕಾರದಲ್ಲಿದ್ದಾಗ ಈ ಮೊತ್ತವನ್ನು ನಿಗದಿಪಡಿಸಲಾಗಿದೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಎಲ್ಲಾ ರಾಜ್ಯಗಳಲ್ಲಿ ಶಟ್‌ಡೌನ್ ಮಾಡುತ್ತಿರುವಾಗ ...

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಮಂತ್ರಿಗಳೇ ಉತ್ತರ ನೀಡಿ.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಸರ್ಕಾರಗಳು ಬದಲಾವಣೆಯಾದಾಗ, ಹಿಂದಿನ ಸರ್ಕಾರ ಮಾಡಿರುವ ಎಲ್ಲಾ ಆದೇಶಗಳನ್ನು . . . **(ಗೊಂದಲ)** ನಮ್ಮ ರಾಜ್ಯದಲ್ಲಿ ಬಹಳಷ್ಟು ಸರ್ಕಾರಗಳು ಬದಲಾವಣೆಯಾಗಿವೆ. ಸರ್ಕಾರಗಳು ಬದಲಾವಣೆಯಾದಾಗ ನಂತರದಲ್ಲಿ ಬಂದ ಸರ್ಕಾರವು ಹಿಂದಿನ ಸರ್ಕಾರದ ಅವಧಿಯಲ್ಲಾದ ಆದೇಶಗಳನ್ನು ರದ್ದುಗೊಳಿಸಿರುವುದು ಈ ರಾಜ್ಯದಲ್ಲಿ ನಡೆಯುತ್ತಿದೆ.

**ಸಭಾಪತಿಯವರು:–** ಮಾನ್ಯ ಮಂತ್ರಿಗಳೇ ಉತ್ತರ ನೀಡಿ.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಈ ರೀತಿಯಾಗಿ ಎಲ್ಲಾ ಸರ್ಕಾರಗಳಲ್ಲಾಗಿದೆ. ಈಗಲೂ ಕೂಡ ... ಹಿಂದಿನ ಸರ್ಕಾರವು

**(ಗೊಂದಲ)**

**ಸಭಾಪತಿಯವರು:–** ಸಚಿವರು ಉತ್ತರವನ್ನು ನೀಡಲಿ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಹಣವನ್ನು ಯಾವತ್ತು ಬಿಡುಗಡೆ ಮಾಡಿದ್ದಾರೆ ಎನ್ನುವುದನ್ನು ಈಗಿನ ಸರ್ಕಾರ ತಿಳಿಸಲಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಪ್ರತಿಪಕ್ಷದ ನಾಯಕನಾಗಿ ಮಾತನಾಡುತ್ತಿರುವಾಗ ...

**ಸಭಾಪತಿಯವರು:–** ನಾನು ನಿಮ್ಮ ಹೆಸರನ್ನು ಎರಡು ಬಾರಿ ಕರೆದಿದ್ದೇನೆ. ಈಗ ಮುಂದೂಡಿ ಹೋಗೋಣವೇ? ನೀವು ಸಚಿವರಿಗೆ ಮಾತನಾಡುವುದಕ್ಕೆ ಬಿಡದೇ ಗಲಾಟೆ ಮಾಡುತ್ತಿದ್ದೀರಿ. ಸಚಿವರೇ ಉತ್ತರಿಸಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ಸಿ.ಎನ್.ಅಶ್ವಥ್ ನಾರಾಯಣ(ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ...

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ ಕುಳಿತುಕೊಳ್ಳಿ. ಈ ವಿಚಾರದ ಬಗ್ಗೆ ನಮ್ಮ ಬಹಳಷ್ಟು ಸ್ನೇಹಿತರು ಮಾತನಾಡಿದ್ದಾರೆ. ಅವುಗಳನ್ನು ನಾನು ಪುನರಾವರ್ತಿಸುವುದಕ್ಕೆ ಹೋಗುವುದಿಲ್ಲ. ಲ್ಯಾಪ್ ಟಾಪ್ ಖರೀದಿಯ ಬಗ್ಗೆ ಮಾಹಿತಿಯನ್ನು ಕೋರಿ ನಾನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ದಿನಾಂಕ 29/01/2020 ಕ್ಕೆ ಪತ್ರವನ್ನು ಬರೆದಿದ್ದೇನು. ಅದಕ್ಕೆ ಇವತ್ತಿನ ದಿನದವರೆಗೆ ನನಗೆ ಉತ್ತರವನ್ನು ನೀಡಿಲ್ಲ. ಪತ್ರಿಕೆ ಹಾಗೂ ಅನೇಕ ಮೂಲಗಳಿಂದ ಲ್ಯಾಪ್‌ಟಾಪ್ ಖರೀದಿಯಲ್ಲಿ ಅವ್ಯವಹಾರವಾಗಿದೆ ಎಂದು ತಿಳಿದು ಬಂದ ಕೂಡಲೇ ಇದರಲ್ಲಿ ಏನಿದೆ ಎಂದು ತಿಳಿದುಕೊಳ್ಳಲು ಒಬ್ಬ ಪ್ರತಿಪಕ್ಷದ ನಾಯಕನಾಗಿ ಜನವರಿ ತಿಂಗಳಿನಲ್ಲಿ ನಾನು ಪತ್ರವನ್ನು ಬರೆದಿದ್ದೇನೆ. ಆದರೆ ನಾವು ಈಗ ಮಾರ್ಚ್ ತಿಂಗಳಿನಲ್ಲಿದ್ದೇವೆ. ಇನ್ನೂ ಸಹ ನನಗೆ ಉತ್ತರವನ್ನು ನೀಡಿರುವುದಿಲ್ಲ. ನಾನು ಹೇಳುತ್ತಿರುವ ಅಂಶದೆಡೆಗೆ ಸಚಿವರು ಲಕ್ಷ್ಯವನ್ನು ವಹಿಸಬೇಕು. ನಾನು ಅವರ ಕಛೇರಿಯ ಕಾರ್ಯವೈಖರಿಯನ್ನು ಹೇಳುತ್ತಿದ್ದೇನೆ. ದಿನಾಂಕ 29/01/2020 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ವಿಳಾಸಿಸಿ ಬರೆದ ಪತ್ರಕ್ಕೆ ಇದುವರೆವಿಗೂ ಸಹ ಒಂದಿಷ್ಟು ಎಳ್ಳಷ್ಟು ಉತ್ತರವನ್ನು ನೀಡಿರುವುದಿಲ್ಲ.

(ಮುಂದು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(693) 23/03/2020/7:40/ಎಸ್‌ಪಿಆರ್(ಎಲ್‌ಎಂ)/ಬಿಎನ್‌ಎಸ್**

**ಶ್ರೀ ಎಸ್.ಆರ್.ಪಾಟೀಲ್(ಮುಂದು):–**

ಆ ಇಲಾಖೆಯ ಆಪ್ತ ಕಾರ್ಯದರ್ಶಿಯವರು ಪತ್ರವನ್ನು ಬರೆದಿದ್ದಾರೆ. ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಎನ್.ಆರ್.ಯಡಕುಪ್ಪಿ ಎನ್ನುವವರು ಕಳುಹಿಸಿಕೊಟ್ಟರು ಎಂಬುದಾಗಿ ಹೇಳಿದರು. ಆಗ ಅವರನ್ನು ವಿಚಾರಿಸಲಾಗಿ ಇದುವರೆವಿಗೂ ಸಹ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. Is it the way of functioning by the Government? ನಾವು ಕೇಳಿರುವ ಮಾಹಿತಿಯನ್ನು ಕೊಡಬೇಕು.

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಲ್ಲಿ ಏನಾಗಿದೆ ಎಂದು ನಾವು ತಿಳಿದುಕೊಳ್ಳಬೇಕಲ್ಲವೇ? ಈ ಮಾಹಿತಿಯನ್ನು ನಾನು ಮಂತ್ರಿಗಳಿಗೆ ಕಳುಹಿಸಿ ಕೊಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕೋರಿರುವ ಮಾಹಿತಿ ನೀಡುವುದರಲ್ಲಿ ವಿಳಂಬವಾಗಿದೆ. ಲ್ಯಾಪ್‌ಟಾಪ್ ಖರೀದಿಗೆ ಅನುಮೋದನೆಯನ್ನು ಹಿಂದಿನ ಸರ್ಕಾರವೇ ನೀಡಿತ್ತು. ಅದೇ ರೀತಿಯಾಗಿ ಅದೇ ಸರ್ಕಾರದ ಅವಧಿಯಲ್ಲಿ ಟೆಂಡರ್‌ನ್ನೂ ಸಹ ಕರೆಯಲಾಗಿದೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈಗ ನಾನು ಆ ವಿಚಾರದ ಬಗ್ಗೆ ಮಾತನಾಡುತ್ತಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈಗಿರುವ ಒಂದೇ ದಾರಿ ಯಾವುದೆಂದರೆ, ಮಾನ್ಯ ವಿರೋಧ ಪಕ್ಷದ ಸದಸ್ಯರು ನಿಯಮ 72ರ ಅಡಿಯಲ್ಲಿ ನೀಡಿರುವ ನೋಟಿಸ್‌ನ್ನು ಹಿಂಪಡೆಯುವುದು ಒಳ್ಳೆಯದು. ಎಲ್ಲವೂ ಅವರ ಮೇಲುಂಟು. ನಮ್ಮ ಮೇಲೆ ಏನೂ ಇಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ದಿನಾಂಕ 29/01/2020 ರಿಂದ ಇಲ್ಲಿಯವರೆಗೆ ಉನ್ನತ ಶಿಕ್ಷಣ ಇಲಾಖೆಯವರು ನಾನು ಕೋರಿರುವ ಮಾಹಿತಿಗೆ ಉತ್ತರವನ್ನು ನೀಡುವುದಿಲ್ಲವೆಂದರೆ ಇದರರ್ಥವೇನು? ಇದರರ್ಥ ಒಳಗಿನ ಮಾಹಿತಿಯು ಹೊರಗಡೆ ಹೋಗಬಾರದು ಎಂಬುದಾಗಿದೆ. There must be something fishy in it. ಇದರಲ್ಲಿ ಯಾವುದಾದರೂ ಹಗರಣವಿರಬೇಕು. ಈ ಕಾರಣದಿಂದಾಗಿ ನನಗೆ ಉತ್ತರವನ್ನು ನೀಡಿರುವುದಿಲ್ಲ. ನಾನು ಕೋರಿರುವ ಮಾಹಿತಿಯನ್ನು ನನಗೇಕೆ ನೀಡಬಾರದು? They could have furnished the information to me. I have a right. ಈ ಹಿಂದೆ ಕೇಂದ್ರದಲ್ಲಿ ಯು.ಪಿ.ಎ. ಸರ್ಕಾರವು ಅಧಿಕಾರದಲ್ಲಿದ್ದಾಗ ಮಾಹಿತಿ ಹಕ್ಕು ಅಧಿನಿಯಮವು ಜಾರಿಗೆ ಬಂದಿದೆ. By virtue of Opposition Leader, I have written the letter. But, so far,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

I have not received a single reply from them. ಒಂದಿಷ್ಟು ಮಾಹಿತಿಯು ಇದುವರೆವಿಗೆ ನನಗೆ ಸ್ವೀಕೃತಗೊಂಡಿಲ್ಲ. ಈ ವಿಚಾರದಲ್ಲಿ ನಾವು ಪ್ರತಿನಿತ್ಯವೂ ದೂರವಾಣಿ ಮುಖಾಂತರ persuasion ಮಾಡಿದ್ದೇವೆ. ಇಲಾಖೆಯ ಮಂತ್ರಿಗಳಾದ ಉಪ ಮುಖ್ಯಮಂತ್ರಿಗಳಿಗೆ ಇದು ಸರಿಯಾಗಿ ಕಾಣುತ್ತದೆಯೇ? ಈ ಹಿಂದೆ ಶ್ರೀ ಬಸವರಾಜ ರಾಯರೆಡ್ಡಿಯವರು ಇಲಾಖೆಯ ಮಂತ್ರಿಗಳಾಗಿದ್ದರು. ಆಗ ಉನ್ನತ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ– ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆಯಲ್ಲಿ 300 ಕೋಟಿ ರೂ.ಗಳ ಹಗರಣ ನಡೆದಿದೆ ಎಂದು ಗಂಭೀರವಾಗಿ ಆರೋಪಿಸಿರುವ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಈ ಅವ್ಯವಹಾರವನ್ನು ಹೈಕೋರ್ಟ್ ನಿವೃತ್ತ ನ್ಯಾಯಾಧೀಶರಿಂದ ತನಿಖೆ ನಡೆಸಬೇಕೆಂದು ಬಿಜೆಪಿ ಕಛೇರಿಯಲ್ಲಿ ಪತ್ರಕರ್ತರ ಘೋಷ್ಠಿಯಲ್ಲಿ ಮಾತನಾಡಿ, ಉನ್ನತ ಶಿಕ್ಷಣ ಪಡೆಯುತ್ತಿರುವ ಒಂದುವರೆ ಲಕ್ಷ ಪರಿಶಿಷ್ಟ ಜಾತಿ– ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆಯಲ್ಲಿ ಭಾರಿ ಅವ್ಯವಹಾರ ನಡೆದಿದೆ, 2017–18ನೇ ಸಾಲಿನಲ್ಲಿ ಲ್ಯಾಪ್‌ಟಾಪ್ ಖರೀದಿಯಲ್ಲಿ ಸುಮಾರು 300 ಕೋಟಿ ರೂ.ಗಳ ಅವ್ಯವಹಾರ ನಡೆದಿದೆ. 24,000 ರೂ.ಗಳ ಲ್ಯಾಪ್‌ಟಾಪ್‌ಗೆ 300 ಕೋಟಿ ರೂ.ಗಳು.. ಒಂದು ಲಕ್ಷದ ಒಂಬತ್ತು ಸಾವಿರ ಲ್ಯಾಪ್‌ಟಾಪ್‌ಗಳಿಗೆ 1,200 ರಿಂದ 1,300 ಕೋಟಿ ರೂ.ಗಳ ಹಗರಣ ನಡೆದಿರಬೇಕು ಈಗ. ಕಳೆದ ಶೈಕ್ಷಣಿಕ ವರ್ಷದಲ್ಲಿ ಪ್ರತಿ ಲ್ಯಾಪ್‌ಟಾಪ್‌ನ್ನು 14,962 ರೂ.ಗಳಿಗೆ ಖರೀದಿ ಮಾಡುತ್ತಿದ್ದು, ಇದರಲ್ಲಿ ಹತ್ತು ಸಾವಿರಕ್ಕಿಂತ ಹೆಚ್ಚು ಅವ್ಯವಹಾರ ನಡೆದಿದೆ. ಈ ಕಾರಣಕ್ಕಾಗಿ ಉನ್ನತ್ತ ಶಿಕ್ಷಣ ಸಚಿವರಾದ ಶ್ರೀ ಬಸವರಾಜ ರಾಯರೆಡ್ಡಿಯವರ ಕೈವಾಡವು ಇದೆ, ಆದ್ದರಿಂದ ಅವರು ಕೂಡಲೆ ರಾಜೀನಾಮೆ ನೀಡಬೇಕು. ಇದರ ತನಿಖೆಯಾಗಬೇಕು. ಭ್ರಷ್ಟಾಚಾರ ಮುಕ್ತ ಸರ್ಕಾರವೆಂದು ವಾದಿಸುತ್ತಿರುವ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಈ ಹಗರಣವನ್ನು ಹೈಕೋರ್ಟ್ ನ್ಯಾಯಾಧೀಶರಿಂದ ತನಿಖೆ ನಡೆಸಬೇಕೆಂದು ಸವಾಲು ಹಾಕಿದ್ದರು. ಈಗ ಈ ಸರ್ಕಾರ 28,000 ಲ್ಯಾಪ್‌ಟಾಪ್‌ಗಳನ್ನು ಖರೀದಿ ಮಾಡಿದ್ದಾರೆ. ಇದರಿಂದ ಈ ಸರ್ಕಾರಕ್ಕೆ ನಾಚಿಕೆ ಬರಬೇಕು.

(ಗೊಂದಲ)

ಹಿಂದಿನ ಸರ್ಕಾರ ಮಾಡಿರುವುದನ್ನು ಮುಂದುವರೆಸಿರುವುದೇ ಈ ಸರ್ಕಾರದವರು.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರೆ ತಾವು ಯಾವ ರೂಲ್ಸ್‌ನಲ್ಲಿ, ಯಾವ ನಿಯಮದಲ್ಲಿ ಮಾತನಾಡುತ್ತಿದ್ದೀರಾ?

**ಶ್ರೀ ಸಿ.ಟಿ.ರವಿ(ಪ್ರವಾಸೋದ್ಯಮ ಇಲಾಖೆ):–** ಮಾನ್ಯ ಸಭಾಪತಿಗಳೆ, ಕೋತಿ ತಾನು ತಿಂದು ಮೇಕೆಯ ಬಾಯಿಗೆ ಒರೆಸಿದ ಹಾಗೆ ಆಗಿದೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, *'RULES OF PROCEDURE AND CONDUCT OF BUSINESS IN KARNATAKA LEGISLATIVE COUNCIL'* ಪ್ರಕಾರವೇ ಮಾತನಾಡುತ್ತಿದ್ದೆನೆ.

**ಸಭಾಪತಿಯವರು:–** ನಿಯಮ 72ರಲ್ಲಿ ಏನು ಇದೆ ಎನ್ನುವುದನ್ನು ನೋಡಿ. ಒಂದೊಂದು ಗಂಟೆ ಮಾತನಾಡಲು ಅವಕಾಶವಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ನಿಯಮ 72ರಲ್ಲಿಯೇ ಮಾತನಾಡುತ್ತಿದ್ದೇನೆ.

**ಸಭಾಪತಿಯವರು:–** ನಿಯಮ 72ರಲ್ಲಿ ಯಾರು ಸಹಿ ಮಾಡಿರುತ್ತಾರೆ ಅವರು ಮಾತ್ರ ಮಾತನಾಡಬೇಕು.

**ಶ್ರೀ ಎಸ್.ಆರ್.ಪಾಟೀಲ್:–** ನಾನು ಅದಕ್ಕೆ ಸಹಿ ಮಾಡಿದ್ದೇನೆ.

**ಸಭಾಪತಿಯವರು:–** ನನ್ನ ಹತ್ತಿರ ಇರುವ ನೋಟಿಸ್‌ನಲ್ಲಿ ತಮ್ಮ ಹೆಸರು ಇರುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ನಿಮ್ಮ ಅಜೆಂಡಾದಲ್ಲಿ ನನ್ನ ಹೆಸರು ಇದೆ. ಅದಕ್ಕಾಗಿ ನಾನು ಮಾತನಾಡುತ್ತಿದ್ದೆನೆ. ನನ್ನ ಹೆಸರನ್ನು ತೆಗೆದುಕೊಂಡು ಹೇಗೆ ಹೇಳಿದ್ದೀರಿ ನೀವು?

(ಗೊಂದಲ)

**ಶ್ರೀ ಕೆ.ಸಿ.ಕೊಂಡಯ್ಯ:–** ಸರ್ಕಾರದ ಇಚ್ಛೆಯಂತೆಯೇ ಈ ಸದನ ನಡೆಯುತ್ತಿದೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ತಾವು ಈ ರೀತಿ objection ಮಾಡುತ್ತೀರಿ ಎಂದು ನಾನು ಕನಸು-ಮನಸ್ಸಿನಲ್ಲಿಯು ನೆನಸಿರಲಿಲ್ಲ.

**ಸಭಾಪತಿಯವರು:-** ನೋಡಿ ನನ್ನ ಹತ್ತಿರ ಇರುವ ನೋಟಿಸ್‌ನಲ್ಲಿ ನಿಮ್ಮ ಹೆಸರು ಇಲ್ಲ,

**ಶ್ರೀ ಎಸ್.ಆರ್.ಪಾಟೀಲ್:-** ನಾನು ದಿನಕ್ಕೆ ಸಾವಿರ ಪತ್ರಗಳಿಗೆ ಸಹಿ ಮಾಡುತ್ತೇನೆ. My name has been mentioned in the agenda, so I am speaking. Otherwise, I would not have spoken. What do you think of me? I am holding the Constitutional post. Understand….

(ಗೊಂದಲ)

**ಶ್ರೀ ಪ್ರಕಾಶ್ ರಾಠೋಡ್:-**ವಿರೋಧ ಪಕ್ಷದ ನಾಯಕರು ಯಾವ ಸಂದರ್ಭದಲ್ಲಾದರೂ ಮಾತನಾಡಬಹುದು, ಮಾತನಾಡಿ ತಾವು.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಅಜೆಂಡಾವನ್ನು ಓದುತ್ತೇನೆ, 'ಗಮನ ಸೆಳೆಯುವ ಸೂಚನೆಗಳು' ಶ್ರೀಯುತರುಗಳಾದ ಕೆ.ಸಿ.ಕೊಂಡಯ್ಯ, ಶ್ರೀ ಎಸ್.ಆರ್.ಪಾಟೀಲ್, ಮಾನ್ಯ ವಿರೋಧ ಪಕ್ಷದ ನಾಯಕರು, ಎಂ.ನಾರಾಯಣ ಸ್ವಾಮಿ, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು, ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ. ಇವರುಗಳು "ವಿದ್ಯಾರ್ಥಿಗಳಿಗೆ ವಿತರಿಸಲಾದ ಲ್ಯಾಪ್‌ಟಾಪ್‌ಗಳ ಖರೀದಿಯಲ್ಲಿ ಆಗಿರುವ ಅವ್ಯವಹಾರಗಳ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯುವುದು" ಎಂದು ಇದೆ.

**ಸಭಾಪತಿಯವರು:-** ಆಯಿತು, ನಮ್ಮ ಕಾರ್ಯದರ್ಶಿಯವರು ನನಗೆ ಕೊಟ್ಟಿರುವ ನೋಟಿಸ್‌ನ್ನು ತಮಗೆ ಕಳುಹಿಸುತ್ತೇನೆ ನೋಡಿ.

**ಶ್ರೀ ಎಸ್.ಆರ್.ಪಾಟೀಲ್:-** ನಿಮ್ಮ ಕಾರ್ಯದರ್ಶಿಯವರು ಏನು ಹೇಳುತ್ತಾರೆ, ನೀವು ಅಜೆಂಡಾ ಬಿಟ್ಟು ಮಾತನಾಡುತ್ತಿದ್ದೀರಿ. ಹೀಗಾದರೆ ಅಜೆಂಡಾದ sanctity ಏನು ಉಳಿಯುತ್ತದೆ.

**ಸಭಾಪತಿಯವರು:–** ಆದರೂ ಒಂದು ಗಂಟೆ ಮಾತನಾಡಬಹುದೇ?

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ನಿಮ್ಮ ತಪ್ಪು, ನಿಮ್ಮ ಕಾರ್ಯದರ್ಶಿಯವರ ತಪ್ಪು, ನಿಮ್ಮ ಕಛೇರಿಯವರ ತಪ್ಪು ಅದು. It is not my mistake. I have right the to speak here as my name has been mentioned in the agenda.

(ಗೊಂದಲ)

**ಸಭಾಪತಿಯವರು:–** ನೀತಿ ನಿಯಮಗಳ ಒಳಗೆಯೇ ಮಾತನಾಡುತ್ತಿದ್ದೇನೆ. ನಿಯಮಗಳನ್ನು ಬಿಟ್ಟು ಮಾತನಾಡಲು ಆಗುವುದಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಗಳೆ, ವಿಷಯ ತುಂಬಾ ಗಂಭೀರವಾಗಿದೆ.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದು ಧರಣಿ ನಿಂತರು)**

**ಡಾ: ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಗಳೆ, 'ಪಾಯಿಂಟ್ ಆಫ್ ಆರ್ಡರ್,' ನಿಯಮ 72ರ ಅಡಿಯಲ್ಲಿ ಸಾರ್ವಜನಿಕ ಮಹತ್ವದ ವಿಷಯದ ಬಗ್ಗೆ ಗಮನ ಸೆಳೆಯುವುದು, ' ಯಾರೇ ಒಬ್ಬ ಸದಸ್ಯರು ಪೂರ್ವಭಾವಿಯಾಗಿ ಸಭಾಪತಿಯವರ ಅನುಮತಿಯನ್ನು ತೆಗೆದುಕೊಂಡು ಸಾರ್ವಜನಿಕ ಮಹತ್ವದ ಯಾವುದಾದರೂ ಜರೂರು ವಿಚಾರವನ್ನು ಸಂಕ್ಷೀಪ್ತವಾಗಿ ಒಂದು ಹೇಳಿಕೆ ಮೂಲಕ ತಿಳಿಸುವುದು ಅಥವಾ ಸ್ವಲ್ಪ ಸಮಯದ ನಂತರ ವಿಷಯವನ್ನು ಮಂಡಿಸಲು ಅವಕಾಶವನ್ನು ಕೇಳಬಹುದು. ಪರಂತು, ಯಾವುದೆ ಸದಸ್ಯರು ಯಾವುದೆ ಉದ್ದೇಶದಲ್ಲಿ 5 ನಿಮಿಷಕ್ಕಿಂತ ಹೆಚ್ಚು ಮಾತನಾಡುವಂತಿಲ್ಲ" ಆದರೆ ಇಲ್ಲಿ ಒಂದುವರೆ ಗಂಟೆಗಿಂತ ಹೆಚ್ಚು ಮಾತನಾಡುತ್ತಾರೆ. ಇದು ನಿಯಮ 330 ಅಥವಾ ನಿಯಮ 68 ಅಲ್ಲ, ನಿಯಮ 72 ಇದು. ಈ ನಿಯಮದಲ್ಲಿ ಇಷ್ಟೊಂದು ಚರ್ಚೆ ಮಾಡುತ್ತಾರೆ.

(ಗೊಂದಲ)

**ಶ್ರೀ ರವಿಕುಮಾರ್:–** ಲ್ಯಾಪ್‌ಟಾಪ್ ಹಗರಣದಂತೆಯೇ 200 ಜನರ ವರ್ಗಾವಣೆಯಲ್ಲಿಯು ಇದೆ ರೀತಿ ಹಗರಣ ಮಾಡಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ. ಕೊರೋನಾ ವಿಚಾರ ಚರ್ಚೆ ಮಾಡುವುದು ಬೇಡವೆ?

(ಗೊಂದಲ)

**ಶ್ರೀ ಸಿ.ಟಿ.ರವಿ:–** ಕೋತಿ ತಾನು ತಿಂದು ಮೇಕೆ ಬಾಯಿಗೆ ಒರೆಸಿದ ರೀತಿಯಲ್ಲಿ ಇವರೆಲ್ಲರ ಬಾಯಿಯಿಂದ ಇವತ್ತು ಮಾತುಗಳು ಬರುತ್ತಿವೆ.

(ಗೊಂದಲ)

**(ಧರಣಿ ನಿರತ ಕಾಂಗ್ರೆಸ್ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದರು)**

**ಸಭಾಪತಿಯವರು:–** ಸದನವನ್ನು ಈಗ 10 ನಿಮಿಷಗಳ ಕಾಲ ಮುಂದೂಡಲಾಗುತ್ತದೆ.

(694) 23–03–2020 (8–40) ಕೆಜಿ ಎಂಡಿ

**(ರಾತ್ರಿ 7 ಗಂಟೆ 50 ನಿಮಿಷಗಳಿಗೆ ಮುಂದೂಡಲ್ಪಟ್ಟ ಸದನವು ಪುನಃ ರಾತ್ರಿ 8 ಗಂಟೆ 40 ನಿಮಿಷಗಳಿಗೆ ಸಮಾವೇಶಗೊಂಡಿತು)**

**(ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಕಾಂಗ್ರೆಸ್ ಮತ್ತು ಜೆಡಿ (ಎಸ್) ಪಕ್ಷದ ಸದಸ್ಯರು ಬಾವಿಯಲ್ಲಿ ಧರಣಿ ನಿರತರಾಗಿದ್ದರು)**

**ಶ್ರೀ** ಸಿ.ಟಿ.ರವಿ **(ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು):–** ಮಾನ್ಯ ಸಭಾಪತಿಯವರೇ, ಅವರು ಚರ್ಚೆ ನಡೆಸಿದ್ದಾರೆ. ಸರ್ಕಾರ ಉತ್ತರ ಕೊಡುವುದಕ್ಕೂ ಮುಂಚೆಯೇ, ಅವರು ಬಾವಿಗೆ ಬಂದರೆ, ಅವರ ಉದ್ದೇಶ ಮತ್ತು.,

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, written reply ಬಂದಿದೆ, not oral. We have received a written reply.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಈಗ ಚರ್ಚೆಯಾಗಿದೆ. ಅದಕ್ಕೆ ಸಚಿವರು ಉತ್ತರ ಕೊಡಬೇಕು ಅಲ್ಲವೇ; ಅದಕ್ಕೆ ಅವರನ್ನು ಮಾತನಾಡಲು ಬಿಡಿ. ಹಾಗಾದರೆ, ಅವರು written question ಕೇಳಿದ್ದಾರೆ ಅಲ್ಲವೇ:

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ,ಉತ್ತರ ಬಂದಿರುವುದಕ್ಕೆ ನಾವು ತೋರಿಸುತ್ತಿದ್ದೇವೆ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, Writing ನಲ್ಲಿ ಬಂದಿದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೆ ಪರಂಪರೆ ಹೇಗಿದೆ, Writing ನಲ್ಲಿಯೇ ಎಲ್ಲವನ್ನು ಮುಗಿಸಿಬಿಡುತ್ತಿದ್ದೇವೆಯೇ; ಅವರು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಬಂದ ನಂತರ ಚರ್ಚೆ ಮಾಡಲಿ. ಈಗ ಚರ್ಚೆಯಾಗಿದೆ, ಅದಕ್ಕೆ ಸಚಿವರು ಉತ್ತರ ಕೊಡಬೇಕಲ್ಲವೇ; ಚರ್ಚೆ ಪೂರ್ಣವಾಗುವುದಕ್ಕೂ ಮೊದಲೇ ಬಾವಿಗೆ ಬಂದು ಗಲಾಟೆ ಮಾಡಿದರೆ, ಅವರ ಉದ್ದೇಶ ಏನು?

**(ಗೊಂದಲ)**

**Sri Y.A.NARAYANASWAY:-** Mr. Chairman Sir, Point of Order.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಅವರಿಗೆ ಉತ್ತರ ಬೇಕಾಗಿಲ್ಲ. Clarification ಬೇಕಾಗಿಲ್ಲ. ಅವರು ಸತ್ಯದ ತಲೆಯ ಮೇಲೆ ಸುಳ್ಳನ್ನು ಹೇಳುವುದಕ್ಕೆ ಹೊರಟ್ಟಿದ್ದಾರೆ. ಸತ್ಯ ಏನೆಂದರೆ, ಇದೆಲ್ಲಾ ಆಗಿರುವುದು ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ. ಇದು ಸತ್ಯ.

**(ಗೊಂದಲ)**

**(ಈ ಹಂತದಲ್ಲಿ ಬಾವಿಯಲ್ಲಿ ಧರಣಿ ನಿರತರಾಗಿದ್ದ ಕಾಂಗ್ರೆಸ್ ಮತ್ತು ಜೆಡಿ (ಎಸ್) ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ದಿಕ್ಕಾರ, ದಿಕ್ಕಾರ, ಬೇಕೇ ಬೇಕು ನ್ಯಾಯ ಬೇಕು ಹಾಗೂ ಸದನ ಸಮಿತಿ ರಚನೆ ಮಾಡಬೇಕೆಂದು ಘೋಷಣೆಗಳನ್ನು ಕೂಗಿದರು)**

**(ಗೊಂದಲ)**

**ಡಾ॥ಸಿ.ಎನ್.ಅಶ್ವತ್ಥನಾರಾಯಣ (ಉಪ ಮುಖ್ಯಮಂತ್ರಿಯವರು ಹಾಗೂ ಉನ್ನತ ಶಿಕ್ಷಣ, ಐ.ಟಿ., ಮತ್ತು ಬಿ.ಟಿ., ವಿಜ್ಞಾನ ತಂತ್ರಜ್ಞಾನ ಕೌಶಲ್ಯಾಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ಉತ್ತರ ಕೊಡುತ್ತೇನೆ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು)** ಮಾನ್ಯ ಸಭಾಪತಿಯವರೇ, ಲಿಖಿತವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಅವರಿಗೆ ಇಷ್ಟ ಬಂದಂತೆ ಉತ್ತರ ಕೊಟ್ಟಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಸಚಿವರೇ, ನೀವು reply ಕೊಡಿ.

**(ಗೊಂದಲ)**

**ಡಾ॥ಸಿ.ಎನ್.ಅಶ್ವತ್ಥನಾರಾಯಣ:–**ಮಾನ್ಯ ಸಭಾಪತಿಯವರೇ, ನಾನು ಉತ್ತರ ಕೊಡುತ್ತೇನೆ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.,

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇದು ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಆಗಿರುತ್ತದೆ. ಅವರು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು.

**(ಗೊಂದಲ)**

**(ಈ ಹಂತದಲ್ಲಿ ಬಾವಿಯಲ್ಲಿ ಧರಣಿ ನಿರತರಾಗಿದ್ದ ಕಾಂಗ್ರೆಸ್ ಮತ್ತು ಜೆಡಿ (ಎಸ್) ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಬೇಕೇ ಬೇಕು ನ್ಯಾಯ ಬೇಕು, ಎಲ್ಲಿಯ ತನಕ ಹೋರಾಟ, ನ್ಯಾಯ ಸಿಗುವವರೆಗೂ ಹೋರಾಟ ಹಾಗೂ ಸದನ ಸಮಿತಿ ರಚನೆ ಮಾಡಬೇಕೆಂದು ಘೋಷಣೆಗಳನ್ನು ಕೂಗಿದರು)**

**ಸಭಾಪತಿಯವರು:-** ಈಗ ಸದನವನ್ನು ನಾಳೆ ಬೆಳಗ್ಗೆ 10 ಗಂಟೆ 30 ನಿಮಿಷಗಳವರೆಗೆ ಮುಂದೂಡುತ್ತಿದ್ದೇನೆ.

**(ಸದನವು ರಾತ್ರಿ 8 ಗಂಟೆ 45 ನಿಮಿಷಗಳಿಗೆ ಮುಕ್ತಾಯಗೊಂಡು, ಪುನಃ ದಿನಾಂಕ 24ನೇ ಮಾರ್ಚ್ ಮಾಹೇ 2020ರ ಮಂಗಳವಾರ ಬೆಳಿಗ್ಗೆ 10 ಗಂಟೆ 30 ನಿಮಿಷಗಳಿಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

~~~~

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~